- **ಇತರೆ ಆರ್ಥಿಕ ಹೊಣೆಗಾರಿಕೆಗಳು:** ಇದರಲ್ಲಿ ₹ 14611.63 ಲಕ್ಷಗಳಷ್ಟು ನಿವ್ವಳ ಏರಿಕೆಯಾಗಿರುತ್ತದೆ. ಆರಂಭಿಕ / ಹೆಚ್ಚುವರಿ ಭದ್ರತಾ ಠೇವಣಿ ₹ 5193.92 ಲಕ್ಷಗಳಷ್ಟನ್ನು ಸಂಗ್ರಹಿಸಲಾಗಿದೆ. ಸರಬರಾಜುದಾರರು / ಗುತ್ತಿಗೆದಾರರಿಂದ ₹ 9691.40 ಲಕ್ಷಗಳಷ್ಟು ಠೇವಣಿ ಸಂಗ್ರಹಿಸಲಾಗಿರುತ್ತದೆ ಹಾಗೂ ಇತರೆ ಬಾಬ್ತುಗಳಲ್ಲಿ ₹ 273.69 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ.
- **ಅವಕಾಶಗಳು:** ಗಳಿಕೆ ರಜೆ ನಗದೀಕರಣ ಹಾಗೂ ಕುಟುಂಬ ಕಲ್ಯಾಣ ನಿಧಿಗಳ ವಾಸ್ತವಿಕ ಮೌಲೀಕರಣ ವರದಿಯನ್ವಯ ಹೊಣೆಗಾರಿಕೆಯನ್ನು ಲೆಕ್ಕೀಕರಿಸುವುದರಿಂದ ಇದರಲ್ಲಿ ₹ 29.46 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ.
- **ಮುಂದೂಡಲ್ಪಟ್ಟ ಆದಾಯ:** ಇದರಲ್ಲಿ ₹ 19659.02 ಲಕ್ಷಗಳಷ್ಟು ಏರಿಕೆಯಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಕಂಪೆನಿಯು ₹ 7364.03 ಲಕ್ಷಗಳಷ್ಟು ಗ್ರಾಹಕ ವಂತಿಗೆಗಳನ್ನು ಸ್ವೀಕರಿಸಿರುತ್ತದೆ. ಸರಕಾರವು ಡಿಡಿಯುಜಿಜೆವೈ ಯೋಜನೆಯಡಿಯಲ್ಲಿ ₹ 6432.84 ಲಕ್ಷ, ಐಪಿಡಿಎಸ್ ಯೋಜನೆಯಡಿಯಲ್ಲಿ ₹ 5728.00 ಲಕ್ಷ ಹಾಗೂ ಆರ್‌ಜಿಜಿವಿವೈ ಯೋಜನೆಯಡಿಯಲ್ಲಿ ₹ 160.58 ಲಕ್ಷಗಳಷ್ಟು ಅನುದಾನಗಳನ್ನು ಬಿಡುಗಡೆಗೊಳಿಸಿರುತ್ತದೆ. ಮುಂದುವರೆದು ಆರ್‌ಎಪಿಡಿಆರ್‌ಪಿ ಯೋಜನೆಯಡಿ ಪಿಎಫ್‌ಸಿ ಯು ಬಿಡುಗಡೆಗೊಳಿಸಿದ ಸಾಲದ ಮೊತ್ತ ₹ 2846.67 ಲಕ್ಷಗಳನ್ನು ಪ್ರಸ್ತುತ ವರ್ಷದಲ್ಲಿ ಅನುದಾನವನ್ನಾಗಿ ಪರಿವರ್ತಿಸಲಾಗಿದೆ.

ಮುಂದುವರೆದು, ಗ್ರಾಹಕರ ವಂತಿಗೆ ಹಾಗೂ ಸರಕಾರದ ಅನುದಾನಗಳಿಂದ ರಚಿಸಲಾದ ಆಸ್ತಿಗಳಿಗೆ ಸಂಬಂಧಪಟ್ಟ ಸವಕಳಿಯನ್ನು ಲೆಕ್ಕಾಚಾರ ಮಾಡಿ ಆ ಪ್ರಯುಕ್ತ ₹ 1801.49 ಲಕ್ಷಗಳನ್ನು ಕಂದಾಯ ಖಾತೆಗೆ ಹೊಂದಾಣಿಕೆ ಮಾಡಲಾಗಿದೆ.

- **ಇತರೆ ನಾಚಾಲ್ತಿ ಹೊಣೆಗಾರಿಕೆಗಳು:** ಇದು ₹ 0.46 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ.

4. **ಚಾಲ್ತಿ ಹೊಣೆಗಾರಿಕೆಗಳು:**

- **ಸಾಲಗಳು:** ವಿದ್ಯುತ್ ಖರೀದಿ ವೆಚ್ಚಗಳನ್ನು ಸಂದಾಯ ಮಾಡಲು ಬ್ಯಾಂಕ್ ಮೀರಿಳೆತದಲ್ಲಾದ ಏರಿಕೆಯಿಂದಾಗಿ ಇದರಲ್ಲಿ ₹ 4070.54 ಲಕ್ಷಗಳಷ್ಟು ಏರಿಕೆಯಾಗಿರುತ್ತದೆ.
- **ವ್ಯಾಪಾರ ಸಂಬಂಧಿ ಕೊಡತಕ್ಕವುಗಳು:** ಇದರಲ್ಲಿ ₹ 4565.72 ಲಕ್ಷಗಳಷ್ಟು ನಿವ್ವಳ ಇಳಿಕೆಯಾಗಿರುತ್ತದೆ. ಇದು ಮುಖ್ಯವಾಗಿ ಮೆ/ ಎನ್‌ಟಿಪಿಸಿ ಯ ₹ 1938.62 ಲಕ್ಷಗಳು, ಮೆ/ಯುಪಿಸಿಎಲ್ ನ ₹ 649.60 ಲಕ್ಷಗಳು, ಮೆ/ ಕೈಗಾ ವಿದ್ಯುತ್ ಉತ್ಪಾದನಾ ಕೆಂದ್ರದ ₹ 888.40 ಲಕ್ಷಗಳು ಹಾಗೂ ಮೆ/ಆರ್‌ಪಿಸಿಎಲ್ ನ ₹ 1618.70 ಲಕ್ಷಗಳಷ್ಟು ವಿದ್ಯುತ್ ಖರೀದಿ ಬಾಕಿಗಳನ್ನು ಪಾವತಿಸಿರುವುದರಿಂದ ಹಾಗೂ ಇತರ ವಿದ್ಯುತ್ ಉತ್ಪಾದಕರ ಬಾಕಿಗಳಲ್ಲಿ ₹ 529.60 ಲಕ್ಷಗಳಷ್ಟು ಏರಿಕೆಯಾಗಿರುವುದರಿಂದ ಆಗಿರುತ್ತದೆ.
- **ಇತರೆ ಆರ್ಥಿಕ ಹೊಣೆಗಾರಿಕೆಗಳು:** ಇದರಲ್ಲಿ ₹ 6373.76 ಲಕ್ಷ ನಿವ್ವಳ ಇಳಿಕೆಯಾಗಿರುತ್ತದೆ. ವಿದ್ಯುತ್ ಸಮತೋಲನಕ್ಕಾಗಿ ಬೆಸ್ಕಾಂಗೆ ಪಾವತಿಸಬೇಕಾದ ಶಿಲ್ಕಿನಲ್ಲಿ ನಿವ್ವಳ ₹ 7999.26 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ ಆದರೆ ಜೆಸ್ಕಾಂ ಗೆ ಪಾವತಿಸಬೇಕಾದ ಮೊತ್ತದಲ್ಲಿ ರೂ. ₹ 5586.14 ಲಕ್ಷಗಳಷ್ಟು ಏರಿಕೆಯಾಗಿರುತ್ತದೆ. ಸರಬರಾಜುದಾರರು/ಗುತ್ತಿಗೆದಾರರಿಂದ ₹ 966.65 ಲಕ್ಷಗಳಷ್ಟನ್ನು ಠೇವಣಿಯಾಗಿ ಹಿಡಿದಿಟ್ಟುಕೊಳ್ಳಲಾಗಿರುತ್ತದೆ. ಹಿಂಬಾಕಿ ವೆಚ್ಚಗಳ ಪಾವತಿಗೆ ಕಲ್ಪಿಸಲಾದ ಅವಕಾಶಗಳಲ್ಲಿ ₹ 4021.97 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ. ಇತರೆ ಹೊಣೆಗಾರಿಕೆಗಳಲ್ಲಿ ₹ 908.32 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ.
- **ಇತರೆ ಚಾಲ್ತಿ ಹೊಣೆಗಾರಿಕೆಗಳು:** ಇದರಲ್ಲಿ ₹ 1464.99 ಲಕ್ಷಗಳಷ್ಟು ನಿವ್ವಳ ಏರಿಕೆಯಾಗಿರುತ್ತದೆ. ಇದು ಮುಖ್ಯವಾಗಿ ಶಾಸನಬದ್ಧ ಹೊಣೆಗಾರಿಕೆಯಲ್ಲಾದ ₹ 764.88 ಲಕ್ಷಗಳ ಹೆಚ್ಚಳ ಹಾಗೂ ಬ್ಯಾಂಕ್ ಗ್ಯಾರಂಟಿ ನಗದೀಕರಣಗಳಲ್ಲಿ ₹ 909.00 ಲಕ್ಷಗಳ ಹೆಚ್ಚಳದಿಂದಾಗಿರುತ್ತದೆ. ಇತರೆ ಬಾಬ್ತುಗಳಲ್ಲಿ ₹ 208.89 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ.
- **ಅವಕಾಶಗಳು:** ಗಳಿಕೆ ರಜೆ ನಗದೀಕರಣ ಹಾಗೂ ಕುಟುಂಬ ಕಲ್ಯಾಣ ನಿಧಿಗಳ ವಾಸ್ತವಿಕ ಮೌಲೀಕರಣ ವರದಿಯನ್ವಯ ಹೊಣೆಗಾರಿಕೆಯನ್ನು ಲೆಕ್ಕೀಕರಿಸುವುದರಿಂದ ಇದರಲ್ಲಿ ₹ 861.97 ಲಕ್ಷಗಳಷ್ಟು ಏರಿಕೆಯಾಗಿರುತ್ತದೆ.
- **ಮುಂದೂಡಲ್ಪಟ್ಟ ಆದಾಯ:** ಇದರಲ್ಲಿ ₹ 1071.61 ಲಕ್ಷಗಳಷ್ಟು ಏರಿಕೆಯಾಗಿರುತ್ತದೆ.
- **ಅನುಪಾತಗಳು**

ಕ್ರ.ಸಂ	ವಿವರಗಳು	31.03.2019	31.03.2018
1	ಸಾಲ ಮತ್ತು ಬಂಡವಾಳ ಅನುಪಾತ	1.01 : 1	1.06 : 1
2	ಚಾಲ್ತಿ ಅನುಪಾತ	1.34 : 1	1.12 : 1
3	ನಗದು ಅನುಪಾತ	1.30 : 1	1.10 : 1

ಲಾಭ ಮತ್ತು ನಷ್ಟ ವಿವರಣಾ ಪಟ್ಟಿಯ ಅವಲೋಕನ **[₹ ಲಕ್ಷಗಳಲ್ಲಿ]**

ಕ್ರ.ಸಂ	ವಿವರಗಳು	31.03.2019	31.03.2018	ಏರಿಕೆ/ಇಳಿಕೆ	ವ್ಯತ್ಯಾಸ (%)
I	ವಿದ್ಯುತ್ ಮಾರಾಟದಿಂದ ಬಂದ ಆದಾಯ	331686.13	319034.40	12651.73	3.97
II	ಇತರೆ ಆದಾಯ	11123.92	8783.17	2340.75	26.65
III	**ಒಟ್ಟು ಕಂದಾಯ (I+II)**	**342810.05**	**327817.57**	**14992.48**	**30.62**
IV	**ವೆಚ್ಚಗಳು**				
1	ವಿದ್ಯುತ್ ಖರೀದಿ	222303.75	250801.33	-28497.58	-11.36
2	ಸಿಬ್ಬಂದಿ ವೆಚ್ಚಗಳು	39240.33	35567.58	3672.75	10.33
3	ಆರ್ಥಿಕ ವೆಚ್ಚಗಳು	9849.68	8256.05	1593.63	19.30
4	ಸವಕಳಿ & ಸ್ಥಿರೀಕರಿಸಿದ ವೆಚ್ಚಗಳು	12569.26	9038.78	3530.48	39.06
5	ಇತರೆ ವೆಚ್ಚಗಳು	21893.61	16583.00	5310.61	32.02
	ಒಟ್ಟು ವೆಚ್ಚ (IV)	**305856.63**	**320246.74**	**-14390.11**	**-4.49**
V	**ಅಸಾಮಾನ್ಯ ವಿಷಯಗಳು ಮತ್ತು ತೆರಿಗೆ ಪೂರ್ವ ಲಾಭ (III-IV)**	**36953.42**	**7570.83**	**29382.59**	

VI	ಅಸಾಮಾನ್ಯ ವಿಷಯಗಳು(ಆದಾಯ)/ ವೆಚ್ಚ (ನಿವ್ವಳ)	3660.00	4847.86	-1187.86	
VII	**ತೆರಿಗೆ ಪೂರ್ವ ಲಾಭ/ನಷ್ಟ (V+VI)**	**33293.42**	**2722.97**	**30570.45**	
VIII	ತೆರಿಗೆ	1208.78	478.69	730.09	152.52
IX	ಕನಿಷ್ಠ ಪರ್ಯಾಯ ತೆರಿಗೆ	-1192.44	-478.69	-713.75	149.10
X	ಲಾಭ/ನಷ್ಟ ಸಂಬಂಧಿಸಿದಂತೆ ನಿವ್ವಳ ಮುಂದೂಡಲ್ಪಟ್ಟ ಲೆಕ್ಕಗಳ ಶಿಲ್ಕು	-27637.88	419.17	-28057.05	
XI	**ತೆರಿಗೆ ನಂತರದ ಲಾಭ**	**5639.20**	**3142.14**	**2497.06**	**79.47**

- **ಒಟ್ಟು ಕಂದಾಯವು** ಪ್ರಸಕ್ತ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ನಿವ್ವಳ 3.97% (₹ 12651.73 ಲಕ್ಷಗಳಷ್ಟು) ಹೆಚ್ಚಾಗಿರುತ್ತದೆ. ಇದು ಮುಖ್ಯವಾಗಿ ವಿದ್ಯುಚ್ಛಕ್ತಿ ಮಾರಾಟದಲ್ಲಾದ ₹ 75.28 ಮಿ.ಯು ಹೆಚ್ಚಳ ಹಾಗೂ ಜಕಾತಿ ದರಗಳಲ್ಲಾದ ಹೆಚ್ಚಳದಿಂದಾಗಿರುತ್ತದೆ.
- **ಇತರೆ ಆದಾಯವು ಹಿಂದಿನ ವರ್ಷಕ್ಕಿಂತ 26.65%** (₹ 2340.75 ಲಕ್ಷಗಳಷ್ಟು) ಏರಿಕೆಯಾಗಿರುತ್ತದೆ. ಇದು ಮುಖ್ಯವಾಗಿ ವಿದ್ಯುತ್ ಖರೀದಿ ವೆಚ್ಚಗಳನ್ನು ನಿಗದಿತ ಅವಧಿಯೊಳಗೆ ಪಾವತಿಸಿದ ಬಾಬ್ತು ಸ್ವೀಕರಿಸಿದ ಪ್ರೋತ್ಸಾಹಧನದಲ್ಲಿನ ಹೆಚ್ಚಳ ₹ 1455.51 ಲಕ್ಷ ಹಾಗೂ ಆದಾಯಗಳ ಖಾತೆಗೆ ವರ್ಗಾಯಿಸಿದ ಗ್ರಾಹಕರ ವಂತಿಗೆ ಹಾಗೂ ಸರಕಾರದ ಅನುದಾನಗಳಿಂದ ರಚಿಸಲಾದ ಆಸ್ತಿಗಳಿಗೆ ಸಂಬಂಧಪಟ್ಟ ಸವಕಳಿಯಲ್ಲಿನ ಹೆಚ್ಚಳ ₹ 1356.43 ಲಕ್ಷಗಳಿಂದಾಗಿರುತ್ತದೆ. ಇತರ ಬಾಬ್ತುಗಳಲ್ಲಿ ₹ 471.20 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ.
- **ದಿನಾಂಕ 01.08.2008 ರಿಂದ ಅನ್ವಯವಾಗುವಂತೆ 10 ಹೆಚ್.ಪಿ ವರೆಗಿನ ಸಂಪರ್ಕಿತ ವಿದ್ಯುತ್ ಪ್ರಮಾಣವುಳ್ಳ ಕೃಷಿ ಪಂಪುಸೆಟ್ಟು ಗ್ರಾಹಕರ ಕಂದಾಯ ಬಾಕಿಯನ್ನು ಸ್ಥಿರೀಕರಣಗೊಳಿಸಿರುವುದರಿಂದ ಕಂಪೆನಿಯು ಆ ಬಾಕಿಯ ಮೇಲೆ 2011-12 ನೇ ಸಾಲಿನಿಂದ ಬಡ್ಡಿಯನ್ನು ವಿಧಿಸುತ್ತಿಲ್ಲ. ಇದು ಪ್ರಸ್ತುತ ವರ್ಷ 2018-19 ನೇ ಸಾಲಿಗೆ ₹ 8.27 ಕೋಟಿಗಳಷ್ಟು ಪರಿಣಾಮವನ್ನು ಹೊಂದಿರುತ್ತದೆ.**
- **ವಿದ್ಯುತ್ ಖರೀದಿ ವೆಚ್ಚವು** ಹಿಂದಿನ ಸಾಲಿಗಿಂತ 11.36% (₹ 28497.58 ಲಕ್ಷಗಳಷ್ಟು) ಇಳಿಕೆಯಾಗಿರುತ್ತದೆ. ಇದು ಮುಖ್ಯವಾಗಿ 2018-19 ನೇ ಸಾಲಿಗೆ ಮ.ವಿ.ಸ.ಕಂ.ಗೆ ಕಡಿಮೆ ದರದ ವಿದ್ಯುತ್ ನ ಹಂಚಿಕೆಯಿಂದ, ಅಧಿಕ ದರದ ವಿದ್ಯುತ್ ಹಂಚಿಕೆಯ ಕಡಿತದಿಂದ ಹಾಗೂ ಜಲವಿದ್ಯುತ್‌ನ ಲಭ್ಯತೆಯಿಂದ ಆಗಿರುತ್ತದೆ. 2018-19 ನೇ ಸಾಲಿನ ವಿದ್ಯುತ್ ಸಮತೋಲನದ ಪ್ರಕಾರ, ಕಂಪೆನಿಯು ₹ 4164.00 ಲಕ್ಷಗಳನ್ನು ಇತರೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾಗಿರುತ್ತದೆ.
- **ಸಿಬ್ಬಂದಿ ವೆಚ್ಚವು** ಹಿಂದಿನ ಸಾಲಿಗಿಂತ 10.33% (₹ 3672.75 ಲಕ್ಷ) ಗಳಷ್ಟು ವೇತನ, ಮಜೂರಿಯ ಹೆಚ್ಚಳದಿಂದಾಗಿ ಹಾಗೂ ಪಿಂಚಣಿ ದತ್ತಿಗೆ ಪಾವತಿಸಬೇಕಾಗುವ ವಂತಿಗೆಯ ಹೆಚ್ಚಳದಿಂದಾಗಿ ಏರಿಕೆಯಾಗಿರುತ್ತದೆ.
- **ಹಣಕಾಸು ವೆಚ್ಚಗಳು** : ವಾಣಿಜ್ಯ ಬ್ಯಾಂಕುಗಳಿಂದ ಪಡೆದ ಸಾಲದ ಪ್ರಮಾಣದಲ್ಲಿ ಏರಿಕೆಯಾಗಿರುವುದರಿಂದ ಹಣಕಾಸು ವೆಚ್ಚಗಳಲ್ಲಿ ಹಿಂದಿನ ಸಾಲಿಗಿಂತ 19.30% (₹ 1593.63 ಲಕ್ಷ) ಗಳಷ್ಟು ಏರಿಕೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿಯೂ ಸಹ ಕಂಪೆನಿಯು ಮೆ/ ಕೆಪಿಸಿಎಲ್ ನಿಂದ ವಿದ್ಯುತ್ ಖರೀದಿಸಿದ ವೆಚ್ಚದ ವಿಳಂಬ ಪಾವತಿಗೆ ಬಡ್ಡಿಯನ್ನು ಲೆಕ್ಕೀಕರಿಸಿರುವುದಿಲ್ಲ
- **ಸವಕಳಿ ಮತ್ತು ಋಣಮುಕ್ತತೆಯ ವೆಚ್ಚಗಳು** ಹೊಸದಾಗಿ ಸೃಷ್ಟಿಸಿದ ಸ್ಥಿರ ಆಸ್ತಿಗಳ ಮೇಲೆ ಸವಕಳಿಯನ್ನು ಲೆಕ್ಕೀಕರಿಸಿರುವುದರಿಂದ ಹಿಂದಿನ ಸಾಲಿಗಿಂತ 39.06% (₹ 3530.48 ಲಕ್ಷ) ಹೆಚ್ಚಾಗಿರುತ್ತದೆ
- **ಇತರೆ ವೆಚ್ಚಗಳು** ಹಿಂದಿನ ಸಾಲಿಗಿಂತ 32.02% (₹ 5310.61 ಲಕ್ಷ) ಹೆಚ್ಚಾಗಿರುತ್ತದೆ. ಇದು ಮುಖ್ಯವಾಗಿ ಗಾಳಿಮಳೆಯಿಂದಾದ ಹಾನಿಗೊಳಗಾದ ಕಂಬಗಳು, ಮಾರ್ಗಗಳು ಹಾಗೂ ಕೇಬಲ್‌ಗಳ ದುರಸ್ತಿ ವೆಚ್ಚಗಳಲ್ಲಿ ಆದ ಹೆಚ್ಚಳ, ವಾಹನಗಳ ನಿರ್ವಹಣೆ ಹಾಗೂ ಗುತ್ತಿಗೆದಾರರಿಂದ ಪಡೆದ ವಿವಿಧ ಸೇವೆಗಳಿಗಾಗಿ ಪಾವತಿಸಲಾದ ಸಂಭಾವನೆಯಲ್ಲಾದ ಏರಿಕೆಯಿಂದಾಗಿರುತ್ತದೆ.
- **ಚಾಲ್ತಿ ತೆರಿಗೆ** : ಕನಿಷ್ಠ ಪರ್ಯಾಯ ತೆರಿಗೆ ಆಧಾರದಲ್ಲಿ ₹ 5639.20 ಲಕ್ಷ ಲಾಭಕ್ಕೆ ₹ 1208.78 ಲಕ್ಷ ತೆರಿಗೆಯನ್ನು ಲೆಕ್ಕಾಚಾರ ಮಾಡಲಾಗಿರುತ್ತದೆ.
- **ಕನಿಷ್ಠ ಪರ್ಯಾಯ ತೆರಿಗೆ ಜಮೆಯ ಮೇಲಿನ ಹಕ್ಕು** : ಕಂಪೆನಿಯು ಪ್ರಸಕ್ತ ವರ್ಷಕ್ಕೆ ₹ 1192.44 ಲಕ್ಷಗಳಷ್ಟು ಕನಿಷ್ಠ ಪರ್ಯಾಯ ತೆರಿಗೆ ಜಮೆಯ ಮೇಲಿನ ಹಕ್ಕನ್ನು ಲೆಕ್ಕೀಕರಿಸಿದೆ.
- **ನಿಯಂತ್ರಣ ಆಸ್ತಿಗಳು** : ಆರ್ಥಿಕ ವರ್ಷ 2018-19 ನೇ ಸಾಲಿನಲ್ಲಿ ಕಂಪೆನಿಯು 2016-17 ನೇ ಸಾಲಿನಲ್ಲಿ ಲೆಕ್ಕೀಕರಿಸಿದ ನಿಯಂತ್ರಣ ಆಸ್ತಿ ₹ 55383.00 ಲಕ್ಷಗಳನ್ನು 2018-19 ನೇ ಸಾಲಿನಲ್ಲಿ ವಸೂಲಿಯಾಗಿದೆಯೆಂದು ಪರಿಗಣಿಸಿ ಹಿಂಪಡೆದಿರುತ್ತದೆ. ಮುಂದುವರೆದು, ಕೆಇಆರ್‌ಸಿ ಯು 2017-18 ನೇ ಸಾಲಿಗೆ ಮಾನ್ಯ ಮಾಡಿರುವ ಕಂದಾಯ ಕೊರತೆಯನ್ನು ಪರಿಗಣಿಸಿ ₹ 32985.00 ಲಕ್ಷಗಳಷ್ಟು ಮೊತ್ತದ ನಿಯಂತ್ರಣ ಆಸ್ತಿಗಳನ್ನು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಹಿಂಪಡೆದಿರುತ್ತದೆ.

ಮುಂದಿನ ವರ್ಷಗಳ ಜಕಾತಿ ಪರಿಷ್ಕರಣೆಯಲ್ಲಿ ಕೆ.ಇ.ಆರ್.ಸಿ ಯು ಪರಿಗಣಿಸಬಹುದೆಂದು ನಿರೀಕ್ಷಿಸಲಾದ ತಾತ್ಕಾಲಿಕ ಕಂದಾಯ ಕೊರತೆಯನ್ನು ಗಣನೆಗೆ ತೆಗೆದುಕೊಂಡು 2018-19 ನೇ ಸಾಲಿನಲ್ಲಿ ₹ 60730.12 ಲಕ್ಷಗಳಷ್ಟು ಮೊತ್ತದ ನಿಯಂತ್ರಣ ಆಸ್ತಿಗಳನ್ನು ಹೊಸದಾಗಿ ಲೆಕ್ಕಿಸಲಾಗಿರುತ್ತದೆ.

❖ **ತೆರಿಗೆ ನಂತರದ ಲಾಭವು** ಹಿಂದಿನ ಸಾಲಿಗಿಂತ ₹ 2497.06 ಲಕ್ಷಗಳಷ್ಟು ಏರಿಕೆಯಾಗಿರುತ್ತದೆ.

6. **ಲಾಭಾಂಶ :**

ನಿರ್ದೇಶಕರ ಮಂಡಳಿಯು 31ನೇ ಮಾರ್ಚ್ 2019 ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಯಾವುದೇ ಲಾಭಾಂಶವನ್ನು ಪ್ರಸ್ತಾಪಿಸಿರುವುದಿಲ್ಲ.

7. **ಬಂಡವಾಳ ಮತ್ತು ಸಾಲಗಳ ಮೂಲ :**

ಅ) ಕಂಪೆನಿಯ ಆರ್ಥಿಕ ಮೂಲದ ಒಟ್ಟು ಮೊತ್ತ ₹ 765.86 ಕೋಟಿಯಾಗಿದ್ದು, ಇದರಲ್ಲಿ ಈಕ್ವಿಟಿ ಶೇರು ಬಂಡವಾಳ ₹ 481.82 ಕೋಟಿ, ಮತ್ತು ₹ 284.04 ಕೋಟಿ ಮೀಸಲು ಮತ್ತು ಮಿಗತೆ ಇರುತ್ತದೆ.

ಆ) ಕಂಪೆನಿಯು ಒಟ್ಟು ₹ 732.12 ಕೋಟಿಯಷ್ಟು ದೀರ್ಘಾವಧಿ ಸಾಲವನ್ನು ಹೊಂದಿರುತ್ತದೆ ಮತ್ತು ಭದ್ರತಾ ಠೇವಣಿ ₹ 625.08 ಕೋಟಿ ಇರುತ್ತದೆ.

8. **ವಿದ್ಯುಚ್ಛಕ್ತಿ ಖರೀದಿ**

ಆರ್ಥಿಕ ವರ್ಷ 2018-19ನೇ ಸಾಲಿನಲ್ಲಿ ಖರೀದಿಸಲಾದ ಒಟ್ಟು 5981.65 ಮಿ.ಯು ಗಳಿಗೆ ₹ 2223.04 ಕೋಟಿ ವೆಚ್ಚವಾಗಿರುತ್ತದೆ. ಮಾರಾಟಕ್ಕೆ ಲಭ್ಯವಿರುವ ವಿದ್ಯುಚ್ಛಕ್ತಿಯು 5539.73 ಮಿ.ಯು ಆಗಿರುತ್ತದೆ. ಸದರಿ ವರ್ಷದಲ್ಲಿ ಒಟ್ಟು ಮಾರಾಟವು 4956.87 ಮಿ.ಯು ಆಗಿದ್ದು ಉಳಿದ 582.86 ಮಿ.ಯು ವ್ಯವಸ್ಥಾ ನಷ್ಟ (System Loss) ವಾಗಿರುತ್ತದೆ.

9. 1. ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿಯು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಇಎನ್ 131 ಪಿಎಸ್ಆರ್ 2003 ದಿನಾಂಕ 10.05.2005 ರ ಪ್ರಕಾರ ದಿನಾಂಕ 10.06.2005 ರಿಂದ ವಿದ್ಯುತ್ ಖರೀದಿ ಮಾಡುತ್ತಿದೆ. ಆರ್ಥಿಕ ವರ್ಷ 2018-19 ರಲ್ಲಿ ಈ ಕೆಳಕಂಡ ವಿದ್ಯುತ್ ಘಟಕಗಳಿಂದ ವಿದ್ಯುತ್ ಖರೀದಿಸಲಾಗಿದೆ.

1. ಕೇಂದ್ರೀಯ ವಿದ್ಯುತ್ ಘಟಕಗಳು – ಎನ್‌ಟಿಪಿಸಿ, ಎನ್‌ಟಿಪಿಸಿ ವಿವಿಎನೆಲ್,ಎನ್‌ಎಲ್‌ಸಿ, ಎನ್‌ಪಿಸಿಐಎಲ್, ಎನ್‌ಟಿಇಸಿಎಲ್, ಎನ್‌ಟಿಪಿಎಲ್ & ಎನ್‌ಟಿಪಿಸಿ (ಸಂಯೋಜಿತ ಸೌರ ವಿದ್ಯುತ್).
2. ರಾಜ್ಯ ಒಡೆತನದ ವಿದ್ಯುತ್ ಘಟಕಗಳು –
   (ಎ) ಮೆ/ ಕೆಪಿಸಿಎಲ್ ಉಷ್ಣ ವಿದ್ಯುತ್ ಹಾಗೂ ಜಲವಿದ್ಯುತ್
   (ಬಿ) ಮೆ/ ರಾಯಚೂರು ಪವರ್ ಕಾರ್ಪೊರೇಷನ್ ಲಿ., – ಉಷ್ಣವಿದ್ಯುತ್.
3. ಬೃಹತ್ ಸ್ವತಂತ್ರ ವಿದ್ಯುತ್ ಉತ್ಪಾದಕರು – ಉಡುಪಿ ಪವರ್ ಕಂಪೆನಿ ಲಿ.,
4. ಸ್ವತಂತ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಅಸಾಂಪ್ರದಾಯಿಕ ಮೂಲಗಳಾದ ಪವನ, ಸೌರ ಮತ್ತು ಕಿರು ಜಲವಿದ್ಯುತ್ ಘಟಕಗಳಿಂದ ತಯಾರಾಗುವ ವಿದ್ಯುಚ್ಛಕ್ತಿ
5. ತೆಲಂಗಾಣ ಸ್ಟೇಟ್ ಪವರ್ ಜನರೇಷನ್ ಕಾರ್ಪೋರೇಷನ್ ಲಿ., (ಪ್ರಿಯದರ್ಶಿನಿ ಜುರಾಲ)
6. ದಾಮೋದರ್ ವ್ಯಾಲಿ ಕಾರ್ಪೋರೇಷನ್ ಲಿ.,
7. ಅಲ್ಪಾವಧಿ ಮತ್ತು ಮಧ್ಯಮಾವಧಿ (ಸಹ ಉತ್ಪಾದನೆ).

2. ಪ್ರತಿ ವಿದ್ಯುತ್ ಸರಬರಾಜು ಕಂಪೆನಿಗಳಿಗೆ ಕರ್ನಾಟಕ ಸರ್ಕಾರವು ವಿದ್ಯುಚ್ಛಕ್ತಿ ಹಂಚಿಕೆ ಹಾಗೂ ಪಾವತಿ ಬಗ್ಗೆ ಆದೇಶವನ್ನು ನೀಡುತ್ತದೆ. 2018-19 ನೇ ಆರ್ಥಿಕ ವರ್ಷಕ್ಕೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ EN 32 PSR 2018, ಬೆಂಗಳೂರು ದಿನಾಂಕ 24.04.2018 ರ ಪ್ರಕಾರ ಮೆಸ್ಕಾಂಗೆ ನೀಡಲಾದ ವಿದ್ಯುತ್ ಖರೀದಿ ಬಿಲ್ಲಿಂಗ್ ಹಾಗೂ ಪಾವತಿಗೆ ಶೇಕಡಾವಾರು ಹಂಚಿಕೆ ಈ ಕೆಳಗಿನಂತಿದೆ.

1.	ಕೆಪಿಸಿ ಹೈಡಲ್, ಟಿಬಿ ಡ್ಯಾಮ್ & ಜುರಾಲ	20.00% to 20.240%
2.	ಕೆಪಿಸಿ ಥರ್ಮಲ್, ಆರ್‌ಪಿ.ಸಿಎಲ್ & ಕೇಂದ್ರೀಯ ವಿದ್ಯುತ್ ಘಟಕಗಳು	1.190% to 8.1054%
3.	ಬೃಹತ್ ಸ್ವತಂತ್ರ ವಿದ್ಯುತ್ ಉತ್ಪಾದಕರು	4.8%
4.	ಅಲ್ಪಾವಧಿ ವಿದ್ಯುತ್	12.5%
5.	ಮಧ್ಯಮಾವಧಿ ವಿದ್ಯುತ್ ಖರೀದಿ (ಸಹ ಉತ್ಪಾದನೆ)	8.0180%
6	ಅಸಾಂಪ್ರದಾಯಿಕ ಸ್ವತಂತ್ರ ವಿದ್ಯುತ್ ಉತ್ಪಾದಕರು	100%

3. ಮೆಸ್ಕಾಂ ಕಂಪೆನಿಯು ಆರ್ಥಿಕ ವರ್ಷ 2018–19 ರಲ್ಲಿ ವಿವಿಧ ಮೂಲಗಳಿಂದ ಖರೀದಿಸಿದ ವಿದ್ಯುತ್ ಪರಿಮಾಣ ಹಾಗೂ ವೆಚ್ಚಗಳ ವಿವರ ಈ ಕೆಳಗಿನಂತಿದೆ.

ವಿದ್ಯುತ್ ಘಟಕಗಳು	ವಿದ್ಯುತ್ ಪರಿಮಾಣ (ಮಿಯು)	ವಿದ್ಯುತ್ ವೆಚ್ಚ (ಕೋಟಿ ₹)	ಸರಾಸರಿ ದರ (₹ ಯೂನಿಟ್ ಒಂದಕ್ಕೆ)
ಕೆಪಿಸಿಎಲ್ ಉಷ್ಣ ವಿದ್ಯುತ್	205.92	124.80	6.06
ಕೆಪಿಸಿಎಲ್ ಜಲ ವಿದ್ಯುತ್	2383.50	190.54	0.80
ರಾಯಚೂರು ಪವರ್ ಕಾರ್ಪೊರೇಷನ್ ಲಿ.,	17.16	25.78	15.02
ಒಟ್ಟು ಕೆಪಿಸಿಎಲ್	**2606.58**	**341.12**	**1.31**
ಕೇಂದ್ರೀಯ ವಿದ್ಯುತ್ ಘಟಕಗಳು	1654.25	685.98	4.15
ಪ್ರಿಯದರ್ಶಿನಿ ಜುರಾಲ	8.12	11.73	14.45
ದಾಮೋದರ್ ವ್ಯಾಲಿ ಕಾರ್ಪೋರೇಷನ್	213.30	85.67	4.02
ಸ್ವತಂತ್ರ ವಿದ್ಯುತ್ ಉತ್ಪಾದಕರು	234.42	145.59	6.21
ಅಲ್ಪಾವಧಿ ವಿದ್ಯುತ್ ಖರೀದಿ	120.73	50.41	4.18
ಮಧ್ಯಮಾವಧಿ (ಸಹ ಉತ್ಪಾದನೆ)	139.08	64.76	4.66
ಅಸಂಪ್ರದಾಯಿಕ ವಿದ್ಯುತ್ ಘಟಕಗಳು (ಎನ್‌ಸಿಇ)			
ಕಿರು ಜಲವಿದ್ಯುತ್	348.93	122.42	3.51
ಪವನ ವಿದ್ಯುತ್	268.08	95.87	3.58
ಸೌರ ವಿದ್ಯುತ್	409.92	217.45	5.30
ಒಟ್ಟು ಅಸಾಂಪ್ರದಾಯಿಕ ವಿದ್ಯುತ್ ಘಟಕಗಳು (ಎನ್‌ಸಿಇ)	**1026.93**	**435.74**	**4.24**
ಯುಐ ಚಾರ್ಜಸ್	-3.68	1.53	-4.16
ಐಇಎಕ್ಸ್ ಮುಖಾಂತರ ಹೆಚ್ಚುವರಿ ವಿದ್ಯುತ್ ಮಾರಾಟ (ಪಿಸಿಕೆಎಲ್)	-65.06	-27.46	4.22
ಕೆಪಿಟಿಸಿಎಲ್ ಟ್ರಾನ್ಸ್‌ಮಿಷನ್ ಚಾರ್ಜಸ್	-	226.15	-
ಪಿಜಿಸಿಐಎಲ್ ಟ್ರಾನ್ಸ್‌ಮಿಷನ್ ಚಾರ್ಜಸ್	-	155.51	-
ಇತರೆ	5.34	4.67	8.75
ಒಟ್ಟು	**5940.01**	**2181.40**	**3.67**
ಎನರ್ಜಿ ಬ್ಯಾಲೆನ್ಸಿಂಗ್ ಹೊಂದಾಣಿಕೆ ಆರ್ಥಿಕ ವರ್ಷ 18–19	**41.64**	**41.64**	**-**
ನಿವ್ವಳ ವಿದ್ಯುತ್ ಪರಿಮಾಣ ಮತ್ತು ಒಟ್ಟು ಮೊತ್ತ	**5981.65**	**2223.04**	**3.72**

4. ಆರ್ಥಿಕ ವರ್ಷ 2017–18 ಮತ್ತು 2018–19 ರಲ್ಲಿ ವಿವಿಧ ಮೂಲಗಳಿಂದ ಮೆಸ್ಕಾಂ ಖರೀದಿಸಿದ ವಿದ್ಯುತ್ ಪರಿಮಾಣ ಹಾಗೂ ವೆಚ್ಚಗಳ ಹೋಲಿಕೆ.

ವಿದ್ಯುತ್ ಘಟಕಗಳು	2017–18			2018–19		
	ವಿದ್ಯುತ್ ಪರಿಮಾಣ (ಮಿಯು)	ವಿದ್ಯುತ್ ವೆಚ್ಚ (ಕೋಟಿ ₹)	ಸರಾಸರಿ ದರ (₹ ಯೂನಿಟ್ ಒಂದಕ್ಕೆ)	ವಿದ್ಯುತ್ ಪರಿಮಾಣ (ಮಿಯು)	ವಿದ್ಯುತ್ ವೆಚ್ಚ (ಕೋಟಿ ₹)	ಸರಾಸರಿ ದರ (₹ ಯೂನಿಟ್ ಒಂದಕ್ಕೆ)
ಕೆಪಿಸಿಎಲ್	1735.19	470.96	2.71	2589.42	315.34	1.22
ಆರ್.ಪಿ.ಸಿ.ಎಲ್	71.96	60.72	8.44	17.16	25.78	15.02
ಕೇಂದ್ರೀಯ ವಿದ್ಯುತ್ ಘಟಕಗಳು	1753.50	682.13	3.89	1654.25	685.98	4.15
ಪ್ರಿಯದರ್ಶಿನಿ ಜುರಾಲ	7.62	5.40	7.09	8.12	11.73	14.45
ದಾಮೋದರ್ ವ್ಯಾಲಿ ಕಾರ್ಪೋರೇಷನ್	237.85	105.08	4.42	213.30	85.67	4.02
ಸ್ವತಂತ್ರ ವಿದ್ಯುತ್ ಉತ್ಪಾದಕರು	177.64	101.35	5.71	234.42	145.59	6.21

ವಿದ್ಯುತ್ ಘಟಕಗಳು	2017-18			2018-19		
	ವಿದ್ಯುತ್ ಪರಿಮಾಣ (ಮಿಯು)	ವಿದ್ಯುತ್ ವೆಚ್ಚ (ಕೋಟಿ ₹)	ಸರಾಸರಿ ದರ (₹ ಯೂನಿಟ್ ಒಂದಕ್ಕೆ)	ವಿದ್ಯುತ್ ಪರಿಮಾಣ (ಮಿಯು)	ವಿದ್ಯುತ್ ವೆಚ್ಚ (ಕೋಟಿ ₹)	ಸರಾಸರಿ ದರ (₹ ಯೂನಿಟ್ ಒಂದಕ್ಕೆ)
ಅಲ್ಪಾವಧಿ ವಿದ್ಯುತ್ ಖರೀದಿ	467.41	190.56	4.08	120.73	50.42	4.18
ಮಧ್ಯಮಾವಧಿ ವಿದ್ಯುತ್ ಖರೀದಿ (ಸಹ ಉತ್ಪಾದನೆ)	96.42	44.76	4.64	139.08	64.76	4.66
ಅಸಾಂಪ್ರದಾಯಿಕ ವಿದ್ಯುತ್ ಖರೀದಿ (ಎನ್‌ಸಿಇ)	698.72	295.70	4.23	1026.93	435.74	4.24
ಐಇಎಕ್ಸ್ ಮುಖಾಂತರ ಹೆಚ್ಚುವರಿ ವಿದ್ಯುತ್ ಮಾರಾಟ (ಪಿಸಿಕೆಎಲ್)			-	-65.06	-27.46	4.22
ಕೆಪಿಟಿಸಿಎಲ್ ಟ್ರಾನ್ಸ್‌ಮಿಷನ್ ಚಾರ್ಜಸ್	-	218.04	-	-	226.15	-
ಪಿಜಿಸಿಐಎಲ್ ಟ್ರಾನ್ಸ್‌ಮಿಷನ್ ಚಾರ್ಜಸ್	-	156.22	-	-	155.51	-
ಯುಐ ಚಾರ್ಜಸ್ ಮತ್ತು ಇತರೆ ವೆಚ್ಚಗಳು	12.43	7.38	-	1.66	6.19	-
ಒಟ್ಟು	**5258.74**	**2338.29**	**4.45**	**5940.01**	**2181.40**	**3.67**
ಎನರ್ಜಿ ಬ್ಯಾಲೆನ್ಸಿಂಗ್ ಹೊಂದಾಣಿಕೆ	**407.95**	**169.72**	**4.16**	**41.64**	**41.64**	**10.00**
ನಿವ್ವಳ ವಿದ್ಯುತ್ ಪರಿಮಾಣ ಮತ್ತು ಮೊತ್ತ	**5666.69**	**2508.01**	**4.43**	**5981.65**	**2223.04**	**3.72**

10. **ವಿದ್ಯುತ್ ವಿತರಣಾ ಪರಿವರ್ತಕಗಳು, ಹೆಚ್.ಟಿ/ಎಲ್.ಟಿ ಮಾರ್ಗಗಳು ಮತ್ತು ವಿದ್ಯುದ್ಧೀಕರಣಗಳ ಬಗ್ಗೆ ಕಂಪೆನಿಯ ನಿರ್ವಹಣಾ ನೋಟ ಈ ಕೆಳಕಂಡಂತಿರುತ್ತದೆ:**

ಕ್ರ.ಸಂ	ವಿವರಗಳು	ಪರಿಮಾಣ	2018-19	2017-18	2016-17	2015-16	2014-15
1	**ಮಾರ್ಗ ಹಾಗೂ ಪರಿವರ್ತಕಗಳ ಸೇರ್ಪಡೆ:**						
ಅ	ವಿತರಣಾ ಪರಿವರ್ತಕಗಳ ಸ್ಥಾಪನೆ	ಸಂಖ್ಯೆ.	8237	7673	5114	4504	4749
ಆ	11 ಕೆ.ವಿ ಹೆಚ್.ಟಿ ಮಾರ್ಗಗಳು	ಆರ್.ಕಿ.ಮೀ.	2896.12	2455.39	1781.36	1595.70	1187.70
ಇ	ಎಲ್.ಟಿ ಮಾರ್ಗಗಳು	ಆರ್.ಕಿ.ಮೀ.	2349.80	2387.48	1413.62	1462.38	1931.99
ಈ	ಹೆಚ್.ಟಿ ಮಾರ್ಗಗಳ ರೀಕಂಡಕ್ಟರಿಂಗ್	ಆರ್.ಕಿ.ಮೀ.	193.40	160.02	103.65	252.47	179.06
ಉ	ಎಲ್.ಟಿ ಮಾರ್ಗಗಳ ರೀಕಂಡಕ್ಟರಿಂಗ್	ಎನ್‌ಟಿಪಿಸಿ,	703.10	602.07	362.05	579.45	780.54
2	ವಿತರಣಾ ಪರಿವರ್ತಕಗಳ ವೈಫಲ್ಯ	%	11.61%	11.20%	11.67%	11.88%	11.52%
3	**ಗ್ರಾಮೀಣ ವಿದ್ಯುದ್ಧೀಕರಣ**						
ಅ	ಹ್ಯಾಮ್ಲೆಟ್ ವಿದ್ಯುದ್ಧೀಕರಣ	ಸಂಖ್ಯೆ.	-	3	3	12	12
ಆ	ಹರಿಜನ ಬಸ್ತೀ/ ಜನತಾ ಕಾಲೋನಿ/ ತಾಂಡಾಗಳ ವಿದ್ಯುದ್ಧೀಕರಣ	ಸಂಖ್ಯೆ.	2	17	13	6	8
ಇ	ಬುಡಕಟ್ಟು ಜನಾಂಗಗಳ ಕಾಲೋನಿಗಳ ವಿದ್ಯುದ್ದೀಕರಣ	ಸಂಖ್ಯೆ.	4	22	9	8	10
4	**ಸೇವಾ ಸಂಪರ್ಕ:**						
ಅ	ಕುಡಿಯುವ ನೀರಿನ ಯೋಜನೆಗಳು	ಸಂಖ್ಯೆ.	578	818	1018	631	887
ಆ	ಗಂಗಾ ಕಲ್ಯಾಣ ಯೋಜನೆಗಳು	ಸಂಖ್ಯೆ.	1879	1579	1593	1090	1150
5	**ಬಳಸಿದ ಒಟ್ಟು ವಿದ್ಯುತ್ ಪರಿಮಾಣ**	ಎಂ.ಯು.	5539.73	5642.43	5411.61	4869.13	4688.54
6	**ವಿತರಣಾ ನಷ್ಟ**	%	10.52%	11.11%	11.40%	11.50%	11.57%
7	**ನೀರಾವರಿ ಪಂಪು ಸೆಟ್ ವಿದ್ಯುತ್ ಸಂಪರ್ಕ**						
ಅ	ಹೊಸ ನೀರಾವರಿ ಪಂಪು ಸೆಟ್	ಸಂಖ್ಯೆ	11097	14602	10650	11996	10273
ಆ	ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣ	ಸಂಖ್ಯೆ	–	–	-	9394	6142
8	ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳ ಸಂಪರ್ಕ	ಸಂಖ್ಯೆ	–	1807	2412	1083	1351

11. **2018-19ರಲ್ಲಿನ ಸಾಧನೆಯ ಮೈಲಿಗಲ್ಲುಗಳು :**

ಕಂಪೆನಿಯ ವಿತರಣಾ ಪದ್ಧತಿ ಹಾಗೂ ಆರ್ಥಿಕ ಸ್ಥಿತಿಯ ಸಶಕ್ತೀಕರಣ ಹಾಗೂ ಸಬಲೀಕರಣಕ್ಕಾಗಿ ಅನೇಕ ಹೊಸ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮುಖ್ಯ ಸಾಧನೆಗಳು ಹಾಗೂ ಹೊಸ ಉಪಕ್ರಮಗಳತ್ತ ಒಂದು ಪಕ್ಷಿ ನೋಟ ಈ ಕೆಳಗಿನಂತಿದೆ:

(ಅ) **ವಿದ್ಯುತ್ ವಿತರಣಾ ವ್ಯವಸ್ಥೆಗೆ ಹೊಸ ಪರಿವರ್ತಕಗಳ ಸೇರ್ಪಡೆ :**

ವಿದ್ಯುತ್‌ನ ಗುಣಮಟ್ಟ ಹಾಗೂ ಸರಬರಾಜಿನ ನಂಬಲಾರ್ಹತೆಯನ್ನು ಉತ್ತಮಗೊಳಿಸುವ ಸಲುವಾಗಿ ಗುರುತಿಸಲ್ಪಟ್ಟ ಲೋ-ವೋಲ್ಟೇಜ್ ಪ್ರದೇಶಗಳಲ್ಲಿ 1380 ಸಂಖ್ಯೆಯ ವಿದ್ಯುತ್ ಪರಿವರ್ತಕಗಳನ್ನು ವಿತರಣಾ ವ್ಯವಸ್ಥೆಗೆ ಸೇರ್ಪಡೆಗೊಳಿಸಲಾಗಿದೆ.

(ಆ) **ಮಾಪಕೀಕರಣ ಕಾರ್ಯಕ್ರಮ :**

ಕಂಪೆನಿಯು ಶೇ. 100 ರಷ್ಟು ಸ್ಥಾವರಗಳ ಮಾಪಕೀಕರಣದತ್ತ ಸಾಗುತ್ತಿದೆ. ನಿರಂತರ ಹಾಗೂ ಸಮರ್ಪಣಾ ಕಾರ್ಯಬದ್ಧತೆ ಹಾಗೂ ಸಾರ್ವತ್ರಿಕ ಮಾಪಕೀಕರಣ ಕಾರ್ಯಕ್ರಮದಿಂದ ಕಂಪೆನಿಯು 2018-19ರ ಅಂತ್ಯಕ್ಕೆ 97.35% ಮಾಪಕೀಕರಣವನ್ನು ಸಾಧಿಸಿರುತ್ತದೆ.

(ಇ) **ವಿದ್ಯುತ್ ವಿತರಣಾ ಪರಿವರ್ತಕ ಕೇಂದ್ರಗಳ ಮಾಪಕೀಕರಣ :**

ಮೆಸ್ಕಾಂ ವ್ಯಾಪ್ತಿಯಲ್ಲಿ, ಮಾರ್ಚ್-2019ರ ಅಂತ್ಯಕ್ಕೆ ಹಾಲಿ ಇರುವ ಒಟ್ಟು 75080 ಸಂಖ್ಯೆಯ ಪರಿವರ್ತಕಗಳಲ್ಲಿ 43673 ಸಂಖ್ಯೆಯ ಪರಿವರ್ತಕಗಳಿಗೆ ಮಾಪಕ ಅಳವಡಿಸಲಾಗಿದ್ದು, ಇದರಿಂದಾಗಿ ಪರಿವರ್ತಕಗಳ ಮಟ್ಟಗಳಲ್ಲಿ ಎನರ್ಜಿ ಆಡಿಟನ್ನು ಪರಿಣಾಮಕಾರಿಯಾಗಿ ಮಾಡಬಹುದಾಗಿದೆ.

(ಈ) **2018-19ರಲ್ಲಿ ಪೂರ್ಣಗೊಂಡ 33/11ಕೆ.ವಿ. ಸ್ಟೇಷನ್ ಕಾಮಗಾರಿಗಳು :**

- ಬಂಟ್ವಾಳ ವಿಭಾಗದ ಕಲ್ಲಡ್ಕ ಎಂಬಲ್ಲಿ 2*5 ಎಂವಿ,ಎ 33/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು 0.25 ಕಿ.ಮೀ ಉದ್ದದ 33ಕೆ.ವಿ ಡಬ್ಬಲ್ ಸರ್ಕ್ಯೂಟ್ ಲೈನ್‌ಅನ್ನು ನಿರ್ಮಾಣ ಮಾಡುವುದು.
- ಪುತ್ತೂರು ವಿಭಾಗದ ಹಾಲಿ ಇರುವ 1*5ಎಂವಿ.ಎ 33/11ಕೆ.ವಿ ಸವಣೂರು ಉಪಕೇಂದ್ರದಲ್ಲಿ ಹೆಚ್ಚುವರಿ 1*5ಎಂವಿ.ಎ ಶಕ್ತಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.
- ಪುತ್ತೂರು ವಿಭಾಗದ ಹಾಲಿ ಇರುವ ಸುಳ್ಯ ವಿದ್ಯುತ್ ಉಪಕೇಂದ್ರದ 1x5 ಎಮ್‌ವಿಎ, 33/11 ಕೆವಿ ವಿದ್ಯುತ್ ಪರಿವರ್ತಕವನ್ನು 1x12.5 ಎಮ್‌ವಿಎ, 33/11 ಕೆವಿ ಪರಿವರ್ತಕದಿಂದ ಉನ್ನತೀಕರಿಸುವ ಕಾಮಗಾರಿ.
- ಸಾಗರ ವಿಭಾಗದ ಬ್ಯಾಕೋಡು ಎಂಬಲ್ಲಿ 1*5 ಎಂವಿಎ 33/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು 65 ಕಿ.ಮೀ ಉದ್ದದ 33 ಕೆ.ವಿ ಸಿಂಗಲ್ ಸರ್ಕ್ಯೂಟ್ ಲೈನ್‌ಅನ್ನು ನಿರ್ಮಾಣ ಮಾಡುವುದು.

ಹಾಲಿ ಪ್ರಗತಿಯಲ್ಲಿರುವ 33/11ಕೆ.ವಿ. ಸ್ಟೇಷನ್ ಕಾಮಗಾರಿಗಳು :

- ಪುತ್ತೂರು ವಿಭಾಗದ ಕಾವು ಎಂಬಲ್ಲಿ 1*5 ಎಮ್‌ವಿಎ, 33/11 ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಹಾಗೂ 3 ಕಿಮೀ ಉದ್ದದ 33 ಕೆವಿ ಸಿಂಗಲ್ ಸರ್ಕ್ಯೂಟ್ ಮಾರ್ಗದ ರಚನೆ.
- ಪುತ್ತೂರು ವಿಭಾಗದ ಸುಳ್ಯ ತಾಲ್ಲೂಕಿನ ಗುತ್ತಿಗಾರು ಎಂಬಲ್ಲಿ 2*5 ಎಂ.ವಿ.ಎ, 33/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 24 ಕಿಮೀ ಉದ್ದದ ಕೊಯೋಟ್ ವಾಹಕ ಹಾಗೂ 2.5 ಕಿಮೀ ಉದ್ದದ ಯುಜಿ ಕೇಬಲ್ ಬಳಸಿಕೊಂಡು 33 ಕೆವಿ ಸಿಂಗಲ್ ಸರ್ಕ್ಯೂಟ್ ಮಾರ್ಗದ ರಚನೆ.
- ಬಂಟ್ವಾಳ ವಿಭಾಗದ 1*5 ಎಂ.ವಿ.ಎ, 33/11 ಕೆವಿ ಧರ್ಮಸ್ಥಳ ಉಪಕೇಂದ್ರದಲ್ಲಿ ಹೆಚ್ಚುವರಿ 1*5 ಎಂ.ವಿ.ಎ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.
- ಕಾವೂರು ವಿಭಾಗದ ಹಾಲಿ ಇರುವ ಕಾಟಿಪಳ್ಳ ವಿದ್ಯುತ್ ಉಪಕೇಂದ್ರದ 1*5 ಎಮ್‌ವಿಎ, 33/11 ಕೆವಿ ವಿದ್ಯುತ್ ಪರಿವರ್ತಕವನ್ನು 1*12.5 ಎಮ್‌ವಿಎ, 33/11 ಕೆವಿ ಪರಿವರ್ತಕದಿಂದ ಉನ್ನತೀಕರಿಸುವ ಕಾಮಗಾರಿ.
- ಉಡುಪಿ ವಿಭಾಗದ ಪರ್ಕಳ ಎಂಬಲ್ಲಿ 2*5ಎಂವಿಎ, 33/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು ಹಾಲಿ ಇರುವ 33 ಕೆ.ವಿ ಸಿಂಗಲ್ ಸರ್ಕ್ಯೂಟ್ ಮಾಹೆ ಲೈನ್‌ಅನ್ನು 110/33/11ಕೆ.ವಿ ಹಿರಿಯಡ್ಕ ಉಪಕೇಂದ್ರದಿಂದ 7.17ಕಿ.ಮೀ ದೂರದ ವರೆಗೆ ಡಬ್ಬಲ್ ಸರ್ಕ್ಯೂಟ್ ಮಾರ್ಗವನ್ನಾಗಿ ಪರಿವರ್ತಿಸುವುದು.
- ಉಡುಪಿ ವಿಭಾಗದ ಮಲ್ಪೆ ಎಂಬಲ್ಲಿ 2*5 ಎಮ್‌ವಿಎ, 33/11 ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಹಾಗೂ 7 ಕಿಮೀ ಉದ್ದದ 33 ಕೆವಿ ಸಿಂಗಲ್ ಸರ್ಕ್ಯೂಟ್ ಮಾರ್ಗದ ರಚನೆ.
- ಕುಂದಾಪುರ ವಿಭಾಗದ ಕೊಲ್ಲೂರು ಎಂಬಲ್ಲಿ 1*5 ಎಂ.ವಿ.ಎ, 33/11 ಕೆವಿ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು ಹಾಲಿ ಇರುವ 33 ಕೆವಿ ಕುಂದಾಪುರ ಬೈಂದೂರು ಲೈನಿನಿಂದ 33 ಕೆ.ವಿ ಸಿಂಗಲ್ ಸರ್ಕ್ಯೂಟ್ ಲೈನನ್ನು ಕೊಯೋಟ್ ವಾಹಕ ಬಳಸಿ 20.848 ಕಿ.ಮೀ ದೂರದವರೆಗೆ ನಿರ್ಮಿಸುವ ಕಾಮಗಾರಿ.
- ಕುಂದಾಪುರ ವಿಭಾಗದ ಹಾಲಿ ಇರುವ 1*5ಎಂವಿ.ಎ 33/11ಕೆ.ವಿ ಬೈಂದೂರು ಉಪಕೇಂದ್ರದಲ್ಲಿ ಹೆಚ್ಚುವರಿ 1*5ಎಂವಿ.ಎ ಶಕ್ತಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

- ಸಾಗರ ವಿಭಾಗದ ಹಾಲಿ ಇರುವ 2*5ಎಂವಿ.ಎ 33/11ಕೆ.ವಿ ಹೊಸನಗರ ಉಪಕೇಂದ್ರದಲ್ಲಿ ಹೆಚ್ಚುವರಿ 1*5ಎಂವಿ.ಎ, 33/11ಕೆ.ವಿ ಶಕ್ತಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.
- ಕೊಪ್ಪ ವಿಭಾಗದ 33/11ಕೆ.ವಿ ಕೊರಡಿಹಿತ್ಲು ಉಪಕೇಂದ್ರದಲ್ಲಿ ಇರುವ ಹಳೆಯ ಶಿಥಿಲಗೊಂಡಿರುವ 33ಕೆ.ವಿ ಮತ್ತು 11ಕೆ.ವಿ ಸ್ವಿಚ್‌ಗೇರ್ ಉಪಕರಣಗಳನ್ನು ಬದಲಾಯಿಸಿ ಆಧುನೀಕರಣಗೊಳಿಸುವ ಕಾಮಗಾರಿ ಮತ್ತು 33/11ಕೆ.ವಿ ಉಪಕೇಂದ್ರದಲ್ಲಿ LILO ವ್ಯವಸ್ಥೆಯನ್ನು ಮಾಡುವುದು.
- ಚಿಕ್ಕಮಗಳೂರು ವಿಭಾಗದ ಮೂಡಿಗೆರೆ ಉಪವಿಭಾಗದ ಬಣಕಲ್ ಎಂಬಲ್ಲಿ 1*5ಎಂವಿಎ, 33/11ಕೆ.ವಿ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು 14.62 ಆರ್.ಕಿ.ಮೀ ಉದ್ದ 33ಕೆ.ವಿ ಸಿಂಗಲ್ ಸರ್ಕ್ಯೂಟ್ ಲೈನ್ ಅನ್ನು ಡಿ.ಸಿ. ಟವರ್‌ಗಳ ಮೇಲೆ ಕೋಯೋಟ್ ವಾಹಕ ಬಳಸಿ ನಿರ್ಮಾಣ ಮಾಡುವುದು.

12. **ಹೊಸ ಯೋಜನೆಗಳು :**

- **ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿ.ಡಿ.ಯು.ಜಿ.ಜೆ.ವೈ):**

  ಕೇಂದ್ರ ಸರಕಾರವು ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ "ಡಿ.ಡಿ.ಯು.ಜಿ.ಜೆ.ವೈ" ಎಂಬ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮ (ಮೆ॥ಆರ್.ಇ.ಸಿ) ನವದೆಹಲಿಯು ನೋಡಲ್ ಏಜನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

  ಈ ಯೋಜನೆಯಲ್ಲಿ ಉಪಪ್ರಸರಣ ಹಾಗೂ ವಿತರಣಾ ಮಾರ್ಗಗಳ ಬಲಪಡಿಸುವಿಕೆ, ಫೀಡರ್ ಸೆಗ್ರಿಗೇಷನ್, ಮೀಟರಿಂಗ್, ಗ್ರಾಮೀಣ ವಿದ್ಯುದ್ದೀಕರಣ, ಸಂಸದ್ ಆದರ್ಶ ಗ್ರಾಮ ಯೋಜನೆ (ಸ್ಯಾಗಿ) ಮುಂತಾದ ಕಾರ್ಯಕ್ರಮಗಳು ಒಳಗೊಂಡಿರುತ್ತವೆ. ಪ್ರಸ್ತುತ, ಮ.ವಿ.ಸ.ಕಂ.ನ 4 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮೆ॥ ಆರ್.ಇ.ಸಿ/ಕರ್ನಾಟಕ ಸರಕಾರದಿಂದ ₹ 395.67 ಕೋಟಿ ಮೊತ್ತಕ್ಕೆ ಜುಲೈ-2017ರಲ್ಲಿ ಮಂಜೂರಾತಿ ದೊರೆತಿರುತ್ತದೆ.

  ಪ್ರಸ್ತುತ, ಫೀಡರ್ ಸೆಗ್ರಿಗೇಷನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

- **ಪ್ರಧಾನ ಮಂತ್ರಿ ಸಹಜ್ ಬಿಜ್‌ಲಿ ಹರ್ ಘರ್ ಯೋಜನಾ (ಸೌಭಾಗ್ಯ ಯೋಜನೆ):**

  ಕೇಂದ್ರ ಸರಕಾರವು "ಸೌಭಾಗ್ಯ"- ಪ್ರಧಾನ ಮಂತ್ರಿ ಸಹಜ್ ಬಿಜ್‌ಲಿ ಹರ್ ಘರ್ ಯೋಜನೆಯನ್ನು ಮನೆಗಳ ಸಾರ್ವತ್ರಿಕ ವಿದ್ಯುದೀಕರಣಕ್ಕಾಗಿ ಜಾರಿಗೆ ತಂದಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮ (ಮೆ॥ಆರ್.ಇ.ಸಿ) ನವದೆಹಲಿಯು ನೋಡಲ್ ಏಜನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

  ಮ.ವಿ.ಸ.ಕಂ.ನಲ್ಲಿ 5716 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮೆ॥ ಆರ್.ಇ.ಸಿ ಯಿಂದ ಜನವರಿ-2019 ರಲ್ಲಿ ಮಂಜೂರಾತಿ ದೊರೆತಿರುತ್ತದೆ. ಸದರಿ ಕಾಮಗಾರಿಯನ್ನು ₹ 20.53 ಕೋಟಿಗಳಿಗೆ ಅವಾರ್ಡ್ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

- **ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (ಐ.ಪಿ.ಡಿ.ಎಸ್):**

  ಕೇಂದ್ರ ಸರಕಾರವು ನಗರ/ಉಪ-ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ "ಐ.ಪಿ.ಡಿ.ಎಸ್" ಎಂಬ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಮೆ॥ ಪಿ.ಎಫ್.ಸಿ, ನವದೆಹಲಿಯು ನೋಡಲ್ ಏಜನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

  ಈ ಯೋಜನೆಯಲ್ಲಿ ಉಪಪ್ರಸರಣ ಹಾಗೂ ವಿತರಣಾ ಮಾರ್ಗಗಳ ಬಲಪಡಿಸುವಿಕೆ, ಮೀಟರಿಂಗ್, ಮೇಲ್ಛಾವಣಿಗಳಲ್ಲಿ ಸೌರಫಲಕಗಳ ಅಳವಡಿಕೆ, ಮಾಹಿತಿ ತಂತ್ರಜ್ಞಾನದ ಅಳವಡಿಕೆ ಮುಂತಾದ ಕಾರ್ಯಕ್ರಮಗಳು ಒಳಗೊಂಡಿರುತ್ತವೆ. ಪ್ರಸ್ತುತ, ಮೇಲೆ ತಿಳಿಸಿರುವ ಮಾಹಿತಿ ತಂತ್ರಜ್ಞಾನದ ಅಳವಡಿಕೆ ಕಾರ್ಯವನ್ನು ಬಿಟ್ಟು ಉಳಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೆ॥ ಪಿ.ಎಫ್.ಸಿಯಿಂದ ₹ 157.80 ಕೋಟಿ ಮೊತ್ತಕ್ಕೆ ಮ.ವಿ.ಸ.ಕಂ.ನ 4 ವೃತ್ತಗಳಾದ ಮಂಗಳೂರು, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರುಗಳ 29 ಶಾಸನಬದ್ಧ ಪಟ್ಟಣಗಳನ್ನು (statutory towns) ಒಳಗೊಂಡಂತೆ ಕಾಮಗಾರಿ ನಿರ್ವಹಿಸಲು ಮಾರ್ಚ್-2016ರಲ್ಲಿ ಮಂಜೂರಾತಿ ದೊರೆತಿರುತ್ತದೆ. ಅದರಂತೆ ಎಲ್ಲಾ ಕಾಮಗಾರಿಗಳನ್ನು ವಹಿಸಿಕೊಡಲಾಗಿದ್ದು, ಪ್ರಸ್ತುತ ಸದರಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

  ಮುಂದುವರೆದು, ಐ.ಪಿ.ಡಿ.ಎಸ್ ಅನುಷ್ಠಾನಕ್ಕೆ ಹೆಚ್ಚುವರಿ ₹ 9.80 ಕೋಟಿ ಹಣಕಾಸಿನ ನೆರವನ್ನು ಫೆಬ್ರವರಿ-2018ರಲ್ಲಿ ನೀಡಲಾಗಿದೆ. ಅಂತೆಯೇ ಮಂಗಳೂರು, ಉಡುಪಿ ಮತ್ತು ಶಿವಮೊಗ್ಗ ವೃತ್ತಗಳಲ್ಲಿ ಈ ಕಾಮಗಾರಿಗಳಿಗೆ ಅವಾರ್ಡ್ ನೀಡಲಾಗಿದ್ದು ಪ್ರಸ್ತುತ ಉಡುಪಿ ವೃತ್ತದಲ್ಲಿ ಈ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಮಂಗಳೂರು ಹಾಗೂ ಶಿವಮೊಗ್ಗ ವೃತ್ತಗಳಲ್ಲಿ ಈ ಕಾಮಗಾರಿಯು ಪ್ರಗತಿಯಲ್ಲಿದೆ.

  ಮೆ॥ಪಿ.ಎಫ್.ಸಿ ಯು ಐ.ಪಿ.ಡಿ.ಎಸ್ ಯೋಜನೆಯಡಿಯಲ್ಲಿ 6 ಸಂಖ್ಯೆಯ ಗ್ಯಾಸ್ ಇನ್ಸುಲೇಟೆಡ್ ಸಬ್‌ಸ್ಟೇಷನ್ಸ್‌ಗಳನ್ನು ಅನುಷ್ಠಾನಗೊಳಿಸಲು ಮಂಗಳೂರು, ಉಡುಪಿ ಮತ್ತು ಚಿಕ್ಕಮಗಳೂರು ವೃತ್ತಗಳನ್ನು ಒಳಗೊಂಡಂತೆ ₹ 39.48 ಕೋಟಿ ಮೊತ್ತಕ್ಕೆ ಡಿಸೆಂಬರ್-2018ರಲ್ಲಿ ಮಂಜೂರಾತಿ ನೀಡಿರುತ್ತದೆ. ಪ್ರಸ್ತುತ ಈ ಬಗ್ಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಮಾಹಿತಿ ತಂತ್ರಜ್ಞಾನ ವಿಭಾಗ, ಮೆಸ್ಕಾಂ:

ಮಾಹಿತಿ ತಂತ್ರಜ್ಞಾನವನ್ನು ಮೆಸ್ಕಾಂನ ವ್ಯವಹಾರದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಪ್ರಾರಂಭಿಕ ಹೆಜ್ಜೆಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

❖ **ಆರ್.ಎ.ಪಿ.ಡಿ.ಆರ್.ಪಿ. ಭಾಗ–ಎ ಯೋಜನೆಯ ಅಂತಿಮಗೊಳಿಸುವಿಕೆ :**

ಮೆಸ್ಕಾಂನ 11 ಪಟ್ಟಣಗಳಾದ ಮಂಗಳೂರು, ಉಡುಪಿ, ಬಂಟ್ವಾಳ, ಪುತ್ತೂರು, ಶಿವಮೊಗ್ಗ, ಶಿಕಾರಿಪುರ, ಸಾಗರ, ಭದ್ರಾವತಿ, ಚಿಕ್ಕಮಗಳೂರು, ಕಡೂರು ಮತ್ತು ತರೀಕೆರೆ ಇಲ್ಲಿ ಆರ್.ಎ.ಪಿ.ಡಿ.ಆರ್.ಪಿ. ಭಾಗ–ಎ ಯೋಜನೆಯನ್ನು ಜಾರಿಗೊಳಿಸಲಾಗಿತ್ತು ಮತ್ತು ಆ ಯೋಜನೆಯನ್ನು ಪೂರ್ಣಗೊಳಿಸಲಾಯಿತು. ಮೆಸ್ಕಾಂನಲ್ಲಿ ಆರ್.ಎ.ಪಿ.ಡಿ.ಆರ್.ಪಿ. ಭಾಗ–ಎ ಯೋಜನೆಯ ಅನುಷ್ಠಾನದ ಪರಿಶೀಲನೆ ಪೂರ್ಣಗೊಂಡ ನಂತರ ಪವರ್ ಫೈನಾನ್ಸ್ ಕಾರ್ಪೊರೇಶನ್ (ಪಿ.ಎಫ್.ಸಿ.) ನಿಂದ ₹ 30.62 ಕೋಟಿ ಸಾಲದ ಮೊತ್ತವನ್ನು ಮಂಜೂರು ಪಡೆದು ಅಂತಿಮಗೊಳಿಸಲಾಯಿತು.

❖ **ಐ.ಪಿ.ಡಿ.ಎಸ್. – 2ನೇ ಹಂತದ ಮಾಹಿತಿ ತಂತ್ರಜ್ಞಾನದ ಅನುಷ್ಠಾನ:**

2ನೇ ಹಂತದ ಐ.ಪಿ.ಡಿ.ಎಸ್. ಯೋಜನೆಯು ಐ.ಪಿ.ಡಿ.ಎಸ್. ಪಟ್ಟಣಗಳಲ್ಲಿ ಮಾಹಿತಿ ತಂತ್ರಜ್ಞಾನದ ಅನುಷ್ಠಾನವನ್ನು ಸಕ್ರಿಯಗೊಳಿಸುವ ಕಾರ್ಯ ವ್ಯಾಪ್ತಿಯನ್ನು ಒಳಗೊಂಡಿದೆ. ₹ 6.00 ಕೋಟಿ ಮೊತ್ತದ ವಿವರವಾದ ಯೋಜನೆಯ ವರದಿಯನ್ನು ಇಂಧನ ಸಚಿವಾಲಯಕ್ಕೆ ಸಲ್ಲಿಸಲಾಗಿದೆ ಮತ್ತು ಮೆಸ್ಕಾಂನ 18 ಶಾಸನಬದ್ಧ ಪಟ್ಟಣಗಳಿಗೆ ಮಾಹಿತಿ ತಂತ್ರಜ್ಞಾನದ ಅನುಷ್ಠಾನಕ್ಕಾಗಿ ಪವರ್ ಫೈನಾನ್ಸ್ ಕಾರ್ಪೊರೇಶನ್ (ಪಿ.ಎಫ್.ಸಿ.) ನಿಂದ ವಿವರವಾದ ಯೋಜನೆಯ ವರದಿ ₹ 4.76 ಕೋಟಿ ಮೊತ್ತವನ್ನು ಮಂಜೂರು ಮಾಡಿದೆ. ಹೊಸ ಟೆಂಡರ್‌ಗಳನ್ನು ಆಹ್ವಾನಿಸಲು ಮತ್ತು ಅನುಷ್ಠಾನಗೊಳಿಸಲು ಎಲ್ಲಾ ಎಸ್ಕಾಂಗಳ ಪರವಾಗಿ ನೋಡಲ್ ಏಜೆನ್ಸಿಯಾಗಿ ಬೆಸ್ಕಾಂನ್ನು ನೇಮಿಸಿದ್ದು, ಕರ್ನಾಟಕದ ಎಲ್ಲಾ ಎಸ್ಕಾಂಗಳ 2ನೇ ಹಂತದ ಐ.ಪಿ.ಡಿ.ಎಸ್. ಮಾಹಿತಿ ತಂತ್ರಜ್ಞಾನದ ಅನುಷ್ಠಾನಗೊಳಿಸಲು ಪರಿಷ್ಕೃತ ವಿವರವಾದ ಯೋಜನೆಯ ವರದಿ ₹ 188.58 ಕೋಟಿ ವೆಚ್ಚದಲ್ಲಿ ಈ ಕೆಳಕಂಡ ಕಾರ್ಯ ವ್ಯಾಪ್ತಿಯಲ್ಲಿ ವಿವಿಧ ರೀತಿಯ ಪ್ಯಾಕೇಜ್‌ಗಳು 24.11.2018 ರಂದು ನಡೆದ ಎಸ್.ಎಲ್.ಡಿ.ಆರ್.ಸಿ. ಸಭೆಯಲ್ಲಿ ಅಂಗೀಕರಿಸಲ್ಪಟ್ಟಿದೆ.

ಪ್ಯಾಕೇಜ್	ಕಾಮಗಾರಿಯ ವ್ಯಾಪ್ತಿ
1	ಡಿ.ಸಿ. ಹಾರ್ಡ್‌ವೇರ್ ಮತ್ತು ಸಾಫ್ಟವೇರ್ ರಿಫ್ರೆಶ್ ಮತ್ತು ಆರ್‌ಎಪಿಡಿಆರ್‌ಪಿ ಭಾಗ–ಎ ಮತ್ತು ಐಪಿಡಿಎಸ್ ಫೇಸ್ 2 ಪಟ್ಟಣ ದತ್ತಾಂಶಗಳ ಮೈಗ್ರೇಷನ್
2	ಹೋಸ್ಟಿಂಗ್ ಡಿ ಆರ್ ಸಿ ಕ್ಲೌಡ್
3	ಐಪಿಡಿಎಸ್ ಪಟ್ಟಣಗಳ ಎಫ್‌ಎಂಎಸ್ ಜೊತೆಗೆ ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯ (switches, router, SBMs, workstations PCs, printers etc.,)
4	ಐಪಿಡಿಎಸ್ ಪಟ್ಟಣಗಳ ಜಿಐಎಸ್ ಸರ್ವೆ
5	ಐಪಿಡಿಎಸ್ ಭಾಗ–ಎ ಪಟ್ಟಣಗಳಿಗೆ ಎಫ್‌ಎಂಎಸ್
6	ಎಸ್ಕಾಂಗಳಿಗೆ (ಬೆಸ್ಕಾಂ ಹೊರತುಪಡಿಸಿ) ಐಪಿಡಿಎಸ್ ಪಟ್ಟಣಗಳಲ್ಲಿ ಮಾಡೆಂ ಗಳ ಅಳವಡಿಕೆ

ಕರ್ನಾಟಕದ ಎಲ್ಲಾ ಎಸ್ಕಾಂಗಳಲ್ಲಿ ಮಾಹಿತಿ ತಂತ್ರಜ್ಞಾನದ ಅನುಷ್ಠಾನವನ್ನು ಸಕ್ರಿಯಗೊಳಿಸಲು ಐ.ಪಿ.ಡಿ.ಎಸ್. 2ನೇ ಹಂತದಡಿಯಲ್ಲಿ ಹೊಸ ಟೆಂಡರ್‌ಗಳನ್ನು ಎಲ್ಲಾ ಎಸ್ಕಾಂಗಳ ಪರವಾಗಿ ಬೆಸ್ಕಾಂ ಆಹ್ವಾನಿಸಿದೆ.

❖ **ಬಿಬಿಪಿಎಸ್ ಅಡಿಯಲ್ಲಿ ಆನ್ಲೈನ್ ಪಾವತಿ ವ್ಯವಸ್ಥೆ (Bharat Bill payment System):**

ಅಗತ್ಯ ಮೂಲಭೂತ ಸೌಕರ್ಯವನ್ನು ಸಕ್ರಿಯಗೊಳಿಸುವ ಮೂಲಕ ಡಿಜಿಟಲ್ ಪಾವತಿಯ ಅಳವಡಿಕೆಗೆ ಮೆಸ್ಕಾಂ ಉತ್ತೇಜನ ನೀಡುತ್ತಿದೆ. ಈ ನಿಟ್ಟಿನಲ್ಲಿ, 31.01.2019ರಂದು ಮೆಸ್ಕಾಂನ ಆರ್.ಎ.ಪಿ.ಡಿ.ಆರ್.ಪಿ. ಗ್ರಾಹಕರಿಗೆ ಬಿಬಿಪಿಎಸ್ ವೇದಿಕೆಯನ್ನು ಪ್ರಾರಂಭಿಸಲಾಯಿತು.

ಬಿಬಿಪಿಎಸ್ ಒಂದು ನ್ಯಾಷನಲ್ ಪೆಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್.ಪಿ.ಸಿ.ಐ) ನಡೆಸುವ ರಾಷ್ಟ್ರೀಯ ಸಂಯೋಜಿತ ಬಿಲ್ ಪಾವತಿ ವ್ಯವಸ್ಥೆಯಾಗಿದ್ದು, ದೇಶಾದ್ಯಂತ ಎಲ್ಲಾ ಗ್ರಾಹಕರಿಗೆ ಏಕ–ನಿಗದಿತ ಪರಸ್ಪರ ಕಾರ್ಯ ನಿರ್ವಹಿಸುವ ವೇದಿಕೆಯನ್ನು ಯಾವುದೇ ಸಮಯದಲ್ಲಿ, ಎಲ್ಲಿಯಾದರೂ ನೊಂದಾಯಿತ ಏಜೆಂಟ್‌ಗಳ ನೆಟ್‌ವರ್ಕ್‌ಗಳ ಮೂಲಕ ಅನೇಕ ಪಾವತಿ ವಿಧಾನಗಳನ್ನು ಕಲ್ಪಿಸಿಕೊಟ್ಟಿದೆ. ಈ ವೇದಿಕೆಯು ವಿದ್ಯುತ್ ಮತ್ತು ಇತರ ಸಂಬಂಧಿಸಿದ ಎಲ್ಲಾ ಬಿಲ್ಲುಗಳನ್ನು ಪಾವತಿಸುವ ಸೌಲಭ್ಯವನ್ನು ಒಳಗೊಂಡಿದೆ.

❖ **ಇನ್–ಹೌಸ್ ಅಪ್ಲಿಕೇಶನ್:**

ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ ಐಟಿ ಇಂಜಿನಿಯರ್ಸ್ ತಂಡವು ಮಾಹಿತಿ ತಂತ್ರಜ್ಞಾನ ಅನುಷ್ಠಾನವನ್ನು ಸಕ್ರಿಯಗೊಳಿಸಲು ಪ್ರಮುಖ ಅವಶ್ಯಕತೆಗಳನ್ನು ಕೈಗೆತ್ತಿಕೊಂಡಿದೆ. ಈ ಕೆಳಗಿನ ಇನ್–ಹೌಸ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಇದರ ನಿರ್ವಹಣೆಯನ್ನು ಡಾಟಾ ಸೆಂಟರ್, ಕಾರ್ಪೊರೇಟ್ ಕಛೇರಿ, ಮೆಸ್ಕಾಂ, ಮಂಗಳೂರು ಇಲ್ಲಿ ನಿರ್ವಹಿಸಲಾಗುತ್ತದೆ.

1. ಆನ್ಲೈನ್ ಎಲ್.ಟಿ. ಅಪ್ಲಿಕೇಶನ್
2. ಆನ್ಲೈನ್ ಎಚ್.ಟಿ. ಅಪ್ಲಿಕೇಶನ್
3. ಆನ್ಲೈನ್ ಎಸ್.ಆರ್.ಪಿ.ಟಿ.ವಿ. ಅಪ್ಲಿಕೇಶನ್
4. ಆನ್ಲೈನ್ ಸಿ.ಸಿ.ಸಿ. ಅಪ್ಲಿಕೇಶನ್
5. ವೆಬ್ ಬೇಸ್ಡ್ ಡಾಕ್ಯುಮೆಂಟ್ ಮ್ಯಾನೇಜ್ಮೆಂಟ್ ಸಿಸ್ಟಂ.

❖ **ಉರ್ಜಾಮಿತ್ರ ಅಪ್ಲಿಕೇಶನ್:**

ಇಂಧನ ಸಚಿವಾಲಯದ ಮಾರ್ಗದರ್ಶನದ ಮೂಲಕ ಗ್ರಾಮೀಣ ಮತ್ತು ನಗರಾಭಿವೃದ್ಧಿ ಗ್ರಾಹಕರುಗಳಿಗೆ RECTPCL (REC Transmission Projects Company Limited) ರವರು ಅಭಿವೃದ್ಧಿ ಪಡಿಸಿದ ವಿದ್ಯುತ್ ನಿಲುಗಡೆಯ ನಿರ್ವಹಣೆ ಮತ್ತು ನಿಗದಿತ/ನಿಗದಿಪಡಿಸದ ವಿದ್ಯುತ್ ನಿಲುಗಡೆಯ ಸೂಚನೆಯನ್ನು ನೀಡಲು ಉರ್ಜಾಮಿತ್ರ ಅಪ್ಲಿಕೇಶನ್‌ನನ್ನು ಮೆಸ್ಕಾಂ ತನ್ನಲ್ಲಿಯೇ ಕಾರ್ಯಗತಗೊಳಿಸಿದೆ.

ಗ್ರಾಹಕರು ಗೂಗಲ್ ಪ್ಲೇ ಸ್ಟೋರ್ ನಲ್ಲಿ ಲಭ್ಯ ಇರುವ ಉರ್ಜಾಮಿತ್ರ ಅಪ್ಲಿಕೇಶನ್‌ನಲ್ಲಿ ವಿನಂತಿಯನ್ನು ನೊಂದಾಯಿಸಿ ವಿದ್ಯುತ್ ನಿಲುಗಡೆಯ ಮಾಹಿತಿಯನ್ನು ತಿಳಿಯಬಹುದಾಗಿದೆ.

13. ಇತರ ಕಾರ್ಯ ಯೋಜನೆಗಳು :

❖ **ಎಲೆಕ್ಟ್ರೋ ಮೆಕ್ಯಾನಿಕಲ್ ಮಾಪಕಗಳನ್ನು ಸ್ಟ್ಯಾಟಿಕ್ ಮಾಪಕಗಳಿಂದ ಬದಲಾಯಿಸುವುದು:**

ಸಿ.ಇ.ಎ ಮಾರ್ಗ ಸೂಚಿಯಂತೆ, ಇಂಟರ್ ಫೇಸ್ ಮೀಟರ್, ಗ್ರಾಹಕರ ಮೀಟರ್ ಹಾಗೂ ಎನರ್ಜಿ ಆಡಿಟ್/ಅಕೌಂಟಿಂಗ್ ಮಾಡುವ ಎಲ್ಲಾ ಮಾಪಕಗಳು ಸ್ಟ್ಯಾಟಿಕ್ ಮಾಪಕಗಳಾಗಿರಬೇಕು. ಪ್ರಮುಖವಾಗಿ ಎಲ್.ಟಿ-2, ಎಲ್.ಟಿ-3 ಹಾಗೂ ಎಲ್.ಟಿ.-5 ಸ್ಥಾವರಗಳ ಬಳಕೆಯನ್ನು ನಿಖರವಾಗಿ ಪಡೆದು ವಾಣಿಜ್ಯ ನಷ್ಟವನ್ನು ಮಿತಗೊಳಿಸುವುದು ಇದರ ಉದ್ದೇಶವಾಗಿದೆ.

2018-19ನೇ ಸಾಲಿನಲ್ಲಿ ಐ.ಪಿ.ಡಿ.ಎಸ್, ಡಿ.ಡಿ.ಯು.ಜಿ.ಜೆ.ವೈ ಮೊದಲಾದ ಯೋಜನೆಗಳಡಿ ಒಟ್ಟು 342519 ಸಂಖ್ಯೆಯ ಎಲೆಕ್ಟ್ರೋ ಮೆಕ್ಯಾನಿಕಲ್ ಮಾಪಕಗಳನ್ನು ಸ್ಟ್ಯಾಟಿಕ್ ಮಾಪಕಗಳಿಂದ ಬದಲಾಯಿಸಲಾಗಿದೆ. ಇದಲ್ಲದೇ, ಮ.ವಿ.ಸ.ಕಂ.ನಲ್ಲಿ ಎಲ್ಲಾ ಹೊಸ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ಹಾಗೂ ಕೆಟ್ಟು ಹೋದ ಮಾಪಕಗಳನ್ನು ಬದಲಾಯಿಸುವಾಗ ಸ್ಟ್ಯಾಟಿಕ್ ಮಾಪಕಗಳನ್ನೇ ಅಳವಡಿಸಲಾಗುತ್ತಿದೆ.

❖ **ಉದ್ದೇಶಿತ 2019-20ನೇ ಸಾಲಿನ ಬಂಡವಾಳ ವಿನಿಯೋಗ ಯೋಜನೆಗಳು :**

ಕ್ರ.ಸಂ	ಯೋಜನೆಗಳು	ಗುರಿ
1.	ಹ್ಯಾಮ್ಲೆಟ್ ವಿದ್ಯುದ್ಧೀಕರಣ	6 ಸಂಖ್ಯೆ
2.	ಹರಿಜನ ಬಸ್ತೀ/ ಜನತಾ ಕಾಲೋನಿ/ತಾಂಡಾಗಳ ವಿದ್ಯುದ್ಧೀಕರಣ	1 ಸಂಖ್ಯೆ.
3.	ಬುಡಕಟ್ಟು ಕಾಲೋನಿ ವಿದ್ಯುದ್ದೀಕರಣ	8 ಸಂಖ್ಯೆ.
4.	ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ಧೀಕರಣ	14000 ಸಂಖ್ಯೆ.
5.	ಸೇವಾ ಸಂಪರ್ಕಗಳು	50,000 ಸಂಖ್ಯೆ.
6.	ಹೊಸ 33 ಕೆ.ವಿ ಉಪಕೇಂದ್ರ ಹಾಗೂ ಪ್ರಸರಣಾ ಮಾರ್ಗಗಳ ಸ್ಥಾಪನೆ	2 ಸಂಖ್ಯೆ
7.	33 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದ ಉನ್ನತೀಕರಣ	2 ಸಂಖ್ಯೆ.
8.	ಹೊಸ ಹೆಚ್.ಟಿ. ಮಾರ್ಗಗಳು	1200 ಕಿ.ಮೀ.
9.	ಹೊಸ ಎಲ್.ಟಿ ಮಾರ್ಗಗಳು	1200 ಕಿ.ಮೀ.
10.	ವಿತರಣಾ ಪರಿವರ್ತಕಗಳು	3000 ಸಂಖ್ಯೆ.

14. ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಗಳು:

2018-19 ರಲ್ಲಿ ಈ ಕೆಳಕಂಡ ಕಛೇರಿ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

[₹ ಲಕ್ಷಗಳಲ್ಲಿ]

ಕ್ರ. ಸಂ.	ವಿವರಗಳು	ಪೂರ್ಣಗೊಂಡ ಕಾಮಗಾರಿಗಳು		2019-20 ರಲ್ಲಿ ಮುಂದುವರೆಯುವ ಕಾಮಗಾರಿಗಳಿಗೆ ಬೇಕಾಗಿರುವ ವೆಚ್ಚಗಳು
		2018-19 ರಲ್ಲಿ ವೆಚ್ಚಗಳು ₹ ಲಕ್ಷಗಳಲ್ಲಿ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	
1	ಕಛೇರಿ ಕಟ್ಟಡಗಳು, ಉಗ್ರಾಣ, ಅಥಿತಿಗೃಹ ಮತ್ತು ಇತರೆ ಕಟ್ಟಡಗಳು ಮತ್ತು ವಿಸ್ತರಣಾ ಕಾಮಗಾರಿಗಳು.	724.79	23	5000.00
2	ಕಾಂಪೌಂಡ್, ರಸ್ತೆ, ನೀರು ಸರಬರಾಜು, ಬೇಲಿ, ಒಳಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳ ನಿರ್ಮಾಣ.	1628.89	48	1000.00
	ಜುಮ್ಲಾ	**2353.68**	**71**	**6000.00**

ಆರ್ಥಿಕ ವರ್ಷ 2019-20 ಕ್ಕೆ ಪ್ರಗತಿಯಲ್ಲಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಹಾಗೂ ಹೊಸ ಸಿವಿಲ್ ಕಾಮಗಾರಿಗಳಿಗೆ ಒಟ್ಟು 6000.00 ಲಕ್ಷ ರೂಪಾಯಿಗಳನ್ನು ಅಯವ್ಯಯದಲ್ಲಿ ಮೀಸಲಿಡಲಾಗಿದೆ.

15. ಸಾಮಾಗ್ರಿ ಖರೀದಿಯಲ್ಲಿ ಹೊಸಹೆಜ್ಜೆ :

ಇಂಧನ ಕಾರ್ಯಕ್ಷಮತೆಯ ಗುಣಮಟ್ಟದ ವಿತರಣಾ ಪರಿವರ್ತಕಗಳು:

1. ಇಂಧನ ಸಂರಕ್ಷಣಾ ಕಾಯ್ದೆ-2001 ಕ್ಕೆ ಅನುಗುಣವಾಗಿ ಇಂಧನ ಕ್ಷಮತೆಯ ಕನಿಷ್ಠ ಮೂರು ತಾರಾಗುಣಮಟ್ಟದ ವಿತರಣಾ ಪರಿವರ್ತಕಗಳನ್ನು 2008ನೇ ಆರ್ಥಿಕ ವರ್ಷದಿಂದ ಖರೀದಿಸಿ ಅಳವಡಿಸಲಾಗುತ್ತಿದೆ. ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಇಎನ್ 119 ವಿಎಸ್‌ಸಿ 2017 ಬೆಂಗಳೂರು ದಿನಾಂಕ 07.06.2017ರಲ್ಲಿ, ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ ರಾಜ್ಯದಾದ್ಯಂತ ನೂತನವಾಗಿ ಸಂಪರ್ಕ ಪಡೆಯುವ ಸರ್ಕಾರಿ, ಖಾಸಗಿ, ವಾಣಿಜ್ಯ, ಸ್ವಂತ ಹಾಗೂ ಇತರ ಬಳಕೆಯ ಎಲ್ಲಾ ವಿದ್ಯುತ್ ಸ್ಥಾವರಗಳಿಗೆ ಗ್ರಾಮೀಣ ಪ್ರದೇಶದಲ್ಲಿ 4 ಸ್ಟಾರ್ ಮತ್ತು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ 5 ಸ್ಟಾರ್ ರೇಟೆಡ್ ಪರಿವರ್ತಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಆದೇಶವಿರುತ್ತದೆ. ಆರ್ಥಿಕ ವರ್ಷ 2018-19ರಲ್ಲಿ ಕಂಪೆನಿಯು ಖರೀದಿಸಿದ ಇಂತಹ ಪರಿವರ್ತಕಗಳ ವಿವರ ಈ ಕೆಳಕಂಡಂತಿರುತ್ತದೆ.

ಸಾಮರ್ಥ್ಯ	3 ಸ್ಟಾರ್	ಸ್ಟಾರ್ - 1	ಸ್ಟಾರ್ - 2	ಒಟ್ಟು
25KVA	336	1584	400	2320
63KVA	214	1540	481	2235
100KVA	-	180	100	280
ಒಟ್ಟು	**550**	**3304**	**981**	**4835**

2. ಪೊರ್ಸಿಲಿನ್ ಮಾದರಿಯ ಉಪಕರಣಗಳ ವೈಫಲ್ಯ ದರವನ್ನು ಇಳಿಸಲು ಈ ಕೆಳಗಿನ ಪಾಲಿಮರಿಕ್ ಮಾದರಿಯ ಉಪಕರಣಗಳನ್ನು ಖರೀದಿಸಲಾಗಿರುತ್ತದೆ.
   - ವಿಶೇಷವಾಗಿ ಹೆಚ್ಚಿನ ಮಿಂಚು ಪೀಡಿತ ಪ್ರದೇಶಗಳಲ್ಲಿ ವಿದ್ಯುತ್ ಪರಿವರ್ತಕಗಳ ವೈಫಲ್ಯವನ್ನು ಕಡಿಮೆಗೊಳಿಸಲು ಪಾಲಿಮರಿಕ್ ಮಾದರಿಯ ಮಿಂಚು ನಿರೋಧಕಗಳನ್ನು ಖರೀದಿಸಲಾಗಿರುತ್ತದೆ. 2018-19ರ ಸಾಲಿನಲ್ಲಿ ಒಟ್ಟು 6250 ಸಂಖ್ಯೆಯ ಪಾಲಿಮರಿಕ್ ಮಿಂಚು ನಿರೋಧಕವನ್ನು ಖರೀದಿಸಲಾಗಿರುತ್ತದೆ.
   - 60000 ಸಂಖ್ಯೆಯ 45ಕೆಎನ್ ಪಾಲಿಮರಿಕ್ ಮಾದರಿಯ ಡಿಸ್ಕ್ ಇನ್ಸುಲೇಟರ್‌ಗಳನ್ನು 11ಕೆವಿ ವಿತರಣಾ ವ್ಯವಸ್ಥೆಗೆ ಅಳವಡಿಸಲು ಸರಬರಾಜು ಮಾಡಲಾಗಿದೆ.
   - 90000 ಸಂಖ್ಯೆಯ 5ಕೆಎನ್ ಪಾಲಿಮರಿಕ್ ಮಾದರಿಯ ಪಿನ್ ಇನ್ಸುಲೇಟರ್‌ಗಳನ್ನು ಕರಾವಳಿ ಹಾಗೂ ಹೆಚ್ಚಿನ ಮಿಂಚು ಪೀಡಿತ ಪ್ರದೇಶಗಳಲ್ಲಿ 11ಕೆವಿ ವಿತರಣಾ ವ್ಯವಸ್ಥೆಗೆ ಅಳವಡಿಸಲು ಸರಬರಾಜು ಮಾಡಲಾಗಿದೆ.
3. ಮೆಸ್ಕಾಂನ ವಿವಿಧ ವಿಭಾಗಗಳಲ್ಲಿ ಉಪಯೋಗಿಸಲು ಒಟ್ಟು 13 ಸಂಖ್ಯೆಯ ಕ್ರೇನ್‌ಗಳನ್ನು ಸರಬರಾಜು ಮಾಡಲಾಗಿದೆ.

16. ಸಾರ್ವಜನಿಕ ದೂರು ವಿಭಾಗ:

ಅ) 2018-19 ನೇ ಸಾಲಿನಲ್ಲಿ ಸಾರ್ವಜನಿಕ ದೂರು ವಿಭಾಗವು ಒಟ್ಟು 439 ಲಿಖಿತ ದೂರುಗಳನ್ನು ಸ್ವೀಕರಿಸಿದ್ದು, ಇದರಲ್ಲಿ ಶೇ. 85% ದೂರುಗಳನ್ನು (373 ಸಂಖ್ಯೆ) ತೃಪ್ತಿಕರವಾಗಿ ಬಗೆಹರಿಸಲಾಗಿದೆ. ಉಳಿದ 66 ದೂರುಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇತ್ಯರ್ಥಗೊಳಿಸಲಾಗಿರುತ್ತದೆ. ಅಲ್ಲದೆ ಫ್ಯೂಸ್ ಆಫ್ ಕಾಲ್, ಕಡಿಮೆ ವೋಲ್ಟೇಜ್ ಇತ್ಯಾದಿಗಳ ಬಗ್ಗೆ ದೂರವಾಣಿ ಕರೆ ಮೂಲಕ 237 ಸಂಖ್ಯೆಯಷ್ಟು ಸಣ್ಣಪುಟ್ಟ ದೂರುಗಳನ್ನು ಸ್ವೀಕರಿಸಲಾಗಿದೆ.

ಆ) ವರ್ಗವಾರು ದೂರುಗಳ ವಿವರಗಳು ಈ ಕೆಳಕಂಡಂತಿವೆ:

ಕ್ರ.ಸಂ.	ದೂರುಗಳ ವಿವರ	ಒಟ್ಟು ಬಂದ ದೂರುಗಳು
1	ವಿದ್ಯುಚ್ಛಕ್ತಿ ಸರಬರಾಜು ಮತ್ತು ವಿತರಣಾ ಸಂಹಿತೆ ಉಲ್ಲಂಘನೆ	-
2	ವೋಲ್ಟೇಜ್ ಸಂಬಂಧಿ/ವಿದ್ಯುತ್ ವ್ಯತ್ಯಯ	4
3	ಬಿಲ್ ಪಾವತಿಗೆ ಸಂಬಂಧಿಸಿದವು	60
4	ಕಾಮಗಾರಿ ಮಂಜೂರಾತಿಯಲ್ಲಿ ವಿಳಂಬ	3
5	ಅಪಘಾತ/ನಷ್ಟ ಪರಿಹಾರ	5
6	ವಿದ್ಯುತ್ ಕಳವು/ಅನಧಿಕೃತ ಉಪಯೋಗ	19
7	ಪರಿವರ್ತಕಗಳ ಸ್ಥಳಾಂತರ/ಬದಲಾವಣೆ	30
8	ಲಂಚ / ಆರೋಪ/ದುರ್ವರ್ತನೆ	6
9	ಠೇವಣಿ ಕಡಿತ/ಹೊರೆಕಡಿತ/ಠೇವಣಿ ಹಿಂತಿರುಗಿಸುವುದು	3
10	ಹೊಸ ಸಂಪರ್ಕ ಸಂಬಂಧಿಸಿದವು	14
11	ವಿದ್ಯುತ್ ಸಂಪರ್ಕ ಕಡಿತಗೊಳಿಸಿದ ಬಗ್ಗೆ	5
12	ಇತರ	290
	ಜುಮ್ಲಾ	**439**

ಇ) ದೂರುಗಳ ತುಲನಾತ್ಮಕ ವಿವರ ಈ ಕೆಳಕಂಡಂತಿದೆ;

ದೂರುಗಳ ಸಂಖ್ಯೆ	2012-13	2013-14	2014-15	2015-16	2016-17	2017-18	2018-19	ಷರಾ
ಅಖಿತ ದೂರುಗಳು	590	406	370	340	338	478	439	2017-18 ಕ್ಕೆ ಹೋಲಿಸಿದಾಗ 39 ಸಂಖ್ಯೆಯಷ್ಟು ದೂರುಗಳು ಇಳಿಕೆಯಾಗಿರುತ್ತವೆ.
ದೂರವಾಣಿ ಮೂಲಕ ಸಣ್ಣಪುಟ್ಟ ದೂರುಗಳು	475	850	600	579	829	168	237	2017-18 ಕ್ಕೆ ಹೋಲಿಸಿದಾಗ 69 ಸಂಖ್ಯೆಯಷ್ಟು ದೂರುಗಳು ಏರಿಕೆಯಾಗಿರುತ್ತವೆ.

17. ಸಿಬ್ಬಂದಿ, ಕೈಗಾರಿಕಾ ಸಂಬಂಧಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ:

ಅ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ಈ ಕೆಳಗಿನ ರಚನೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

(ದಿನಾಂಕ 31.03.2019 ಕ್ಕೆ)

ಆಡಳಿತ ಕಛೇರಿ	ವಲಯ ಕಛೇರಿ	ಕಾ&ಪಾ ವೃತ್ತ	ಕಾ&ಪಾ ವಿಭಾಗ	ಕಾ&ಪಾ ಉಪವಿಭಾಗ	ಅಕೌಂಟಿಂಗ್ ಶಾಖೆ	ನಾನ್-ಅಕೌಂಟಿಂಗ್ ಶಾಖೆ
1	2	4	13	61	10	227

ಆ) ಸಿಬ್ಬಂದಿ ವಿವರಗಳು:

ದಿನಾಂಕ 31.03.2019ಕ್ಕೆ ಕಂಪೆನಿಯಲ್ಲಿನ ನೌಕರರ ವರ್ಗವಾರು ವಿವರವು ಈ ಕೆಳಗಿನಂತಿವೆ.

ಶ್ರೇಣಿ	ಮಂಗಳೂರು ವೃತ್ತ			ಉಡುಪಿ ವೃತ್ತ			ಶಿವಮೊಗ್ಗ ವೃತ್ತ			ಚಿಕ್ಕಮಗಳೂರು ವೃತ್ತ			ಒಟ್ಟು		
	ಮಂ	ಕಾನಿ	ಖಾಲಿ	ಮಂ	ಕಾನಿ	ಖಾಲಿ	ಮಂ	ಕಾನಿ	ಖಾಲಿ	ಮಂ	ಕಾನಿ	ಖಾಲಿ	ಮಂ	ಕಾನಿ	ಖಾಲಿ
ಎ-ವರ್ಗ (ಕ್ರಮಬದ್ಧ ನೌಕರರು)	146	104	42	32	29	3	54	45	9	36	26	10	268	204	64
ಎ-ವರ್ಗ (ಪ್ರತಿನಿಯೋಜಿತ ನೌಕರರು)	1	-	1	-	-	-	-	-	-	-	-	-	1	-	1
ಎ-ವರ್ಗ ಒಟ್ಟು	**147**	**104**	**43**	**32**	**29**	**3**	**54**	**45**	**9**	**36**	**26**	**10**	**269**	**204**	**65**
ಬಿ-ವರ್ಗ (ಕ್ರಮಬದ್ಧ ನೌಕರರು)	156	125	31	50	42	8	100	85	15	62	49	13	368	301	67
ಬಿ-ವರ್ಗ (ಪ್ರತಿನಿಯೋಜಿತ ನೌಕರರು)	1	-	1	1	1	-	1	-	1	1	-	1	4	1	3
ಬಿ-ವರ್ಗ ಒಟ್ಟು	**157**	**125**	**32**	**51**	**43**	**8**	**101**	**85**	**16**	**63**	**49**	**14**	**372**	**302**	**70**
ಸಿ-ವರ್ಗ (ಕ್ರಮಬದ್ಧ ನೌಕರರು)	933	592	341	503	319	184	814	609	205	553	413	140	2803	1933	870
ಸಿ-ವರ್ಗ (ಪ್ರತಿನಿಯೋಜಿತ ನೌಕರರು)	4	1	3	4	4	-	4	4	-	4	4	-	16	13	3
ಸಿ-ವರ್ಗ ಒಟ್ಟು	**937**	**593**	**344**	**507**	**323**	**184**	**818**	**613**	**205**	**557**	**417**	**140**	**2819**	**1946**	**873**
ಡಿ-ವರ್ಗ (ಕ್ರಮಬದ್ಧ ನೌಕರರು)	1934	1010	924	1088	554	534	1652	966	686	1143	507	636	5817	3037	2780
ಕಂಪೆನಿಯ ಒಟ್ಟು	**3175**	**1832**	**1343**	**1678**	**949**	**729**	**2625**	**1709**	**916**	**1799**	**999**	**800**	**9277**	**5489**	**3788**

ಮಂ-ಮಂಜೂರಾದ ಹುದ್ದೆಗಳು, **ಕಾನಿ**-ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು **ಖಾಲಿ**-ಖಾಲಿ ಇರುವ ಹುದ್ದೆಗಳು

ಇ. 2018–19 ಆರ್ಥಿಕ ವರ್ಷದಲ್ಲಿ ನಡೆಸಲಾದ ತರಬೇತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು :

ಅ. ಕಂಪೆನಿಯ ಅಭಿವೃದ್ಧಿ ಹಾಗೂ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿರುವ ತಂತ್ರಜ್ಞಾನವನ್ನು ಗಮನದಲ್ಲಿರಿಸಿ, ಅಗತ್ಯವಾದ ವೃತ್ತಿ ಸಂಸ್ಕೃತಿಗೆ ವಿಶೇಷವಾದ ಆದ್ಯತೆ ನೀಡಿ ಆಂತರಿಕ ಮತ್ತು ಬಾಹ್ಯ ಏಜೆನ್ಸಿಗಳ ಮೂಲಕ ತರಬೇತಿಯನ್ನು ನೀಡುವುದು ಅತಿ ಅವಶ್ಯಕತೆ ಎಂದು ಪರಿಗಣಿಸಿ ಕಂಪೆನಿಯ ಎಲ್ಲಾ ಸ್ತರದ ಪ್ರತಿಯೊಬ್ಬ ನೌಕರನಿಗೂ ತರಬೇತಿ ನೀಡಲಾಗುತ್ತಿದೆ.

ಆ. ಕಂಪೆನಿಯ ಅಧಿಕಾರಿ/ನೌಕರರ ಜ್ಞಾನವನ್ನು ಹೆಚ್ಚಿಸುವ ಹಾಗೂ ವಿ.ಸ.ಕಂ.ಗಳ ವಾಣಿಜ್ಯ ವಿಷಯಗಳ ಗುಣಮಟ್ಟವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಡಿಸ್ಕಾಂಸ್ ಆನ್ ದಿ ರಿವೈಸ್‌ಡ್ ಎಟಿ&ಸಿ ಲಾಸ್ & ಎಸಿಎಸ್ –ಎಪಿಆರ್ ಗ್ಯಾಪ್ ಮೆಥಡಾಲೊಜಿ, ಯುನಿಕ್ಸ್, ಸ್ಟೋರೇಜ್ & ಬ್ಯಾಕ್, ವಿಂಡೋಸ್ (ಅಡ್ಮಿನ್, ಎಕ್ಸೇಂಜ್, ಆಂಟಿವೈರಸ್), ವಿಂಡೋಸ್ (ಅಡ್ಮಿನ್, ಎಕ್ಸ್‌ಚೇಂಜ್, ಆಂಟಿವೈರಸ್ & ಟೂಲ್ಸ್), ಎನರ್ಜಿ ಕನ್ಸರ್ವೇಶನ್ ಬಿಲ್ಡಿಂಗ್ ಕೋಡ್, ಇನ್ಫರ್ಮೇಶನ್ & ನೆಟ್‌ವರ್ಕ್ ಸೆಕ್ಯೂರಿಟಿ, ಟ್ರೆಂಡ್ಸ್ ಇನ್ ವೇಜ್ ಸೆಟ್ಲ್‌ಮೆಂಟ್ಸ್, ಐಆರ್ ಸಿಚ್ಯುವೇಶನ್, ವಿಆರ್‌ಎಸ್/ವಿಎಸ್‌ಎಸ್ & ಫಿಕ್ಸ್‌ಡ್ ಟರ್ಮ್ ಎಂಪ್ಲೋಯ್‌ಮೆಂಟ್, ಲೇಟೆಸ್ಟ್ ವರ್ಷನ್ ಒರೆಕಲ್ –ಸಿಸಿಬಿ, ಡಬ್ಲ್ಯೂಎಎಂಎಸ್ & ಎಂಡಿಎಂ ಅಪ್ಲಿಕೇಶನ್ಸ್ ಆಫ್ ಆರ್–ಎಪಿಡಿಆರ್‌ಪಿ, ಇಎಟಿ ಮೊಡ್ಯೂಲ್ ಆಫ್ ಪಬ್ಲಿಕ್ ಫೈನಾನ್ಸಿಯಲ್ ಸಿಸ್ಟಂ (ಪಿಎಫ್‌ಎಂಎಸ್) ಅಂಡರ್ ಡಿಡಿಯುಜಿಜೆವೈ/ಸೌಭಾಗ್ಯ ಸ್ಕೀಮ್ಸ್, ಪ್ರೊಜೆಕ್ಟ್ ಮ್ಯಾನೇಜ್‌ಮೆಂಟ್, ಸ್ಮಾರ್ಟ್ ಮೀಟರಿಂಗ್, ಊರ್ಜ ಮಿತ್ರ, ಡಿಸ್ಟ್ರಿಬ್ಯೂಷನ್ ಯುಟಿಲಿಟಿ ಮೀಟ್–ದಮ್–2018, ಡಿಮಾಂಡ್ ಸೈಡ್ ಮ್ಯಾನೇಜ್‌ಮೆಂಟ್ ಆ್ಯಕ್ಷನ್ ಪ್ಲಾನ್, ಹ್ಯಾಂಡ್ಲಿಂಗ್ ಆಫ್ ಕೋರ್ಟ್ ಕೇಸಸ್, ದಿ ಸೆಕ್ಷುವಲ್ ಹೆರಾಸ್‌ಮೆಂಟ್ ಆಫ್ ವಿಮೆನ್ ಎಟ್ ವರ್ಕ್‌ಪ್ಲೇಸ್ (ಪ್ರಿವೆಂಶನ್ ಪ್ರೊಹಿಬಿಷನ್ & ರಿಡ್ರೆಸಲ್) ಆಕ್ಟ್, 2013, ಡಬ್ಲ್ಯೂಎಎಂಎಸ್ & ಎಂಐಎಸ್, ಡಬ್ಲ್ಯೂಎಸ್‌ಎಸ್&ಐಡಿಎಎಂ, ಸಿಸಿಬಿ&ಬಿಐಪಿ, ಎಂಡಿಎಂ&ಎಂಡಿಎ, ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್, ಇಎಸ್‌ಸಿಒಸ್ ಆನ್ ಎನರ್ಜಿ ಎಫಿಶಿಯೆನ್ಸಿ ಫೈನಾನ್ಸಿಂಗ್, ಇ–ಪ್ರೊಕ್ಯೂರ್‌ಮೆಂಟ್, ಪ್ರಿಪೈಡ್ ಎನರ್ಜಿ ಮೀಟರ್ ಟೆಸ್ಟಿಂಗ್ ಮೆಥಡಾಲೋಜೀಸ್, ಲೀಡರ್‌ಶಿಪ್ & ಮೇನಜೀರಿಯಲ್ ಸ್ಕಿಲ್ಸ್, ಈಸ್ ಆಫ್ ಡೂಯಿಂಗ್ ಬಿಸಿನೆಸ್ ಟು ಡಿಸ್ಕಸ್ ದಿ. ಇಂಪ್ಲಿಮೆಂಟೇಶನ್ ಪ್ಲಾನ್ ಬಿಆರ್‌ಎಪಿ 2019, ವಿಜಿಲೆನ್ಸ್ ಕಸ್ಟಮರ್ ಅವೇರ್‌ನೆಸ್ ಮೀಟ್ –2019, ಹೆಚ್.ಆರ್.ಸುಮಿತ್–ಎನ್ ಇಮ್ಮೆರ್‌ಸೀವ್ ಡೆವಲಪ್‌ಮೆಂಟ್ ಪ್ರೊಗ್ರಾಂ ಫಾರ್ ಹೆಡ್ಸ್ ಆಫ್ ಹೆಚ್.ಆರ್, ಅಡ್ಮಿನಿಸ್ಟ್ರೇಶನ್ & ಆಪರೇಷನ್ಸ್ ಆಫ್ ಪವರ್ ಯುಟಿಲಿಟೀಸ್, ವೈಬ್ರೇಶನ್ & ಸೆಸಿಮಿಕ್ ಟೆಸ್ಟಿಂಗ್ ಆಫ್ ಇಕ್ವಿಪ್‌ಮೆಂಟ್, ಇಂಡಿಯ ಸ್ಮಾರ್ಟ್ ಯುಟಿಲಿಟಿ ವರ್ಕ್ (ಐಎಸ್‌ಯುಡಬ್ಲ್ಯೂ 2019), ಎಮರ್ಜಿಂಗ್ ಟ್ರೆಂಡ್ಸ್, ಡೆವಲಪ್‌ಮೆಂಟ್ಸ್ & ಲೇಟೆಸ್ಟ್ ಟೆಸ್ಟಿಂಗ್ ಮೆಥಡಾಲಜೀಸ್ ಆಫ್ ಇನ್‌ಸ್ಟ್ರುಮೆಂಟ್ ಟ್ರಾನ್ಸ್‌ಫಾರ್ಮರ್, ರಿನ್ಯೂ 19 ಅ ಡೇ ಸೆಮಿನಾರ್ & ಎಕ್ಸ್‌ಪೊ ಆನ್ ಸೋಲಾರ್, ವಿಂಡ್, ಬಯೋಮಾಸ್ & ಪವರ್‌ಸೆಕ್ಟರ್, ಸ್ಮಾರ್ಟ್ ಗ್ರಿಡ್, ಸ್ಮಾರ್ಟ್ ಮೀಟರ್ & ಕಮ್ಯೂನಿಕೇಶನ್ ಟೆಕ್ನಾಲಜೀಸ್, ಪ್ರೆಸೆಂಟ್ ಸಿನಾರಿಯೋ ಇನ್ ವ್ಯಾಲ್ಯೂವೇಶನ್ ಆಫ್ ಎಸೆಟ್ಸ್, ಎಲೆಕ್ಟ್ರಿಕಲ್ ಸೇಫ್ಟಿ ಪ್ರೊಸೀಜರ್ಸ್ & ಅಕ್ಸಿಡೆಂಟ್ ಪ್ರಿವೆಂಶನ್, ಪವರ್ ಡಿಸ್ಟ್ರಿಬ್ಯೂಟರ್ ಟೆಕ್ನಾಲಜೀಸ್ & ಕರೆಂಟ್ ಸಿನಾರಿಯೋ ಇನ್ ಪವರ್ ಡಿಸ್ಟ್ರಿಬ್ಯೂಷನ್, ಬಿಹೇವಿಯರಲ್ ಸ್ಕಿಲ್ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಗಿದೆ.

ಇ. 2018–19 ನೇ ಸಾಲಿನಲ್ಲಿ ಕಂಪೆನಿಯು ವಿವಿಧ ಆಂತರಿಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿರುತ್ತದೆ ಮತ್ತು ಆಯ್ದ ಖಾಯಂ ಉದ್ಯೋಗಿಗಳನ್ನು ಬಾಹ್ಯ ಏಜೆನ್ಸಿಗಳು ನಡೆಸುವ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗಿದೆ.

ಈ. 2018–19ನೇ ಸಾಲಿನ ಅಂತ್ಯಕ್ಕೆ ಮ.ವಿ.ಸ.ಕಂ. ನಲ್ಲಿ ಒಟ್ಟು 9,277 ಸಂಖ್ಯೆಯ ಹುದ್ದೆಗಳ ಮಂಜೂರಾತಿ ಇದ್ದು 5,489 ಸಂಖ್ಯೆಯ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು ಒಟ್ಟು 733 (ಶೇ.6.94) ಸಿಬ್ಬಂದಿಗಳಿಗೆ ವಿವಿಧ ವಿಷಯಗಳಲ್ಲಿ ಆಂತರಿಕ/ ಬಾಹ್ಯ ತರಬೇತಿ ಕೇಂದ್ರಗಳ ಮೂಲಕ ತರಬೇತಿ ನೀಡಲಾಗಿರುತ್ತದೆ.

ಈ. ವಿವಿಧ ತರಬೇತಿ ಕಾರ್ಯಕ್ರಮಗಳು ಈ ಕೆಳಗಿನಂತಿರುತ್ತದೆ :

ಅ. ಆಂತರಿಕ ತರಬೇತಿಯ ವಿವರಗಳು :

ಕ್ರ.ಸಂ.	ವಿಷಯ	ಭಾಗವಹಿಸಿದವರ ಸಂಖ್ಯೆ	ಒಟ್ಟು ವೆಚ್ಚ (₹)
1	ಎಂ.ಟಿ.ಟಿ.ಪಿ. – 2	117	13,87,629/-
2	ಆರ್.ಇ.ಸಿ. ವತಿಯಿಂದ ಸಿ&ಡಿ ನೌಕರರಿಗೆ ತರಬೇತಿ	494	11,45,181/-
	ಒಟ್ಟು	**611**	**25,32,810/-**

ಆಂತರಿಕ ತರಬೇತಿ ಕಾರ್ಯಕ್ರಮಗಳ ಒಟ್ಟು ಸಂಖ್ಯೆ	2
ಭಾಗವಹಿಸಿದವರ ಸಂಖ್ಯೆ	611
ಪಾವತಿಸಲಾದ ಶುಲ್ಕದ ಸಹಿತ ಒಟ್ಟು ಖರ್ಚು ₹	25,32,810/-
ಸರಾಸರಿ ವೆಚ್ಚ (ಒಬ್ಬರಿಗೆ) ₹	4,145/-

ಆ. ಬಾಹ್ಯ ತರಬೇತಿ ಕೇಂದ್ರಗಳ ಮೂಲಕ ನೀಡಲಾದ ತರಬೇತಿಯ ವಿವರ

ಕ್ರ.ಸಂ.	ವಿಷಯ	ಭಾಗವಹಿಸಿದವರ ಸಂಖ್ಯೆ	ಮೊತ್ತ ₹
1	ಡಿಸ್ಕೋಮ್ಸ್ ಒನ್ ದಿ ರಿವೈಸ್ಡ್‌ಡ್ ಎಟಿ&ಸಿ ಲಾಸ್ & ಎಸಿಎಸ್ – ಎಆರ್‌ಆರ್ ಗ್ಯಾಪ್ ಮೆತಡಾಲೋಜಿ	2	-
2	ಯೂನಿಕ್ಸ್, ಸ್ಟೋರೇಜ್ & ಬ್ಯಾಕ್, ವಿಂಡೋಸ್ (ಅಡ್ಮಿನ್, ಎಕ್ಸೇಂಜ್, ಆಂಟಿವೈರಸ್)	3	-
3	ವಿಂಡೋಸ್ (ಅಡ್ಮಿನ್, ಎಕ್ಸೇಂಜ್, ಆಂಟಿವೈರಸ್ & ಟೂಲ್ಸ್)	2	-
4	ಎನರ್ಜಿ ಕನ್‌ಸರ್‌ವೇಶನ್ ಬಿಲ್ಡಿಂಗ್ ಕೋಡ್ (ಇಸಿಬಿಸಿ)	10	–
5	ಇನ್‌ಫರ್‌ಮೇಶನ್ & ನೆಟ್‌ವರ್ಕ್ ಸೆಕ್ಯೂರಿಟಿ	5	–
6	ಟ್ರೆಂಡ್ಸ್ ಇನ್ ವೇಜ್ ಸೆಟಲ್‌ಮೆಂಟ್ಸ್, ಐಆರ್ ಸಿಚ್ಯುವೇಶನ್ ವಿಆರ್‌ಎಸ್/ವಿಎಸ್‌ಎಸ್ & ಫಿಕ್ಸ್‌ಡ್ ಟರ್ಮ್ ಎಂಪ್ಲೋಯ್‌ಮೆಂಟ್ಸ್	1	4130
7	ಲೇಟಸ್ಟ್ ವರ್ಷನ್ ಒರಾಕಲ್–ಸಿಸಿಬಿ, ಡಬ್ಲ್ಯೂಎಎಂಎಸ್ & ಎಂಡಿಎಂ ಎಪ್ಲಿಕೇಶನ್ ಆಫ್ ಆರ್–ಎಪಿಡಿಆರ್‌ಪಿ	2	–
8	ಇಎಟಿ ಮೊಡ್ಯೂಲ್ ಆಫ್ ಪಬ್ಲಿಕ್ ಫೈನಾನ್ಸಿಯಲ್ ಸಿಸ್ಟಮ್ಸ್ (PFMS) ಅಂಡರ್ ಡಿಡಿಯುಜಿಜೆವೈ/ ಸೌಭಾಗ್ಯ ಸ್ಕೀಮ್ಸ್	2	–
9	ಪ್ರೋಜೆಕ್ಟ್ ಮ್ಯಾನೇಜ್‌ಮೆಂಟ್	3	–
10	ಸ್ಮಾರ್ಟ್ ಮೀಟರಿಂಗ್	2	49560
11	ಊರ್ಜ ಮಿತ್ರ	2	-
12	ಡಿಸ್ಟ್ರಿಬ್ಯೂಷನ್ ಯುಟಿಲಿಟಿ ಮೀಟ್ (ದಮ್) – 2018	2	–
13	ಡಿಮಾಂಡ್ ಸೈಡ್ ಮ್ಯಾನೇಜ್‌ಮೆಂಟ್ ಆ್ಯಕ್ಷನ್ ಪ್ಲಾನ್	1	–
14	ಹ್ಯಾಂಡ್ಲಿಂಗ್ ಆಫ್ ಕೋರ್ಟ್ ಕೇಸಸ್	1	41300
15	ದಿ. ಸೆಕ್ಸುವಲ್ ಹೆರಾಸ್‌ಮೆಂಟ್ ಆಫ್ ವಿಮೆನ್ ಎಟ್ ವರ್ಕ್‌ಪ್ಲೇಸ್ (ಪ್ರಿವೆಂಶನ್, ಪ್ರೊಹಿಬಿಷನ್ & ರಿಡ್ರೆಸಲ್) ಆ್ಯಕ್ಟ್, 2013	2	55460
16	ಡಬ್ಲ್ಯೂಎಎಂಎಸ್ & ಎಂಐಎಸ್	2	–
17	ಡಬ್ಲ್ಯೂಎಸ್‌ಎಸ್ & ಐಡಿಎಎಂ	2	–
18	ಸಿಸಿಬಿ & ಬಿಐಪಿ	2	–
19	ಎಂಡಿಎಂ & ಎಂಡಿಎ	1	–
20	ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್	1	–
21	ಎಸ್ಕಾಂಸ್ ಆನ್ ಎನರ್ಜಿ ಎಫಿಸಿಯನ್ಸಿ ಫೈನಾನ್ಸಿಂಗ್	5	–
22	ಇ–ಪ್ರೊಕ್ಯೂರ್‌ಮೆಂಟ್	4	–
23	ಪ್ರೀಪೈಡ್ ಎನರ್ಜಿ ಮೀಟರ್ ಟೆಸ್ಟಿಂಗ್ ಮೆತೋಡೋಲೋಜೀಸ್	4	8260
24	ಲೀಡರ್‌ಶಿಪ್ ಎಂಡ್ ಮ್ಯಾನೇಜಿರಿಯಲ್ ಸ್ಕಿಲ್ಸ್	2	–
25	ಈಸ್ ಆಫ್ ಡೂಯಿಂಗ್ ಬಿಸಿನೆಸ್ ಟು ಡಿಸ್ಕಸ್ ದಿ ಇಂಪ್ಲಿಮೆಂಟೇಶನ್ ಪ್ಲಾನ್ ಬಿಆರ್‌ಎಪಿ 2019	1	–
26	ವಿಜಿಲೆನ್ಸ್ ಕಸ್ಟಮರ್ ಅವೇರ್‌ನೆಸ್ ಮೀಟ್ – 2019	1	–
27	ಹೆಚ್‌ಆರ್ ಸಮಿತ್– ಎನ್ ಇಂಮರ್‌ಸೀವ್ ಡಿವೆಲಫ್‌ಮೆಂಟ್ ಪ್ರೋಗ್ರಾಂ ಫಾರ್ ಹೆಡ್ಸ್ ಆಫ್ ಹೆಚ್.ಆರ್, ಅಡ್ಮಿನಿಸ್ಟ್ರೇಶನ್ & ಆಪರೇಶನ್ಸ್ ಆಫ್ ಪವರ್ ಯುಟಿಲಿಟೀಸ್	2	–
28	ವೈಬ್ರೇಶನ್ & ಸೆಸಿಮಿಕ್ ಟೆಸ್ಟಿಂಗ್ ಆಫ್ ಇಕ್ವಿಪ್‌ಮೆಂಟ್	5	–
29	ಇಂಡಿಯ ಸ್ಮಾರ್ಟ್ ಯುಟಿಲಿಟಿ ವರ್ಕ್ (ಐಎಸ್‌ಯುಡಬ್ಲ್ಯೂ 2019)	5	–
30	ಎಮರ್ಜಿಂಗ್ ಟ್ರೆಂಡ್ಸ್, ಡೆವಲಪ್‌ಮೆಂಟ್ಸ್ ಆಂಡ್ ಲೇಟಸ್ಟ್ ಟೆಸ್ಟಿಂಗ್ ಮೆತಡಾಲಜೀಸ್ ಆಫ್ ಇನ್‌ಸ್ಟ್ರುಮೆಂಟ್ ಟ್ರಾನ್ಸ್‌ಫಾರ್ಮರ್ಸ್	2	8260
31	ರಿನ್ಯೂ 19 ಎ ಡೇ ಸೆಮಿನಾರ್ & ಎಕ್ಸ್‌ಪೋ ಆನ್ ಸೋಲಾರ್, ವಿಂಡ್, ಬಯೋಮಾಸ್ & ಪವರ್ ಸೆಕ್ಟರ್	2	8000
32	ಸ್ಮಾರ್ಟ್ ಗ್ರಿಡ್, ಸ್ಮಾರ್ಟ್ ಮೀಟರ್ & ಕಮ್ಯೂನಿಕೇಶನ್ ಟೆಕ್ನಾಲಜೀಸ್	2	8260

ಕ್ರ.ಸಂ.	ವಿಷಯ	ಭಾಗವಹಿಸಿದವರ ಸಂಖ್ಯೆ	ಮೊತ್ತ ₹
33	ಪ್ರೆಸೆಂಟ್ ಸಿನಾರಿಯೋ ಇನ್ ವ್ಯಾಲ್ಯುವೇಶನ್ ಆಫ್ ಎಸೆಟ್ಸ್	5	7500
34	ಎಲೆಕ್ಟ್ರಿಕಲ್ ಸೇಫ್ಟಿ ಪ್ರೊಸೀಜರ್ಸ್ & ಆಕ್ಸಿಡೆಂಟ್ ಪ್ರಿವೆನ್‌ಶನ್	2	47200
35	ಪವರ್ ಡಿಸ್ಟ್ರಿಬ್ಯೂಶನ್ ಟೆಕ್ನಾಲಜೀಸ್ & ಕರೆಂಟ್ ಸಿನಾರಿಯೋ ಇನ್ ಪವರ್ ಡಿಸ್ಟ್ರಿಬ್ಯೂಷನ್	2	8260
36	ಬಿಹೇವಿಯರಲ್ ಸ್ಕಿಲ್ಸ್	50	-
	ಒಟ್ಟು	**142**	**246190**

ಬಾಹ್ಯ ತರಬೇತಿ ಕಾರ್ಯಕ್ರಮಗಳ ಒಟ್ಟು ಸಂಖ್ಯೆ	36
ಭಾಗವಹಿಸಿದವರ ಸಂಖ್ಯೆ	142
ಪಾವತಿಸಲಾದ ಶುಲ್ಕದ ಸಹಿತ ಒಟ್ಟು ಖರ್ಚು	₹ 2,46,190/-
ಸರಾಸರಿ ವೆಚ್ಚ (ಒಬ್ಬರಿಗೆ)	₹ 1,734/-

ಉ. ಔದ್ಯಮಿಕ ಬಾಂಧವ್ಯ:

ಕಂಪೆನಿಯು ತನ್ನ ನೌಕರರು ಹಾಗೂ ನೌಕರರ ಸಂಘಟನೆಯೊಂದಿಗೆ ಹಾರ್ದಿಕ ಸಂಬಂಧವನ್ನು ಹೊಂದಿದ್ದು, ಅವರ ಯಾವುದೇ ಅಹವಾಲುಗಳಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಾಲಕಾಲಕ್ಕೆ ಸಂಘಟನೆಗಳ ಸ್ಥಳೀಯ ಪದಾಧಿಕಾರಿಗಳೊಂದಿಗೆ ವಿಚಾರ ವಿನಿಮಯ ಸಭೆಯನ್ನು ನಡೆಸಿ ಪರಿಹರಿಸಲಾಗುತ್ತಿದೆ.

ಊ. ನೌಕರರ ಕ್ಷೇಮಾಭಿವೃದ್ಧಿ ಯೋಜನೆಗಳು :

ನೌಕರರು ಮತ್ತು ಆಡಳಿತ ವರ್ಗಗಳ ನಡುವೆ ಉತ್ತಮ ಬಾಂಧವ್ಯ ಬಲಪಡಿಸುವ ಸಲುವಾಗಿ ಕಂಪೆನಿಯು ಅನೇಕ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ.

ಅ. ಕಂಪೆನಿಯು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವಂತೆ ನೌಕರರು/ ಅಧಿಕಾರಿಗಳನ್ನು ಪ್ರೋತ್ಸಾಹಿಸಲು, 2018–19 ನೇ ಸಾಲಿನಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಕಾರ್ಯ ಮತ್ತು ಪಾಲನಾ ವಿಭಾಗ, ಕಾರ್ಯ ಮತ್ತು ಪಾಲನಾ ಉಪವಿಭಾಗ ಹಾಗೂ ಶಾಖೆಗಳನ್ನು ಗುರುತಿಸಿ ಪ್ರಶಂಸನಾ ಪತ್ರ ಮತ್ತು ನಗದು ಪುರಸ್ಕಾರವನ್ನು ನೀಡಿರುತ್ತದೆ.

ಆ. ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ 2018–19 ನೇ ಸಾಲಿನ ರಾಜ್ಯ ಮಟ್ಟದ ಕ.ವಿ.ಪ್ರ.ನಿ.ನಿ. ಹಾಗೂ ಅಂತರ್ ವಿದ್ಯುತ್ ಕಂಪೆನಿಗಳ ಕ್ರೀಡಾ ಕೂಟದ ಆಯೋಜನೆಗಾಗಿ ₹ 20,00,000/– ವನ್ನು ಮೆಸ್ಕಾಂ/ಕೆ.ಪಿ.ಟಿ.ಸಿ.ಎಲ್. ಕ್ರೀಡಾ ಸಮಿತಿಗೆ ಕ್ರೀಡಾ ಅನುದಾನವಾಗಿ ನೀಡಲಾಗಿದೆ ಹಾಗೂ ಸದರಿ ಕ್ರೀಡಾ ಕೂಟದಲ್ಲಿ ಪ್ರಶಸ್ತಿಯನ್ನು ಗಳಿಸಿರುವ ಮೆಸ್ಕಾಂ., ವ್ಯಾಪ್ತಿಯ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ಮತ್ತು ಪ್ರಶಂಸನಾ ಪತ್ರವನ್ನು ನೀಡಲಾಗಿದೆ.

ಇ. ಕಂಪೆನಿ ವಸತಿಗೃಹಗಳು ಲಭ್ಯವಿರುವಲ್ಲಿ ವಸತಿಗೃಹ ಸೌಲಭ್ಯವನ್ನು ಕಂಪೆನಿಯ ಸಿಬ್ಬಂದಿಗಳಿಗೆ ನೀಡಲಾಗಿದೆ.

ಋ. ಮೆಸ್ಕಾಂ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ತರಬೇತಿ ಕಾರ್ಯಕ್ರಮದ ಚಟುವಟಿಕೆಗಳು

2018–19 ನೇ ವರ್ಷದಲ್ಲಿ ಮೆಸ್ಕಾಂ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಮಂಗಳೂರು ಇಲ್ಲಿ ಕಡ್ಡಾಯ ತಾಂತ್ರಿಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ ಮೆಸ್ಕಾಂ/ಕವಿಪ್ರನಿನಿ ವೃತ್ತಗಳಲ್ಲಿ ಕಾರ್ಯನಿರ್ವವಿಸುತ್ತಿರುವ ನೌಕರರಿಗೆ ತರಬೇತಿಯನ್ನು ನೀಡಲಾಗಿರುತ್ತದೆ. ದಿನಾಂಕ 23.04.2018 ರಿಂದ 11.06.2018 ರವರೆಗೆ ಹಮ್ಮಿಕೊಳ್ಳಲಾಗಿದೆ (ಎಂ.ಟಿ.ಟಿ.ಪಿ.–2). ಇದರಲ್ಲಿ ಮೇಲ್ವಿಚಾರಕ, ಮಾಪಕ ಓದುಗ, ಆಪರೇಟರ್ & ಸಹಾಯಕ ಉಗ್ರಾಣ ಪಾಲಕ ಇವರಿಗೆ 40 ಕೆಲಸದ ದಿನಗಳ ತಾಂತ್ರಿಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ 37 ಮಂದಿ ನೌಕರರಿಗೆ ತರಬೇತಿ ನೀಡಲಾಗಿತ್ತು ಹಾಗೂ ದಿನಾಂಕ 17.09.2018 ರಿಂದ 14.11.2018 ರವರೆಗೆ ಹಮ್ಮಿಕೊಳ್ಳಲಾಗಿದೆ (ಎಂ.ಟಿ.ಟಿ.ಪಿ.–3). ಇದರಲ್ಲಿ ಲೈನ್‌ಮೆನ್, ಸ್ಟೇಷನ್ ಅಟೆಂಡರ್ ಗ್ರೇಡ್–1 & ಸ್ಟೇಷನ್ ಅಟೆಂಡರ್ ಗ್ರೇಡ್–2 ಇವರಿಗೆ 40 ಕೆಲಸದ ದಿನಗಳ ತಾಂತ್ರಿಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ ಒಟ್ಟು 40 ಮಂದಿ ನೌಕರರಿಗೆ ತರಬೇತಿ ನೀಡಲಾಗಿತ್ತು. ಮತ್ತು ದಿನಾಂಕ 03.12.2019 ರಿಂದ 22.01.2019 ರವರೆಗೆ ಹಮ್ಮಿಕೊಳ್ಳಲಾಗಿದೆ (ಎಂ.ಟಿ.ಟಿ.ಪಿ.–3). ಇದರಲ್ಲಿ ಪವರ್‌ಮ್ಯಾನ್, ಸ್ಟೇಷನ್ ಅಟೆಂಡರ್ ಗ್ರೇಡ್–1 & ಸ್ಟೇಷನ್ ಅಟೆಂಡರ್ ಗ್ರೇಡ್–2 ಇವರಿಗೆ 40 ಕೆಲಸದ ದಿನಗಳ ತಾಂತ್ರಿಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ ಒಟ್ಟು 40 ಮಂದಿ ನೌಕರರಿಗೆ ತರಬೇತಿ ನೀಡಲಾಗಿತ್ತು.

ಮೆಸ್ಕಾಂನ ಸಿ.&ಡಿ. ವರ್ಗದ ನೌಕರರಿಗೆ ರಾಷ್ಟ್ರೀಯ ತರಬೇತಿ ಕಾರ್ಯಕ್ರಮ (ಆರ್.ಇ.ಸಿ.) 2018–19

ಗ್ರಾಮೀಣ ವಿದ್ಯುದ್ದೀಕರಣ ನಿಗಮ (ಆರ್.ಇ.ಸಿ.) ಇವರು ನಿಗದಿಪಡಿಸಿದ ರಾಷ್ಟ್ರೀಯ ತರಬೇತಿ ಕಾರ್ಯಕ್ರಮದನ್ವಯ ಆರ್.ಇ.ಸಿ. ಹಾಗೂ ಮೆಸ್ಕಾಂನ ಒಡಂಬಡಿಕೆಯಂತೆ 2018–19 ನೇ ಸಾಲಿನಲ್ಲಿ ಈ ಕಾರ್ಯಕ್ರಮವು ಒಟ್ಟು 14 ತಂಡಗಳಲ್ಲಿ 377 ಮಂದಿ ನಿರ್ವಹಣಾ ಸಿಬ್ಬಂದಿಯವರಿಗೆ 2, 3 ಮತ್ತು 4 ದಿನಗಳ ಅವಧಿಗೆ ತರಬೇತಿಯನ್ನು ನೀಡಲಾಗಿರುತ್ತದೆ. ಅಲ್ಲದೆ ಪ್ರತಿ ತಂಡದಲ್ಲಿ ಎಲ್ಲಾ ತರಬೇತುದಾರರಿಗೂ ಮೆಸ್ಕಾಂ ವತಿಯಿಂದ ಒಂದು ದಿನದ ಫೀಲ್ಡ್ ತರಬೇತಿಯನ್ನು ಸಹ ನಡೆಸಲಾಗಿರುತ್ತದೆ.

ಸಾಮಾಜಿಕ ಆರ್ಥಿಕ ಯೋಜನೆಗಳಿಗೆ ಪ್ರಾಯೋಜಕತ್ವ 2018-19

ಅ. ಒಂದು ಸಿಂಹದ ಸಂರಕ್ಷಣೆ/ಪಾಲನೆಗಾಗಿ ಡಾ. ಶಿವರಾಮ ಕಾರಂತ, ಪಿಲಿಕುಲ ನಿಸರ್ಗಧಾಮಕ್ಕೆ ಪ್ರಾಯೋಜಕತ್ವವಾಗಿ ₹ 4,00,000/-.

ಆ. ವಿದ್ಯಾ ಪ್ರಾವೀಣ್ಯತೆಯನ್ನು ಪ್ರೋತ್ಸಾಹಿಸುವ ಸಲುವಾಗಿ 2007-08 ರಿಂದ ರಾಜ್ಯ ಹಾಗೂ ಕೇಂದ್ರ ಪಠ್ಯ ಕ್ರಮದಲ್ಲಿ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಹಾಗೂ ತತ್ಸಮಾನ ಪರೀಕ್ಷೆಗಳಲ್ಲಿ ಶೇ. 90 ಮತ್ತು ಹೆಚ್ಚು ಅಂಕಗಳನ್ನು ಪಡೆದ ಕಂಪೆನಿಯ ಖಾಯಂ ಅಧಿಕಾರಿ/ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವಾಗಿ ತಲಾ ₹ 2500/- ನಗದನ್ನು ಪ್ರೋತ್ಸಾಹ ಧನವಾಗಿ ನೀಡಲಾಗಿರುತ್ತದೆ. 2018-19 ನೇ ಸಾಲಿನಲ್ಲಿ ಒಟ್ಟು 25 ಪ್ರತಿಭಾನ್ವಿತ ಮಕ್ಕಳಿಗೆ ನಗದು ಬಹುಮಾನ ಮತ್ತು ಪ್ರಶಂಸನಾ ಪತ್ರವನ್ನು ನೀಡಲಾಗಿದೆ.

ಇ. ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸುವ ಸಲುವಾಗಿ ರಾಜ್ಯ ಮಟ್ಟದ 100 ಮೀಟರ್, 200 ಮೀಟರ್ ಹಾಗೂ ಮಿಡ್‌ಡೇ ರಿಲೆ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟದ ಕ್ರೀಡಾ ಕೂಟಕ್ಕೆ ಆಯ್ಕೆಯಾಗಿರುವ ಕು. ವರ್ಷ ವಿ., ಬಿನ್ ಶ್ರೀ ಎನ್.ವಿಜಯ ಕುಮಾರ್, ಮಾಪಕ ಓದುಗ, ಮಲ್ಲಿಕಟ್ಟೆ ಶಾಖೆ, ಮೆಸ್ಕಾಂ., ಮಂಗಳೂರು ಇವರಿಗೆ ಕಂಪೆನಿ ವತಿಯಿಂದ ಸಹಾಯ ಧನವಾಗಿ ₹ 10,000/- ಪಾವತಿಸಲಾಗಿದೆ.

18. ಪಿಂಚಣಿ ಪಾವತಿ ಮತ್ತು ನೇಮಕಾತಿ ಚಟುವಟಿಕೆಗಳು :

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯಲ್ಲಿ ಉದ್ಯೋಗ ಪ್ರಕಟಣೆ ಸಂಖ್ಯೆ: ಪ್ರ.ವ್ಯ(ಆ&ಮಾಸಂಅ)/ ಸ.ಪ್ರ.ವ್ಯ(ಸಿ)/ಲೆ(ಪಿಂ)/2015-16/4477 ದಿನಾಂಕ:08.01.2016 ರಂತೆ ಒಟ್ಟು 441 ವಿವಿಧ ಹುದ್ದೆಗಳಿಗೆ ನೇರ ನೇಮಕಾತಿಯನ್ನು ಮಾಡಿಕೊಳ್ಳಲು ಪ್ರಕಟಣೆಯನ್ನು ನೀಡಲಾಗಿತ್ತು ಹಾಗೂ ನೇರನೇಮಕಾತಿ ಆದೇಶವನ್ನು ಹೊರಡಿಸಲಾಗಿತ್ತು. ಆದರೆ ಕೆಲವು ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ವರದಿ ಮಾಡಿಕೊಳ್ಳದ ಪ್ರಯುಕ್ತ ಖಾಲಿ ಇರುವ ಹುದ್ದೆಗಳನ್ನು ಕಾಯ್ದಿರಿಸಲಾದ ಪಟ್ಟಿಯಲ್ಲಿನ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳಲಾಯಿತು.

ಮುಂದುವರೆದು, ಕವಿಪ್ರನಿನಿ ಉದ್ಯೋಗ ಪ್ರಕಟಣೆ ಸಂಖ್ಯೆ. ಕವಿಪ್ರನಿನಿ/ಬಿ16/ 86393/ 2018-19 ದಿನಾಂಕ 25.02.2019 ರಂತೆ ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳಲ್ಲಿ ವಿವಿಧ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಮೆಸ್ಕಾಂ ಕಂಪನಿಯಲ್ಲಿ 702 ವಿವಿಧ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಉದ್ಯೋಗ ಪ್ರಕಟಣೆ ಸಂಖ್ಯೆ. ಪ್ರ.ವ್ಯ (ಆ&ಮಾಸಂಅ)/ಸ.ಪ್ರ.ವ್ಯ(ಸಿ)/ಲೆ(ಪಿಂ)/ ಸಲೆ(ಸಿ) / 2018-19/4204 ದಿನಾಂಕ 06.03.2019 ರಂತೆ ಮೆಸ್ಕಾಂ ಕಂಪೆನಿಯಲ್ಲಿ ಪೂರ್ಣಕಾಲಿಕ ಕಂಪೆನಿ ಕಾರ್ಯದರ್ಶಿ ಹುದ್ದೆಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಕ.ವಿ.ಪ್ರ.ನಿ.ನಿ ಮತ್ತು ಮವಿಸಕಂಗಳಲ್ಲಿರುವ 'ಸಿ' ಮತ್ತು 'ಡಿ' ವರ್ಗದ ನೌಕರರ ಪಿಂಚಣಿ ಸವಲತ್ತುಗಳನ್ನು ಕಂಪೆನಿಯ ವ್ಯಾಪ್ತಿಯಲ್ಲಿಯೇ ಮಂಜೂರಾತಿ ಮಾಡಿ ಪಿಂಚಣಿ ಸೌಲಭ್ಯಗಳನ್ನು ಅಧಿಕರಿಸಲು ಕ್ರಮಕೈಗೊಂಡ ಹಿನ್ನೆಲೆಯಲ್ಲಿ ಈ ಆರ್ಥಿಕ ವರ್ಷದಲ್ಲಿ ನಿವೃತ್ತಿ / ಮರಣ ಹೊಂದಿದ ನೌಕರರ ಪಿಂಚಣಿ, ಕುಟುಂಬ ಪಿಂಚಣಿ, ನಿವೃತ್ತಿ ವೇತನ ಪರಿವರ್ತನೆ ಹಾಗೂ ಸೇವಾ ಉಪದಾನಗಳನ್ನು ಈ ಕೆಳಗಿನಂತೆ ಮಂಜೂರು ಮಾಡಲಾಗಿರುತ್ತದೆ.

ಒಟ್ಟು ಸ್ವೀಕರಿಸಲಾದ ಪಿಂಚಣಿ ಕಡತದ ಸಂಖ್ಯೆ	ಒಟ್ಟು ಅಧಿಕರಿಸಲಾದ ಪಿಂಚಣಿ ಕಡತದ ಸಂಖ್ಯೆ
143	138

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯ ಅಧಿಕಾರಿ/ಸಿಬ್ಬಂದಿಗಳಿಗೆ ವೈದ್ಯಕೀಯ ಸವಲತ್ತು ನೀಡುವ ಸಂಬಂಧವಾಗಿ ₹ 2,000/- ಕ್ಕಿಂತ ಹೆಚ್ಚಿನ ವೈದ್ಯಕೀಯ ವೆಚ್ಚದ ಹುಂಡಿಗಳ ಮರುಪಾವತಿಯನ್ನು ಕಂಪೆನಿಯ ಕಾರ್ಯಾಲಯದಲ್ಲಿ ಮರುಪಾವತಿಗೆ ಕ್ರಮಕೈಗೊಂಡಿದ್ದು, ಸದರಿ ಆರ್ಥಿಕ ವರ್ಷದಲ್ಲಿ ಸುಮಾರು 1291 ಸಂಖ್ಯೆಯ ವೈದ್ಯಕೀಯ ಹುಂಡಿಗಳಿಗೆ ಸಂಬಂಧಿಸಿದಂತೆ ₹ 193.38 ಲಕ್ಷ ವೈದ್ಯಕೀಯ ವೆಚ್ಚವನ್ನು ಪಾವತಿಸಲು ಅನುಮೋದನೆ ನೀಡಲಾಗಿದೆ.

ಮೆಸ್ಕಾಂ ತನ್ನ ಎಲ್ಲಾ ಅಧಿಕಾರಿ/ನೌಕರರಿಗೆ ಸುರಕ್ಷತೆಯ ಹಾಗೂ ಆರ್ಥಿಕ ಭದ್ರತೆಯನ್ನು ನೀಡುವ ಹಿನ್ನೆಲೆಯಲ್ಲಿ ಗುಂಪು ಅಪಘಾತ ವಿಮೆಯನ್ನು ಕಾರ್ಯರೂಪಕ್ಕೆ ತಂದಿದ್ದು, ಅಪಘಾತ ಹೊಂದಿದ ನೌಕರರ ಅವಲಂಬಿತರಿಗೆ ₹ 5 ಲಕ್ಷ ಪರಿಹಾರ ಮೊತ್ತವನ್ನು ನೀಡಲು ಕಂಪೆನಿ ವತಿಯಿಂದಲೇ ಗುಂಪು ವಿಮೆಯನ್ನು ಮಾಡಲಾಗಿದೆ.

19. 2018–19ನೇ ಸಾಲಿನಲ್ಲಿ ಆದ ವಿದ್ಯುತ್ ಅಪಘಾತಗಳ ವಿವರ:–

ವಿದ್ಯುತ್ ಅಪಘಾತಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ. ಸಂ.	ವೃತ್ತ	ವಿಭಾಗದ ಹೆಸರು	ಇಲಾಖೆ		ಇಲಾಖೇತರ		ಪ್ರಾಣಿಗಳು	ಒಟ್ಟು
			ಮಾರಣಾಂತಿಕ	ಮಾರಣಾಂತಿಕವಲ್ಲದ	ಮಾರಣಾಂತಿಕ	ಮಾರಣಾಂತಿಕವಲ್ಲದ		
1	ಮಂಗಳೂರು	ಮಂಗಳೂರು	-	–	1	-	1	2
2	ವೃತ್ತ	ಕಾವೂರು	-	1	4	9	1	15
3		ಬಂಟ್ವಾಳ	-	2	4	2	5	13
4		ಪುತ್ತೂರು	-	-	8	2	2	12
		ವೃತ್ತದ ಒಟ್ಟು	**-**	**3**	**17**	**13**	**9**	**42**
1	ಉಡುಪಿ ವೃತ್ತ	ಉಡುಪಿ	-	1	6	1	6	14
2		ಕುಂದಾಪುರ	-	-	-	1	3	4
		ವೃತ್ತದ ಒಟ್ಟು	**-**	**1**	**6**	**2**	**9**	**18**
1	ಶಿವಮೊಗ್ಗ ವೃತ್ತ	ಶಿವಮೊಗ್ಗ	-	-	8	3	26	37
2		ಭದ್ರಾವತಿ	-	-	5	-	4	9
3		ಸಾಗರ	1	1	5	2	25	34
4		ಶಿಕಾರಿಪುರ	-	1	4	4	16	25
		ವೃತ್ತದ ಒಟ್ಟು	**1**	**2**	**22**	**9**	**71**	**105**
1	ಚಿಕ್ಕಮಗಳೂರು	ಕಡೂರು	–	2	13	5	15	35
2	ವೃತ್ತ	ಚಿಕ್ಕಮಗಳೂರು	-	4	6	4	14	28
3		ಕೊಪ್ಪ	-	4	4	2	9	19
		ವೃತ್ತದ ಒಟ್ಟು	**-**	**10**	**23**	**11**	**38**	**82**
		ಒಟ್ಟು	**1**	**16**	**68**	**35**	**127**	**247**

20. ಸಾರ್ವಜನಿಕ ಸಂಪರ್ಕ ಹಾಗೂ ಸಂವಹನ ಕಾರ್ಯ ಚಟುವಟಿಕೆಗಳು: 2018–19

ಕಂಪೆನಿಯ ಸಾರ್ವಜನಿಕ ಸಂಪರ್ಕ ಮತ್ತು ಸಂವಹನ ಶಾಖೆಯ ಮೂಲಕ ಸಾರ್ವಜನಿಕ ಬಾಂಧವ್ಯ ಮತ್ತು ಸಂಸ್ಥೆಯ ಶಿಷ್ಟಾಚಾರ ಪಾಲನೆಯ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಕಾರ್ಪೊರೇಟ್ ಕಛೇರಿಯಲ್ಲಿ ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ ಮತ್ತು ಸಂವಹನ) ಇವರು ಸದರಿ ಶಾಖೆಯ ಮುಖ್ಯಸ್ಥರಾಗಿದ್ದು, ಇವರು ವ್ಯವಸ್ಥಾಪಕ ನಿರ್ದೇಶಕರಿಗೆ ನೇರವಾಗಿ ವರದಿ ಮಾಡುತ್ತಾರೆ. ಸಮಾಜ ಹಾಗೂ ಸಾರ್ವಜನಿಕರಲ್ಲಿ ಕಂಪೆನಿಯನ್ನು ಪ್ರತಿನಿಧಿಸುವುದು ಹಾಗೂ ಬಾಂಧವ್ಯ ನಿರ್ವಹಿಸುವುದು ಈ ಶಾಖೆಯ ಪ್ರಮುಖ ಕೆಲಸವಾಗಿರುತ್ತದೆ. ಇದರೊಂದಿಗೆ ನಿರಂತರವಾಗಿ ಪತ್ರಿಕೆಗಳು ಹಾಗೂ ಮಾಧ್ಯಮದವರೊಂದಿಗೆ ಸೌಹಾರ್ದಯುತ ಸಂಬಂಧವನ್ನು ನಿರ್ವಹಿಸಬೇಕಾಗಿರುತ್ತದೆ. ಕಂಪೆನಿಯ ಸುದ್ದಿಗಳನ್ನು ಹಾಗೂ ಟೆಂಡರ್ ಮುಂತಾದ ಸಾರ್ವಜನಿಕ ಪ್ರಕಟಣೆಗಳನ್ನು ನೀಡುವುದು ಮತ್ತು ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದು ಈ ಶಾಖೆಯ ಪ್ರತಿನಿತ್ಯದ ಕೆಲಸಗಳಾಗಿವೆ. ಅಲ್ಲದೇ ಕಂಪೆನಿ ಹಾಗೂ ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರಮುಖ ಸುದ್ದಿಗಳನ್ನು ಪ್ರತಿದಿನವೂ ಆಡಳಿತದ ಮತ್ತು ಸಂಬಂಧಪಟ್ಟವರ ಗಮನಕ್ಕೆ ಮತ್ತು ಮಾಹಿತಿಗೆ ಈ ಶಾಖೆಯು ತರುತ್ತದೆ.

2018–19 ನೇ ಸಾಲಿನಲ್ಲಿ ಸಾರ್ವಜನಿಕ ಸಂಪರ್ಕ ಹಾಗೂ ಸಂವಹನ ಕಾರ್ಯಚಟುವಟಿಕೆಗಳ ಮುಖ್ಯಾಂಶಗಳು:

ಅ. ಜನ ಸಂಪರ್ಕ ಸಭೆಗಳು:

ಸಾರ್ವಜನಿಕರು ಹಾಗೂ ಗ್ರಾಹಕರೊಂದಿಗೆ ಮುಖಾಮುಖಿ ವಿಚಾರ ವಿನಿಮಯ ಮಾಡುವ ಕಾರ್ಯಕ್ರಮ ಇದಾಗಿರುತ್ತದೆ. ಪ್ರಸ್ತುತ ಆಯಾಯ ಕಾರ್ಯ ಮತ್ತು ಪಾಲನಾ ವೃತ್ತಗಳ ಅಧೀಕ್ಷಕ ಇಂಜಿನಿಯರ್‌ಗಳು ಕಾರ್ಯಕ್ರಮ ವೇಳಾಪಟ್ಟಿಯನ್ನು ಮುಂಚಿತವಾಗಿ ಪ್ರಮುಖ ದಿನಪತ್ರಿಕೆಗಳಲ್ಲಿ ನೀಡಿ ಉಪವಿಭಾಗ ಕಛೇರಿಗಳಲ್ಲಿ ಕಾಲಕಾಲಕ್ಕೆ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಇಂತಹ ಸಭೆಗಳಲ್ಲಿ ಗ್ರಾಹಕರ ದೂರುಗಳನ್ನು ಕಂಪೆನಿಯ ಸ್ಥಳೀಯ ಅಧಿಕಾರಿಗಳ ಸಮಕ್ಷಮದಲ್ಲಿ ನಿವಾರಿಸಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಪ್ರಮುಖ ದಿನಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಜನಸಂಪರ್ಕ ಸಭೆಗಳನ್ನು ನಡೆಸಲಾಗಿರುತ್ತದೆ. ಈ ಕಾರ್ಯಕ್ರಮದಲ್ಲಿ ವಿದ್ಯುಚ್ಛಕ್ತಿ ಸರಬರಾಜಿಗೆ ಸಂಬಂಧಿಸಿದ ಸಾರ್ವಜನಿಕ ಸಮಸ್ಯೆಗಳು, ಗ್ರಾಹಕರ ತೊಂದರೆಗಳು ಮತ್ತು ದೂರುಗಳನ್ನು ಬಗೆಹರಿಸಲಾಗಿದೆ. ಸಾರ್ವಜನಿಕರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಮಾಹಿತಿಯನ್ನು ಕೂಡ ನೀಡಲಾಗಿದೆ.

ಆ. **ಗ್ರಾ.ಪಂ, ತಾ.ಪಂ. ಮತ್ತು ಜಿ.ಪಂ. ಸಭೆಗಳಲ್ಲಿ ಭಾಗವಹಿಸುವಿಕೆ:**

ಸಂಬಂಧಪಟ್ಟ ಕಾ&ಪಾ ಶಾಖಾಧಿಕಾರಿಗಳು ಸ್ಥಳೀಯ ಗ್ರಾಮ ಪಂಚಾಯತ್ ಸಭೆಗಳಲ್ಲೂ ಕಾ & ಪಾ ಉಪವಿಭಾಗಾಧಿಕಾರಿಗಳು ಸ್ಥಳೀಯ ತಾಲೂಕು ಪಂಚಾಯತ್ ಸಭೆಗಳಲ್ಲೂ ಮತ್ತು ಕಾ & ಪಾ ವಿಭಾಗಾಧಿಕಾರಿಗಳು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಸಭೆಗಳಲ್ಲೂ ಭಾಗವಹಿಸುತ್ತಾರೆ. ಈ ಎಲ್ಲಾ ಸಭೆಗಳಲ್ಲೂ ಕಂಪೆನಿಯ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯ ಮತ್ತು ಪಾಲನಾ ಕೆಲಸಗಳ ಬಗ್ಗೆ ಹಾಗೂ ಬಂಡವಾಳ ಕಾಮಗಾರಿಗಳ ಕುರಿತು ವಿವರ ನೀಡುವರಲ್ಲದೆ, ಗ್ರಾಹಕರುಗಳ ದೂರು ಮತ್ತು ಸಮಸ್ಯೆಗಳಿದ್ದಲ್ಲಿ ಸೂಕ್ತ ಕ್ರಮ ಕೈಗೊಂಡು ಪರಿಹರಿಸುತ್ತಾರೆ.

ಇ. **ಗ್ರಾಹಕ ಶಿಕ್ಷಣ ಕಾರ್ಯಕ್ರಮಗಳು:**

ಗ್ರಾಹಕ ಶಿಕ್ಷಣ ಕಾರ್ಯಕ್ರಮಗಳಡಿಯಲ್ಲಿ ವಿದ್ಯುಚ್ಛಕ್ತಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇರುವ ಕಾಯಿದೆ ಕಾನೂನು, ಗ್ರಾಹಕರ ಹಕ್ಕು ಮತ್ತು ಜವಾಬ್ದಾರಿ ಕುರಿತಂತೆ ಮಾಹಿತಿಗಳನ್ನು ಆಗಿಂದಾಗ್ಯೆ ನಡೆಯುವ ಕಾರ್ಯಕ್ರಮಗಳ ಮೂಲಕ ಗ್ರಾಹಕರಿಗೆ ತಲುಪಿಸಲಾಗುವುದು. ವಿದ್ಯುತ್ ಉಳಿತಾಯ, ಬಿಲ್ಲು ಪಾವತಿ ವ್ಯವಸ್ಥೆ ಮತ್ತು ಸುರಕ್ಷತೆ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಕರಪತ್ರಗಳ ಮೂಲಕ ವ್ಯಾಪಕ ಪ್ರಚಾರ ನೀಡಲಾಗಿದೆ. ಅಲ್ಲದೇ ಮೆಸ್ಕಾಂ ವ್ಯಾಪ್ತಿಯ 12 ಕೆಎಸ್ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ಮತ್ತು ಬಾನುಲಿ ಕೇಂದ್ರಗಳಲ್ಲಿ ವಿದ್ಯುತ್ ಸುರಕ್ಷತೆ, ವಿದ್ಯುತ್ ಉಳಿತಾಯ, ವಿದ್ಯುತ್ ಶುಲ್ಕ ಪಾವತಿಸುವ ವಿಧಾನಗಳ ಬಗ್ಗೆ ಆಡಿಯೋ ಸಂದೇಶಗಳನ್ನು ಬಿತ್ತರಿಸಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಗ್ರಾಹಕ ಸ್ನೇಹಿ ಕಾರ್ಯಕ್ರಮಗಳು :

- ಪ್ರಮುಖ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ 24 ತಾಸು ಗ್ರಾಹಕ ಸೇವಾ ಕೇಂದ್ರಗಳನ್ನು ತೆರೆದಿರುವುದು.
- ಜಿಲ್ಲಾ ಕೇಂದ್ರಗಳಲ್ಲಿ, ಅಧೀಕ್ಷಕ ಇಂಜಿನಿಯರ್ (ವಿ) ರವರ ನೇತೃತ್ವದಲ್ಲಿ "ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ"ಗಳ ರಚನೆ. ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ಮಾಹಿತಿಯನ್ನು ಹಾಗೂ ಇದರ ಸದಸ್ಯರ ವಿವರವನ್ನು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತದೆ
- ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಜಾರಿಗೆ ತಂದಿರುವುದು.
- ದೈನಂದಿನ ಕಾರ್ಯ ಚಟುವಟಿಕೆಗಳಿಗಾಗಿ ಮಾಹಿತಿ ತಂತ್ರಜ್ಞಾನದ ಅಳವಡಿಕೆ ಮತ್ತು ಎಲ್ಲಾ ಕಂದಾಯ ಉಪವಿಭಾಗಗಳ ಗಣಕೀಕರಣ.
- ವಿದ್ಯುತ್ ಬಿಲ್ಲುಗಳ ಪಾವತಿಗಾಗಿ ಇಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಮ್‌ನ ವ್ಯವಸ್ಥೆ ಜಾರಿಗೊಳಿಸಿರುವುದು.
- ವಿದ್ಯುತ್ ಬಿಲ್ ಪಾವತಿಗಾಗಿ ಉಪವಿಭಾಗೀಯ ಕಛೇರಿ ಆವರಣದಲ್ಲಿ ಮತ್ತು ಪ್ರಮುಖ ಸ್ಥಳಗಳಲ್ಲಿ A.T.P ಯಂತ್ರಗಳ ಸ್ಥಾಪನೆ.
- ಅಂಚೆ ಕಛೇರಿಗಳ ಮೂಲಕ ವಿದ್ಯುತ್ ಬಿಲ್ ಪಾವತಿಗೆ ವ್ಯವಸ್ಥೆ.
- ಸರ್ಕಾರದಿಂದ ಮಾನ್ಯತೆ ಪಡೆದ ಬಹುವಿಧ ಸೇವೆಗಳ ಕೇಂದ್ರ "ಮಂಗಳೂರು ಒನ್" ಮತ್ತು "ಶಿವಮೊಗ್ಗ ಒನ್" ಕೇಂದ್ರಗಳ ಮೂಲಕ ವಿದ್ಯುತ್ ಬಿಲ್ ಪಾವತಿಗೆ ವ್ಯವಸ್ಥೆ.
- ಕರ್ನಾಟಕ ಮೊಬೈಲ್ ಒನ್ ಆಪ್, ಆನ್‌ಲೈನ್ ಮೂಲಕ (Online), ಪೇಟಿಎಂ (Paytm) ಮತ್ತು ಬಿಬಿಪಿಎಸ್ (BBPS) ಮೂಲಕವೂ ವಿದ್ಯುತ್ ಬಿಲ್ಲುಗಳನ್ನು ಪಾವತಿಸುವ ವ್ಯವಸ್ಥೆ.
- ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ವಿದ್ಯುತ್ ಸುರಕ್ಷತೆ, ವಿದ್ಯುತ್ ಉಳಿತಾಯ ಮತ್ತು ಪಾವತಿ ವ್ಯವಸ್ಥೆ ವಿಧಾನಗಳ ಮಾಹಿತಿಗಳನ್ನೊಳಗೊಂಡ ವಿವಿಧ ಕರಪತ್ರಗಳನ್ನು ಮುದ್ರಿಸಿ ಉಪವಿಭಾಗ ವ್ಯಾಪ್ತಿಯಲ್ಲಿ ಹಂಚಿಕೆ ಮಾಡುವ ವ್ಯವಸ್ಥೆ.
- 24x7 ಕೇಂದ್ರೀಕೃತ ಗ್ರಾಹಕರ ಸೇವಾಕೇಂದ್ರ (1912) ದ ಸ್ಥಾಪನೆ ಮೂಲಕ ಮೆಸ್ಕಾಂ ವ್ಯಾಪ್ತಿಯಲ್ಲಿರುವ ಯಾವುದೇ ಗ್ರಾಹಕರು ವಿದ್ಯುತ್ ಸಂಬಂಧಿತ ದೂರುಗಳು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡುವ ಮೂಲಕ ಈ ಸೌಲಭ್ಯದ ಸದುಪಯೋಗ ಮಾಡಿಕೊಳ್ಳಬಹುದಾಗಿದೆ.

ಇತರ ಕಾರ್ಯಕ್ರಮಗಳು :

- ಮೆಸ್ಕಾಂನಲ್ಲಿ 2019 ಜನವರಿ 21 ರಿಂದ 27 ರ ಅವಧಿಯನ್ನು 'ಸುರಕ್ಷತಾ ಸಪ್ತಾಹ'ವಾಗಿ ಆಚರಿಸಲಾಯಿತು. ಕಂಪೆನಿ ವ್ಯಾಪ್ತಿಯನ್ನೊಳಗೊಂಡ ಮಂಗಳೂರು, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ 60 ಉಪವಿಭಾಗ ಕೇಂದ್ರಗಳಲ್ಲಿ ಮತ್ತು 234 ಶಾಖಾ ಕಛೇರಿಗಳಲ್ಲಿ ಸುರಕ್ಷತಾ ಸಪ್ತಾಹ ಆಚರಿಸಲು ಕ್ರಮ ಕೈಗೊಳ್ಳಲಾಗಿದೆ. ಕಾರ್ಯಕ್ರಮವನ್ನು ಮಣ್ಣಗುಡ್ಡೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಉದ್ಘಾಟಿಸಿದರು. ವಿದ್ಯುತ್ ಸುರಕ್ಷತೆಯ ಬಗ್ಗೆ ಮಾಹಿತಿಯನ್ನು ಹಾಗೂ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಮೂಲಕ ಮೆಸ್ಕಾಂ ವಿಭಾಗ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರಿಗೆ ಮತ್ತು ಶಾಲಾ ಮಕ್ಕಳಿಗೆ ವಿದ್ಯುತ್ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಾಯಿತು.
- ವಿವಿಧ ವೇದಿಕೆಗಳಲ್ಲಿ ಆಯೋಜಿಸಲಾದ ಕಾರ್ಯಕ್ರಮಗಳಲ್ಲಿ ಹಿರಿಯ ಅಧಿಕಾರಿಗಳು ಅತಿಥಿಗಳಾಗಿ ಭಾಗವಹಿಸಿದ್ದರು. ಇದರಿಂದಾಗಿ ಉತ್ತಮ ಸಾರ್ವಜನಿಕ ಸಂಬಂಧ ಬೆಳೆಸಲು ಸಹಕಾರಿಯಾಗಿದೆ.

- ದಿವ್ಯಾಂಗರಿಗಾಗಿ ಮತ್ತು ಅವರ ಪೋಷಕರಿಗಾಗಿ ಇರುವ ಸೇವಾ ಭಾರತಿ ಸಂಸ್ಥೆಯ 'ಆಶಾ ಜ್ಯೋತಿ' ಘಟಕದವರು ಆಯೋಜಿಸಿದ ಕಾರ್ಯಕ್ರಮಕ್ಕೆ ಕಂಪನಿ ವತಿಯಿಂದ ದೇಣಿಗೆಯನ್ನು ನೀಡಿ ಕಾರ್ಯಕ್ರಮದಲ್ಲಿ ಭಾಗವಹಿಸಲಾಗಿದೆ.
- ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ರಾಮಕೃಷ್ಣ ಮಿಷನ್ ವತಿಯಿಂದ ಆಯೋಜಿಸಿದ 'ಮಹಿಳಾ ಸಬಲೀಕರಣ' ಕಾರ್ಯಕ್ರಮ ಮತ್ತು 'ಇಂಪಾಕ್ಟ್ ಆಂಡ್ ಕಾನ್ಸಿಕ್ವೆನ್ಸಸ್ ಆಫ್ ಜೆಂಡರ್ ಸ್ಟಿರಿಯೋ ಟೈಪ್ ಆನ್ ಕ್ಯಾರಿಯರ್ಸ್ ಆಫ್ ವುಮನ್' ಎಂಬ ಕಾರ್ಯಕ್ರಮದಲ್ಲಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಭಾಗವಹಿಸಿರುತ್ತಾರೆ. ಇದರಿಂದಾಗಿ ಉತ್ತಮ ಸಾರ್ವಜನಿಕ ಸಂಪರ್ಕ ಏರ್ಪಟ್ಟಿತ್ತು.

ಆಂತರಿಕ ಸಂವಹನ ಚಟುವಟಿಕೆಗಳು :

- ಕಂಪೆನಿಯಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ.
- ಗಣರಾಜ್ಯೋತ್ಸವದ ದಿನದಂದು ಉತ್ತಮವಾಗಿ ಕಾರ್ಯ ನಿರ್ವಹಿಸಿದ ಶಾಖಾ ಕಛೇರಿ, ಉಪವಿಭಾಗ ಮತ್ತು ವಿಭಾಗೀಯ ಕಛೇರಿಗಳನ್ನು ಗುರುತಿಸಿ ಸನ್ಮಾನಿಸಲಾಯಿತು.
- ಆಟೋಟ ಸ್ಪರ್ದೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ನೌಕರರನ್ನು ಕೂಡಾ ಪ್ರೋತ್ಸಾಹಿಸಿ ನಗದು ಬಹುಮಾನ ನೀಡಲಾಯಿತು.
- ಎಂ.ಬಿ.ಬಿ.ಪಿ ತರಬೇತಿ ಕಾರ್ಯಕ್ರಮದಲ್ಲಿ ಉತ್ತಮವಾಗಿ ಬಾಗವಹಿಸಿದ ನೌಕರರನ್ನು ಕೂಡಾ ಗುರುತಿಸಿ ಗೌರವಿಸಲಾಯಿತು.
- ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯು ನೌಕರರಲ್ಲಿ ಇನ್ನಷ್ಟು ಸಾಧನೆ ಮಾಡುವ ಬಗ್ಗೆ ಪ್ರೇರೇಪಿಸಿರುತ್ತದೆ.
- ಕಂಪೆನಿಯ ಎಲ್ಲ ಅಧಿಕಾರಿ/ನೌಕರರಿಗೆ ಹೊಸ ವರ್ಷದ ಕಂಪೆನಿಯ ಕ್ಯಾಲೆಂಡರ್ ಮತ್ತು ಡೈರಿಗಳನ್ನು ಮುದ್ರಿಸಿ ಅಧಿಕಾರಿ ಮತ್ತು ನೌಕರರಿಗೆ ಹಾಗೂ ಸಾರ್ವಜನಿಕ ರಂಗದ ಪ್ರಮುಖರಿಗೆ, ಮಾಧ್ಯಮಗಳಿಗೆ ನೀಡಲಾಯಿತು. ಇದರಿಂದ ಕಂಪೆನಿ ಮತ್ತು ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕ ವಲಯದಲ್ಲಿ ಉತ್ತಮ ಬಾಂಧವ್ಯವನ್ನು ಕಾಯ್ದುಕೊಳ್ಳುವುದು ಸಾಧ್ಯವಾಯಿತು.
- ಕಂಪೆನಿಯಿಂದ ಆರ್ಥಿಕ ವರ್ಷದಲ್ಲಿ ನಿವೃತ್ತರಾದ ಎಲ್ಲಾ ಅಧಿಕಾರಿ/ನೌಕರರಿಗೆ ಬೆಳ್ಳಿ ಸ್ಮರಣಿಕೆ ನೀಡಿ ಅಭಿನಂದಿಸಿ ಗೌರವಿಸುವ ಕಾರ್ಯಕ್ರಮವು ಕಂಪೆನಿಯಲ್ಲಿ ಜಾರಿಯಲ್ಲಿದೆ. ವರದಿ ವರ್ಷದಲ್ಲಿ 81 ನಿವೃತ್ತರನ್ನು ಅವರ ಸಂಗಾತಿಗಳೊಂದಿಗೆ ಸ್ಮರಣಿಕೆ ನೀಡಿ ಸನ್ಮಾನಿಸಲಾಗಿದೆ. ಈ ಕಾರ್ಯಕ್ರಮ ಸಾರ್ವಜನಿಕ ಉದ್ಯಮ ವಲಯದಲ್ಲಿ ಪ್ರಶಂಸೆಗೆ ಪಾತ್ರವಾಗಿದೆ.
- ಮಂಗಳೂರು ನಗರ ಪ್ರಾಧಿಕಾರದ ಸಹಯೋಗದಲ್ಲಿ ಮಾಲಿನ್ಯ ಮತ್ತು ನಿಯಂತ್ರಣದ ಬಗ್ಗೆ ಮಾಹಿತಿ ಕಾರ್ಯಗಾರವನ್ನು ಆಯೋಜಿಸಲಾಗಿರುತ್ತದೆ. ಆಂಟಿ ಪೊಲ್ಯೂಷನ್ ಡ್ರೈವ್ ಫೌಂಡೇಷನ್‌ನ ಸದಸ್ಯರು ಪಾತ್ರಾಭಿನಯದ ಮೂಲಕ ಮಾಲಿನ್ಯ ನಿಯಂತ್ರಣದ ಬಗ್ಗೆ ಕಾರ್ಯಕ್ರಮವನ್ನು ನಡೆಸಿದರು.
- ಕಂಪೆನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರು ಹೆಚ್ಚು ಕ್ಷಮತೆಯಿಂದ ಮತ್ತು ಮನೋಲ್ಲಾಸದಿಂದ ಕರ್ತವ್ಯದಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ಹಾಗೂ ನೌಕರರ ಕಲ್ಯಾಣ ಕಾರ್ಯಕ್ರಮಕ್ಕೆ ಪೂರಕವಾಗಿ ಆರೋಗ್ಯ, ವ್ಯಕ್ತಿತ್ವ ವಿಕಸನ ಮತ್ತು ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಿಯತಕಾಲಿಕವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ರಕ್ತದಾನ ಮಾಹಿತಿ ಮತ್ತು ರಕ್ತದಾನ ಶಿಬಿರ ಹಾಗೂ ಅಂಗಾಂಗ ದಾನ ಮತ್ತು ಕಸಿ ಕುರಿತ ಮಾಹಿತಿ ಶಿಬಿರ. ಮಹಿಳಾ ಆರೋಗ್ಯ ಕುರಿತು ಮಾಹಿತಿ, ಮಧುಮೇಹದ ಕುರಿತು ಜಾಗೃತಿ ಶಿಬಿರ, ಕಣ್ಣಿನ ಆರೋಗ್ಯ ಮಾಹಿತಿ ಮತ್ತು ಕಣ್ಣಿನ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಗಳು ಸಿಬ್ಬಂದಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಿಕೊಟ್ಟಿತು.
- ಮಂಗಳೂರು, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲಾ ಕೇಂದ್ರಗಳಲ್ಲಿ ಕಂಪೆನಿಯ ಮಹಿಳಾ ಸಿಬ್ಬಂದಿಗಳನ್ನು ಕೇಂದ್ರವಾಗಿರಿಸಿಕೊಂಡು ಮಹಿಳಾ ದಿನಾಚರಣೆಯನ್ನು ದಿನಾಂಕ 08.03.2019 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಮಾಜದ ಗಣ್ಯ ಮತ್ತು ವಿಶೇಷ ವಿಷಯತಜ್ಞರನ್ನು ಆಹ್ವಾನಿಸಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಅಲ್ಲದೆ ಕಂಪೆನಿಯ ಮಹಿಳಾ ಸಿಬ್ಬಂದಿಗಳಿಗೆ ಅನುಕೂಲವಾಗುವ ಮಾಹಿತಿ ಕಾರ್ಯಕ್ರಮ ಹಾಗೂ ಮನರಂಜನೆಗಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

21. ಕಂಪೆನಿಯ ಆಂತರಿಕ ಲೆಕ್ಕ ಪರಿಶೋಧನೆ

ಕಂಪೆನಿಯ ಆಂತರಿಕ ಲೆಕ್ಕ ಪರಿಶೋಧನಾ ಶಾಖೆಯು ಆರ್ಥಿಕ ಸಲಹೆಗಾರರು (ಆಂ.ಪ) ಇವರ ಮುಖ್ಯಸ್ಥಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದೆ ಮತ್ತು ನೇರವಾಗಿ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕರಿಗೆ ವರದಿ ಮಾಡುವುದಾಗಿರುತ್ತದೆ. ಕಂದಾಯ ಲೆಕ್ಕಗಳ ಪರಿಶೀಲನೆ, ಪಾವತಿ ದಾಖಲೆಗಳ ಪರಿಶೀಲನೆ, ನಗದು ವ್ಯವಹಾರಗಳ ಪರಿಶೀಲನೆ, ಉಗ್ರಾಣ ಪರಿಶೀಲನೆ, ವಿದ್ಯುತ್ ಖರೀದಿ ಬಿಲ್ಲುಗಳ ಪರಿಶೀಲನೆ, ವಿದ್ಯುತ್ ಖರೀದಿ ಕರಾರು ಪತ್ರಗಳ ಪರಿಶೀಲನೆ ಮತ್ತು ದಿನನಿತ್ಯದ ಪಾವತಿ ಪೂರ್ವ ಮತ್ತು ನಂತರದ ಹುಂಡಿಗಳ ಲೆಕ್ಕ ಪರಿಶೋಧನೆ ಇತ್ಯಾದಿ. ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ವಿಶೇಷ ತನಿಖೆಗಳನ್ನು ಸ್ವತಂತ್ರವಾಗಿ ಆಂತರಿಕ ಲೆಕ್ಕ ಪರಿಶೋಧನಾ ಅಧಿಕಾರಿ/ಸಿಬ್ಬಂದಿಗಳು ನಿರಂತರವಾಗಿ ನಿರ್ವಹಿಸಿರುತ್ತಾರೆ. ವಿಭಾಗ ಕಛೇರಿಗಳಲ್ಲಿ ಮತ್ತು ಕಾರ್ಪೊರೇಟ್ ಕಛೇರಿಯಲ್ಲಿ ಟೆಂಡರ್ ದಾಖಲೆಗಳು, ತಾಂತ್ರಿಕ/ದರ ಪಟ್ಟಿಗಳು/ಲೆಟರ್ ಆಫ್ ಇಂಟೆಂಟ್/ ಕಾರ್ಯಾದೇಶಗಳ ಪರಿಶೀಲನೆ ಮತ್ತು ಖರೀದಿ ಆದೇಶಗಳಿಗೆ ಸಂಬಂಧಿಸಿದ ಬಜೆಟ್ ದೃಢೀಕರಣ ನೀಡುವ ಮೊದಲು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗುತ್ತಿದೆ.

ಮ.ವಿ.ಸ.ಕಂ ನಲ್ಲಿ ಆಂತರಿಕ ಪರಿಶೋಧನಾ ಶಾಖೆಯಲ್ಲಿ ಮಂಜೂರಾದ ಹುದ್ದೆಗಳ ವಿವರ ಈ ಕೆಳಗಿನಂತಿವೆ.

ಹೆಸರು ಮತ್ತು ವಿಭಾಗ	ನಿಯಂತ್ರಣಾಧಿಕಾರಿ			ಲೆಕ್ಕಾಧಿಕಾರಿ			ಸಹಾಯಕ ಲೆಕ್ಕಾಧಿಕಾರಿ			ಹಿರಿಯ ಸಹಾಯಕ			ಸಹಾಯಕ			ಒಟ್ಟು		
	S	W	V	S	W	V	S	W	V	S	W	V	S	W	V	S	W	V
ಕಾರ್ಪೊರೇಟ್ ಕಛೇರಿ	1	1	0	1	1	0	1	1	0	1	0	1	1	0	1	5	3	2
ಮಂಗಳೂರು-1	-	-	-	1	1	0	1	0	1	2	2	0	1	0	1	5	3	2
ಮಂಗಳೂರು-2	-	-	-	1	1	0	1	0	1	2	1	1	1	1	0	5	3	2
ಬಂಟ್ವಾಳ	-	-	-	1	0	1	1	0	1	1	1	0	1	0	1	4	2	2
ಪುತ್ತೂರು	-	-	-	1	0	1	1	1	0	3	1	2	1	0	1	6	2	4
ಉಡುಪಿ	-	-	-	1	1	0	1	1	0	2	1	1	0	0	0	4	3	1
ಕುಂದಾಪುರ	-	-	-	1	0	1	1	0	1	1	0	1	0	0	0	3	0	3
ಶಿವಮೊಗ್ಗ	-	-	-	1	1	0	1	1	0	3	3	0	1	1	0	6	6	0
ಸಾಗರ	-	-	-	1	1	0	1	1	0	2	2	0	0	0	0	4	4	0
ಭದ್ರಾವತಿ	-	-	-	1	1	0	1	0	1	1	1	0	0	0	0	3	2	1
ಶಿಕಾರಿಪುರ	-	-	-	1	1	0	1	0	1	2	2	0	0	0	0	4	3	1
ಚಿಕ್ಕಮಗಳೂರು	-	-	-	1	1	0	2	0	2	3	2	1	0	0	0	6	3	3
ಕಡೂರು	-	-	-	1	1	0	1	0	1	1	1	0	0	0	0	3	2	1
ಕೊಪ್ಪ	-	-	-	1	1	0	1	0	1	2	0	2	1	0	1	5	1	4
ಒಟ್ಟು	**1**	**1**	**0**	**14**	**11**	**3**	**15**	**5**	**10**	**26**	**17**	**9**	**7**	**2**	**5**	**63**	**37**	**26**

ಉಪವಿಭಾಗಗಳಲ್ಲಿ ಹಾಗೂ ಕಂದಾಯ ಶಾಖೆಗಳಲ್ಲಿ ನಿರ್ವಹಿಸುತ್ತಿರುವ ಗ್ರಾಹಕರ ಕಂದಾಯ ಲೆಡ್ಜರುಗಳನ್ನು ಕಾರ್ಯಯೋಜನೆಯ ಪ್ರಕಾರ ವಿಭಾಗಗಳ ಸಹಾಯಕ ಲೆಕ್ಕಾಧಿಕಾರಿ (ಆಂ.ಪ) ಮತ್ತು ಹಿರಿಯ ಸಹಾಯಕರು (ಆಂ.ಪ) ರವರುಗಳು ಪರಿಶೀಲಿಸುತ್ತಾರೆ. ಅವಶ್ಯಕತೆ ಹಾಗೂ ಲಭ್ಯತೆಗನುಗುಣವಾಗಿ ನಿವೃತ್ತ ಹಿರಿಯ ಸಹಾಯಕರುಗಳ ಸೇವೆಯನ್ನು ಈ ಸಾಲಿನಲ್ಲಿ ಎಲ್‌ಟಿ-2 ಮತ್ತು ಎಲ್‌ಟಿ -3 ಜಕಾತಿಯ ಕಂದಾಯ ಲೆಕ್ಕಗಳನ್ನು ಪರಿಶೀಲಿಸಲು ಗುತ್ತಿಗೆ ಆಧಾರದಲ್ಲಿ ಪಡೆಯಲಾಗಿರುತ್ತದೆ. ಸಿಬ್ಬಂದಿಗಳ ಕೊರತೆಯಿಂದಾಗಿ, ಆಂತರಿಕ ಪರಿಶೋಧನೆಗಾಗಿ ಬಿ.ಕಾಂ. ಪದವಿ ಹೊಂದಿರುವ 10 ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದಲ್ಲಿ ಏಜನ್ಸಿಯವರ ಮೂಲಕ ಮಂಗಳೂರು-1, ಮಂಗಳೂರು-2, ಪುತ್ತೂರು, ಬಂಟ್ವಾಳ, ಕುಂದಾಪುರ, ಭದ್ರಾವತಿ, ಶಿಕಾರಿಪುರ, ಚಿಕ್ಕಮಗಳೂರು, ಕಡೂರು ಮತ್ತು ಕೊಪ್ಪ ವಿಭಾಗಗಳಿಗೆ ತಲಾ ಒಂದರಂತೆ ಪಡೆಯಲಾಗಿದ್ದು ಇವರು ಶಕ್ತಿ ಸ್ಥಾವರ ಮತ್ತು ಜಕಾತಿ ಎಲ್.ಟಿ-2, ಎಲ್.ಟಿ-3 ಸ್ಥಾವರಗಳ ಕಂದಾಯ ಲೆಕ್ಕ ಪರಿಶೋಧನೆ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ.

ಲೆಕ್ಕ ಪರಿಶೋಧನಾ ಕಾರ್ಯಗಳನ್ನು ಅನುಮೋದಿತ ಕಾರ್ಯಯೋಜನೆಯಂತೆ ನಿರಂತರವಾಗಿ ನಿರ್ವಹಿಸಲಾಗುತ್ತದೆ. ಆಂತರಿಕ ಪರಿಶೋಧನೆಯ ಬಗ್ಗೆ ಲೆಕ್ಕಾಧಿಕಾರಿ (ಆಂತರಿಕ ಪರಿಶೋಧನೆ) ಇವರಿಂದ ಪಡೆದ ಮಾಹಿತಿಯ ಆಧಾರದಲ್ಲಿ ಒಟ್ಟಾರೆ ವರದಿಯನ್ನು ಪ್ರತಿ ತಿಂಗಳು ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಲಾಗುತ್ತದೆ. ಆಂತರಿಕ ಪರಿಶೋಧನೆಯ ಮೇಲಿನ ಹಿಡಿತ ಮತ್ತು ದಕ್ಷತೆಯನ್ನು ಸಾಧಿಸುವ ಸಲುವಾಗಿ ಎಲ್ಲಾ ವಿಭಾಗಗಳ ಲೆಕ್ಕಾಧಿಕಾರಿ (ಆಂತರಿಕ ಪರಿಶೋಧನೆ) ಯವರನ್ನು ಒಳಗೊಂಡಂತೆ ತ್ರೈಮಾಸಿಕ ಸಭೆಗಳನ್ನು ನಡೆಸಲಾಗುತ್ತದೆ.

22. ಜಾಗೃತದಳದ ಕಾರ್ಯಚಟುವಟಿಕೆಗಳು :

1. ವಿದ್ಯುಚ್ಛಕ್ತಿ ಕಾಯಿದೆ 2003 ರ ಪ್ರಕಾರ ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿಯಲ್ಲಿ ಜಾಗೃತದಳದ ನಾಲ್ಕು ಪೋಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಜಾಗೃತದಳದ ಮುಖ್ಯಸ್ಥರಾಗಿ ಅಧೀಕ್ಷಕ ಅಭಿಯಂತರರು (ವಿ) (ವಾಣಿಜ್ಯ) ರವರು ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ) ಜಾಗೃತದಳ ರವರು ಕಂಪನಿ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಪೋಲೀಸ್ ಉಪಾಧೀಕ್ಷಕರು ಈ ಜಾಗೃತದಳದ ಕೆಲಸಗಳನ್ನು ನಿರ್ವಹಿಸುವಲ್ಲಿ ಸಹಕರಿಸುತ್ತಿದ್ದಾರೆ.
2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) / ಪೋಲೀಸ್ ಉಪನಿರೀಕ್ಷಕರು ಪ್ರತಿ ಜಿಲ್ಲೆಯಲ್ಲೂ ಕರ್ತವ್ಯ ನಿರ್ವಹಿಸುತ್ತಿದ್ದು ಇವರಿಗೆ ಪೋಲೀಸ್ ಮುಖ್ಯಪೇದೆ ಮತ್ತು ಇತರ ಪೋಲೀಸ್ ಸಿಬ್ಬಂದಿಯವರು ಸಹಕರಿಸುತ್ತಿದ್ದಾರೆ.
3. ವಿದ್ಯುಚ್ಛಕ್ತಿ ಕಾಯಿದೆ 2003 ರ ಸೆಕ್ಷನ್ 126 ಮತ್ತು 135 ರ ಅಡಿಯಲ್ಲಿ ಸಂಜ್ಞೇಯ ಮತ್ತು ಅಸಂಜ್ಞೇಯ ಪ್ರಕರಣಗಳನ್ನು ಜಾಗೃತದಳದ ಪೋಲೀಸ್ ಠಾಣೆಯಲ್ಲಿ ದಾಖಲಿಸಲಾಗುತ್ತಿದೆ.
4. ಸೆಕ್ಷನ್ 135 ರ ಅಡಿಯಲ್ಲಿ ದಾಖಲಾದ ಪ್ರಕರಣಗಳನ್ನು ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ಮಾಡಲಾಗುತ್ತದೆ.
5. 2018-19 ರ ಜಾಗೃತದಳದ ಕಾರ್ಯ ಪ್ರಗತಿ ವಿವರವು ಈ ಕೆಳಗಿನಂತಿರುತ್ತದೆ.

ಕ್ರ.ಸಂ.	ಜಾಗೃತದಳ ಕಛೇರಿಯ ಹೆಸರು	ತಪಾಸಣೆ ನಡೆದ ಸ್ಥಾವರಗಳ ಸಂಖ್ಯೆ	ದಾಖಲಾದ ಪ್ರಕರಣಗಳು		ಒಟ್ಟು ಪ್ರಕರಣಗಳು	ಬಳಕೆಯಾದ ಒಟ್ಟು ಯೂನಿಟ್‌ಗಳು	ಬೇಡಿಕೆ			ಒಟ್ಟು ವಿಧಿಸಲಾದ ಮೊತ್ತ	ವಸೂಲಾತಿಯ ವಿವರ			
			ಅಸಂಜ್ಞೇಯ ಪ್ರಕರಣಗಳು	ಸಂಜ್ಞೇಯ ಪ್ರಕರಣಗಳು			ಅಸಂಜ್ಞೇಯ ಪ್ರಕರಣಗಳಲ್ಲಿ ವಿಧಿಸಲಾದ ಹಿಂಜಲ್ಲು (₹ ಗಳಲ್ಲಿ)	ಸಂಜ್ಞೇಯ ಪ್ರಕರಣಗಳಲ್ಲಿ ವಿಧಿಸಲಾದ ಹಿಂಜಲ್ಲು (₹ ಗಳಲ್ಲಿ)	ದಂಡದ ಮೊತ್ತ (₹ ಗಳಲ್ಲಿ)		ಸಂಜ್ಞೇಯ ಪ್ರಕರಣಗಳ ಹಿಂಜಲ್ಲನ ಮೊತ್ತ (₹ ಗಳಲ್ಲಿ)	ಸಂಜ್ಞೇಯ ಪ್ರಕರಣಗಳ ಹಿಂಜಲ್ಲನ ಮೊತ್ತ (₹.ಗಳಲ್ಲಿ)	ದಂಡದ ಮೊತ್ತ (₹ ಗಳಲ್ಲಿ)	ಒಟ್ಟು ವಸೂಲಾದ ಮೊತ್ತ (₹ ಗಳಲ್ಲಿ)
1	ಮಂಗಳೂರು	7523	163	15	178	52880	1,15,22,569	5,17,867	1,03,400	1,21,43,836	83,19,111	5,17,867	1,03,400	89,40,378
2	ಶಿವಮೊಗ್ಗ	7692	484	89	573	88826	1,41,85,086	4,19,428	3,76,000	1,49,80,514	77,08,104	3,48,603	3,54,000	84,10,707
3	ಚಿಕ್ಕಮಗಳೂರು	7346	313	61	374	805262	77,49,966	24,39,775	3,93,000	1,05,82,741	17,41,213	10,89,912	4,17,000	32,48,125
4	ಉಡುಪಿ	7769	459	13	472	211877	53,29,507	3,65,718	1,34,000	58,29,225	53,56,845	3,26,193	1,22,000	58,05,038
	ಒಟ್ಟು ಮೊತ್ತ	**30330**	**1419**	**178**	**1597**	**1158845**	**3,87,87,128**	**37,42,788**	**10,06.400**	**4,35,36,316**	**2,31,25,273**	**22,82,575**	**9,96,400**	**2,64,04,248**

23. 2005 ರ ಮಾಹಿತಿ ಹಕ್ಕು ಕಾಯಿದೆ ಅನುಷ್ಠಾನದ ಬಗ್ಗೆ:

1. ಮೆಸ್ಕಾಂ ಆಡಳಿತ ಕಛೇರಿಯಲ್ಲಿ ನಿರ್ವಹಿಸಲಾಗುವ ದಾಖಲೆಗಳ/ಕಡತಗಳ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಸೆಕ್ಷನ್ 4(1)(ಎ) ಹಾಗೂ 4(1)(ಬಿ) ರನ್ವಯ ಮೆಸ್ಕಾಂ ಅಧಿಕೃತ ಅಂತರ್ಜಾಲ ತಾಣ www.mesco.inನಲ್ಲಿ ಪ್ರಕಟಿಸಲಾಗಿರುತ್ತದೆ.
2. ಮಾಹಿತಿ ಹಕ್ಕು ಕಾಯಿದೆ 2005 ರಡಿಯಲ್ಲಿ ಪ್ರಕಟಿಸಬೇಕಾದ ಮಾಹಿತಿಗಳನ್ನು ಕಂಪೆನಿಯ ಎಲ್ಲಾ ಕಛೇರಿಗಳಲ್ಲಿ ಮತ್ತು ಕಂಪೆನಿಯ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. ಅಂತರ್ಜಾಲದಲ್ಲಿ ಪ್ರಕಟಿಸಲಾದ ಮಾಹಿತಿಗಳನ್ನು ಪ್ರತೀ ಆರ್ಥಿಕ ವರ್ಷದಲ್ಲಿ ನವೀಕರಿಸಲಾಗುತ್ತದೆ.
3. 2018-19ನೇ ಸಾಲಿನಲ್ಲಿ ಕಂಪೆನಿಯ ವಿವಿಧ ಕಛೇರಿಗಳಲ್ಲಿ ವಿವಿಧ ಮಾಹಿತಿಗಳ ಬಗ್ಗೆ ಬಿಪಿಎಲ್ ನಾಗರಿಕರಿಂದ ಸ್ವೀಕೃತವಾದ 487 ಅರ್ಜಿಗಳೂ ಸೇರಿದಂತೆ ಒಟ್ಟು 2176 ಕೋರಿಕೆಗಳು ಬಂದಿದ್ದು, ಇದರಲ್ಲಿ 2171 ಅರ್ಜಿಗಳಿಗೆ ಮಾಹಿತಿ ನೀಡುವ ಮೂಲಕ ವಿಲೆವಾರಿ ಮಾಡಲಾಗಿದೆ ಮತ್ತು 5 ಅರ್ಜಿಗಳಿಗೆ (ಮಾರ್ಚ್ 2019 ರಲ್ಲಿ ಸ್ವೀಕರಿಸಿಲಾಗಿರುವುದು) ಮಾಹಿತಿ ನೀಡಲು ಬಾಕಿ ಇರುತ್ತದೆ. 2176 ಅರ್ಜಿಗಳ ಮಾಹಿತಿ ನೀಡುವ ಬಗ್ಗೆ ಒಟ್ಟು ₹ 42,477 ಗಳಷ್ಟು ಶುಲ್ಕವನ್ನು ಸಂಗ್ರಹಿಸಲಾಗಿದೆ.

   ಅಲ್ಲದೆ ಸ್ವೀಕೃತಿಯಾದ 32 ಮೇಲ್ಮನವಿಗಳಲ್ಲಿ 30 ಮೇಲ್ಮನವಿಗಳನ್ನು ಸಹ ಕ್ಲಪ್ತ ಸಮಯದಲ್ಲಿ ಇತ್ಯರ್ಥಗೊಳಿಸಲಾಗಿದೆ. ಉಳಿದಂತೆ 02 ಸಂಖ್ಯೆಯ ಮೇಲ್ಮನವಿ ಅರ್ಜಿಗಳು ವಿಲೇವಾರಿಗೆ ಬಾಕಿ ಇರುತ್ತದೆ.

   ಸೆಕ್ಷನ್ 4(1)(ಎ) ಪ್ರಕಾರ ನಿಗಮ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿರುವ ದಾಖಲೆಗಳ ಬಗ್ಗೆ ಮಾಹಿತಿಯನ್ನು ಸಾಮಾನ್ಯ ಜನರಿಗೆ ಲಭಿಸುವಂತೆ ಕಂಪೆನಿಯ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.
4. ಸೆಕ್ಷನ್ 4(1)(ಬಿ) ಪ್ರಕಾರ ಅಂತರ್ಜಾಲದಲ್ಲಿ ಪ್ರಕಟಿಸಬೇಕಾಗಿರುವ ಮಾಹಿತಿಗಳನ್ನು www.mesco.in ನಲ್ಲಿ ಪ್ರಕಟಿಸಲಾಗಿದೆ.
5. ಮಾಹಿತಿ ಅಧಿಕಾರಿ, ಸಹಾಯಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರದ ಬಗ್ಗೆ ಅಧಿಸೂಚನೆ ನೀಡಿ ಮಾಹಿತಿಯನ್ನು "ಮಾಹಿತಿ ಹಕ್ಕು ಕಾಯಿದೆ" ಎಂಬ ಶೀರ್ಷಿಕೆಯಲ್ಲಿ ಮೆಸ್ಕಾಂ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

24. 1975ರ ಮತ್ತು ತಿದ್ದುಪಡಿಯಾದ ಕಂಪೆನಿ ನಿಯಾಮಾವಳಿಗಳನ್ವಯ ವಿವರ (ಉದ್ಯೋಗಿಗಳ ಬಗ್ಗೆ ಮಾಹಿತಿ):

ಕಂಪೆನಿಯ ಯಾವುದೇ ಉದ್ಯೋಗಿಯು ವಾರ್ಷಿಕವಾಗಿ ₹ 60,00,000/- ಮತ್ತು ಪ್ರತಿ ತಿಂಗಳೂ ₹ 5,00,000/- ಅಥವಾ ಅದಕ್ಕಿಂತ ಹೆಚ್ಚಿಗೆಯಾಗಿ ಈ ಆರ್ಥಿಕ ವರ್ಷದಲ್ಲಿ ಸಂಭಾವನೆಯನ್ನು ಪಡೆದಿರುವುದಿಲ್ಲ.

25. ಕಾಸ್ಟ್ ಆಡಿಟರ್‌ಗಳ ನೇಮಕಾತಿ

ಭಾರತ ಸರ್ಕಾರದ ಕಂಪೆನಿಗಳ ವ್ಯವಹಾರ ಸಚಿವಾಲಯದ ಪತ್ರ ಸಂಖ್ಯೆ 52/62/ಸಿಎಬಿ-2008 ಯಲ್ಲಿ ನಿರ್ದೇಶಿಸಿದಂತೆ ದಿನಾಂಕ 04.02.2008 ರ ಮೂಲಕ ಕಂಪೆನಿಗಳ ಕಾಯ್ದೆ 1956, ಕಲಂ 233(B) ರಲ್ಲಿ ನಿಗದಿಪಡಿಸಿದ ಅರ್ಹತೆಯುಳ್ಳ ಲೆಕ್ಕಪರಿಶೋಧಕರಿಂದ, ದಿನಾಂಕ 31.03.2008 ರಂದು ಕೊನೆಗೊಂಡ ಆರ್ಥಿಕ ವರ್ಷದ ಮತ್ತು ತದನಂತರ ಪ್ರತಿ ವರ್ಷ ಸತತವಾಗಿ ಕಂಪೆನಿಯು ಇಟ್ಟಿರುವ ಕಾಸ್ಟ್ ಅಕೌಂಟಿಂಗ್ ಲೆಕ್ಕಪತ್ರಗಳ ಆಡಿಟ್‌ಗಾಗಿ ಕಾಸ್ಟ್ ಆಡಿಟನ್ನು ನಡೆಸಿರುತ್ತದೆ. ಅದಕ್ಕನುಗುಣವಾಗಿ ಮೆ॥ ಎನ್.ಎಸ್. & ಅಸೋಸಿಯೇಟ್ಸ್, ಬೆಂಗಳೂರು ಇವರನ್ನು ಕಂಪೆನಿಯ ಕಾಸ್ಟ್ ಆಡಿಟರ್‌ಗಳನ್ನಾಗಿ ಆರ್ಥಿಕ ವರ್ಷ 2017-18 ಮತ್ತು ತದನಂತರದ ಅವಧಿಗಾಗಿ ನೇಮಿಸಲಾಗಿದೆ.

ಮುಂದುವರೆದು, ಕಾಸ್ಟ್ ಆಡಿಟ್ ರಿಪೋರ್ಟ್‌ಗಳನ್ನು ಭಾರತ ಸರ್ಕಾರಕ್ಕೆ ಸಲ್ಲಿಸಿದ ವಿವರಗಳು ಈ ಕೆಳಗಿನಂತಿವೆ.

ಆರ್ಥಿಕ ವರ್ಷ	ವರದಿ ಸಲ್ಲಿಸಲು ಅಂತಿಮ ದಿನಾಂಕ	ವರದಿ ಸಲ್ಲಿಸಿದ ದಿನಾಂಕ
2007-08	30.09.2008	30.09.2008
2008-09	30.09.2009	08.12.2009
2009-10	30.09.2010	29.09.2010
2010-11	30.09.2011	04.11.2011
2011-12	30.09.2012	10.01.2013
2012-13	30.09.2013	26.12.2013
2013-14	30.09.2014	27.09.2014
2014-15	30.09.2015	29.09.2015
2015-16	30.09.2016	27.10.2016
2016-17	30.09.2017	17.10.2017
2017-18	30.09.2018	15.10.2018

26. ಸೆಕ್ರೆಟೇರಿಯಲ್ ಆಡಿಟ್

ಕಂಪೆನಿಯ ಕಾಯ್ದೆ 2013 ಕಲಂ 204(1) ಮತ್ತು ಕಂಪೆನಿಯ (ಆಡಳಿತಾತ್ಮಕ ಸಿಬ್ಬಂಧಿ ನೇಮಕಾತಿ ಮತ್ತು ಸಂಭಾವನೆ) ನಿಯಮ 2014 ರ ಪ್ರಕಾರ ಮೆ/ ಉಲ್ಲಾಸ್‌ಕುಮಾರ್ ಮೇಲಿನಮೊಗರು & ಅಸೋಸಿಯೇಟ್ಸ್ ಮಂಗಳೂರು ಇವರನ್ನು ಆರ್ಥಿಕ ವರ್ಷ 2018–19ನೇ ಸಾಲಿನ ಸೆಕ್ರೆಟೇರಿಯಲ್ ಆಡಿಟ್ ಮಾಡುವ ಬಗ್ಗೆ ಕಂಪೆನಿಯ ನಿರ್ದೇಶಕ ಮಂಡಳಿ ನಿರ್ಣಯ ಸಂಖ್ಯೆ 74/7 ರಲ್ಲಿ ಅನುಮೋದಿಸಿದಂತೆ ಸೆಕ್ರೆಟೇರಿಯಲ್ ಆಡಿಟರಾಗಿ ನೇಮಿಸಲಾಗಿರುತ್ತದೆ. ಸೆಕ್ರೆಟೇರಿಯಲ್ ಆಡಿಟ್ ವರದಿಯನ್ನು ಅನುಬಂಧ 1 ರಲ್ಲಿ ಲಗತ್ತಿಸಲಾಗಿರುತ್ತದೆ ಹಾಗೂ ಸ್ವತಂತ್ರ ನಿರ್ದೇಶಕರ ನೇಮಕಾತಿ, ನಿಗಮದ ಸಾಮಾಜಿಕ ಜವಾಬ್ದಾರಿ ಹಾಗೂ ಇನ್ನಿತರ ವಿಷಯಗಳ ಬಗ್ಗೆ ನೀಡಲಾದ ಉತ್ತರವನ್ನು ಅನುಬಂಧ 2 ರಲ್ಲಿ ಲಗತ್ತಿಸಲಾಗಿದೆ.

27. ನಿರ್ದೇಶಕರುಗಳ ಮಂಡಳಿ :

(ಅ)

ಕ್ರ.ಸಂ	ಶ್ರೀಮತಿ/ಶ್ರೀಯುತ	ವಿವರಗಳು
1.	ಡಾ॥ ಎಸ್. ಸೆಲ್ವಕುಮಾರ್, ಐಎಎಸ್.,	ಅಧ್ಯಕ್ಷರು (ದಿನಾಂಕ 18.08.2018 ರಿಂದ 05.08.2019 ರವರೆಗೆ)
2.	ಮಹೇಂದ್ರ ಜೈನ್ ಐಎಎಸ್.,	ಅಧ್ಯಕ್ಷರು (ದಿನಾಂಕ 05.08.2019 ರಿಂದ 18.08.2019 ರವರೆಗೆ)
3.	ಡಾ॥ ಎನ್ ಮಂಜುಳ ಐಎಎಸ್.,	ನಿರ್ದೇಶಕರು (ದಿನಾಂಕ 18.08.2019 ರಿಂದ)
4.	ಸ್ನೇಹಲ್ ಆರ್. ಐಎಎಸ್	ವ್ಯವಸ್ಥಾಪಕ ನಿರ್ದೇಶಕರು (ದಿನಾಂಕ 05.10.2018 ರಿಂದ)
5.	ರಘುಪ್ರಕಾಶ್. ಎನ್	ನಿರ್ದೇಶಕರು (ತಾಂತ್ರಿಕ) (ದಿನಾಂಕ 16.08.2018 ರಿಂದ)
6.	ಎನ್. ತಿಮ್ಮೇಗೌಡ	ನಿರ್ದೇಶಕರು (ದಿನಾಂಕ 22.04.2017 ರಿಂದ)
7.	ಡಾ॥ ಆರ್.ಸಿ. ಚೇತನ್, ಐಆರ್‌ಎಸ್.,	ನಿರ್ದೇಶಕರು (ದಿನಾಂಕ 14.09.2017 ರಿಂದ)
8.	ಮೀರಾ ಶ್ರೀವಾಸ್ತವಾ ಐಆರ್‌ಎಸ್.,	ನಿರ್ದೇಶಕರು (ದಿನಾಂಕ 25.09.2018 ರಿಂದ)
9.	ಡಾ॥ ಅದಿತಿ ರಾಜ ಐಎ&ಎಎಸ್.,	ನಿರ್ದೇಶಕರು (ದಿನಾಂಕ 24.09.2008 ರಿಂದ 30.03.2019ರವರೆಗೆ)
10.	ಸಸಿಕಾಂತ್ ಸೆಂಥಿಲ್ ಐಎಎಸ್.,	ನಿರ್ದೇಶಕರು (ದಿನಾಂಕ 07.06.2019 ರಿಂದ 06.09.2019 ರವರೆಗೆ)
11.	ಎಂ.ಡಿ ರವಿ	ನಿರ್ದೇಶಕರು (ದಿನಾಂಕ 07.05.2016 ರಿಂದ 05.03.2019 ರವರೆಗೆ)
12.	ಗೋಪಾಲ್	ನಿರ್ದೇಶಕರು (ದಿನಾಂಕ 07.06.2019 ರಿಂದ)
13.	ಎ.ಎನ್ ಜಯರಾಜ್	ನಿರ್ದೇಶಕರು (ದಿನಾಂಕ 07.05.2016 ರಿಂದ 18.07.2019 ರವರೆಗೆ)
14.	ಶಿವಪ್ರಕಾಶ್ ಟಿ.ಎಮ್	ನಿರ್ದೇಶಕರು (ದಿನಾಂಕ 18.07.2019 ರಿಂದ)
15.	ಟಿ.ಆರ್. ರಾಮಕೃಷ್ಣಯ್ಯ	ನಿರ್ದೇಶಕರು (ದಿನಾಂಕ 14.08.2017 ರಿಂದ)

ನಿರ್ದೇಶಕ ಮಂಡಳಿಯಿಂದ ನಿರ್ಗಮಿಸಿದ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಅವರು ಸಲ್ಲಿಸಿದ ಸೇವೆಗಾಗಿ ಮಂಡಳಿಯು ತನ್ನ ಕೃತಜ್ಞತೆಯನ್ನು ಮತ್ತು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಆ) ನಿರ್ದೇಶಕ ಮಂಡಳಿಯ ಉಪಸಮಿತಿಗಳು:

(i) ಖರೀದಿ ಸಮಿತಿ	
1. ವ್ಯವಸ್ಥಾಪಕ ನಿರ್ದೇಶಕರು, ಮೆಸ್ಕಾಂ, ಮಂಗಳೂರು	ಅಧ್ಯಕ್ಷರು
2. ನಿರ್ದೇಶಕರು (ಹಣಕಾಸು), ಬೆಸ್ಕಾಂ, ಬೆಂಗಳೂರು	ಸದಸ್ಯರು
3. ನಿರ್ದೇಶಕರು (ತಾಂತ್ರಿಕ), ಮೆಸ್ಕಾಂ, ಮಂಗಳೂರು	ಸದಸ್ಯರು
4. ಅಧಿಕೃತ ಸಹಿಗಾರರು	ಸಂಚಾಲಕರು
(ii) ಆಡಿಟ್ ಸಮಿತಿ	
1. ನಿರ್ದೇಶಕರು (ಹಣಕಾಸು), ಕ.ವಿ.ಪ್ರ.ನಿ.ನಿ., ಬೆಂಗಳೂರು	ಅಧ್ಯಕ್ಷರು
2. ನಿರ್ದೇಶಕರು (ತಾಂತ್ರಿಕ), ಮೆಸ್ಕಾಂ, ಮಂಗಳೂರು	ಸದಸ್ಯರು
3. ನಿರ್ದೇಶಕರು (ಹಣಕಾಸು) ಇಂಧನ ಇಲಾಖೆ ಕರ್ನಾಟಕ ಸರ್ಕಾರ	ಸದಸ್ಯರು
4. ಅಧಿಕೃತ ಸಹಿಗಾರರು	ಸಂಚಾಲಕರು
(iii) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿ	
1. ನಿರ್ದೇಶಕರು (ಹಣಕಾಸು), ಕ.ವಿ.ಪ್ರ.ನಿ.ನಿ., ಬೆಂಗಳೂರು	ಅಧ್ಯಕ್ಷರು
2. ನಿರ್ದೇಶಕರು (ಹಣಕಾಸು), ಬೆಸ್ಕಾಂ, ಬೆಂಗಳೂರು	ಸದಸ್ಯರು
3. ನಿರ್ದೇಶಕರು (ತಾಂತ್ರಿಕ), ಮೆಸ್ಕಾಂ, ಮಂಗಳೂರು	ಸದಸ್ಯರು
4. ಅಧಿಕೃತ ಸಹಿಗಾರರು	ಸಂಚಾಲಕರು
(iv) ಬಾರೋವಿಂಗ್ ಸಮಿತಿ:	
1. ನಿರ್ದೇಶಕರು (ಹಣಕಾಸು), ಕ.ವಿ.ಪ್ರ.ನಿ.ನಿ., ಬೆಂಗಳೂರು	ಅಧ್ಯಕ್ಷರು
2. ನಿರ್ದೇಶಕರು (ಹಣಕಾಸು), ಬೆಸ್ಕಾಂ, ಬೆಂಗಳೂರು	ಸದಸ್ಯರು
3. ನಿರ್ದೇಶಕರು (ತಾಂತ್ರಿಕ), ಮೆಸ್ಕಾಂ, ಮಂಗಳೂರು	ಸದಸ್ಯರು
4. ಅಧಿಕೃತ ಸಹಿಗಾರರು	ಸಂಚಾಲಕರು

ಇ) ನಿರ್ದೇಶಕರ ಮಂಡಳಿಯ ಮತ್ತು ನಿರ್ದೇಶಕರ ಉಪ ಸಮಿತಿಗಳ ಸಭೆಗಳು:

I) **ನಿರ್ದೇಶಕರ ಮಂಡಳಿಯ ಸಭೆಗಳು** 70ನೇ ಸಭೆ 29.06.2018 71ನೇ ಸಭೆ 28.07.2018 71ನೇ 1ಬಾರಿ ಮುಂದೂಡಲ್ಪಟ್ಟ ಸಭೆ 25.08.2018 71ನೇ ಮುಂದೂಡಲ್ಪಟ್ಟ ಸಭೆ 18.09.2018 72ನೇ ಸಭೆ 15.11.2018	3
ii) **ಖರೀದಿ ಸಮಿತಿ ಸಭೆಗಳು** 73ನೇ ಸಭೆ 21.06.2018 74ನೇ ಸಭೆ 06.07.2018 75ನೇ ಸಭೆ 27.09.2018 76ನೇ ಸಭೆ 26.12.2018	4
iii) **ಆಡಿಟ್ ಸಮಿತಿ ಸಭೆ** 24ನೇ ಸಭೆ 25.08.2018	1
iv) **ಬಾರೋವಿಂಗ್ ಸಮಿತಿ ಸಭೆ** 1ನೇ ಸಭೆ 03.10.2018	1

ಈ) ಆರ್ಥಿಕ ವರ್ಷ 2018–19 ನೇ ಸಾಲಿನಲ್ಲಿ ಜರುಗಿದ ಮಂಡಳಿ ಸಭೆಯಲ್ಲಿ ನಿರ್ದೇಶಕರುಗಳ ಹಾಜರಾತಿ ವಿವರ:

ಕ್ರ. ಸಂ.	ನಿರ್ದೇಶಕರಗಳ ಹೆಸರು ಶ್ರೀಯುತರು/ಶ್ರೀಮತಿ	70ನೇ ನಿ.ಮಂ 29.6.18	71ನೇ ನಿ.ಮಂ 28.7.18	71ನೇ ನಿ.ಮಂ 25.8.18	71ನೇ ನಿ.ಮಂ 18.9.18	72ನೇ ನಿ.ಮಂ 15.11.18	24ನೇ ಆ.ಸ 25.8.18	73ನೇ ಖ.ಸ. 21.6.18	74ನೇ ಖ.ಸ. 6.7.18	75ನೇ ಖ.ಸ. 27.9.18	76ನೇ ಖ.ಸ. 26.12.18	1ನೇ ಬಾ.ಸ. 3.10.18
1	ಜಾವೇದ್ ಅಖ್ತರ್	P	P	-	-	-	-	-	-	-	-	-
2	ಎಸ್. ಸೆಲ್ವಕುಮಾರ್	-	-	P	P	P	-	-	-	-	-	-
3	ಡಾ/. ಅದಿತಿರಾಜ	P	P	P	P	-	P	-	-	-	-	P
4	ಡಾ/. ಆರ್.ಸಿ.ಚೇತನ್	P	P	-	P	P	-	-	-	P	P	P

ಕ್ರ. ಸಂ.	ನಿರ್ದೇಶಕರಗಳ ಹೆಸರು ಶ್ರೀಯುತರು/ಶ್ರೀಮತಿ	70ನೇ ನಿ.ಮಂ 29.6.18	71ನೇ ನಿ.ಮಂ 28.7.18	71ನೇ ನಿ.ಮಂ 25.8.18	71ನೇ ನಿ.ಮಂ 18.9.18	72ನೇ ನಿ.ಮಂ 15.11.18	24ನೇ ಆ.ಸ 25.8.18	73ನೇ ಖ.ಸ. 21.6.18	74ನೇ ಖ.ಸ. 6.7.18	75ನೇ ಖ.ಸ. 27.9.18	76ನೇ ಖ.ಸ. 26.12.18	1ನೇ ಬಾ.ಸ. 3.10.18
5	ಟಿ.ಹೆಚ್.ಎಮ್. ಕುಮಾರ್	P	P	-	-	-	-	P	P	-	-	-
6	ಹೆಚ್.ಕೆ ಭಾರತಿ	P	P	-	-	-	-	P	P	-	-	-
7	ಸ್ನೇಹಲ್ ಆರ್	–	-	-	-	P	-	-	-	-	P	-
8	ಎನ್. ರಘುಪ್ರಕಾಶ್	-	-	P	P	P	-	-	-	P	P	P
9	ಎಂ.ಡಿ. ರವಿ	P	P	P	P	P	P	-	-	-	-	-
10	ಎನ್. ತಿಮ್ಮೇಗೌಡ	P	-	P	P	P	-	-	-	-	-	-
11	ಎ.ಎನ್. ಜಯರಾಜ್	P	P	P	P	P	-	-	-	-	-	-
12	ಟಿ.ಆರ್. ರಾಮಕೃಷ್ಣಯ್ಯ	P	P	P	P	P	-	-	-	-	-	-
13	ಮೀರಾ ಶ್ರೀವಾಸ್ತವಾ	–	-	-	-	P	-	-	-	-	-	-

P : *present* A : *absent*

ನಿ.ಮಂ : ನಿರ್ದೇಶಕ ಮಂಡಳ, ಖ.ಸ : ಖರೀದಿ ಸಮಿತಿ ಸಭೆ, ಆ.ಸ : ಆಡಿಟ್ ಸಮಿತಿ, ಬಾ.ಸ: ಬಾರೊವಿಂಗ್ ಸಮಿತಿ ಸಭೆ

ಉ) ಸಾಮಾನ್ಯ ಸಭೆಗಳು :

ದಿನಾಂಕ 27ನೇ ಸೆಪ್ಟೆಂಬರ್ 2018 ರಂದು ಕಂಪೆನಿಯ ನೋಂದಾಯಿತ ಕಛೇರಿಯಲ್ಲಿ ಹದಿನಾರನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ಆರ್ಥಿಕ ವರ್ಷ 2017–18ನೇ ಸಾಲಿನ ಕಂಪೆನಿಯ ಲೆಕ್ಕ ಪತ್ರವನ್ನು ಪರಿಗಣಿಸಿ ಸ್ವೀಕರಿಸುವ ಕುರಿತು ಜರುಗಿತು.

28. ನಿರ್ದೇಶಕರ ನೇಮಕಾತಿ ಮತ್ತು ವೇತನ ನೀತಿ:

ಕಂಪೆನಿಯ ನಿರ್ದೇಶಕರುಗಳು ಕರ್ನಾಟಕ ರಾಜ್ಯ ಸರಕಾರದಿಂದ ನೇಮಿಸಲ್ಪಡುತ್ತಾರೆ ಮತ್ತು ನಿರ್ದೇಶಕರ ವೇತನವು ಅವರ ಮಾತೃ ಸಂಸ್ಥೆಯಲ್ಲಿ ನಿಗದಿತಗೊಂಡಂತೆ ಪಾವತಿ ಆಗುತ್ತದೆ. ಆದುದರಿಂದ ನಿರ್ದೇಶಕರ ನೇಮಕಾತಿ ಮತ್ತು ವೇತನ ಪಾವತಿಗೆ ಪ್ರತ್ಯೇಕ ಸಮಿತಿಯ ಅಗತ್ಯತೆ ಇರುವುದಿಲ್ಲ.

29. ಆಂತರಿಕ ಹಣಕಾಸು ನಿಯಂತ್ರಣ:

ಆಂತರಿಕ ಹಣಕಾಸು ನಿಯಂತ್ರಣವು ಹಣಕಾಸಿನ ಮತ್ತು ಹಣಕಾಸು ವರದಿ ಮಾಡುವ ಅಪಾಯಗಳನ್ನು ಪರಿಹರಿಸುವ ಅಪಾಯ ನಿರ್ವಹಣಾ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ. ಹಣಕಾಸು ತಖ್ತೆಗೆ ಸಂಬಂಧಿಸಿದಂತೆ ಕಂಪನಿಯಲ್ಲಿ ಸಾಕಷ್ಟು ಹಿಡಿತ ಹೊಂದಿದೆ. ಆಡಳಿತ ಪರಿಶೀಲನೆ, ಸ್ವಯಂ ಮೌಲ್ಯಮಾಪನ, ಹಣಕಾಸು ತಜ್ಞರಿಂದ ನಿರಂತರವಾದ ಪರಿಶೀಲನೆಯ ಮೂಲಕ ಅಂತೆಯೆ ಶಾಸನ ಬದ್ಧ ಲೆಕ್ಕ ಪರಿಶೋಧಕರಿಂದ ಟೆಸ್ಟ್ ಚೆಕ್ ಮತ್ತು ಆಂತರಿಕ ಪರಿಶೋಧನಾ ಶಾಖೆಯವರಿಂದ ಹಣಕಾಸು ನಿಯಂತ್ರಣದ ಬಗ್ಗೆ ಖಾತರಿ ಪಡಿಸಲಾಗುವುದು. ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದುವಲ್ಲಿ ಸದರಿ ವ್ಯವಸ್ಥೆಯು ಉತ್ತಮ ಹಾಗೂ ಕಾರ್ಯಸಾಧುವಾಗಿದೆ ಎಂದು ಅಭಿಪ್ರಾಯಿಸಲಾಗಿದೆ.

30. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್)

[ಕಂಪೆನಿಗಳ (ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ) ನಿಯಮಗಳು–2014 ರ ಸೆಕ್ಷನ್ 134 ರ ಸಬ್‌ಸೆಕ್ಷನ್ (3) ಉಪವಾಕ್ಯ (ಒ) ದ ಅನುಸಾರವಾಗಿ)]

1. ಕಂಪೆನಿಯ ಸಿ.ಎಸ್.ಆರ್. ನೀತಿಯ ಸಂಕ್ಷಿಪ್ತ ರೂಪುರೇಖೆ.
   - ❖ ಮೆಸ್ಕಾಂನ್ನು ಈ ಮುಂದಿನ ಒಂದು ಅಥವಾ ಹೆಚ್ಚು ವಿಷಯದ ಕಡೆಗೆ ನಿರ್ದೇಶನ ಮಾಡುವುದು– ಶೈಕ್ಷಣಿಕ ಉತ್ತೇಜನ, ಪರಿಸರ ಮತ್ತು ಪ್ರಾಕೃತಿಕ ಆಸ್ತಿಯ ಸಂರಕ್ಷಣೆ ಮತ್ತು ಹೆಚ್ಚಿಸುವಿಕೆ, ಕ್ರೀಡೆಗಳ ಉತ್ತೇಜನ, ಪರಿಶಿಷ್ಠ ಜಾತಿ ಮತ್ತು ಪಂಗಡ ಹಾಗೂ ಇತರೆ ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ಧಿಗೆ ಕೊಡುಗೆಗಳನ್ನು ನೀಡುವುದು, ಲಿಂಗ ಸಮಾನತೆಯನ್ನು ಉತ್ತೇಜಿಸುವುದು ಹಾಗೂ ಮಹಿಳಾ ಸಬಲೀಕರಣ, ಗ್ರಾಮೀಣ ಆರೋಗ್ಯದ ಉತ್ತೇಜನ, ಸಾಂಸ್ಕೃತಿಕ ಚಟುವಟಿಕೆಗಳ ಉತ್ತೇಜನ.
   - ❖ ಕೌಶಲ್ಯ ಅಭಿವೃದ್ಧಿ, ಸಮಾಜದ ವಿವಿಧ ಶಾಖೆಗಳ ಜನರ ಔದ್ಯೋಗಿಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ತರಬೇತಿ.
   - ❖ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಸಹಕಾರಿಯಾಗುವಂತಹ ವಿಧಾನಗಳನ್ನು ಅನುಸರಿಸುವುದು.
   - ❖ ಸಾಂಸ್ಥಿಕ, ಸಾಮಾಜಿಕ ಜವಾಬ್ದಾರಿಯ ಬದ್ಧತೆಯ ವಿಷಯವಾಗಿ ಸರಕಾರದಿಂದ ಬರಬಹುದಾದ ಸೂಚನೆಗಳ ಪಾಲನೆ.
2. ನಿರ್ದೇಶಕ ಮಂಡಳಿಯು ನಿರ್ದೇಶಕರು (ಹಣಕಾಸು), ಕ.ವಿ.ಪ್ರ.ನಿ.ನಿ., ಬೆಂಗಳೂರು, ನಿರ್ದೇಶಕರು (ಹಣಕಾಸು), ಬೆಸ್ಕಾಂ, ಬೆಂಗಳೂರು ಮತ್ತು ಮೆಸ್ಕಾಂನ ನಿರ್ದೇಶಕರು (ತಾಂತ್ರಿಕ) ಮತ್ತು ಸಂಚಾಲಕರನ್ನಾಗಿ ಅಧಿಕೃತ ಸಹಿಗಾರರು ಇವರನ್ನೊಳಗೊಂಡ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ಪುನರ್ ರಚಿಸಿರುತ್ತದೆ.
3. ಕಳೆದ ಮೂರು ಆರ್ಥಿಕ ವರ್ಷದ ಸರಾಸರಿ ಲಾಭಾಂಶ: ₹ 17,58,91,881/–

4. ನಿಗದಿತ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ವೆಚ್ಚ (ಕ್ರ.ಸಂ. 3 ರ ಶೇಕಡಾ 2 ರಂತೆ): ₹ 35,17,838/-

5. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಿ ಎಸ್. ಆರ್ ಬಗ್ಗೆ ಮಾಡಿದ ಖರ್ಚುಗಳ ವಿವರ:

(i) ಆರ್ಥಿಕ ವರ್ಷದಲ್ಲಿ ಖರ್ಚುಮಾಡಲಾದ ಒಟ್ಟು ಮೊತ್ತ: ₹ 43,60,667/-

(ii) ಖರ್ಚು ಮಾಡದೇ ಬಾಕಿ ಇರುವ ಮೊತ್ತ : ರೂ. ಏನೂ ಇಲ್ಲ.

ಆರ್ಥಿಕ ವರ್ಷ 2018-19 ರ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಾಗಿ ಖರ್ಚು ಮಾಡಿದ ಮೊತ್ತದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು

ಕ್ರ. ಸ.	ಗುರುತಿಸಲಾದ ಸಿಎಸ್‌ಆರ್ ಯೋಜನೆ ಅಥವಾ ಚಟುವಟಿಕೆ	ಯೋಜನೆಗಳನ್ನು ಒಳಗೊಂಡಿರುವ ವಲಯ	ಯೋಜನೆಗಳು / ಕಾರ್ಯಕ್ರಮಗಳು (1) ಸ್ಥಳೀಯ ಪ್ರದೇಶಗಳು ಅಥವಾ ಇತರೆ (2) ಯೋಜನೆ / ಕಾರ್ಯಕ್ರಮಗಳನ್ನು ಕೈಗೊಂಡ ರಾಜ್ಯ ಮತ್ತು ಜಿಲ್ಲೆಯನ್ನು ನಿರ್ದಿಷ್ಟಪಡಿಸಿ	ಯೋಜನೆ / ಕಾರ್ಯಕ್ರಮಗಳ ಬಗ್ಗೆ ವಿನಿಯೋಜಿತ ಮೊತ್ತ ₹
1	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	5000.00
2	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	10000.00
3	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
4	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
5	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
6	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
7	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
8	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
9	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
10	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	21000.00
11	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	42000.00
12	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	15750.00
13	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	12600.00
14	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	25200.00
15	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	36750.00
16	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	10500.00
17	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	25000.00
18	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	20000.00
19	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	25000.00
20	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	50000.00
21	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	47250.00
22	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	6000.00
23	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	611712.00
24	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	611712.00
25	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	611712.00
26	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	611712.00
27	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	611712.00

ಕ್ರ. ಸ.	ಗುರುತಿಸಲಾದ ಸಿಎಸ್‌ಆರ್ ಯೋಜನೆ ಅಥವಾ ಚಟುವಟಿಕೆ	ಯೋಜನೆಗಳನ್ನು ಒಳಗೊಂಡಿರುವ ವಲಯ	ಯೋಜನೆಗಳು / ಕಾರ್ಯಕ್ರಮಗಳು (1) ಸ್ಥಳೀಯ ಪ್ರದೇಶಗಳು ಅಥವಾ ಇತರೆ (2) ಯೋಜನೆ / ಕಾರ್ಯಕ್ರಮಗಳನ್ನು ಕೈಗೊಂಡ ರಾಜ್ಯ ಮತ್ತು ಜಿಲ್ಲೆಯನ್ನು ನಿರ್ದಿಷ್ಟಪಡಿಸಿ	ಯೋಜನೆ / ಕಾರ್ಯಕ್ರಮಗಳ ಬಗ್ಗೆ ವಿನಿಯೋಜಿತ ಮೊತ್ತ ₹
28	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	26336.00
29	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	87200.00
30	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	14000.00
31	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	9082.00
32	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	35315.00
33	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	8410.00
34	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	600.00
35	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	34630.00
36	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	8000.00
37	ಗ್ರಾಹಕ ಶಿಕ್ಷಣ	ಗ್ರಾಹಕ ಶಿಕ್ಷಣ	ಮಂಗಳೂರು	49234.00
	ಉಪ ಮೊತ್ತ			**3940667.00**
38	ಡಾ॥. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಮಂಗಳೂರು ಇಲ್ಲಿ ಒಂದು ಸಿಂಹವನ್ನು ದತ್ತು ಪಡೆಯಲಾಗಿದೆ.	ಪರಿಸರ ಮತ್ತು ವನ್ಯ ಜೀವ ಸಂರಕ್ಷಣೆ	ಮಂಗಳೂರು	400000.00
39	ಆರೋಗ್ಯ ಸಂರಕ್ಷಣಾ ಕಾರ್ಯಗಾರ (ಪ್ರಜ್ಞಾ ಕೌನ್ಸೆಲಿಂಗ್ ಸೆಂಟರ್, ಮಂಗಳೂರು)	ಆರೋಗ್ಯ	ಮಂಗಳೂರು	20000.00
	ಉಪ ಮೊತ್ತ			**420000.00**
	ಒಟ್ಟು ಮೊತ್ತ			**4360667.00**

6. **ಜವಾಬ್ದಾರಿಯುತ ಹೇಳಿಕೆ:** ಸಮಿತಿಯು ಈ ಮೂಲಕ ದೃಢಪಡಿಸುವುದೇನೆಂದರೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನೀತಿಯ ಕಾರ್ಯಗತಗೊಳಿಸುವಿಕೆ ಮತ್ತು ಶಿಸ್ತು ಪಾಲನೆಯಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ನೀತಿ ಮತ್ತು ಉದ್ದೇಶಗಳಿಗನುಗುಣವಾಗಿ ಇರುತ್ತದೆ.

31. ವಾರ್ಷಿಕ ವರದಿ

ಕಂಪೆನಿಯ ವಾರ್ಷಿಕ ವರದಿಯ ಸಾರವನ್ನು ನಿಯಮ 92ರ ಅನುಸಾರ ಅನುಬಂಧ–3 ರಲ್ಲಿ ಒದಗಿಸಲಾಗಿದೆ. (MGT-9).

ನಮೂನೆ MGT-7 ರಲ್ಲಿ ಕಂಪೆನಿ ವ್ಯವಹಾರಗಳ ಸಚಿವಾಲಯಕ್ಕೆ ಸಲ್ಲಿಸಲಾದ ವಾರ್ಷಿಕ ವರದಿಯನ್ನು ಕಂಪೆನಿಯ ವೆಬ್‌ಸೈಟ್‌ನಲ್ಲಿ "Annual Return" ಕೊಂಡಿಯಲ್ಲಿ ಒದಗಿಸಲಾಗಿದೆ.

32. ನಿರ್ದೇಶಕ ಮಂಡಳಿಯ ಜವಾಬ್ದಾರಿಯುತ ಹೇಳಿಕೆ:

2013ರ ಕಂಪೆನಿಗಳ ಕಾಯ್ದೆಯ ಕಲಂ 134(5) ರನ್ವಯ ತಮ್ಮ ಉತ್ತಮ ತಿಳುವಳಿಕೆಗಳಿಗನುಗುಣವಾಗಿ ಕಂಪೆನಿಯ ನಿರ್ದೇಶಕರು ಈ ಕೆಳಗಿನ ಹೇಳಿಕೆಯನ್ನು ದಾಖಲಿಸಲು ಇಚ್ಛಿಸುತ್ತಾರೆ.

i) ವಾರ್ಷಿಕ ಜಮಾ ಖರ್ಚಿನ ಲೆಕ್ಕ ತಯಾರಿಸುವಾಗ ನಿರ್ಧಿಷ್ಟ ಮಾನದಂಡವನ್ನು ಅನುಸರಿಸಲಾಗಿದೆ ಹಾಗೂ ಅವಶ್ಯಕವಾಗಿ ನಿರ್ಗಮಿಸುವಲ್ಲೆಲ್ಲಾ ಸೂಕ್ತ ವಿವರಣೆಯನ್ನು ನೀಡಲಾಗಿದೆ.

ii) ಲೆಕ್ಕಾಚಾರದ ನೀತಿ ನಿರ್ಧಾರಗಳನ್ನು ಆಯ್ಕೆ ಮಾಡಿ ಸಮಂಜಸವಾಗಿ ಅನ್ವಯಿಸಲಾಗಿದೆ. ಆರ್ಥಿಕ ವರ್ಷಾಂತ್ಯದಲ್ಲಿ ಕಂಪೆನಿಯ ಆಗು ಹೋಗುಗಳ ಬಗೆಗೆ ಯುಕ್ತಾಯುಕ್ತ ಪರಿಜ್ಞಾನದಿಂದ ವಿವೇಚಿಸಿ, ಆ ಅವಧಿಯಲ್ಲಿ ಆದ ಲಾಭ ಮತ್ತು ನಷ್ಟದ ಬಗ್ಗೆ ಪ್ರಾಮಾಣಿಕವಾಗಿ ಮತ್ತು ನಿಷ್ಪಕ್ಷಪಾತವಾಗಿ ಅಂದಾಜಿಸಲಾಗಿದೆ.

iii) 2013 ರ ಕಂಪೆನಿಗಳ ಕಾಯ್ದೆ ನಿಯಮಗಳಿಗನುಸಾರವಾಗಿ, ಕಂಪೆನಿಯ ಆಸ್ತಿ ಪಾಸ್ತಿಗಳ ರಕ್ಷಣೆ ಮಾಡುವ, ವಂಚನೆಯನ್ನು ತಪ್ಪಿಸುವ, ಪತ್ತೆ ಹಚ್ಚುವ ಮತ್ತು ಇತರ ಅವ್ಯವಸ್ಥೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕಂಪೆನಿಯ ಯಥೋಚಿತ ಲೆಕ್ಕ ದಾಖಲೆಗಳ ನಿರ್ವಹಣೆಯಲ್ಲಿ ಸಾಕಷ್ಟು ನಿಗಾವಹಿಸಲಾಗಿದೆ.

iv) ದಿನಾಂಕ 31.03.2019 ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ವಾರ್ಷಿಕ ಜಮಾ ಖರ್ಚಿನ ಪಟ್ಟಿಯನ್ನು ಪ್ರಚಲಿತ ಪದ್ಧತಿಯಂತೆ ತಯಾರಿಸಲಾಗಿದೆ.

33. ಕಂಪೆನಿಯ ವಿಶಿಲ್ ಬ್ಲೋವರ್ ನೀತಿ:

ಕಂಪೆನಿಯು ತನ್ನ ಎಲ್ಲಾ ವ್ಯವಹಾರಗಳಲ್ಲಿ ನೈತಿಕತೆಯನ್ನು ಪ್ರೇರೇಪಿಸುತ್ತದೆ ಮತ್ತು ಕಾನೂನು ಬಾಹಿರ ಅಥವಾ ಅನೈತಿಕತೆಯ ವರದಿಯ ಬಗ್ಗೆ ವ್ಯವಸ್ಥೆಯನ್ನು ಕಲ್ಪಿಸಿರುತ್ತದೆ.ಕಂಪನಿಯಲ್ಲಿ ವಿಶಿಲ್ ಮೆಕಾನಿಸಮ್ ಮತ್ತು ವಿಶಿಲ್ ಬ್ಲೋವರ್ ನೀತಿಯ ಅಡಿಯಲ್ಲಿ ನೀತಿ ಉಲ್ಲಂಘನೆಯ ಬಗ್ಗೆ ನೇರ ಹಾಗೂ ಮುಕ್ತವಾಗಿ ವರದಿ ಮಾಡಲು ನೌಕರರಿಗೆ ಅವಕಾಶ ಇರುತ್ತದೆ.

ವರದಿ ಮಾಡಬಹುದಾದ ವಿಷಯಗಳನ್ನು ನಿಗದಿತ ಪ್ರಾಧಿಕಾರ (ವ್ಯವಸ್ಥಾಪಕ ನಿರ್ದೇಶಕರು) ದ ಮುಂದೆ ತರಬಹುದಾಗಿದೆ. ನೌಕರರು ಆಡಿಟ್ ಸಮಿತಿಯ ಅಧ್ಯಕ್ಷರ ಮುಂದೆಯೂ ಕೂಡ ವರದಿ ಮಾಡಬಹುದಾಗಿದೆ. ಪ್ರಸಕ್ತ ವರ್ಷದಲ್ಲಿ ಯಾವುದೇ ನೌಕರರಿಗೆ ನಿಗದಿತ ಪ್ರಾಧಿಕಾರಕ್ಕೆ ವರದಿ ಮಾಡುವ ಬಗ್ಗೆ ತಡೆಯುಂಟುಮಾಡಿರುವುದಿಲ್ಲ.

34. ಲೈಂಗಿಕ ಶೋಷಣೆ ನಿಷೇಧ ಸಮಿತಿ:

ಕಂಪೆನಿಯಲ್ಲಿ ಲೈಂಗಿಕ ಶೋಷಣೆ ತಡೆ, ನಿಷೇಧ ಮತ್ತು ನಿವಾರಣಾ ಉದ್ದೇಶದಿಂದ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರ ಮುಖ್ಯಸ್ಥಿಕೆಯಲ್ಲಿ ಒಬ್ಬ ಎನ್.ಜಿ.ಒ ಸದಸ್ಯರನ್ನೊಳಗೊಂಡಂತೆ ಕಂಪೆನಿಯಲ್ಲಿ ಲೈಂಗಿಕ ಶೋಷಣೆ ನಿಷೇಧ ಸಮಿತಿಯನ್ನು ರಚಿಸಲಾಗಿದೆ.

ಸಮಿತಿಯು ಕಾಲಾನುಕಾಲಕ್ಕೆ ಸಭೆ ಸೇರುತ್ತದೆ ಮತ್ತು ಪ್ರಸಕ್ತ ವರ್ಷದಲ್ಲಿ ಯಾವುದೇ ದೂರುಗಳು ಬಂದಿರುವುದಿಲ್ಲ.

35. ಆಂತರಿಕ ಹಣಕಾಸು ನಿಯಂತ್ರಣ:

ಕಂಪೆನಿಯಲ್ಲಿ ಸಾಕಷ್ಟು ಹಣಕಾಸು ನಿಯಂತ್ರಣಾ ವ್ಯವಸ್ಥೆ ಇರುತ್ತದೆ ಹಾಗೂ ಇದನ್ನು ಆಂತರಿಕ ಪರಿಶೋಧನಾ ಶಾಖೆಯ ಮೂಲಕ ಮತ್ತು ವಿಷಯ ಪರಿಣಿತರು ಹಾಗೂ ಇತರ ಅಧಿಕಾರಿಗಳಿಂದ ನಿರಂತರ ಪರಿಶೀಲನೆಯಿಂದ ಖಾತರಿ ಪಡಿಸಲಾಗುತ್ತದೆ.

36. ಸಾಂಸ್ಥಿಕ ಆಡಳಿತ ಅಭ್ಯಾಸಗಳು:

ಕಂಪನಿಯಲ್ಲಿ ಉತ್ತಮ ಸಾಂಸ್ಥಿಕ ಆಡಳಿತ ಅಭ್ಯಾಸಗಳನ್ನು ರೂಢಿಸಿಕೊಳ್ಳುವಲ್ಲಿ ನಿರಂತರ ಪ್ರಯತ್ನವಿರುತ್ತದೆ ಹಾಗೂ ಇದರಲ್ಲಿ ಈ ಕೆಳಕಂಡ ವಿಷಯಗಳು ಇರುತ್ತದೆ.

ಸ್ವತಂತ್ರ ವೃತ್ತಿ ನಿರತ ಕಂಪೆನಿ ಕಾರ್ಯದರ್ಶಿಯವರ ಮೂಲಕ ಕಂಪೆನಿ ಕಾರ್ಯದರ್ಶಿ ಶಾಖೆಯ ಕಾರ್ಯ ಚಟುವಟಿಕೆಗಳ ಪರಿಶೀಲನೆಯನ್ನು ಪ್ರತಿ ವರ್ಷ ಮಾಡಿಸಲಾಗುತ್ತದೆ. ಸೆಕ್ರಟೇರಿಯಲ್ ಆಡಿಟ್ ವರದಿಯನ್ನು ಕಂಪೆನಿಯ ವಾರ್ಷಿಕ ವರದಿಯೊಂದಿಗೆ ಲಗತ್ತಿಸಿದೆ.

37. ನಿರ್ದೇಶಕರುಗಳ ಮೌಲ್ಯಮಾಪನ ಮಾನದಂಡ:

ಮೆಸ್ಕಾಂ ಕಂಪೆನಿಯು ಕರ್ನಾಟಕ ರಾಜ್ಯ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುವುದರಿಂದ ನಿರ್ದೇಶಕರುಗಳ ಮೌಲ್ಯಮಾಪನ ಮಾನದಂಡ ಅನ್ವಯಿಸುವುದಿಲ್ಲ.

38. ಸಂಬಂಧಿತ ಸಂಸ್ಥೆಗಳೊಂದಿಗಿನ ವ್ಯವಹಾರಗಳು:

ಆರ್ಥಿಕ ವರ್ಷದಲ್ಲಿ ಸಂಬಂಧಿತ ಸಂಸ್ಥೆಗಳೊಂದಿಗಿನ ಎಲ್ಲಾ ವ್ಯವಹಾರಗಳು ಕಂಪೆನಿಯ ಸಾಮಾನ್ಯ ವ್ಯವಹಾರದ ಭಾಗವಾಗಿರುತ್ತದೆ ಮತ್ತು ತೋಳಂತರದ್ದಾಗಿರುತ್ತದೆ ಹಾಗೂ ಕಂಪೆನಿಯ ಹಿತಾಸಕ್ತಿಗೆ ವಿರುದ್ಧವಾಗಿರುವುದಿಲ್ಲ.

ಸಂಬಂಧಿತ ಸಂಸ್ಥೆಗಳಾದ ಕವಿಪ್ರನಿನಿ, ಪಿಸಿಕೆಎಲ್, ಕೆಪಿಸಿಎಲ್, ಎಂಪಿಎಂ ಮತ್ತು ಇತರೆ ಎಸ್ಕಾಂಗಳೊಂದಿಗಿನ ವ್ಯವಹಾರಗಳ ಸಂಕ್ಷಿಪ್ತ ಮಾಹಿತಿ ಈ ಕೆಳಗಿನಂತಿದೆ.

[₹ ರಲ್ಲಿ]

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಪಾವತಿಯ ಸ್ವರೂಪ	ವ್ಯವಹಾರಗಳು		ಶಿಲ್ಕುಗಳ ಸ್ವರೂಪ	ಬಾಕಿ ಶಿಲ್ಕು	
			ಆ.ವ. 2018-19	ಆ.ವ. 2017-18		31.03.2019 ರಲ್ಲಿರುವಂತೆ	31.03.2018 ರಲ್ಲಿರುವಂತೆ
1	ಕವಿಪ್ರನಿನಿ	ಪ್ರಸರಣಾ ಶುಲ್ಕಗಳು ಹಾಗೂ ಇತರ	22614.55	21804.19	ಸ್ವೀಕೃತಿ	6332.49	6169.30
2	ಬೆವಿಸಕಂ	ಎನರ್ಜಿ ಬ್ಯಾಲೆನ್ಸಿಂಗ್ ಹಾಗೂ ಇತರ	10270.70	4606.10	ಪಾವತಿ	15315.46	23314.72
3	ಹುವಿಸಕಂ	ಎನರ್ಜಿ ಬ್ಯಾಲೆನ್ಸಿಂಗ್ ಹಾಗೂ ಇತರ	-4834.70	10405.50	ಸ್ವೀಕೃತಿ	9893.40	14726.87
4	ಗುವಿಸಕಂ	ಎನರ್ಜಿ ಬ್ಯಾಲೆನ್ಸಿಂಗ್ ಹಾಗೂ ಇತರ	-8357.80	2544.60	ಪಾವತಿ	5586.14	2771.27
5	ಸೆಸ್ಕೋ	ಎನರ್ಜಿ ಬ್ಯಾಲೆನ್ಸಿಂಗ್ ಹಾಗೂ ಇತರ	-1242.20	1367.30	ಸ್ವೀಕೃತಿ	21202.85	23444.94
6	ಎಮ್.ಪಿ.ಎಮ್	ವಿದ್ಯುತ್ ಮಾರಾಟ	1884.89	1534.22	ಸ್ವೀಕೃತಿ	14932.89	13070.69
7	ಪಿ.ಸಿ.ಕೆ.ಎಲ್.	ಹಂಚಿಕೆ ವೆಚ್ಚಗಳು	127.14	103.94	ಸ್ವೀಕೃತಿ	32.23	87.36
8	ಕೆ.ಪಿ.ಸಿ.ಎಲ್.	ವಿದ್ಯುತ್ ಖರೀದಿ ಹಾಗೂ ಇತರ	31534.19	47095.56	ಪಾವತಿ	101111.22	103531.56

ಸಂಬಂಧಿತ ವ್ಯಕ್ತಿಗಳೊಂದಿಗಿನ ವ್ಯವಹರಣೆಯ ಬಹಿರಂಗಪಡಿಸುವಿಕೆಯು ಕರ್ನಾಟಕ ಸರ್ಕಾರದ ಒಡೆತನದಲ್ಲಿರುವ ವಿದ್ಯುತ್ ಸರಬರಾಜು ಕಂಪೆನಿಗಳು, ಕವಿಪ್ರನಿನಿ, ಪಿಸಿಕೆಎಲ್, ಎಮ್.ಪಿ.ಎಮ್. ಹಾಗೂ ಕವಿನಿನಿಯೊಂದಿಗಿನ ವ್ಯವಹಾರವನ್ನು ಸೀಮಿತಗೊಳಿಸಿದೆ. ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿರುವ ಇತರ ಯಾವುದೇ ಸಂಸ್ಥೆಗಳೊಂದಿಗೆ ವ್ಯವಹರಣೆಯನ್ನು ಖಚಿತ ಪಡಿಸಿಕೊಳ್ಳುವುದು ಅಥವಾ ನಿರ್ಣಯಿಸುವುದು ಕಂಪೆನಿಗೆ ಸಾಧ್ಯವಾಗಿರುವುದಿಲ್ಲ.

ಸೆಕ್ಷನ್ 134(3)(ಹೆಚ್) ಮತ್ತು ಕಂಪೆನಿ ಕಾಯ್ದೆಯ ಸೆಕ್ಷನ್ 188 & ಕಂಪೆನಿಗಳ(ಲೆಕ್ಕಪತ್ರಗಳು) 2014 ರ ನಿಯಮ 8(2) ರಲ್ಲಿ ತಿಳಿಸಿದಂತೆ ಸಂಬಂಧಿತ ಸಂಸ್ಥೆಗಳೊಂದಿಗಿನ ಗುತ್ತಿಗೆ/ ಕರಾರು/ವ್ಯವಹಾರಗಳನ್ನು ನಮೂನೆ ಎಒಸಿ–2ರಲ್ಲಿ ವರದಿ ಮಾಡಿ ಅದನ್ನು ಅನುಬಂಧ –4 ರಲ್ಲಿ ಲಗತ್ತಿಸಿದೆ.

39. ಅಪಾಯ ನಿರ್ವಹಣೆ:

ಕಂಪೆನಿಯ ಸಂಭಾವ್ಯ ಅಪಾಯಗಳು ಮತ್ತು ಅದನ್ನು ತಗ್ಗಿಸಲು ಇರುವ ಕ್ರಮಗಳು ಈ ಕೆಳಗಿನಂತಿವೆ:

ಎ. ಕಾರ್ಯಕಾರಿ ಮತ್ತು ಸುರಕ್ಷತೆಯ ಅಪಾಯ:

ವಿದ್ಯುತ್ ವಾಹಕಗಳ ಕಡಿತ, ವಿದ್ಯುತ್ ಪರಿವರ್ತಕಗಳ ಕಾರ್ಯನಾಶ ಇತ್ಯಾದಿಗಳಿಂದ ವಿದ್ಯುತ್ ವಿತರಣೆಯಲ್ಲಿ ಆಗುವ ವ್ಯತ್ಯಾಸಗಳು ಸಂಭಾವ್ಯ ಅಡಚಣೆಗಳಾಗಿರುತ್ತದೆ. ಅನಿಯಮಿತ ವಿದ್ಯುತ್ ವಿತರಣೆಗಾಗಿ ಕಂಪೆನಿಯು ನಿರಂತರವಾಗಿ ವಿದ್ಯುತ್ ವಾಹಕಗಳ ಸುಸ್ಥಿತಿಯ ಬಗ್ಗೆ ನಿಗಾವಹಿಸುತ್ತದೆ ಮತ್ತು ಕಾರ್ಯಕ್ಷಮತೆಯ ವೃದ್ಧಿಗಾಗಿ ಕೆಲಸ ನಿರ್ವಹಿಸುತ್ತದೆ. ಕಾರ್ಯಗತ ಅಡಚಣೆಗಳನ್ನು ನಿಯಂತ್ರಿಸುವ ಸಲುವಾಗಿ ಅಡಚಣೆಯ ಮೂಲ ಕಾರಣಗಳ ವಿಶ್ಲೇಷಣೆ ಹಾಗೂ ಕಂಪೆನಿಯಲ್ಲಿ ವಿದ್ಯುತ್ ವಾಹಕಗಳ ಮತ್ತು ಇತರೆ ಪರಿಕರಗಳ ರಚನಾತ್ಮಕ ತಪಾಸಣೆ ಮಾಡಲಾಗುತ್ತದೆ.

ಬಿ. ಹಣಕಾಸು ಅಪಾಯಗಳ ನಿರ್ವಹಣೆ

ಮೆಸ್ಕಾಂ ಒಂದು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಯಾಗಿದ್ದು, ಅನೇಕ ಶಾಸನಬದ್ಧ ಕಾನೂನುಗಳು ಹಾಗೂ ನಿಯಮಗಳ ಪರಿಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರತೀ ವರ್ಷವೂ ವಾರ್ಷಿಕ ನಿರ್ವಹಣೆಯ ವಿಮರ್ಶೆ ಹಾಗೂ ವಾರ್ಷಿಕ ಕಂದಾಯ ಅಗತ್ಯತೆಗಳ ಪರಿಷ್ಕರಣೆಗಾಗಿ ಕಂಪೆನಿಯು ಕ.ವಿ.ನಿ. ಆಯೋಗದ (ನಿಯಂತ್ರಕ) ಮುಂದೆ ಅರ್ಜಿ ಸಲ್ಲಿಸುತ್ತಿರುವುದರಿಂದ ಅದು ನಿಯಂತ್ರಣಾ ಅಪಾಯಕ್ಕೆ ಒಳಪಟ್ಟಿರುತ್ತದೆ. ಸಾಲಗಳ ಅಪಾಯ, ದ್ರವ್ಯತಾ ಅಪಾಯ ಹಾಗೂ ಮಾರುಕಟ್ಟೆ ಅಪಾಯಗಳಿಗೆ ಒಳಪಡಬಹುದಾದ ಕಂಪೆನಿಯ ಕಾರ್ಯಚಟುವಟಿಕೆಗಳು ಪ್ರತೀ ವರ್ಷವೂ ನಿಯಂತ್ರಕ (ಕೆಇಆರ್‌ಸಿ) ರಿಂದ ನಿಯತವಾಗಿ ಪರಿವೀಕ್ಷಣೆಗೆ ಒಳಪಡುತ್ತವೆ.

ಗ್ರಾಹಕರ ಸಂಖ್ಯೆಯಲ್ಲಿ ಸ್ಥಿರವಾದ ಏರಿಕೆಯಿರುವುದರಿಂದ ಹಾಗೂ ಚಾಲ್ತಿ ಇರುವ ಹಾಗೂ ಹೊಸ ಗ್ರಾಹಕರಿಂದ ವಿದ್ಯುಚ್ಛಕ್ತಿಗೆ ಬೇಡಿಕೆಯಿರುವುದರಿಂದ ಬೇಡಿಕೆಯ ಅಪಾಯವನ್ನು ನಿರೀಕ್ಷಿಸಲಾಗಿಲ್ಲ.

ಕಂಪೆನಿಯ ಮೇಲ್ದರ್ಜೆಯ ವ್ಯವಸ್ಥಾಪನಾ ಮಂಡಳಿಯು, ಅಪಾಯ ನಿರ್ವಹಣಾ ನಿಯಮಗಳು ಹಾಗೂ ವ್ಯವಸ್ಥೆಗಳನ್ನು ನಿಯತವಾಗಿ ಮೇಲ್ವಿಚಾರಣೆ ನಡೆಸುತ್ತದೆ.

ಕಂಪೆನಿಯು ಅದರ ಹಣಕಾಸು ಸಾಧನಗಳ ಬಳಕೆಯಿಂದ ಕೆಳಕಂಡ ಅಪಾಯಗಳಿಗೆ ತೆರೆದುಕೊಂಡಿರುತ್ತದೆ.

ಅ. ಸಾಲಗಳ ಅಪಾಯ:

ಗ್ರಾಹಕರು ಅಥವಾ ಹಣಕಾಸು ಸಾಧನಗಳಿಗೆ ಸಂಬಂಧಿತ ವ್ಯಕ್ತಿಗಳು ಅವುಗಳ ಕರಾರಿನ ಕರ್ತವ್ಯಗಳನ್ನು ಪೂರೈಸಲು ವಿಮುಖರಾದಾಗ ಕಂಪೆನಿಗಾಗುವ ಆರ್ಥಿಕ ನಷ್ಟಗಳು ಸಾಲಗಳ ಅಪಾಯಗಳಾಗಿರುತ್ತವೆ ಹಾಗೂ ಇವುಗಳು ಪ್ರಮುಖವಾಗಿ ಕಂಪೆನಿಯ ವ್ಯಾಪಾರ ಸಂಬಂಧಿ ಬರತಕ್ಕವುಗಳು, ಸಿಬ್ಬಂದಿ ಮುಂಗಡಗಳು ಹಾಗೂ ಬ್ಯಾಂಕುಗಳು ಮತ್ತು ಇತರರಲ್ಲಿ ಇರಿಸಿದ ಠೇವಣಿಗಳಿಂದ ಉದ್ಭವಿಸುತ್ತವೆ.

ವ್ಯಾಪಾರ ಸಂಬಂಧಿ ಬರತಕ್ಕವುಗಳು, ಮುಖ್ಯವಾಗಿ ವಿವಿಧ ವರ್ಗಗಳ ಗ್ರಾಹಕರಿಗೆ ವಿದ್ಯುತ್ ಮಾರಾಟದ ಬಾಬ್ತು ಸ್ವೀಕೃತಿಗಳು ಹಾಗೂ ಇತರ ವಿದ್ಯುತ್ ಸರಬರಾಜು ಕಂಪೆನಿಗಳಿಂದ ಬರಬೇಕಾದ ಮೊತ್ತಗಳನ್ನು ಒಳಗೊಂಡಿರುತ್ತದೆ.

ಬರತಕ್ಕವುಗಳ ಇನ್ನೊಂದು ಪ್ರಮುಖ ಪಾಲುದಾರನೆಂದರೆ ಇಂಧನ ಸಮನ್ವಯಗಳಿಗಾಗಿ ಇತರ ವಿದ್ಯುತ್ ಸರಬರಾಜು ಕಂಪೆನಿಗಳಿಂದ ಬರಬೇಕಾಗಿರುವುದು. ಇವುಗಳು ಕರ್ನಾಟಕ ಸರಕಾರದ ಸಾರ್ವಭೌಮ ಕಂಪೆನಿಗಳಾಗಿರುವುದರಿಂದ ಕೆಟ್ಟ ಸಾಲಗಳಾಗಿ ಪರಿವರ್ತನೆಗೊಳ್ಳುವ ಅಪಾಯವನ್ನು ಮುಂದಾಲೋಚಿಸಲಾಗಿಲ್ಲ. ಮುಂದುವರೆದು ಅನುಮಾನಾಸ್ಪದ ಸಾಲಗಳ ಬಾಬ್ತು ಒಟ್ಟು ಬರತಕ್ಕವುಗಳ ಮೇಲೆ 4% ಅವಕಾಶವನ್ನು ಕಲ್ಪಿಸಲಾಗಿದೆ.

ಕಂಪೆನಿಯು ತನ್ನ ಬ್ಯಾಂಕ್ ಠೇವಣಿಗಳನ್ನು ವೈವಿಧ್ಯಗೊಳಿಸಿ ಪ್ರಸಿದ್ಧವಾದ ಹಾಗೂ ವಿಶ್ವಾಸಾರ್ಹವಾದ ಬ್ಯಾಂಕುಗಳಲ್ಲಿ ಮಾತ್ರ ಠೇವಣಿಯಿರಿಸಿದೆ.

ಆ. ದ್ರವ್ಯತಾ ಅಪಾಯಗಳು:

ನಗದು ಅಥವಾ ಇನ್ನೊಂದು ಆರ್ಥಿಕ ಆಸ್ತಿಯನ್ನು ವಿತರಿಸುವುದರ ಮೂಲಕ ಇತ್ಯರ್ಥಗೊಳಿಸಬೇಕಾದ ಆರ್ಥಿಕ ಜವಾಬ್ದಾರಿಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಪೂರೈಸುವಲ್ಲಿ ಕಂಪೆನಿಯು ಕಷ್ಟವನ್ನು ಎದುರಿಸಿದಲ್ಲಿ ಅಂತಹ ಅಪಾಯವು ದ್ರವ್ಯತಾ ಅಪಾಯವಾಗಿರುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ, ಸಾಮಾನ್ಯ ಅಥವಾ ಒತ್ತಡದ ಪರಿಸ್ಥಿತಿಗಳಲ್ಲಿಯೂ, ಕಂಪೆನಿಗೆ ಒಪ್ಪಿಕೊಳ್ಳಲಾಗದ ನಷ್ಟಗಳು ಸಂಭವಿಸದಂತೆ, ಕಂಪೆನಿಯ ಖ್ಯಾತಿಗೆ ಚ್ಯುತಿ ಬಾರದಂತೆ ಕಂಪೆನಿಯ

ಜವಾಬ್ದಾರಿಗಳಾದ ನಿರೀಕ್ಷಿತ ಕಾರ್ಯಾಚರಣೆ ವೆಚ್ಚಗಳು, ಹಣಕಾಸು ಹೊಣೆಗಾರಿಕೆಗಳ ಮರುಪಾವತಿಗಳಿಗೆ ಅಗತ್ಯವಿರುವಷ್ಟು ನಗದನ್ನು ಹೊಂದಲು ಸಾಕಷ್ಟು ದ್ರವ್ಯತೆಯಿರುವುದನ್ನು ಖಚಿತಪಡಿಸಿಕೊಳ್ಳುವುದು ಕಂಪೆನಿಯ ದ್ರವ್ಯತೆಯನ್ನು ನಿರ್ವಹಿಸುವ ಪ್ರಮುಖ ಕಾರ್ಯವಿಧಾನವಾಗಿದೆ.

ಪ್ರಾಪ್ತವಾದ ಹಣಕಾಸು ಜವಾಬ್ದಾರಿಗಳನ್ನು ಪೂರೈಸಲು, ಬ್ಯಾಂಕ್ ಠೇವಣಿಗಳನ್ನೂ ಒಳಗೊಂಡಂತೆ ನಗದು ಮತ್ತು ನಗದು ಸಮಾನಗಳು ಹಾಗೂ ಬದ್ಧತೆಯುಳ್ಳ ಸಾಲ ಸೌಲಭ್ಯಗಳ ಲಭ್ಯತೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಾಪಾಡಿಕೊಳ್ಳುವುದರ ಮೂಲಕ ಕಂಪೆನಿಯು ತನ್ನ ದ್ರವ್ಯತಾ ಅಪಾಯಗಳನ್ನು ನಿರ್ವಹಿಸುತ್ತದೆ. ಆರ್ಥಿಕ ಆಸ್ತಿಗಳು ಹಾಗೂ ಜವಾಬ್ದಾರಿಗಳ ಪಕ್ವತೆಯ ತುಲನೆಯಿಂದ, ಜವಾಬ್ದಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ದ್ರವ್ಯ ಆಸ್ತಿಗಳ ಮಟ್ಟವನ್ನು ಪರಿಗಣಿಸಿ, ಪ್ರತೀ ವರ್ಷದ ಆರಂಭದಲ್ಲಿ ನಗದು ಹರಿವನ್ನು ಅಂದಾಜಿಸುವುದನ್ನೂ ಸಹ ದ್ರವ್ಯತಾ ನಿರ್ವಹಣೆಯು ಒಳಗೊಂಡಿರುತ್ತದೆ.

ಸಾಲಗಳು ಮತ್ತು ವ್ಯಾಪಾರ ಪಾವತಿಗಳನ್ನು, ಆಸ್ತಿಗಳು ಹಾಗೂ ಬರತಕ್ಕವುಗಳ ಭದ್ರತೆಗೆ ಒಳಪಡಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು, ವಿದ್ಯುತ್ ಖರೀದಿಗಾಗಿ ಪಾವತಿಗಳ ಪ್ರಮುಖ ಪಾಲುದಾರನಾಗಿರುತ್ತದೆ.

ಇ. ಮಾರುಕಟ್ಟೆ ಅಪಾಯಗಳು

ಒಂದು ಆರ್ಥಿಕ ಸಾಧನದ ಮೌಲ್ಯದ ಬದಲಾವಣೆಯ ಕಾರಣದಿಂದ, ಭವಿಷ್ಯದ ಆದಾಯಗಳು ಅಥವಾ ವಾಸ್ತವಿಕ ಮೌಲ್ಯ ಅಥವಾ ಭವಿಷ್ಯದ ನಗದು ಹರಿವಿನಲ್ಲಾಗುವ ನಷ್ಟದ ಅಪಾಯವು ಮಾರುಕಟ್ಟೆ ಅಪಾಯವಾಗಿರುತ್ತದೆ. ಬಡ್ಡಿದರಗಳಲ್ಲಿನ ಬದಲಾವಣೆ, ವಿದೇಶೀ ವಿನಿಮಯ ದರಗಳಲ್ಲಿನ ಬದಲಾವಣೆ ಮತ್ತು ಮಾರುಕಟ್ಟೆ ಅಪಾಯಗಳ ಸೂಕ್ಷ್ಮ ಸಾಧನಗಳ ಮೇಲೆ ಪರಿಣಾಮ ಬೀರುವ ಇತರ ಮಾರುಕಟ್ಟೆ ಬದಲಾವಣೆಗಳ ಪರಿಣಾಮವಾಗಿ ಆರ್ಥಿಕ ಸಾಧನಗಳ ಮೌಲ್ಯದಲ್ಲಿ ಬದಲಾವಣೆಗಳಾಗುತ್ತವೆ. ಸ್ಥಿರ ಹಾಗೂ ಚಲ ಬಡ್ಡಿದರಗಳಲ್ಲಿ ಸಾಲಗಳನ್ನು ಪಡೆದುಕೊಂಡಿರುವುದರಿಂದ ಕಂಪೆನಿಯು ಪ್ರಮುಖವಾಗಿ ಬಡ್ಡಿ ದರಗಳ ಅಪಾಯಕ್ಕೆ ತೆರೆದುಕೊಂಡಿರುತ್ತದೆ.

40. ಸಾಮಾನ್ಯ ವಿಚಾರಗಳು :

ಮಂಡಳಿಯು ಈ ಕೆಳಗಿನವರ ಸೇವೆಯನ್ನು ಸಾದರ ಪೂರ್ವಕ ದಾಖಲಿಸಲು ಇಚ್ಛಿಸುತ್ತದೆ.

- ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ, ಮಹಾಲೇಖಪಾಲರು ಮತ್ತು ನಿಯಂತ್ರಕರು, ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಮತ್ತು ಪವರ್ ಕಂಪೆನಿ ಆಫ್ ಕರ್ನಾಟಕ ಲಿಮಿಟೆಡ್ ಮುಂತಾದವುಗಳು ನೀಡಿದ ಸಹಾಯ, ಮಾರ್ಗದರ್ಶನ ಮತ್ತು ಸಹಕಾರಕ್ಕಾಗಿ.
- ಮೆ. ಗ್ರಾಮೀಣ ವಿದ್ಯುದೀಕರಣ ನಿಗಮ, ಪವರ್ ಫೈನಾನ್ಸ್ ಕಾರ್ಪೋರೇಷನ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್, ವಿಜಯಾ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕ ಬ್ಯಾಂಕ್, ಪಂಜಾಬ್ & ಸಿಂಧ್ ಬ್ಯಾಂಕ್, ಇಂಡಿಯನ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳು ನೀಡಿದ ಹಣಕಾಸಿನ ಬೆಂಬಲಕ್ಕಾಗಿ.
- ಸಾಕಷ್ಟು ಪ್ರಚಾರ ನೀಡಿ ಸಾರ್ವಜನಿಕರಲ್ಲಿ ಅರಿವು ಉಂಟುಮಾಡಿರುವುದಕ್ಕೆ ಮಾಧ್ಯಮದವರಿಗೆ.
- ಮಾರ್ಗದರ್ಶನ ಮತ್ತು ಬೆಂಬಲ ನೀಡಿದ ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ, ಕಾಸ್ಟ್ ಆಡಿಟರ್‌ರವರಿಗೆ ಮತ್ತು ಸೆಕ್ರೆಟರಿಯಲ್ ಆಡಿಟರ್‌ರವರಿಗೆ..
- ಗಣಕೀಕೃತ ಬಿಲ್ಲುಗಳನ್ನು ಜಾರಿಗೊಳಿಸುವಲ್ಲಿ ನೆರವಾದ ಏಜೆನ್ಸಿಗಳಿಗೆ.
- ಸಹಕಾರ ಮತ್ತು ಸಾಂಘಿಕ ಭಾಗವಹಿಸುವಿಕೆಗಾಗಿ ನೌಕರರು ಮತ್ತು ನೌಕರ ಸಂಘಗಳಿಗೆ
- ಸರಬರಾಜುದಾರರು, ಗುತ್ತಿಗೆದಾರರು ಮತ್ತು ಸಲಹೆಗಾರರು ಇವರ ಸಹಕಾರಕ್ಕಾಗಿ.
- ಕಂಪೆನಿಗೆ ಯಾವುದೇ ಹಿಡುವಳಿ ಕಂಪೆನಿಗಳು ಇರುವುದಿಲ್ಲ. ಆದುದರಿಂದ ಸೆಕ್ಷನ್ 197(14) ಪ್ರಕಾರ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಹಿಡುವಳಿ ಕಂಪೆನಿಗಳಿಂದ ದಲ್ಲಾಳಿ ಹಣ ಪಾವತಿಯ ವಿಷಯ ಅನ್ವಯಿಸುವುದಿಲ್ಲ.
- ಕಂಪೆನಿಯ ಲೆಕ್ಕ ಪರಿಶೋಧಕರು ಕಂಪೆನಿಯಲ್ಲಿ ಯಾವುದೇ ರೀತಿಯ ವಂಚನೆಗಳಾಗಿರುವ ಬಗ್ಗೆ ನಿರ್ದೇಶಕ ಮಂಡಳಿಗೆ ಅಥವಾ ಆಡಿಟ್ ಸಮಿತಿಗೆ ವರದಿ ಮಾಡಿರುವುದಿಲ್ಲ.
- ಕಾರ್ಯಸ್ಥಳದಲ್ಲಿ ಲೈಂಗಿಕ ಶೋಷಣೆ (ತಡೆ, ನಿಷೇಧ ಮತ್ತು ನಿವಾರಣೆ) ಕಾಯಿದೆ 2013 ರ ಅಡಿಯಲ್ಲಿ ಆಂತರಿಕ ದೂರು ಸಮಿತಿಯ ರಚನೆಗೆ ಸಂಬಂಧಿಸಿದಂತೆ ಕಂಪೆನಿಯು ನಿಯಮವನ್ನು ಪಾಲಿಸಿರುತ್ತದೆ.

ಸ್ಥಳ: ಮಂಗಳೂರು
ದಿನಾಂಕ: 19.09.2019

ಸಹಿ/-
(ಡಾ. ಎನ್. ಮಂಜುಳ)
ಅಧ್ಯಕ್ಷರು

ಅನುಬಂಧ–1

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತದ ಸದಸ್ಯರಿಗೆ ಸೆಕ್ರೆಟೇರಿಯಲ್ ಆಡಿಟ್ ವರದಿ 2018–19

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ ("ಕಂಪೆನಿ") (CIN NO : U40109KA2002SGC030425) ಇದಕ್ಕೆ ಅನ್ವಯಿಸುವ ಶಾಸನ ನಿಯಮಗಳ ಹಾಗೂ ಉತ್ತಮ ಸಾಂಸ್ಥಿಕ ಅಭ್ಯಾಸಗಳ ಬಗ್ಗೆ ಪರಿಶೋಧನೆಯನ್ನು ನಡೆಸಿರುತ್ತೇವೆ. ಸಾಂಸ್ಥಿಕ ನಡೆ/ಶಾಸನ ನಿಯಮಗಳ ಅನುಪಾಲನೆಗಳನ್ನು ಪರಿಶೀಲಿಸುವಲ್ಲಿ ತಳಹದಿಯಾಗಿ ಹಾಗೂ ಈ ಬಗ್ಗೆ ನನ್ನ ಅಭಿಪ್ರಾಯವನ್ನು ನೀಡುವ ನಿಟ್ಟಿನಲ್ಲಿ ಸೆಕ್ರೆಟೇರಿಯಲ್ ಆಡಿಟನ್ನು ನಿರ್ವಹಿಸಲಾಗಿದೆ.

ಪರಿಶೀಲನಾ ಅವಧಿಯಲ್ಲಿ ನನಗೆ ನೀಡಲಾದ ಪುಸ್ತಕಗಳು, ದಾಖಲೆಗಳು, ನಡವಳಿ ಪುಸ್ತಕಗಳು, ನಮೂನೆಗಳು ಮತ್ತು ವಾರ್ಷಿಕ ವರದಿ ಸಲ್ಲಿಕೆಯ ಪ್ರತಿಗಳು ಹಾಗೂ ಕಂಪೆನಿಯಲ್ಲಿ ನಿರ್ವಹಿಸುತ್ತಿರುವ ಇತರ ದಾಖಲೆಗಳ ಪರಿಶೀಲನೆ ಹಾಗೂ ಕಂಪೆನಿಯಲ್ಲಿ ನಿರ್ವಹಿಸುತ್ತಿರುವ ಇತರ ದಾಖಲೆಗಳ ಪರಿಶೀಲನೆ ಹಾಗೂ ಕಂಪೆನಿಯಿಂದ ಅಧಿಕಾರಿಗಳು, ಮಧ್ಯವರ್ತಿಗಳು ಹಾಗೂ ಅಧಿಕೃತ ಪ್ರತಿನಿಧಿಗಳು ನೀಡಿದ ಮಾಹಿತಿಯ ಆಧಾರದಲ್ಲಿ ನಾನು ಈ ಮೂಲಕ ವರದಿ ನೀಡುವುದೇನೆಂದರೆ, ನನ್ನ ಅಭಿಪ್ರಾಯದ ಪ್ರಕಾರ 31 ಮಾರ್ಚ್ 2019 ಕ್ಕೆ ಅಂತ್ಯಗೊಳ್ಳುವ ಆರ್ಥಿಕ ವರ್ಷದಲ್ಲಿ ಈ ಕೆಳಗೆ ನಮೂದಿಸಿದ ಕಾಯ್ದೆ ನಿಯಮಗಳನ್ನು ಕಂಪೆನಿಯು ಪಾಲಿಸಿರುತ್ತದೆ ಹಾಗೂ ಈ ಕೆಳಗೆ ನೀಡಲಾದ ವರದಿ, ವ್ಯಾಪ್ತಿಗೆ ಒಳಪಟ್ಟು ಕಂಪೆನಿಯಲ್ಲಿ ಸರಿಯಾದ ಮಂಡಳಿ ಪ್ರಕ್ರಿಯೆಗಳು ಮತ್ತು ಅನುಪಾಲನಾ ಕ್ರಮಗಳು ಇರುತ್ತದೆ.

ಆರ್ಥಿಕ ವರ್ಷ 2018–19 ಕ್ಕೆ ಅಂತ್ಯಗೊಳ್ಳುವ ಅವಧಿಗೆ ಸಂಬಂಧಿಸಿದಂತೆ ಕಂಪೆನಿಯು ನಿರ್ವಹಿಸುತ್ತಿರುವ ದಾಖಲೆ ಪುಸ್ತಕ, ನಡವಳಿ ಪುಸ್ತಕ, ನಮೂನೆ ಮತ್ತು ಸಲ್ಲಿಸಿಲಾದ ವರದಿ ಹಾಗೂ ಅಗತ್ಯ ದಾಖಲೆಗಳನ್ನು ಈ ಕೆಳಕಂಡ ಕಾಯ್ದೆಗಳ ಅನುಸಾರ ನಾನು ಪರಿಶೀಲಿಸಿರುತ್ತೇನೆ.

1. 2013 ರ ಕಂಪೆನಿ ಕಾಯ್ದೆ ಮತ್ತು ಇದರ ಅಡಿಯಲ್ಲಿ ನೀಡಲಾದ ನಿಬಂಧನೆಗಳು.
2. ಕಂಪೆನಿಯು ಪಟ್ಟಿ (listed) ಕಂಪೆನಿಯಾಗಿರದ ಕಾರಣ, 1956 ರ ಸೆಕ್ಯುರಿಟೀಸ್ ಒಪ್ಪಂದ (ನಿಯಂತ್ರಣ) ಕಾಯ್ದೆ ಮತ್ತು ಇದರ ಅಡಿಯಲ್ಲಿ ಬರುವ ನಿಬಂಧನೆಗಳು ಈ ಕಂಪೆನಿಗೆ ಅನ್ವಯಿಸುವುದಿಲ್ಲ,
3. ಕಂಪೆನಿಯು ಪಟ್ಟಿ (listed) ಕಂಪೆನಿಯಾಗಿರದ ಕಾರಣ, 1996 ರ ಠೇವಣಿಗಳ (Depositories) ಕಾಯ್ದೆ ಮತ್ತು ಇದರ ಅಡಿಯಲ್ಲಿ ಬರುವ ನಿಯಮಗಳು, ಬೈಲಾಗಳು ಈ ಕಂಪೆನಿಗೆ ಅನ್ವಯಿಸುವುದಿಲ್ಲ,
4. 1999 ರ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಮತ್ತು ಇದರಡಿಯಲ್ಲಿ ರೂಪಿಸಲಾದ ನಿಯಮಗಳು, ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಹೊರ ವಾಣಿಜ್ಯ ಸಾಲಗಳ ಪರಿಧಿ.
5. ಕಂಪೆನಿಯು ಪಟ್ಟಿ (listed) ಕಂಪೆನಿಯಾಗಿರದ ಕಾರಣ, 1992 ರ ಭಾರತೀಯ ಸೆಕ್ಯುರಿಟೀಸ್ ಮತ್ತು ವಿನಿಮಯ ಕಾಯ್ದೆ (SEBI Act) ಅಡಿಯಲ್ಲಿ ರೂಪಿಸಲಾದ ಈ ಕೆಳಕಂಡ ನಿಯಮ ಮತ್ತು ಮಾರ್ಗದರ್ಶಿ ಸೂತ್ರಗಳು ಅನ್ವಯಿಸುವುದಿಲ್ಲ.
   - ಅ. 2011 ರ ಭಾರತೀಯ ಸೆಕ್ಯುರಿಟೀಸ್ ಮತ್ತು ವಿನಿಮಯ ಮಂಡಳಿ (ಗಣನೀಯ ಪಾಲು ಖರೀದಿ ಮತ್ತು ಸ್ವಾಧೀನ) ಅಧಿನಿಯಮ.
   - ಆ. 2015 ರ ಭಾರತೀಯ ಸೆಕ್ಯುರಿಟೀಸ್ ಮತ್ತು ವಿನಿಮಯ ಮಂಡಳಿ (ಆಂತರಿಕ ವ್ಯವಹಾರ ನಿಷೇದ) ಅಧಿನಿಯಮ.
   - ಇ. 2009ರ ಭಾರತೀಯ ಸೆಕ್ಯುರಿಟೀಸ್ ಮತ್ತು ವಿನಿಮಯ ಮಂಡಳಿ (ಬಂಡವಾಳ ನೀಡಿಕೆ ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆ) ಅಧಿನಿಯಮ.
   - ಈ. 2014 ರ ಭಾರತೀಯ ಸೆಕ್ಯುರಿಟೀಸ್ ಮತ್ತು ವಿನಿಮಯ ಮಂಡಳಿ (ಪಾಲು ಬಂಡವಾಳ ಆಧಾರಿತ ಕಾರ್ಮಿಕ ಸೌಲಭ್ಯ) ಅಧಿನಿಯಮ.
   - ಉ. 2008 ರ ಭಾರತೀಯ ಸೆಕ್ಯುರಿಟೀಸ್ ಮತ್ತು ವಿನಿಮಯ ಮಂಡಳಿ (ಸಾಲ ಪತ್ರಗಳ ನೀಡಿಕೆ ಮತ್ತು ಪಟ್ಟಿ ಮಾಡುವಿಕೆ) ಅಧಿನಿಯಮ.
   - ಊ. ಕಂಪೆನಿ ಕಾಯ್ದೆ ಹಾಗೂ ಗಿರಾಕಿಯೊಂದಿಗಿನ ವ್ಯವಹಾರಕ್ಕೆ ಸಂಬಂಧಿಸಿದಂತೆ 1993 ರ ಭಾರತೀಯ ಸೆಕ್ಯುರಿಟೀಸ್ ಮತ್ತು ವಿನಿಮಯ ಮಂಡಳಿ (ನೋಂದಣಾಧಿಕಾರಿ ಮತ್ತು ಪಾಲು ಬಂಡವಾಳ ವರ್ಗಾವಣಾ ಮಧ್ಯವರ್ತಿ) ಅಧಿನಿಯಮ.
   - ಋ. 2009 ರ ಭಾರತೀಯ ಭದ್ರತಾ ಮತ್ತು ವಿನಿಮಯ ಮಂಡಳಿ (ಈಕ್ವಿಟಿ ಪಾಲು ಬಂಡವಾಳದ ಡೀಲಿಸ್ಟಿಂಗ್) ಅಧಿನಿಯಮ ಮತ್ತು,
   - ಎ. 1998 ರ ಭಾರತೀಯ ಭದ್ರತಾ ಮತ್ತು ವಿನಿಮಯ ಮಂಡಳಿ (ಈಕ್ವಿಟಿ ಪಾಲು ಬಂಡವಾಳದ ಹಿಂಪಡೆಯುವಿಕೆ) ಅಧಿನಿಯಮ.
6. **ಈ ಕೆಳಕಂಡ ಇತರ ಕಾನೂನುಗಳು ಕಂಪೆನಿಗೆ ಅನ್ವಯಿಸುತ್ತದೆ.**
   - ಎ. ವಿದ್ಯುಚ್ಛಕ್ತಿ ಕಾಯ್ದೆ 2003
   - ಬಿ ಗುತ್ತಿಗೆ ಕಾರ್ಮಿಕ (ನಿಯಂತ್ರಣಾ ಮತ್ತು ನಿರ್ಮೂಲನೆ) ಕಾಯ್ದೆ 1970

ಸಿ ವೇತನ ಪಾವತಿ ಕಾಯ್ದೆ 1936

ಡಿ ಕೈಗಾರಿಕಾ ವಿವಾದಗಳ ಕಾಯ್ದೆ 1947

ಇ ನೌಕರರ ರಾಜ್ಯ ವಿಮಾ ಕಾಯ್ದೆ 1948

ಎಫ್ ಮಾತೃತ್ವ ಲಾಭ ಕಾಯ್ದೆ 1961

ಜಿ ಕನಿಷ್ಠ ವೇತನ ಕಾಯ್ದೆ 1948

ಎಚ್ ಬೋನಸ್ ಪಾವತಿ ಕಾಯ್ದೆ 1965

ಐ ಗ್ರ್ಯಾಚುವಿಟಿ ಪಾವತಿ ಕಾಯ್ದೆ 1972

ಜೆ ನೌಕರರ ಭವಿಷ್ಯ ನಿಧಿ ಮತ್ತು ಇತರೆ ಭವಿಷ್ಯ ಕಾಯ್ದೆ 1952

ಕೆ ಪರಿಸರ (ರಕ್ಷಣೆ) ಕಾಯ್ದೆ 1986

ಎಲ್ ಜಲ (ರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣಾ) ಕಾಯ್ದೆ 1974 ಮತ್ತು

ಎಮ್ ಕಾರ್ಯಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಷೋಷಣೆ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ 2013 ಮತ್ತು ತತ್ಸಂಬಂಧವಾದ ನಿಯಮಗಳು

ಎನ್ ವಾಯು (ರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣಾ) ಕಾಯ್ದೆ 1981 ಮತ್ತು ಅದರಡಿಯಲ್ಲಿ ಬರುವ ನಿಯಮಗಳು ಮತ್ತು ಅನ್ವಯಿಸಬಹುದಾದ ಈ ಕೆಳಕಂಡ ಷರತ್ತುಗಳನ್ನು ಸಹ ನಾನು ಪರಿಶೀಲಿಸಿರುತ್ತೇನೆ.

ಅ. ಭಾರತೀಯ ಕಂಪೆನಿ ಕಾರ್ಯದರ್ಶಿ ಸಂಸ್ಥೆ ನವದೆಹಲಿಯಿಂದ ನೀಡಲ್ಪಡುವ ಕಾರ್ಯದರ್ಶಿಯ ಪ್ರಮಾಣಿತಗಳು 1&2.

ಆ. ಕಂಪೆನಿಯು ಪಟ್ಟಿ (listed) ಕಂಪೆನಿಯಾಗಿರದ ಕಾರಣ, ಭದ್ರತಾ ವಿನಿಮಯ ಸಂಸ್ಥೆಯೊಂದಿಗೆ ಮಾಡಲಾದ ಲಿಸ್ಟಿಂಗ್ ಒಪ್ಪಂದಗಳು ಕಂಪೆನಿಗೆ ಅನ್ವಯಿಸುವುದಿಲ್ಲ.

ಪುನರಾವಲೋಕನದ ಸದರಿ ಅವಧಿಯಲ್ಲಿ ಕಂಪೆನಿಯು ಕಾಯ್ದೆ, ನಿಯಮ, ನಿಯಂತ್ರಣ, ಮಾರ್ಗದರ್ಶಿ ಸೂತ್ರ, ಗುಣಮಟ್ಟ ಇತ್ಯಾದಿಗೆ ಸಂಬಂಧಿಸಿದ ನಿಬಂಧನೆಗಳನ್ನು ಗಮನಿಸಲಾದ ಈ ಕೆಳಕಂಡ ಅಂಶಗಳಿಗೊಳಪಟ್ಟು ಸಾಮಾನ್ಯವಾಗಿ ಪಾಲಿಸಿರುತ್ತದೆ.

ಅ. ಕಂಪೆನಿಯು ಕಾರ್ಯದರ್ಶಿಯ ಪ್ರಮಾಣಿತ 1 ರ ಪ್ರಕಾರ ನಿರ್ದೇಶಕ ಮಂಡಳಿ ಸಭೆಯನ್ನು ಆಯೋಜಿಸಿರುವುದಿಲ್ಲ. ಕೇವಲ ಮೂರು ಸಭೆಗಳನ್ನು ಮಾತ್ರ ನಡೆಸಿರುತ್ತದೆ. 71 ನೇ ಮಂಡಳಿ ಸಭೆಯು ಎರಡು ಬಾರಿ ಮುಂದೂಡಲ್ಪಟ್ಟಿರುತ್ತದೆ. ಆರ್ಥಿಕ ವರ್ಷ 2017–18 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು, ನಿರ್ದೇಶಕರ ವರದಿಯನ್ನು ಮತ್ತು 16 ನೇ ವಾರ್ಷಿಕಸಭೆಯ ವಿಷಯಗಳನ್ನು ಸದರಿ ಸಭೆಯಲ್ಲಿ ಹೆಚ್ಚುವರಿ ವಿಷಯವಾಗಿ ತರಲಾಗಿದೆ.

ಆ. 2013 ರ ಕಂಪೆನಿ ಕಾಯ್ದೆಯ ಕಲಂ 178 ರ ಪ್ರಕಾರ ಕಂಪೆನಿಯು ನಾಮ ನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸಿರುವುದಿಲ್ಲ.

ಇ. 2013 ರ ಕಂಪೆನಿ ಕಾಯ್ದೆಯ ಕಲಂ 138 ರ ಪ್ರಕಾರ ಕಂಪೆನಿಯು ಆಂತರಿಕ ಪರಿಶೋಧಕರನ್ನು ನೇಮಿಸಿರುವುದಿಲ್ಲ.

ಈ. 2013 ರ ಕಂಪೆನಿ ಕಾಯ್ದೆಯ ಕಲಂ 177 (10) ರ ಪ್ರಕಾರ ಕಂಪೆನಿಯು ತನ್ನ ವಿಜಿಲ್ ಮೆಕ್ಯಾನಿಸಂನ್ನು ವೆಬ್ ಸೈಟ್ ನಲ್ಲಿ ಬಹಿರಂಗಪಡಿಸಿರುವುದಿಲ್ಲ.

ಉ. ಪ್ರಮುಖ ವ್ಯವಸ್ಥಾಪನಾ ಸಿಬ್ಬಂಧಿ ನೇಮಕಾತಿಗೆ ಸಂಬಂಧಿಸಿದಂತೆ 2013 ರ ಕಂಪೆನಿ ಕಾಯ್ದೆಯ ಕಲಂ 203 ರ ಪ್ರಕಾರ ಪೂರ್ಣಕಾಲಿಕ ಕಂಪೆನಿ ಕಾರ್ಯದರ್ಶಿಯವರನ್ನು ನೇಮಕಾತಿ ಮಾಡಬೇಕಾದ ನಿಯಮವನ್ನು 2018–19 ರಲ್ಲಿ ಪಾಲಿಸಿರುವುದಿಲ್ಲ. ಆದರೆ ಪರಿಶೀಲನಾ ಅವಧಿಯಲ್ಲಿ ನನಗೆ ವಿವರಿಸಿದ ಪ್ರಕಾರ ಶ್ರೀ ಪ್ರಭಾತ್ ಎಂ ಜೋಷಿ ಇವರನ್ನು ಪೂರ್ಣಕಾಲಿಕ ಕಂಪೆನಿ ಕಾರ್ಯದರ್ಶಿಯವರನ್ನಾಗಿ 06.06.2019 ರಂದು ನೇಮಕಾತಿ ಮಾಡಿರುತ್ತದೆ.

ಊ. ಕಂಪೆನಿಯ ಸ್ಥಿರ ಆಸ್ತಿ ನೋಂದಣಿ ಪುಸ್ತಕವು ಆಸ್ತಿಗಳು ಇರುವ ಮತ್ತು ಆಸ್ತಿಗಳ ಗುರುತಿನ ಸಂಖ್ಯೆಗಳ ಬಗ್ಗೆ ಸಂಪೂರ್ಣ ವಿವರವನ್ನು ನೀಡುವುದಿಲ್ಲ ಹಾಗು ಸದರಿ ಪುಸ್ತಕವನ್ನು ಕಂಪೆನಿ ಕಾಯ್ದೆ ಪ್ರಕಾರ ನಿರ್ವಹಿಸಿರುವುದಿಲ್ಲ.

ಋ. ಕಂಪೆನಿಯಲ್ಲಿ ಸ್ವೀಕರಿಸಿದ ₹ 14,00,00,000 ಮೊತ್ತದ ಪಾಲು ಬಂಡವಾಳದ ಅರ್ಜಿ ಹಣದ ಬಗ್ಗೆ ಸ್ವೀಕರಿಸಿದ 60 ದಿನಗಳಿಗಿಂತ ಹೆಚ್ಚಿನ ಅವಧಿಯಿಂದ ಪಾಲು ಬಂಡವಾಳ ಹಂಚಿಕೆಯಾಗದೆ ಉಳಿದಿರುತ್ತದೆ.

ಎ. ಪರಿಶೀಲಿತ ಅವಧಿಯಲ್ಲಿ ಸೆಕ್ರೆಟೇರಿಯಲ್ ಪ್ರಮಾಣಿತದಲ್ಲಿರುವಂತೆ ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ ಸಮಿತಿಯ ಸಭೆಗಳು ನಡೆದಿರುವುದಿಲ್ಲ.

ಏ. ಕಂಪೆನಿ ಕಾಯ್ದೆ 2013 ರ ಕಲಂ 92 (3) ರ ಪ್ರಕಾರ ಕಂಪೆನಿಯು ವಾರ್ಷಿಕ ರಿಟರ್ನ್ಸ್‌ಗಳ ಪ್ರತಿಯನ್ನು ಕಂಪೆನಿಯ ಅಂತರ್ಜಾಲದಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಈ ಬಗ್ಗೆ ವೆಬ್ ಕೊಂಡಿಯನ್ನು ಪ್ರಕಟಿಸಿರುವುದಿಲ್ಲ.

ಐ. ಸೆಕ್ರಟೇರಿಯಲ್ ಪ್ರಮಾಣಿತಗಳ ಅನುಪಾಲನೆಯಲ್ಲಿ ಕಂಪೆನಿಯು ಇನ್ನಷ್ಟು ಸುಧಾರಣೆಗೊಳಿಸಬೇಕಾಗಿದೆ.

ನಾನು ಪುನಃ ವರದಿ ಮಾಡುವುದೇನೆಂದರೆ,

- ಕಂಪೆನಿಯ ಮಂಡಳಯು 31 ಮಾರ್ಚ್ 2019 ಕ್ಕೆ ಅಂತ್ಯವಾಗುವ ಆರ್ಥಿಕ ವರ್ಷದಲ್ಲಿ ಕಂಪೆನಿಯು ಕಾರ್ಯನಿರ್ವಾಹಕ ನಿರ್ದೇಶಕರನ್ನು ಮತ್ತು ಸ್ವತಂತ್ರ ನಿರ್ದೇಶಕರನ್ನು ಹೊಂದಿರುತ್ತದೆ. ಸದರಿ ಅವಧಿಯಲ್ಲಿ ಮಂಡಳಯ ಸಂಯೋಜನೆಯಲ್ಲಿ ಆಗಿರುವ ಬದಲಾವಣೆಗಳು ಕಾಯ್ದೆಗನುಗುಣವಾಗಿರುತ್ತದೆ.
- ಮಂಡಳ ಸಭೆಯ ವೇಳಾಪಟ್ಟಿಯ ಬಗ್ಗೆ ನಿರ್ದೇಶಕರಿಗೆ ಸಾಕಷ್ಟು ಸೂಚನೆಗಳನ್ನು ನೀಡಲಾಗಿರುತ್ತದೆ ಹಾಗೂ ಎಲ್ಲಾ ಸಮಯದಲ್ಲಿ ಏಳು ದಿನ ಮುಂಚಿತವಾಗಿ ಸಭೆಯ ಸೂಚನೆಯನ್ನು ನೀಡಲಾಗಿರುತ್ತದೆ. ಸಭೆಯ ಬಗ್ಗೆ ಅಲ್ಪಾವಧಿ ಸೂಚನೆಯನ್ನು ನೀಡಿದ ಸಂದರ್ಭಗಳಲ್ಲಿ ಅಜೆಂಡಾ ಹಾಗೂ ಅದರ ಟಿಪ್ಪಣಿಗಳನ್ನು ಏಳುದಿನ ಮುಂಚಿತವಾಗಿ ನೀಡಲಾಗಿರುವುದಿಲ್ಲ. ಆದರೆ ಕಂಪನಿ ಕಾಯ್ದೆ 2013 ರ ಕಲಂ 173(3) ರ ಪ್ರಕಾರ ನಿರ್ದೇಶಕರ ಒಪ್ಪಿಗೆಯನ್ನು ಪಡೆಯಲಾಗಿದೆ.
- ನಿರ್ದೇಶಕ ಮಂಡಳ ಹಾಗೂ ಸಮಿತಿಗಳ ಎಲ್ಲಾ ನಿರ್ಧಾರಗಳನ್ನು ಬಹುಮತದಲ್ಲಿ ನಡೆಸಲಾಗಿದೆ.
- ಕಂಪೆನಿ ಕಾಯ್ದೆ 2013 ನಿಯಮಗಳ ಪ್ರಕಾರ ಕಂಪೆನಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟಂಬರ್ 27, 2018 ಗುರುವಾರದಂದು ನಡೆಸಲಾಗಿರುತ್ತದೆ.
- ಕಂಪೆನಿಯ ಸಾಮಾನ್ಯ ಸಭೆಯನ್ನು ಅಲ್ಪಾವಧಿ ಸೂಚನೆಯಲ್ಲಿ ನಡೆಸಲಾಗಿದೆ ಮತ್ತು ಕಂಪೆನಿ ಕಾಯ್ದೆ 2013 ರ ಕಲಂ 101(1) ರ ಪ್ರಕಾರ ಈ ಬಗ್ಗೆ ಒಪ್ಪಿಗೆಯನ್ನು ಪಡೆಯಲಾಗಿದೆ.

ಪರಿಶೀಲನೆಯ ಅವಧಿಯಲ್ಲಿ ಕಂಪೆನಿಯ ಮಂಡಳಯ ರಚನೆ/ವ್ಯವಸ್ಥೆ ಮತ್ತು ಪ್ರಕ್ರಿಯೆಗಳು ಕಾಯಿದೆ, ನಿಯಮ, ನಿಬಂಧನೆಗಳಗೆ ಅನುಗುಣವಾಗಿರುತ್ತದೆ.

ನಾನು ಪುನಃ ವರದಿ ಮಾಡುವುದೇನೆಂದರೆ ಕಂಪೆನಿಯ ಗಾತ್ರ ಮತ್ತು ಕಾರ್ಯವ್ಯಾಪ್ತಿಗೆ ತಕ್ಕಂತೆ ಅನ್ವಯವಾಗುವ ಕಾನೂನು, ನಿಯಮ, ನಿಯಂತ್ರಣ ಹಾಗೂ ನಿರ್ದೇಶನಗಳ ಅನುಪಾಲನೆಗೆ ಸಂಬಂಧಿಸಿದಂತೆ ಶಾಸನ ಬದ್ಧ ಲೆಕ್ಕ ಪರಿಶೋಧಕರು ವರದಿ ಮಾಡಿದ ಅಂಶಗಳಗೆ ಒಳಪಟ್ಟು ವ್ಯವಸ್ಥೆ ಮತ್ತು ಪ್ರಕ್ರಿಯೆಯನ್ನು ಹೊಂದಿರುತ್ತದೆ.

ನಾನು ಪುನಃ ವರದಿ ಮಾಡುವುದೇನೆಂದರೆ ಪರಿಶೀಲನಾ ಅವಧಿಯಲ್ಲಿ ಕಾನೂನು, ನಿಯಮ, ನಿಯಂತ್ರಣ, ನಿರ್ದೇಶನ, ಗುಣಮಟ್ಟ ಇತ್ಯಾದಿಗಳ ಅನ್ವಯ ಕಂಪೆನಿಯ ವ್ಯವಹಾರಗಳ ಮೇಲೆ ಪ್ರಭಾವ ಬೀರುವ ನಿರ್ದಿಷ್ಟ ಘಟನೆ/ಕ್ರಮಗಳು ಇರುವುದಿಲ್ಲ.

ದಿನಾಂಕ: 06.09.2019
ಸ್ಥಳ: ಮಂಗಳೂರು

ಸಹಿ/-
ಉಲ್ಲಾಸ್ ಕುಮಾರ್ ಮೇಲನಮೊಗರು & ಅಸೋಸಿಯೇಟ್ಸ್
ಪ್ರಾಕ್ಟೀಸಿಂಗ್ ಕಂಪೆನಿ ಸೆಕ್ರಟರೀಸ್ ಮಂಗಳೂರು ಇವರ ಪರವಾಗಿ,
ಸಿ.ಎಸ್. ಉಲ್ಲಾಸ್ ಕುಮಾರ್, ಮಾಲಕರು
ಎಫ್.ಸಿ.ಎಸ್6202 ಸಿಪಿ ನಂ.6640

ಈ ವರದಿಯನ್ನು ಲಗತ್ತಿಸಲಾದ ಸಮ ದಿನಾಂಕದ **ಅನುಬಂಧ ಎ** ಯೊಂದಿಗೆ ಓದಲಾಗಿದೆ ಮತ್ತು ಅದು ಈ ವರದಿಯ ಅವಿಭಾಜ್ಯ ಭಾಗವಾಗಿರುತ್ತದೆ.

ಅನುಬಂಧ– ಎ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತದ ಸದಸ್ಯರಿಗೆ

ಸಮ ದಿನಾಂಕದ ನಮ್ಮ ವರದಿಯನ್ನು ಈ ಪತ್ರದೊಂದಿಗೆ ಓದಲಾಗಿರುತ್ತದೆ.

1. ಕಾರ್ಯದರ್ಶಿಯ ದಾಖಲೆಗಳ ನಿರ್ವಹಣೆಯು ಆಡಳಿತದ ಜವಾಬ್ದಾರಿಯಾಗಿರುತ್ತದೆ. ಪರಿಶೀಲನೆಯ ಆಧಾರದಲ್ಲಿ ಅಭಿಪ್ರಾಯ ವನ್ನು ಈ ಕಾರ್ಯದರ್ಶಿಯ ದಾಖಲೆಗಳ ಬಗ್ಗೆ ಸಲ್ಲಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.
2. ಕಾರ್ಯದರ್ಶಿಯ ದಾಖಲೆಗಳು ಸರಿಯಾಗಿರುವ ಬಗ್ಗೆ ಖಾತರಿಪಡಿಸುವಲ್ಲಿ ನಾವು ಸೂಕ್ತವಾಗಿ ಪರಿಶೀಲನಾ ಅಭ್ಯಾಸ ಹಾಗೂ ಪ್ರಕ್ರಿಯೆಯನ್ನು ಅನುಸರಿಸಿರುತ್ತೇವೆ. ಸೆಕ್ರೆಟೇರಿಯಲ್ ದಾಖಲೆಗಳು ನಿಖರವಾದ ಮಾಹಿತಿಯನ್ನು ಪ್ರತಿಬಿಂಬಿಸುವುದನ್ನು ಖಾತರಿ ಪಡಿಸಲು ಪರಿಶೀಲನೆಯನ್ನು ಪರೀಕ್ಷಾ ಆಧಾರದಲ್ಲಿ ನಡೆಸಲಾಗಿದೆ ಮತ್ತು ವಿಷಯಗಳನ್ನು ವರದಿಯಲ್ಲಿ ತರಲಾಗಿದೆ. ಅನುಸರಿಸಲಾದ ಅಭ್ಯಾಸ ಹಾಗೂ ಪ್ರಕ್ರಿಯೆಯು ನನ್ನ ಅಭಿಪ್ರಾಯಗಳಿಗೆ ತಳಹದಿಯನ್ನು ನೀಡುತ್ತದೆ ಎಂದು ನಾನು ನಂಬಿರುತ್ತೇನೆ.
3. ನಾವು ಕಂಪೆನಿಯ ಆರ್ಥಿಕ ದಾಖಲೆ ಮತ್ತು ಲೆಕ್ಕ ಪುಸ್ತಕಗಳ ಔಚಿತ್ಯವನ್ನು ಪರಿಶೀಲಿಸಿರುವುದಿಲ್ಲ.
4. ಕಾನೂನು, ನಿಯಮ ಮತ್ತು ನಿಯಂತ್ರಣಗಳ ಅನುಪಾಲನೆಗೆ ಸಂಬಂಧಿಸಿದಂತೆ ಆಡಳಿತ ಪ್ರತಿನಿಧಿತ್ವವನ್ನು ಅಗತ್ಯವಿದ್ದಲ್ಲಿ ನಾವು ಪಡೆದಿರುತ್ತೇವೆ.
5. ಕಂಪೆನಿ ನಿಬಂಧನೆ, ನಿಯಮ, ನಿಯಂತ್ರಣ, ಗುಣಮಟ್ಟದ ಅನುಸರಣೆಯು ಆಡಳಿತದ ಜವಾಬ್ದಾರಿಯಾಗಿರುತ್ತದೆ. ಈ ಪ್ರಕ್ರಿಯೆಗಳ ಪರಿಶೀಲನೆಯು ಪರೀಕ್ಷೆಯ (Test Check) ಆಧಾರಕ್ಕೆ ಸೀಮಿತವಾಗಿರುತ್ತದೆ.
6. ಕಾರ್ಯದರ್ಶಿ ಪರೀಶೀಲನಾ ವರದಿಯು ಕಂಪೆನಿಯ ಭವಿಷ್ಯದ ಕಾರ್ಯಸಾಧ್ಯತೆಯ ಬಗ್ಗೆ ಮತ್ತು ಆಡಳಿತ ನಿರ್ವಹಣೆಯಲ್ಲಿ ಕಾರ್ಯಕಾರಿತ್ವ ಹಾಗೂ ದಕ್ಷತೆ ಬಗ್ಗೆ ಖಾತರಿಪಡಿಸುವುದಾಗಿರುವುದಿಲ್ಲ.

ಸಹಿ/–

ದಿನಾಂಕ: 06.09.2019

ಸ್ಥಳ: ಮಂಗಳೂರು

ಉಲ್ಲಾಸ್ ಕುಮಾರ್ ಮೇಲಿನಮೊಗರು & ಅಸೋಸಿಯೇಟ್ಸ್

ಪ್ರಾಕ್ಟೀಸಿಂಗ್ ಕಂಪೆನಿ ಸೆಕ್ರಟರೀಸ್ ಮಂಗಳೂರು ಇವರ ಪರವಾಗಿ,

ಸಿ.ಎಸ್. ಉಲ್ಲಾಸ್ ಕುಮಾರ್, ಮಾಲಿಕರು

ಎಫ್.ಸಿ.ಎಸ್6202 ಸಿಪಿ ನಂ.6640

ಅನುಬಂಧ –2

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಗಮ ನಿಯಮಿತ

ಆರ್ಥಿಕ ವರ್ಷ 2018–19 ನೇ ಸಾಲಿನ ಸೆಕ್ರೆಟೇರಿಯಲ್ ಆಡಿಟ್ ವರದಿ (ಮೆ/ ಉಲ್ಲಾಸ್ ಕುಮಾರ್ ಮೇಲಿನಮೊಗರು & ಅಸೋಸಿಯೇಟ್ಸ್, ವೃತ್ತಿ ನಿರತ ಕಂಪನಿ ಕಾರ್ಯದರ್ಶಿಗಳು, ಮಂಗಳೂರು) ಬಗ್ಗೆ ಆಡಳಿತ ಮಂಡಳಿಯ ಉತ್ತರ.

ಗಮನಿಸಿದ ಅಂಶಗಳು	ಆಡಳಿತ ಮಂಡಳಿಯ ಉತ್ತರ
1. ಕಂಪೆನಿಯು ಸೆಕ್ರೆಟೇರಿಯಲ್ ಪ್ರಮಾಣಿತ 1 ರ ಪ್ರಕಾರ ನಿರ್ದೇಶಕ ಮಂಡಳಿ ಸಭೆಯನ್ನು ಆಯೋಜಿಸಿರುವುದಿಲ್ಲ. ಕೇವಲ ಮೂರು ಸಭೆಗಳನ್ನು ಮಾತ್ರ ನಡೆಸಿರುತ್ತದೆ. 71 ನೇ ಮಂಡಳಿ ಸಭೆಯು ಎರಡು ಬಾರಿ ಮುಂದೂಡ ಲ್ಪಟ್ಟಿರುತ್ತದೆ. ಆರ್ಥಿಕ ವರ್ಷ 2017–18 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು, ನಿರ್ದೇಶಕರ ವರದಿಯನ್ನು ಮತ್ತು 16 ನೇ ವಾರ್ಷಿಕಸಭೆಯ ವಿಷಯಗಳನ್ನು ಸದರಿ ಸಭೆಯಲ್ಲಿ ಹೆಚ್ಚುವರಿ ವಿಷಯವಾಗಿ ತರಲಾಗಿದೆ.	• ಲೋಕ ಸಭಾ ಚುನಾವಣಾ ನೀತಿ ಸಂಹಿತೆಯು ಘೋಷಣೆಯಾದ ಹಿನ್ನೆಲೆಯಲ್ಲಿ 10 ಅಕ್ಟೋಬರ್ 2019 ರಂದು ನಾಲ್ಕನೇ ತ್ರೈಮಾಸಿಕ ಅವಧಿಯಲ್ಲಿ ನಿರ್ಧರಿಸಲಾದ ಸಭೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. • ಅಧ್ಯಕ್ಷರ ಅನುಮತಿಯ ಮೇರೆಗೆ ಹೆಚ್ಚುವರಿ ವಿಷಯಗಳನ್ನು ಅನುಮತಿಸಲಾಗಿದೆ.
2. 2013 ರ ಕಂಪೆನಿ ಕಾಯ್ದೆಯ ಕಲಂ 178 ರ ಪ್ರಕಾರ ಕಂಪೆನಿಯು ನಾಮ ನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸಿರುವುದಿಲ್ಲ.	ನಿರ್ದೇಶಕರನ್ನು ಕರ್ನಾಟಕ ರಾಜ್ಯ ಸರಕಾರವು ನೇರವಾಗಿ ನೇಮಕಾತಿ ಮಾಡುವುದರಿಂದ ನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಅವಶ್ಯಕತೆ ಬರುವುದಿಲ್ಲ. ಮೇಲಾಗಿ, ನಿರ್ದೇಶಕರ ಸಂಭಾವನೆಯು ಅವರವರ ಮಾತೃ ಸಂಸ್ಥೆಯಲ್ಲಿ ನಿರ್ಧಾರವಾಗುತ್ತದೆ.
3. 2013 ರ ಕಂಪೆನಿ ಕಾಯ್ದೆಯ ಕಲಂ 138 ರ ಪ್ರಕಾರ ಕಂಪೆನಿಯು ಆಂತರಿಕ ಪರಿಶೋಧಕರನ್ನು ನೇಮಿಸಿರುವುದಿಲ್ಲ.	ಕಂಪೆನಿಯು ಪ್ರತ್ಯೇಕ ಆಂತರಿಕ ಪರಿಶೋಧನಾ ವಿಭಾಗವನ್ನು ಹೊಂದಿರುತ್ತದೆ. ಆರ್ಥಿಕ ಸಲಹೆಗಾರರು (ಆಂ.ಪ)ರವರು ಸದರಿ ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಮುಂದುವರಿದು, ಕಲಂ 138(1) ರಲ್ಲಿ ಈ ರೀತಿ ತಿಳಿಸಲಾಗಿದೆ: "Such class or classes of companies as may be prescribed shall be required to appoint an internal auditor, who shall either be a chartered accountant or a cost accountant, or such other professional as may be decided by the Board to conduct internal audit of the functions and activities of the company." ಮಂಡಳಿಯು ಪ್ರತ್ಯೇಕ ವಿಭಾಗವನ್ನು ಅನುಮೋದಿಸಿದ ಕಾರಣ ಕಲಂ 138 ನ್ನು ಅನುಪಾಲಿಸಲಾಗಿದೆ.
4. 2013 ರ ಕಂಪೆನಿ ಕಾಯ್ದೆಯ 2013 ರ ಕಲಂ 177 (10) ರ ಪ್ರಕಾರ ಕಂಪೆನಿಯು ತನ್ನ ವಿಜಿಲ್ ಮೆಕ್ಯಾನಿಸಂನ್ನು ವೆಬ್ ಸೈಟ್ ನಲ್ಲಿ ಬಹಿರಂಗ ಪಡಿಸಿರುವುದಿಲ್ಲ.	ತನ್ನ ವಿಜಿಲ್ ಮೆಕ್ಯಾನಿಸಂನ್ನು ಬಹಿರಂಗಪಡಿಸುವ ಸಲುವಾಗಿ ಕಂಪೆನಿಯು ಕ್ರಮವನ್ನು ತೆಗೆದುಕೊಂಡಿದೆ ಹಾಗೂ ಮಂಡಳಿಯು ಅನುಮೋದಿಸಿರುತ್ತದೆ ಮತ್ತು ಅದನ್ನು 2019–20 ನೇ ಸಾಲಿನಲ್ಲಿ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.
5. ಪ್ರಮುಖ ವ್ಯವಸ್ಥಾಪನಾ ಸಿಬ್ಬಂಧಿ ನೇಮಕಾತಿಗೆ ಸಂಬಂಧಿಸಿದಂತೆ 2013 ರ ಕಂಪೆನಿ ಕಾಯ್ದೆಯ ಕಲಂ 203 ರ ಪ್ರಕಾರ ಪೂರ್ಣಕಾಲಿಕ ಕಂಪೆನಿ ಕಾರ್ಯದರ್ಶಿಯವರನ್ನು ನೇಮಕಾತಿ ಮಾಡಬೇಕಾದ ನಿಯಮವನ್ನು 2018–19 ರಲ್ಲಿ ಪಾಲಿಸಿರುವುದಿಲ್ಲ. ಆದರೆ ಪರಿಶೀಲನಾ ಅವಧಿಯಲ್ಲಿ ನನಗೆ ವಿವರಿಸಿದ ಪ್ರಕಾರ ಶ್ರೀ ಪ್ರಭಾತ್ ಎಂ ಜೋಷಿ ಇವರನ್ನು ಪೂರ್ಣಕಾಲಿಕ ಕಂಪೆನಿ ಕಾರ್ಯದರ್ಶಿಯವರನ್ನಾಗಿ 06.06.2019 ರಂದು ನೇಮಕಾತಿ ಮಾಡಿರುತ್ತದೆ.	2018–19 ನೇ ಸಾಲಿನಲ್ಲಿ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿತ್ತು. ಪೂರ್ಣಕಾಲಿಕ ಕಂಪೆನಿ ಕಾರ್ಯದರ್ಶಿಯವರ ನೇಮಕಾತಿಯನ್ನು 6 ಜೂನ್ 2019 ರಲ್ಲಿ ಮಾಡಲಾಗಿದ್ದು ಕಂಪೆನಿ ಕಾಯ್ದೆ 2013 ರ ಕಲಂ 203 ನ್ನು ಅನುಪಾಲಿಸಲಾಗಿದೆ.

ಗಮನಿಸಿದ ಅಂಶಗಳು	ಆಡಳಿತ ಮಂಡಳಿಯ ಉತ್ತರ
6. ಕಂಪೆನಿಯ ಸ್ಥಿರ ಆಸ್ತಿ ನೋಂದಣಿ ಪುಸ್ತಕವು ಆಸ್ತಿಗಳು ಇರುವ ಮತ್ತು ಆಸ್ತಿಗಳ ಗುರುತಿನ ಸಂಖ್ಯೆಗಳ ಬಗ್ಗೆ ಸಂಪೂರ್ಣ ವಿವರವನ್ನು ನೀಡುವುದಿಲ್ಲ ಹಾಗು ಸದರಿ ಪುಸ್ತಕವನ್ನು ಕಂಪೆನಿ ಕಾಯ್ದೆ ಪ್ರಕಾರ ನಿರ್ವಹಿಸಿರುವುದಿಲ್ಲ.	ವಿದ್ಯುಚ್ಛಕ್ತಿ ಸರಬರಾಜು ವ್ಯವಹಾರದ ನಿರ್ದಿಷ್ಟ ಗುಣಲಕ್ಷಣದಿಂದಾಗಿ ಕಂಪೆನಿಯ ಎಲ್ಲಾ ಆಸ್ತಿಗಳಿಗೆ ಗುರುತಿನ ಸಂಖ್ಯೆಯನ್ನು ನೀಡಲು ಅಸಾಧ್ಯವಾಗಿರುತ್ತದೆ. ಆದಾಗ್ಯೂ ಆಸ್ತಿಗಳ ವಿಧಗಳು, ಸ್ಥಾಪನಾ ವರ್ಷ ಇತ್ಯಾದಿ ಮಾಹಿತಿಗಳಿರುವ ಆಸ್ತಿ ರಿಜಿಸ್ಟರನ್ನು ವಿಭಾಗೀಯ ಕಛೇರಿಗಳಲ್ಲಿ ನಿರ್ವಹಿಸಲಾಗುತ್ತಿದೆ.
7. ಕಂಪೆನಿಯಲ್ಲಿ ಸ್ವೀಕರಿಸಿದ ₹ 14,00,00,000 ಮೊತ್ತದ ಪಾಲು ಬಂಡವಾಳದ ಅರ್ಜಿ ಹಣದ ಬಗ್ಗೆ ಸ್ವೀಕರಿಸಿದ 60 ದಿನಗಳಿಗಿಂತ ಹೆಚ್ಚಿನ ಅವಧಿಯಿಂದ ಪಾಲು ಬಂಡವಾಳ ಹಂಚಿಕೆಯಾಗದೆ ಉಳಿದಿರುತ್ತದೆ.	₹ 14 ಕೋಟಿಯು ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ವಿದ್ಯುತ್ ದರ ನಿಗದಿಯ ಬಗ್ಗೆ ಕೋರಿಕೆ ಸಲ್ಲಿಸುವಾಗ ಪರಿಗಣಿಸುವ ಸಲುವಾಗಿ ಮೆ/ಪಿ.ಸಿ.ಕೆ.ಎಲ್. ಮುಖಾಂತರ ಮೆ/ ಜುರಾಲ ಪವರ್ ಪ್ರಾಜೆಕ್ಟ್ ಗೆ ಸರಕಾರವು ನೀಡಿದ ಒಟ್ಟು ₹ 70 ಕೋಟಿಯ ಹಂಚಿಕೆಯಲ್ಲಿ ₹ 14 ಕೋಟಿಯು ಮೆಸ್ಕಾಂನ ಭಾಗವಾಗಿರುತ್ತದೆ. ಸರಕಾರಕ್ಕೆ ಷೇರು ನೀಡುವ ಬಗ್ಗೆ ಸ್ಪಷ್ಟ ಆದೇಶವಿಲ್ಲದ ಕಾರಣ ಪತ್ರವ್ಯವಹಾರವು ಪ್ರಗತಿಯಲ್ಲಿದೆ. ಮೇಲಾಗಿ, ಕಂಪೆನಿ ಕಾಯ್ದೆ 2013 ರ ಕಲಂ 2(31) ರ ಪ್ರಕಾರ ಠೇವಣಿಯು ಸರಕಾರದಿಂದ ಪಡೆದ ಮೊತ್ತಗಳನ್ನು ಒಳಗೊಂಡಿರುವುದಿಲ್ಲ ಮತ್ತು ಇದಕ್ಕೆ ಕಂಪೆನಿಯ (ಠೇವಣಿ ಸ್ವೀಕಾರ) ನಿಯಮಗಳು 2014 ಅನ್ವಯಿಸುವುದಿಲ್ಲ.
8. ಪರಿಶೀಲಿತ ಅವಧಿಯಲ್ಲಿ ಸೆಕ್ರೆಟೇರಿಯಲ್ ಪ್ರಮಾಣಿತದಲ್ಲಿರುವಂತೆ ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ ಸಮಿತಿಯ ಸಭೆಗಳು ನಡೆದಿರುವುದಿಲ್ಲ.	ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ ಸಮಿತಿಯ ಸಭೆಗಳನ್ನು 2019-20 ರಲ್ಲಿ ನಡೆಸಲು ಕ್ರಮವಹಿಸಲಾಗುವುದು.
9. ಕಂಪೆನಿ ಕಾಯ್ದೆ 2013 ರ ಕಲಂ 92 (3) ರ ಪ್ರಕಾರ ಕಂಪೆನಿಯು ವಾರ್ಷಿಕ ರಿಟರ್ನ್ಸ್‌ಗಳ ಪ್ರತಿಯನ್ನು ಕಂಪೆನಿಯ ಅಂತರ್ಜಾಲದಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಈ ಬಗ್ಗೆ ವೆಬ್ ಕೊಂಡಿಯನ್ನು ನಿರ್ದೇಶಕ ಮಂಡಳಿಯ ವರದಿಯಲ್ಲಿ ಪ್ರಕಟಿಸಿರುವುದಿಲ್ಲ.	ಕಂಪೆನಿಯು ವಾರ್ಷಿಕ ರಿಟರ್ನ್ಸ್‌ಗಳ ಪ್ರತಿಯನ್ನು ಕಂಪನಿಯ ಅಂತರ್ಜಾಲದಲ್ಲಿ ಪ್ರಕಟಿಸಲು ಕ್ರಮವಹಿಸಲಾಗಿದೆ ಮತ್ತು ನಿರ್ದೇಶಕರ ವರದಿಯಲ್ಲಿ ಇದನ್ನು ಪ್ರಕಟಿಸಿದೆ.
10. ಸೆಕ್ರಟೇರಿಯಲ್ ಪ್ರಮಾಣಿತಗಳ ಅನುಪಾಲನೆಯಲ್ಲಿ ಕಂಪೆನಿಯು ಇನ್ನಷ್ಟು ಸುಧಾರಣೆಗೊಳಿಸಬೇಕಾಗಿದೆ.	ಅನ್ವಯಿಸುವ ಕಾಯಿದೆ, ನಿಯಮಗಳ ಮತ್ತು ಕಾರ್ಯದರ್ಶಿ ಪ್ರಮಾಣಿತಗಳ ಅನುಪಾಲನೆಗೆ ಕಂಪೆನಿಯು ಸಾಕಷ್ಟು ಶ್ರಮವಹಿಸುತ್ತಿದೆ. ಅನ್ವಯಿಸುವ ಎಲ್ಲಾ ಸೆಕ್ರಟೇರಿಯಲ್ ಪ್ರಮಾಣಿತಗಳ ಅನುಪಾಲನೆಗೆ ಕ್ರಮವಹಿಸಲಾಗುವುದು.

ಅನುಬಂಧ –3

ನಮೂನೆ ಸಂಖ್ಯೆ ಎಂ.ಜಿ.ಟಿ 9
ವಾರ್ಷಿಕ ವರದಿಯ ಸಾರ
31.03.2019 ರಂದು ಅಂತ್ಯವಾಗುವ ದಿನಕ್ಕೆ

ಕಂಪನಿ ಕಾಯ್ದೆ 2013 ಕಲಂ 92 (3), ಮತ್ತು ಕಂಪನಿ (ಆಡಳಿತ ಮತ್ತು ನಿರ್ವಹಣೆ) ನಿಯಮ 2014ರ ನಿಯಮ 12(1)ರ ಪ್ರಕಾರ

I. ನೋಂದಾವಣೆ & ಇತರೆ ವಿವರ :

1.	ಸಿನ್	U40109 KA 2002 SGC 030425
2.	ನೋಂದಣಿ ದಿನಾಂಕ	29/04/2002
3.	ಕಂಪೆನಿಯ ಹೆಸರು	ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
4.	ಕಂಪೆನಿಯ ವರ್ಗ/ಉಪವರ್ಗ	ಸಾರ್ವಜನಿಕ ಸ್ವಾಮ್ಯ
5.	ನೋಂದಾಯಿತ ಕಛೇರಿ ವಿಳಾಸ & ಸಂಪರ್ಕ ವಿವರ	ಮೆಸ್ಕಾಂ ಭವನ ಕಾವೂರು ಅಡ್ಡರಸ್ತೆ, ಬಿಜೈ ಮಂಗಳೂರು –575004, ದೂ:0824–2885700
6.	ಪಟ್ಟಿಯಲ್ಲಿದೆಯೇ	ಇಲ್ಲ
7.	ನೋಂದಣಾಧಿಕಾರಿ/ವರ್ಗಾವಣಾ ಅಧಿಕಾರಿಯವರ ಹೆಸರು, ವಿಳಾಸ (ಇದ್ದಲ್ಲಿ)	–

II. ಕಂಪೆನಿಯ ಪ್ರಮುಖ ವ್ಯವಹಾರಿಕ ಚಟುವಟಿಕೆ : (ಶೇಕಡಾ 10 ಅಥವಾ ಜಾಸ್ತಿ ವಹಿವಾಟಿನ ಎಲ್ಲಾ ಚಟುವಟಿಕೆಗಳನ್ನು ತಿಳಿಸುವುದು.)

ಕ್ರ.ಸಂ	ಮುಖ್ಯ ಸರಕು/ಸೇವೆಯ ವಿವರ	ಸರಕು/ಸೇವೆಯ NIC ಸಂಖ್ಯೆ	ಕಂಪೆನಿಯ ವಾರ್ಷಿಕ ವಹಿವಾಟಿನ ಶೇಕಡಾವಾರು ಪ್ರಮಾಣ
1	ವಿದ್ಯುಚ್ಛಕ್ತಿ	35109/ಗೃಹ/ವಾಣಿಜ್ಯ/ಕೈಗಾರಿಕೆ ಬಳಕೆಗೆ ವಿದ್ಯುಚ್ಛಕ್ತಿ ವಿತರಣೆ	100%

III. ಪಾಲು ಬಂಡವಾಳ, ಅಂಗ ಸಂಸ್ಥೆ ಹಾಗು ಸಂಯೋಜಿತ ಕಂಪೆನಿ

ಅಂಗ ಸಂಸ್ಥೆ :– ಯಾವುದೂ ಇಲ್ಲ

ಸಿನ್ : –ಅನ್ವಯಿಸುವುದಿಲ್ಲ–

IV. ಪಾಲು ಬಂಡವಾಳ ಹೊಂದಿರುವ ವಿಧಾನ (ಒಟ್ಟು ಈಕ್ವಿಟಿಯಲ್ಲಿ ಈಕ್ವಿಟಿ ಪಾಲು ಬಂಡವಾಳ ಶೇಕಡಾವಾರು)

ಅ) ವರ್ಗವಾರು ಪಾಲು ಬಂಡವಾಳ

ಷೇರುದಾರರ ವರ್ಗ	ವರ್ಷಾರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31.03.2018 ರಂದು)			ವರ್ಷಾಂತ್ಯದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31.03.2019 ರಂದು)			ವರ್ಷದ ಶೇಕಡಾವಾರು ಬದಲಾವಣೆ
	ಭೌತಿಕ	ಒಟ್ಟು	ಶೇಕಡವಾರು ಷೇರುಗಳು	ಭೌತಿಕ	ಒಟ್ಟು	ಶೇಕಡವಾರು ಷೇರುಗಳು	
ಅ. ಪ್ರವರ್ತಕರು							
(1) ಭಾರತೀಯ							
a) ವ್ಯಕ್ತಿ/ಹಿಂದೂ ಅವಿಭಕ್ತ ಕುಟುಂಬ	-	-	-	-	-	-	-
b) ಕೇಂದ್ರ ಸರಕಾರ	-	-	-	-	-	-	-
c) ರಾಜ್ಯ ಸರಕಾರ	358070231	358070231	100%	481820231	481820231	100%	–
d) ನಿಗಮಗಳು	-	-	-	-	-	-	-
e) ಬ್ಯಾಂಕ್/ಹಣಕಾಸು ಸಂಸ್ಥೆ	-	-	-	-	-	-	-
f) ಇತರೆ	-	-	-	-	-	-	-
ಪ್ರವರ್ತಕರ ಒಟ್ಟು ಷೇರುಗಳು(ಅ)	**358070231**	**358070231**	**100%**	**481820231**	**481820231**	**100%**	**–**

ಷೇರುದಾರರ ವರ್ಗ	ವರ್ಷಾರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31.03.2018 ರಂದು)			ವರ್ಷಾಂತ್ಯದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31.03.2019 ರಂದು)			ವರ್ಷದ ಶೇಕಡಾವಾರು ಬದಲಾವಣೆ
	ಭೌತಿಕ	ಒಟ್ಟು	ಶೇಕಡವಾರು ಷೇರುಗಳು	ಭೌತಿಕ	ಒಟ್ಟು	ಶೇಕಡವಾರು ಷೇರುಗಳು	
ಆ. ಸಾರ್ವಜನಿಕ ಪಾಲುಗಾರಿಕೆ	-	-	-	-	-	-	-
1. ಸಂಸ್ಥೆಗಳು	-	-	-	-	-	-	-
a) ಮ್ಯೂಚುವಲ್ ಫಂಡ್	-	-	-	-	-	-	-
b) ಬ್ಯಾಂಕ್/ಹಣಕಾಸು ಸಂಸ್ಥೆ	-	-	-	-	-	-	-
c) ಕೇಂದ್ರ ಸರಕಾರ	-	-	-	-	-	-	-
d) ರಾಜ್ಯ ಸರಕಾರ	-	-	-	-	-	-	-
e) ವೆಂಚರ್ ಬಂಡವಾಳ	-	-	-	-	-	-	-
f) ವಿಮಾ ಕಂಪನಿಗಳು	-	-	-	-	-	-	-
g) ವಿದೇಶಿ ನೇರ ಹೂಡಿಕೆ	-	-	-	-	-	-	-
h) ವಿದೇಶಿ ವೆಂಚರ್ ಕ್ಯಾಪಿಟಲ್	-	-	-	-	-	-	-
i) ಇತರೆ	-	-	-	-	-	-	-
ಒಟ್ಟು :- (ಆ) (1)	**-**	**-**	**-**	**-**	**-**	**-**	**-**
2. ಸಂಸ್ಥೆಗಳೇತರ	-	-	-	-	-	-	-
a) ನಿಗಮಗಳು.	-	-	-	-	-	-	-
i) ಭಾರತೀಯ	-	-	-	-	-	-	-
ii) ಸಾಗರರೋತ್ತರ	-	-	-	-	-	-	-
b) ವ್ಯಕ್ತಿ	-	-	-	-	-	-	-
I) ವೈಯಕ್ತಿಕ ಷೇರುದಾರರ ಷೇರು ಬಂಡವಾಳ 1 ಲಕ್ಷದ ವರೆಗೆ	-	-	-	-	-	-	-
ii) ವೈಯಕ್ತಿಕ ಷೇರುದಾರರ ಷೇರು ಬಂಡವಾಳ 1 ಲಕ್ಷಕ್ಕಿಂತ ಹೆಚ್ಚು	-	-	-	-	-	-	-
c) ಇತರೇ	-	-	-	-	-	-	-
ಅನಿವಾಸಿ ಭಾರತೀಯರು	-	-	-	-	-	-	-
ಸಾಗರರೋತ್ತರ ಕಾರ್ಪೋರೇಟ್ ಸಂಸ್ಥೆಗಳು	-	-	-	-	-	-	-
ಅನ್ಯ ದೇಶಿಗರು	-	-	-	-	-	-	-
ಕ್ಲಿಯರಿಂಗ್ ಸದಸ್ಯರು	-	-	-	-	-	-	-
ಟ್ರಸ್ಟ್‌ಗಳು	-	-	-	-	-	-	
ವಿದೇಶಿ ಸಂಸ್ಥೆಗಳು-DR	-	-	-	-	-	-	-
ಒಟ್ಟು (ಆ)(2)	**-**	**-**	**-**	**-**	**-**	**-**	**-**
ಸಾರ್ವಜನಿಕ ಒಟ್ಟು ಷೇರು ಬಂಡವಾಳ(ಆ)=(ಆ)(1)+(ಆ)(2)	**-**	**-**	**-**	**-**	**-**	**-**	**-**
ಇ. ಮೇಲ್ವಿಚಾರಕನ ಷೇರುಗಳು ಜಿಡಿಆರ್‌ಗಳು & ಎಡಿಆರ್‌ಗಳು	**-**	**-**	**-**	**-**	**-**	**-**	**-**
ಒಟ್ಟು ಮೊತ್ತ (ಅ+ಆ+ಇ)	**358070231**	**358070231**	**100%**	**481820231**	**481820231**	**100%**	

ಆ) ಪ್ರವರ್ತಕರ ಷೇರುಗಳು :

ಷೇರುದಾರರ ಹೆಸರು	ವರ್ಷಾರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ			ವರ್ಷಾಂತ್ಯದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ			ವರ್ಷದ ಶೇಕಡಾವಾರು ಷೇರು ಬಂಡವಾಳದ ಬದಲಾವಣೆ
ಶ್ರೀಯುತರು/ಶ್ರೀಮತಿ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಶೇಕಡಾವಾರು ಷೇರುಗಳು	ಎನ್ಕಂಬರ್ಡ್/ ವಾಗ್ದಾನ ಮಾಡಿದ ಶೇಕಡಾವಾರು ಷೇರುಗಳು	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಶೇಕಡಾವಾರು ಷೇರುಗಳು	ಎನ್ಕಂಬರ್ಡ್/ ವಾಗ್ದಾನ ಮಾಡಿದ ಶೇಕಡಾವಾರು ಷೇರುಗಳು	
1. ಕರ್ನಾಟಕ ಸರ್ಕಾರದ ಗೌರವಾನ್ವಿತ ರಾಜ್ಯಪಾಲರು	358070222	100	-	481820222	100	-	-
2. ಡಾ/. ಎಸ್ ಸೆಲ್ವಕುಮಾರ್	1	-	-	1	-	-	-
3. ರಘುಪ್ರಕಾಶ್ ಎನ್	2	-	-	2	-	-	-
4. ಡಾ/. ಅದಿತಿರಾಜ	1	-	-	1	-	-	-
5. ಐ.ಎಸ್.ಎನ್. ಪ್ರಸಾದ್	1	-	-	1	-	-	-
6. ಎಮ್.ಡಿ.ರವಿ	1	-	-	1	-	-	-
7. ಡಾ/. ಆರ್.ಸಿ ಚೇತನ್	1	-	-	1	-	-	-
8. ಶಶಿಕಾಂತ್ ಸೆಂಥಿಲ್ ಎಸ್.	1	-	-	1	-	-	-
9. ಜಾವಿದ್ ರುಬ್ಬಾನಿ	1	-	-	1	-	-	-

ಇ) ಪ್ರವರ್ತಕರ ಶೇರು ಬಂಡವಾಳದಲ್ಲಿ ಬದಲಾವಣೆ (ಬದಲಾವಣೆ ಇಲ್ಲದಿದ್ದಲ್ಲಿ ಸೂಚಿಸಿ)

ವಿವರಗಳು	ವರ್ಷಾರಂಭದಲ್ಲಿ ಹೊಂದಿರುವ ಶೇರುಗಳ ಸಂಖ್ಯೆ		ವರ್ಷದಲ್ಲಿ ಒಟ್ಟು ಹೊಂದಿರುವ ಷೇರುಗಳು	
	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಶೇಕಡಾವಾರು ಶೇರುಗಳು	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಶೇಕಡಾವಾರು ಶೇರುಗಳು
ವರ್ಷಾರಂಭದಲ್ಲಿ	358070231	74.32	358070231	100
ವರ್ಷದಲ್ಲಿ ಪ್ರವರ್ತಕರ ಶೇರು ಬಂಡವಾಳದಲ್ಲಿ ಆಗಿರುವ ದಿನಾಂಕ ವಾರು ಹೆಚ್ಚಳ/ಕಡಿಮೆ– ಕಾರಣ ಗಳನ್ನು ತಿಳಿಸುವುದು.	ಷೇರುಗಳು ₹ 10 ಮೌಲ್ಯದ್ದು, ಕರ್ನಾಟಕ ಸರ್ಕಾರಕ್ಕೆ ಕೆಳಕಂಡಂತೆ ಹಂಚಿಕೆಯಾಗಿರುತ್ತದೆ.			
	70ನೇ ನಿರ್ದೇಶಕ ಮಂಡಳಿ ಸಭೆ ದಿನಾಂಕ 29.06.2018	18.91	91130000	
	71ನೇ ನಿರ್ದೇಶಕ ಮಂಡಳಿ ಸಭೆ ದಿನಾಂಕ 25.08.2018	3.11	15000000	
	72ನೇ ನಿರ್ದೇಶಕ ಮಂಡಳಿ ಸಭೆ ದಿನಾಂಕ 15.11.2018	3.66	17620000	
ವರ್ಷಾಂತ್ಯದಲ್ಲಿರುವಂತೆ		**100**	**481820231**	**100**

ಈ) ಪ್ರಥಮ 10 ಷೇರುದಾರರ ವಿವರ :
(ನಿರ್ದೇಶಕರು / ಪ್ರವರ್ತಕರು ಮತ್ತು ಜಿ.ಡಿ.ಆರ್. & ಎ.ಡಿ.ಆರ್.ಗಳನ್ನು ಹೊರತುಪಡಿಸಿ)

ವಿವರಗಳು	ವರ್ಷಾರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ		ವರ್ಷದಲ್ಲಿ ಒಟ್ಟು ಹೊಂದಿರುವ ಷೇರುಗಳು	
	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಶೇಕಡಾವಾರು ಷೇರುಗಳು	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಶೇಕಡಾವಾರು ಷೇರುಗಳು
ವರ್ಷಾರಂಭದಲ್ಲಿ	-	-	-	-
ವರ್ಷದಲ್ಲಿ ಪ್ರವರ್ತಕರ ಷೇರು ಬಂಡವಾಳದಲ್ಲಿ ಆಗಿರುವ ದಿನಾಂಕವಾರು ಹೆಚ್ಚಳ/ ಕಡಿಮೆ– ಕಾರಣಗಳನ್ನು ತಿಳಿಸುವುದು.	–	-	-	--
ವರ್ಷಾಂತ್ಯದಲ್ಲಿರುವಂತೆ	**-**	**-**	**-**	**-**

ಉ) ನಿರ್ದೇಶಕರು ಮತ್ತು ಪ್ರಮುಖ ಆಡಳತ ಸಿಬ್ಬಂಧಿಗಳ ಶೇರು ಬಂಡವಾಳ:

ಪ್ರತಿಯೊಬ್ಬ ನಿರ್ದೇಶಕರು ಮತ್ತು ಪ್ರಮುಖ ಆಡಳತ ಸಿಬ್ಬಂಧಿಗಳ ಷೇರು ಬಂಡವಾಳ	ವರ್ಷಾರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ		ವರ್ಷದಲ್ಲಿ ಒಟ್ಟು ಹೊಂದಿರುವ ಷೇರುಗಳು	
	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಶೇಕಡಾವಾರು ಷೇರುಗಳು	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಶೇಕಡಾವಾರು ಷೇರುಗಳು
ವರ್ಷಾರಂಭದಲ್ಲಿ	ಮೇಲಿನ ಕಂಡಿಕೆ 4(ಬಿ) ರಲ್ಲಿ ನಮೂದಿಸಿದಂತೆ			
ವರ್ಷದಲ್ಲಿ ಪ್ರವರ್ತಕರ ಷೇರು ಬಂಡವಾಳದಲ್ಲಿ ಆಗಿರುವ ದಿನಾಂಕವಾರು ಹೆಚ್ಚಳ/ ಕಡಿಮೆ- ಕಾರಣಗಳನ್ನು ತಿಳಿಸುವುದು.	–	"	–	
ವರ್ಷಾಂತ್ಯದಲ್ಲಿರುವಂತೆ	–	"	–	

V ಹೊಣೆಗಾರಿಕೆಗಳು (ಕಂಪೆನಿಯ ಹೊಣೆಗಾರಿಕೆಗಳು-ಬಾಕಿ/ ಸಂಚಿತ ಬಡ್ಡಿ ಸಹಿತವಾಗಿ).

(₹ ಕೋಟಿಗಳಲ್ಲಿ)

ವಿವರಗಳು	ಸುರಕ್ಷಿತ ಸಾಲಗಳು - ಠೇವಣಿ ಹೊರತುಪಡಿಸಿ	ಅಸುರಕ್ಷಿತ ಸಾಲಗಳು	ಸರಕಾರದ ಸಾಲಗಳು	ಠೇವಣಿ	ಒಟ್ಟು ಹೊಣೆಗಾರಿಕೆಗಳು
ವರ್ಷಾರಂಭದಲ್ಲಿ ಹೊಣೆಗಾರಿಕೆಗಳು					
i) ಅಸಲು ಮೊತ್ತ	729.30	-	0.56	573.83	1303.69
ii) ಪಾವತಿಸಲು ಬಾಕಿ ಇರುವ ಬಡ್ಡಿ	1.24	-	-	-	1.24
iii) ಸಂಚಿತ ಬಡ್ಡಿ	0.13	-	-	-	0.13
ಒಟ್ಟು (i+ii+iii)	**730.67**	**-**	**0.56**	**573.83**	**1305.06**
ವರ್ಷದಲ್ಲಿ ಹೊಣೆಗಾರಿಕೆಯಲ್ಲಿ ಆಗಿರುವ ಬದಲಾವಣೆಗಳು					
* ಸೇರ್ಪಡೆ	309.69	-	-	51.25	360.94
* ಕಡಿಮೆಗೊಂಡಿರುವುದು.	157.79	-	0.07	-	157.86
ನಿವ್ವಳ ಬದಲಾವಣೆ	**151.90**	**-**	**-0.07**	**51.25**	**203.08**
ವಷಾಂತ್ಯದಲ್ಲಿ ಹೊಣೆಗಾರಿಕೆಗಳು					
i) ಅಸಲು ಮೊತ್ತ	881.20	-	0.49	625.08	1506.77
ii) ಪಾವತಿಸಲು ಬಾಕಿ ಇರುವ ಬಡ್ಡಿ	1.94	-	-	-	1.94
iii) ಸಂಚಿತ ಬಡ್ಡಿ	0.25	-	0.03	-	0.28
ಒಟ್ಟು (i+ii+iii)	**883.39**	**-**	**0.52**	**625.08**	**1508.99**

VI. ಪ್ರಮುಖ ಆಡಳಿತ ಸಿಬ್ಬಂಧಿಗಳ ಸಂಭಾವನೆ–

A. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಕಾಲಿಕ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರು :

(₹ ಗಳಲ್ಲಿ)

ಕ್ರ. ಸಂ	ಸಂಭಾವನೆ ವಿವರಗಳು	ವ್ಯ.ನಿ / ಪೂರ್ಣಕಾಲಿಕ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಹೆಸರು				ಒಟ್ಟು ಮೊತ್ತ
		ವ್ಯವಸ್ಥಾಪಕ ನಿರ್ದೇಶಕರು		ನಿರ್ದೇಶಕರು (ತಾಂ)		
	ಒಟ್ಟು ಸಂಭಾವನೆ	01.04.2018 ರಿಂದ 08.10.2018 ರವರೆಗೆ	09.10.2018 ರಿಂದ 31.03.2019 ರವರೆಗೆ	1.4.2018ರಿಂದ 19.08.2018 ರವರೆಗೆ	20.08.2018ರಿಂದ 31.03.2019 ರವರೆಗೆ	
1	(a) ಆದಾಯ ತೆರಿಗೆ ಕಾಯ್ದೆ 1961 ಕಲಂ 17(1) ರ ಪ್ರಕಾರ	ಶ್ರೀ ಟಿ.ಹೆಚ್. ಎಮ್. ಕುಮಾರ್ 103523.00	ಶ್ರೀಮತಿ ಸ್ನೇಹಲ್ ಆರ್. 483771.00	ಶ್ರೀಮತಿ ಹೆಚ್.ಕೆ. ಭಾರತಿ 801158.00	ಶ್ರೀ ರಘುಪ್ರಕಾಶ್ ಎನ್. 1615037.00	3003489/-
	(b) ಆದಾಯ ತೆರಿಗೆ ಕಾಯ್ದೆ 1961 ಕಲಂ 17(2)ರ ಪ್ರಕಾರ ಇನಾಮು	-	-	-	-	-
	(c) ಆದಾಯ ತೆರಿಗೆ ಕಾಯ್ದೆ 1961 ಕಲಂ 17(3) ರ ಪ್ರಕಾರ ಸಂಭಾವನೆ ಹೊರತಾಗಿ ಲಾಭ	–	–	–	–	–
2	ಸ್ಟಾಕ್ ಆಯ್ಕೆ	–	–	–	–	–
3	ಸ್ವೆಟ್ ಈಕ್ವಿಟಿ	–	–	–	–	–
4	ಲಾಭಾಂಶದಲ್ಲಿ ಪಾಲು (%) – ಇತರೆ	–	–	–	–	–
5	ಇತರೆ	**20214.00**	**27410.00**	**50692.00**	**29757.000**	**128073.00**
	ಒಟ್ಟು (A)	**123737.00**	**511181.00**	**851850.00**	**1644794.00**	**3131562.00**
	ಕಾಯ್ದೆಯ ಮಿತಿ					

ಆ. ಇತರ ನಿರ್ದೇಶಕರ ಸಂಭಾವನೆ

ಕ್ರ. ಸಂ	ಸಂಭಾವನೆ ವಿವರಗಳು	ನಿರ್ದೇಶಕರ ಹೆಸರು				ಒಟ್ಟು ಮೊತ್ತ
		----	----	----	----	
1	ಸ್ವತಂತ್ರ ನಿರ್ದೇಶಕರು	-	-	-	-	-
	ಮಂಡಳಿ ಸಭೆಗೆ ಹಾಜರಾದ ಬಗ್ಗೆ ಶುಲ್ಕ	-	-	-	-	-
	ಕಮಿಷನ್	-	-	-	-	-
	ಇತರೆ	-	-	-	-	-
	ಒಟ್ಟು (1)	-	-	-	-	-
2	ಇತರೆ ಕಾರ್ಯನಿರ್ವಾಹಕೇತರ ನಿರ್ದೇಶಕರು	-	-	-	-	-
	ಮಂಡಳಿ ಸಭೆಗೆ ಹಾಜರಾದ ಬಗ್ಗೆ ಶುಲ್ಕ	-	-	-	-	-
	ಕಮಿಷನ್	-	-	-	-	-
	ಇತರೆ	-	-	-	-	-
	ಒಟ್ಟು (2)	**-**	**-**	**-**	**-**	**-**
	ಒಟ್ಟು (B)=(1+2)	-	-	-	-	-
	ಒಟ್ಟು ನಿರ್ವಾಹಕ ಸಂಭಾವನೆ	-	-	-	-	-
	ಕಾಯ್ದೆ ಪ್ರಕಾರ ಒಟ್ಟಾರೆ ಮಿತಿ	-	-	-	-	-

2018–19 ರಲ್ಲಿ ನಿರ್ದೇಶಕ ಮಂಡಳಿ ಸಭೆಗಳಿಗೆ ಭಾಗವಹಿಸಿದವರ ಶುಲ್ಕ

ಕ್ರ. ಸಂ	ನಿರ್ದೇಶಕರುಗಳ ಹೆಸರು ಶ್ರೀಯುತರು/ಶ್ರೀಮತಿ.	ಸಭೆಗಳಿಗೆ ಭಾಗವಹಿಸಿದವರ ವಿವರ				ಉಪಸ್ಥಿತಿ ಶುಲ್ಕ (₹)
		ನಿರ್ದೇಶಕ ಮಂಡಳಿ ಸಭೆ	ಖರೀದಿ ಸಮಿತಿ ಸಭೆ	ಆಡಿಟ್ ಸಮಿತಿ ಸಭೆ	ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಭೆ	
1.	ಜಾವೇದ್ ಅಖ್ತರ್	2	-	-	-	2000.00
2.	ಎಸ್. ಸೆಲ್ವಕುಮಾರ್	3	-	-	-	2000.00
3.	ಡಾ/. ಅದಿತಿರಾಜ	4	-	1	1	4000.00
4.	ಡಾ/. ಆರ್.ಸಿ. ಚೇತನ್	4	2	-	1	6000.00
5.	ಟಿ.ಹೆಚ್.ಎಮ್. ಕುಮಾರ್	2	2	-	-	-
6.	ಹೆಚ್.ಕೆ ಭಾರತಿ	2	2	-	-	-
7.	ಸ್ನೇಹಲ್ ಆರ್	1	1	-	-	-
8.	ಎನ್. ರಘುಪ್ರಕಾಶ್	3	2	-	1	-
9.	ಎಂ.ಡಿ. ರವಿ	5	-	1	-	4000.00
10.	ಎನ್. ತಿಮ್ಮೇಗೌಡ	4	-	-	-	3000.00
11.	ಎ ಎನ್ ಜಯರಾಜ್	5	-	-	-	3000.00
12.	ಟಿ.ಆರ್. ರಾಮಕೃಷ್ಣಯ್ಯ	5	-	-	-	3000.00
13.	ಮೀರಾ ಶ್ರೀವಾಸ್ತವಾ	1	-	-	-	1000.00
	ಒಟ್ಟು					**28,000.00**

ಇ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಕಾಲಿಕ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರನ್ನು ಹೊರತುಪಡಿಸಿ ಇತರೆ ಪ್ರಮುಖ ಆಡಳಿತ ಸಿಬಂಧಿಗಳ ಸಂಭಾವನೆ:

(₹ ಗಳಲ್ಲಿ)

ಕ್ರ. ಸಂ	ಸಂಭಾವನೆ ವಿವರಗಳು	ಪ್ರಮುಖ ಆಡಳಿತ ಸಿಬ್ಬಂದಿ				
		-	ಸಿ.ಎಫ್.ಒ	-	-	ಒಟ್ಟು
1	ಒಟ್ಟು ವೇತನ		1.4.2018 ರಿಂದ 31.03.2019 ರವರೆಗೆ	–	–	–
	(a) ಆದಾಯ ತೆರಿಗೆ ಕಾಯ್ದೆ 1961 ಕಲಂ 17(1) ರ ಪ್ರಕಾರ	–	ಶ್ರೀ. ಡಿ. ಆರ್. ಶ್ರೀನಿವಾಸ	-	-	29,79,807.00
	(b) ಆದಾಯ ತೆರಿಗೆ ಕಾಯ್ದೆ 1961 ಕಲಂ 17(2) ರ ಪ್ರಕಾರ ಇನಾಮು	–	-	–	–	-
	(c) ಆದಾಯ ತೆರಿಗೆ ಕಾಯ್ದೆ 1961 ಕಲಂ 17(3) ರ ಪ್ರಕಾರ ಸಂಭಾವನೆ ಹೊರತಾಗಿ ಲಾಭ	–	-	-	-	–
2	ಸ್ಟಾಕ್ ಆಯ್ಕೆ	–	-	-	-	-
3	ಸ್ವೆಟ್ ಈಕ್ವಿಟಿ	–	-	-	-	-
4	ಲಾಭಾಂಶದಲ್ಲಿ ಪಾಲು (%) – ಇತರೆ	–	-	-	-	-
5	ಇತರೆ	–	-	-	-	-
	ಒಟ್ಟು	–	**-**	**-**	**-**	**29,79,807.00**

VII. ದಂಡನೆ / ಶಿಕ್ಷೆ/ ತಪ್ಪುಗಳ ಪುನರಾವರ್ತನೆ:

ವಿಧ	ಕಂಪೆನಿಯ ಕಾಯ್ದೆಯ ವಿಭಾಗ	ಸಂಕ್ಷಿಪ್ತ ವಿವರಣೆ	ದಂಡಗಳ ವಿವರಣೆ/ ಶಿಕ್ಷೆ / ತಪ್ಪುಗಳ ಪುನರಾವರ್ತನೆ	ಪ್ರಾಧಿಕಾರ [RD / NCLT/ COURT]	ಸಲ್ಲಿಸಿದ ಮೇಲ್ಮನವಿ ಗಳದ್ದಲ್ಲಿ (ವಿವರ ನೀಡುವುದು.)
ಅ. ಕಂಪೆನಿ					
ದಂಡನೆ	-	-	-	-	-
ಶಿಕ್ಷೆ	-	-	-	-	-
ತಪ್ಪುಗಳ ಪುನರಾವರ್ತನೆ	-	-	-	-	-
ಆ. ನಿರ್ದೇಶಕರು					
ದಂಡನೆ	-	-	-	-	-
ಶಿಕ್ಷೆ	-	-	-	-	-
ತಪ್ಪುಗಳ ಪುನರಾವರ್ತನೆ	-	-	-	-	-
ಇ. ಇತರೆ ಅಧಿಕಾರಿಗಳ ಡಿಫಾಲ್ಟ್					
ದಂಡನೆ	-	-	-	-	-
ಶಿಕ್ಷೆ	-	-	-	-	-
ತಪ್ಪುಗಳ ಪುನರಾವರ್ತನೆ	-	-	-	-	-

ಅನುಬಂಧ –4

ನಮೂನೆ – ಎಒಸಿ 2

(ಕಂಪೆನಿ ಕಾಯ್ದೆ 2013 ರ ಪರಿಚ್ಛೇದ 134 ರ ಉಪ ಪರಿಚ್ಛೇಧ 3 ರ ಉಪವಾಕ್ಯ ಎಚ್ ಮತ್ತು ಕಂಪೆನಿ (ಲೆಕ್ಕಗಳು) ನಿಯಮ 2014 ರ ನಿಯಮ 8(2) ಪ್ರಕಾರ

ಕಂಪೆನಿ ಕಾಯ್ದೆ 2013 ರ ಪರಿಚ್ಛೇಧ 188(1) ಪ್ರಕಾರ ಪ್ರಕಟಿಸಬೇಕಾದ ಕಂಪೆನಿಯು ಸಂಬಂಧಿತ ಸಂಸ್ಥೆ/ ಪಂಗಡದವರೊಂದಿಗೆ ಮಾಡಿರುವ ಒಪ್ಪಂದಗಳು/ ವ್ಯವಸ್ಥೆಗಳ ವಿವರಗಳು ತೋಳಂತರದ ವ್ಯವಸ್ಥೆಗಳು ಒಳಗೊಂಡಂತೆ:

1. **ಕಂಪೆನಿಯು ಮಾಡಿರುವ ಒಪ್ಪಂದಗಳು/ ವ್ಯವಸ್ಥೆಗಳು, ತೋಳಂತರದಲ್ಲಿಲ್ಲದ ವ್ಯವಸ್ಥೆಗಳು:– ಅನ್ವಯಿಸುವುದಿಲ್ಲ**

2. **ಕಂಪೆನಿಯು ಮಾಡಿರುವ ಒಪ್ಪಂದಗಳು/ ವ್ಯವಸ್ಥೆಗಳು, ತೋಳಂತರದಲ್ಲಿರುವ ವ್ಯವಸ್ಥೆಗಳು:–**

a) **ಸಂಬಂಧಿತ ಸಂಸ್ಥೆ/ ಪಂಗಡದವರ ಹೆಸರುಗಳು ಮತ್ತು ಸಂಬಂಧದ ಸ್ವಭಾವ:**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ), ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ (ಬೆಸ್ಕಾಂ), ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ (ಹೆಸ್ಕಾಂ), ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ (ಜೆಸ್ಕಾಂ), ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ (ಸೆಸ್ಕ್), ಪವರ್ ಕಂಪೆನಿ ಆಫ್ ಕರ್ನಾಟಕ ಲಿಮಿಟೆಟ್ (ಪಿಸಿಕೆಎಲ್), ಮೈಸೂರು ಪೆಪರ್ ಮಿಲ್(ಎಂಪಿಎಂ), ಕರ್ನಾಟಕ ಪವರ್‌ಕಾರ್ಪೋರೇಷನ್ ಲಿಮಿಟೆಡ್ (ಕೆಪಿಸಿಎಲ್), ಇವರು ಕಂಪೆನಿ ಕಾಯ್ದೆ 2013 ರ ಪರಿಚ್ಛೇಧ 188(1) ರೊಂದಿಗೆ ಓದಿದಂತೆ Ind AS 24 ಪರಿಚ್ಛೇಧ 2(76) (viii) (c) ರ ಪ್ರಕಾರ ಕಂಪೆನಿಯು ಸಂಬಂಧಿತ ಸಂಸ್ಥೆಗಳಾಗಿರುತ್ತದೆ.

b) **ಒಪ್ಪಂದಗಳು/ ವ್ಯವಸ್ಥೆಗಳು/ ವ್ಯವಹಾರಗಳ ಸ್ವಭಾವ:**

ವಿದ್ಯುತ್ ಖರೀದಿ, ಇಲೆಕ್ಟ್ರಿಕಲ್/ಸಿವಿಲ್ ಕಾಮಗಾರಿಗೆ ಸಂಬಂಧಿಸಿದವುಗಳು

c) **ಒಪ್ಪಂದಗಳು/ ವ್ಯವಸ್ಥೆಗಳು/ ವ್ಯವಹಾರಗಳ ಅವಧಿ:** ದೀರ್ಘಕಾಲಿಕ

d) **ಒಪ್ಪಂದಗಳು/ ವ್ಯವಸ್ಥೆಗಳು/ ವ್ಯವಹಾರಗಳ ಷರತ್ತು ಮತ್ತು ಮೌಲ್ಯ:**

ಸಂಬಂಧಿತ ಸಂಸ್ಥೆ/ಪಂಗಡದವರೊಂದಿಗೆ ಮಾಡಿರುವ ಒಪ್ಪಂದಗಳು / ವ್ಯವಸ್ಥೆಗಳು / ವ್ಯವಹಾರಗಳು ಸಾಮಾನ್ಯವಾಗಿ ವಿದ್ಯುಚ್ಛಕ್ತಿ ಸರಬರಾಜು, ಪ್ರಸರಣಾ ಜಾಲ ಒದಗಿಸುವಿಕೆ ಇತ್ಯಾದಿಗೆ ಸಂಬಂಧಿಸಿದ್ದಾಗಿದೆ.

ಈ ವ್ಯವಹಾರಗಳು ಸಾಮಾನ್ಯವಾಗಿ ಪ್ರಸರಣಾ ವೆಚ್ಚ ಪಾವತಿ, ಇಂಧನ ತಾಳೆಪಟ್ಟಿ ಸಮನ್ವಯ ಬಾಕಿಗಳು, ಹಂಚಿಕೆ ಆಧಾರಿತ ವೆಚ್ಚಗಳು ಇತ್ಯಾದಿ ಆಗಿರುತ್ತದೆ. ಇವುಗಳು ಸಾಮಾನ್ಯ ಕಂಪೆನಿ ವ್ಯವಹಾರದಿಂದ ಉದ್ಭವಿಸಿದವುಗಳಾಗಿರುತ್ತದೆ. ಇವುಗಳ ಮೌಲ್ಯವು ವ್ಯವಹಾರದ ಗಾತ್ರದ ಮೇಲೆ ಅವಲಂಭಿತವಾಗಿದೆ.

e) **ನಿರ್ದೇಶಕ ಮಂಡಳಿಯ ಅನುಮೋದನೆಯ ದಿನಾಂಕ (ಇದ್ದಲ್ಲಿ)**

ಸಾಮಾನ್ಯವಾಗಿ ಸಂಬಂಧಿತ ಸಂಸ್ಥೆ/ಪಂಗಡದವರೊಂದಿಗಿನ ವ್ಯವಹಾರಗಳು ನಿರ್ದೇಶಕ ಮಂಡಳಿಯಿಂದ ಅಥವಾ ಸಂಬಂಧಪಟ್ಟ ಪ್ರಾಧಿಕಾರವಾದ ಕೆ.ಇ.ಆರ್.ಸಿ, ಕ್ರಡಲ್ ಇತ್ಯಾದಿಗಳಿಂದ ಕಾಲಾನುಕಾಲಕ್ಕೆ ಅನುಮೋದಿತಗೊಂಡವುಗಳಾಗಿದೆ.

f) **ಪಾವತಿಸಿದ ಮುಂಗಡಹಣ (ಇದ್ದಲ್ಲಿ)– ಯಾವುದೂ ಇಲ್ಲ**

ನಿರ್ದೇಶಕ ಮಂಡಳಿಯ ಪರವಾಗಿ

ಡಾ/ ಎನ್ ಮಂಜುಳಾ

ಅಧ್ಯಕ್ಷರು, ಮೆಸ್ಕಾಂ, ಮಂಗಳೂರು

31-3-2019 ರ ವರ್ಷಾಂತ್ಯಕ್ಕೆ ನಿರ್ದೇಶಕರುಗಳ ವರದಿಗೆ ಸೇರ್ಪಡೆ

2018-19 ರ ಲೆಕ್ಕಗಳ ಪರಿಶೀಲನೆಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರು ಮಾಡಿರುವ ಅವಲೋಕನ/ ವ್ಯಾಖ್ಯಾನಗಳಿಗೆ ಈ ಕೆಳಗಿನಂತೆ ಉತ್ತರಗಳನ್ನು ನೀಡಲಾಗಿದೆ.

ಕ್ರ. ಸಂ.	ಶಾಸನಬದ್ಧ ಲೆಕ್ಕ ಪರಿಶೋಧಕರು ಗಮನಿಸಿರುವ ಅಂಶಗಳು	ವ್ಯವಸ್ಥಾಪಕ (ಆಡಳಿತ) ಮಂಡಳಿಯ ಉತ್ತರ
1.	**ಸಂಚಯ ವ್ಯವಸ್ಥೆ:** ಕಂಪೆನಿಗಳ ಲೆಕ್ಕಪುಸ್ತಕಗಳನ್ನು ಸಂಚಯ ವ್ಯವಸ್ಥೆಯ ಆಧಾರದಲ್ಲಿ ಹಾಗೂ ದ್ವಿ-ನಮೂದು ಪದ್ಧತಿಯಲ್ಲಿ ನಿರ್ವಹಿಸದಿದ್ದಲ್ಲಿ, ಲೆಕ್ಕ ಪುಸ್ತಕಗಳನ್ನು ಕಂಪೆನಿಗಳ ಕಾಯಿದೆ 2013 ರ ಸೆಕ್ಷನ್ 128 (1) ರ ಪ್ರಕಾರ ಕ್ರಮಬದ್ಧವಾಗಿ ನಿರ್ವಹಿಸಲಾಗಿದೆಯೆಂದು ಪರಿಗಣಿಸಲಾಗುವುದಿಲ್ಲ. ಕಂಪೆನಿಯ ಪ್ರಮುಖ ಲೆಕ್ಕನೀತಿಗಳ ಕಂಡಿಕೆ ಸಂಖ್ಯೆ 2.2 ರಲ್ಲಿ ಹೇಳಿಕೊಂಡಿರುವಂತೆ, ವಿದ್ಯುತ್ ಉತ್ಪಾದಕರಿಗೆ ಪಾವತಿಸಬೇಕಾದ ವಿಳಂಬ ಪಾವತಿ ಶುಲ್ಕಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಕಂಪೆನಿಯು ನಗದು ಆಧಾರದಲ್ಲಿ ಗುರುತಿಸಿ ಲೆಕ್ಕಿಸುತ್ತಿದ್ದು, ಇದು ಕಂಪೆನಿಗಳ ಕಾಯಿದೆ 2013 ರ ಸೆಕ್ಷನ್ 128 (1) ರಲ್ಲಿ ಸೂಚಿಸಲ್ಪಟ್ಟ ಸಂಚಯ ಆಧಾರಿತ ಲೆಕ್ಕ ವ್ಯವಸ್ಥೆಗೆ ವ್ಯತಿರಿಕ್ತವಾಗಿರುತ್ತದೆ.	ವಾಸ್ತವಿಕ ಕಂಪೆನಿಯು ವಿದ್ಯುತ್ ಖರೀದಿ ಬಾಕಿಗಳನ್ನು ವಿದ್ಯುತ್ ಉತ್ಪಾದಕರಿಗೆ ಕ್ಲಪ್ತ ಸಮಯದಲ್ಲಿ ಪಾವತಿಸಿ ತ್ವರಿತ ಪಾವತಿಗಾಗಿ ರಿಯಾಯಿತಿಯನ್ನು ಪಡೆದುಕೊಳ್ಳುತ್ತಿದೆ. ಬಡ್ಡಿಯೇನಾದರೂ ಪಾವತಿಸಬೇಕಾಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಆದೇಶದ ಮೇರೆಗೆ ಆಗಿಂದಾಗ್ಗೆ ಲೆಕ್ಕೀಕರಿಸಲಾಗುತ್ತಿದೆ.
2.	**ತಪಶೀಲಿನ ಮೌಲ್ಯೀಕರಣಕ್ಕೆ ಭಾರತೀಯ ಲೇಖಾ ಮಾನದಂಡ 2 :** ಕಂಪೆನಿಯು ತನ್ನ ತಪಶೀಲನ್ನು, ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯ ಇವೆರಡರ ಪೈಕಿ ಕಡಿಮೆಯಾದುದನ್ನು ಪರಿಗಣಿಸಿ ಮೌಲ್ಯೀಕರಿಸಬೇಕಾದ ಅಗತ್ಯವಿರುತ್ತದೆ. ಆದರೆ, ಕಂಪೆನಿಯು ಅವುಗಳನ್ನು ಪುಸ್ತಕದ ಬೆಲೆಯಲ್ಲಿ ಮೌಲ್ಯಮಾಪನಗೊಳಿಸಿದೆ. ಹೀಗಾಗಿ ಲೆಕ್ಕ ಪದ್ಧತಿಯ ಇಂತಹ ವಿಚಲನದ ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ಅಗಾಧ ಪ್ರಮಾಣದ ಸರಕುಗಳು ಕಂಪೆನಿಯ ಉಗ್ರಾಣಗಳಲ್ಲಿರುವುದರಿಂದ ಪ್ರತಿಯೊಂದು ಸಾಮಾಗ್ರಿಯ ಸಿದ್ಧಿತ ಮೌಲ್ಯವನ್ನು ಕಂಡುಹಿಡಿಯಲು ಸಾಧ್ಯ ವಾಗುವುದಿಲ್ಲ. ಮುಂದುವರೆದು, ಕಂಪೆನಿಯ ಉಗ್ರಾಣಗಳಲ್ಲಿರುವ ಹೆಚ್ಚಿನ ಸಾಮಾಗ್ರಿಗಳು ತಾಮ್ರ, ಅಲ್ಯೂಮಿನಿಯಮ್ ಹಾಗೂ ಕಚ್ಚಿಣಗಳಿಂದ ತಯಾರಿಸಲ್ಪಟ್ಟವುಗಳಾಗಿದ್ದು, ಇವುಗಳ ಮಾರಾಟ ಬೆಲೆಯು ಖರೀದಿ ಬೆಲೆಗೆ ಹೋಲಿಸಿದಾಗ ಹೆಚ್ಚಾಗಿಯೇ ಇರುತ್ತದೆ. ಸಾಮಾನ್ಯವಾಗಿ ಮುಂದಿನ ದಿನಗಳಲ್ಲಿಯೂ ಸಹ ಇವುಗಳ ಮಾರಾಟ ಬೆಲೆಯಲ್ಲಿ ಇಳಿಕೆಯಾಗುವುದಿಲ್ಲ, ಅಂದರೆ, ಇವುಗಳ ಸಿದ್ಧಿತ ಮೌಲ್ಯವು ಯಾವಾಗಲೂ ಪುಸ್ತಕದ ಬೆಲೆಗಿಂತ ಅಧಿಕವಾಗಿರುತ್ತದೆ. ಆದುದರಿಂದ ರದ್ದಿ ಸಾಮಾಗ್ರಿಗಳ ಮೌಲ್ಯವನ್ನು ಅವುಗಳ ಪುಸ್ತಕ ಬೆಲೆಯಲ್ಲಿಯೇ ಮುಂದುವರೆಸುವುದು ಸಮಂಜಸ ವಾಗಿರುತ್ತದೆ
3.	**ಭಾರತೀಯ ಲೇಖಾ ಮಾನದಂಡ 12 – ಅದಾಯ ತೆರಿಗೆಗಳು:** ಕಂಪೆನಿಯು ಮುಂದೂಡಿದ ತೆರಿಗೆ ಆಸ್ತಿ / ಜವಾಬ್ದಾರಿಯನ್ನು ಭಾರತೀಯ ಲೇಖಾಮಾನದಂಡ 12 –ರ ಅಗತ್ಯದಂತೆ ಲೆಕ್ಕಿಸಿರುವುದಿಲ್ಲ. ಲೆಕ್ಕ ಪತ್ರಗಳ ಮೇಲೆ ಇದರ ಪರಿಣಾಮವನ್ನು ಅಂದಾಜಿಸಲಾಗುವುದಿಲ್ಲ.	ವಾಸ್ತವಿಕ. ಈ ಅವಲೋಕನಗಳ ಅನುಸರಣೆಗೆ ಮುಂದಿನ ವರ್ಷಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
4.	**ಭಾರತೀಯ ಲೇಖಾ ಮಾನದಂಡ 23 – ಎರವಲು ವೆಚ್ಚಗಳು:** ಭಾರತೀಯ ಲೇಖಾಮಾನದಂಡ 23 ಹಾಗೂ ಭಾರತೀಯ ಲೇಖಾಮಾನದಂಡ 109 ಗಳ ಅಗತ್ಯತೆಯಂತೆ ಕಂಪೆನಿಯು ಪರಿಣಾಮಕಾರಿ ಬಡ್ಡಿದರ ವಿಧಾನವನ್ನು ಪರಿಗಣಿಸಿ ಬಡ್ಡಿವೆಚ್ಚಗಳನ್ನು ಲೆಕ್ಕಾಚಾರ ಮಾಡಬೇಕಾಗಿರುತ್ತದೆ. ಆದಾಗ್ಯೂ ಕಂಪೆನಿಯು ಬಡ್ಡಿ ವೆಚ್ಚಗಳಿಗಾಗಿ ಕೂಪನ್ ದರಗಳನ್ನು ಪರಿಗಣಿಸುತ್ತಿದೆ. ಈ ವಿಚಲನದ ಪರಿಣಾಮವನ್ನು ಅಂದಾಜಿಸಲಾಗುವುದಿಲ್ಲ.	ಕಂಪೆನಿಯು ಭರಿಸಿದ ಎರವಲು ವೆಚ್ಚಗಳು ಕೇವಲ ಸರ್ಕಾರಕ್ಕೆ ಪಾವತಿಸಿದ ಸ್ಟ್ಯಾಂಪ್ ಡ್ಯೂಟಿಗಳಿಗೆ ಸಂಬಂಧಿಸಿದ್ದು ಇದು ಗರಿಷ್ಟ 10.00 ಲಕ್ಷ (₹ 10.00 ಲಕ್ಷಗಳ ಗರಿಷ್ಟ ಮಿತಿಗೆ ಒಳಪಟ್ಟು ಸಾಲದ ಮೊತ್ತದ 0.20%) ಗಳಾಗಿರುತ್ತದೆ ಮತ್ತು ಸಾಲದ ಮೊತ್ತಗಳಿಗೆ ಹೋಲಿಸಿದರೆ ಇದು ಅಪ್ರಸ್ತುತವಾಗಿರುತ್ತದೆ. ಆದಾಗ್ಯೂ ಈ ಅವಲೋಕನಗಳ ಅನುಸರಣೆಗೆ ಮುಂದಿನ ವರ್ಷಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಕ್ರ. ಸಂ.	ಶಾಸನಬದ್ಧ ಲೆಕ್ಕ ಪರಿಶೋಧಕರು ಗಮನಿಸಿರುವ ಅಂಶಗಳು	ವ್ಯವಸ್ಥಾಪಕ (ಆಡಳಿತ) ಮಂಡಳಿಯ ಉತ್ತರ
5.	**ಭಾರತೀಯ ಲೇಖಾ ಮಾನದಂಡ 105 – ಕಾರ್ಯಾಚರಣೆಯಿಂದ ಸ್ಥಗಿತಗೊಂಡ ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು:** ಕಂಪೆನಿಯು ತನ್ನ ಮಾರಾಟಕ್ಕಿರುವ ಆಸ್ತಿಗಳೆಂದು ವರ್ಗೀಕರಿಸಿದ ನಾಚಾಲ್ತಿ ಆಸ್ತಿಗಳನ್ನು ಅವುಗಳ ಪ್ರಸ್ತುತ ಮೌಲ್ಯ ಅಥವಾ ನಿವ್ವಳ ಮಾರಾಟ ಮೌಲ್ಯ ಇವೆರಡರ ಪೈಕಿ ಕಡಿಮೆಯಾದುದನ್ನು ಪರಿಗಣಿಸಿ ಮೌಲ್ಯೀಕರಿಸಬೇಕಾದ ಅಗತ್ಯವಿರುತ್ತದೆ. ಆದರೆ, ಕಂಪೆನಿಯು ಅವುಗಳನ್ನು ಇಳಿತಗೊಳಿಸಿದ ಮೌಲ್ಯವನ್ನು ಪರಿಗಣಿಸಿ ಮೌಲ್ಯಮಾಪನಗೊಳಿಸಿದೆ. ಲೇಖಾ ಮಾನದಂಡದ ಈ ವಿಚಲನದ ಪರಿಣಾಮವನ್ನು ಅಂದಾಜಿಸಲಾಗುವುದಿಲ್ಲ.	ಕಂಪೆನಿಯ ಉಗ್ರಾಣಗಳಲ್ಲಿರುವ ಹೆಚ್ಚಿನ ರದ್ದಿ ಸಾಮಾಗ್ರಿಗಳು ತಾಮ್ರ, ಅಲ್ಯೂಮಿನಿಯಮ್ ಹಾಗೂ ಕಬ್ಬಿಣಗಳಿಂದ ತಯಾರಿಸಲ್ಪಟ್ಟವುಗಳಾಗಿದ್ದು, ಇವುಗಳ ಮಾರಾಟ ಬೆಲೆಯು ಖರೀದಿ ಬೆಲೆಗೆ ಹೋಲಿಸಿದಾಗ ಹೆಚ್ಚಾಗಿಯೇ ಇರುತ್ತದೆ. ಸಾಮಾನ್ಯವಾಗಿ ಮುಂದಿನ ದಿನಗಳಲ್ಲಿಯೂ ಸಹ ಇವುಗಳ ಮಾರಾಟ ಬೆಲೆಯಲ್ಲಿ ಇಳಿಕೆಯಾಗುವುದಿಲ್ಲ, ಅಂದರೆ, ಇವುಗಳ ಸಿದ್ಧಿತ ಮೌಲ್ಯವು ಯಾವಾಗಲೂ ಪುಸ್ತಕದ ಬೆಲೆಗಿಂತ ಅಧಿಕವಾಗಿರುತ್ತದೆ. ರದ್ದಿ ಸಾಮಾಗ್ರಿಗಳ ಮಾರಾಟದಿಂದ ಕಂಪೆನಿಯು ಯಾವಾಗಲೂ ಲಾಭವನ್ನು ಗಳಿಸಿರುವುದು ಇದನ್ನು ಪುಷ್ಟೀಕರಿಸುತ್ತದೆ. ಆದುದರಿಂದ ರದ್ದಿ ಸಾಮಾಗ್ರಿಗಳ ಮೌಲ್ಯವನ್ನು ಅವುಗಳ ಪುಸ್ತಕ ಬೆಲೆಯಲ್ಲಿಯೇ ಮುಂದುವರೆಸುವುದು ಸಮಂಜಸವಾಗಿರುತ್ತದೆ.
6.	**ಇಂಡ್.ಎ.ಎಸ್. 109** ರ ಆವಶ್ಯಕತೆಯಂತೆ ಕಂಪೆನಿಯು ನಿರೀಕ್ಷಿತ ಕ್ರೆಡಿಟ್ ನಷ್ಟ ವಿಧಾನದಲ್ಲಿ ವ್ಯಾಪಾರ ಸ್ವೀಕೃತಿಗಳ ದುರ್ಬಲತೆಯನ್ನು ಗುರುತಿಸಿಲ್ಲ.	ಕಂಪೆನಿಯು ಪ್ರತೀ ವರ್ಷದ ಅಂತ್ಯದಲ್ಲಿರುವಂತೆ ಬರತಕ್ಕವುಗಳ ಮೇಲೆ 4% ಪ್ರಮಾಣದಲ್ಲಿ ಅನುಮಾನಾಸ್ಪದ ಸಾಲಗಳ ಮೇಲೆ ಅವಕಾಶ ಕಲ್ಪಿಸುವುದು. ಅನುಮಾನಾಸ್ಪದ ಸಾಲಗಳಿಗಾಗಿ ಸಾಕಷ್ಟು ಪ್ರಮಾಣದಲ್ಲಿ ಅವಕಾಶವನ್ನು ಹೊಂದಿರುವುದರಿಂದ ಕ್ರೆಡಿಟ್ ನಷ್ಟ ವಿಧಾನದಲ್ಲಿ ವ್ಯಾಪಾರ ಸ್ವೀಕೃತಿಗಳ ದುರ್ಬಲತೆಯನ್ನು ಗುರುತಿಸುವ ಅಗತ್ಯವಿರುವುದಿಲ್ಲ.
7.	ಕಂಪೆನಿಯು ಆಂತರಿಕ ಪರಿಶೋಧನೆ ವ್ಯವಸ್ಥೆಯನ್ನು ಹೊಂದಿದೆ. ಆದಾಗ್ಯೂ, ಕಂಪೆನಿಯ ಗಾತ್ರ ಹಾಗೂ ವ್ಯವಹಾರದ ಪರಿಮಾಣವನ್ನು ಪರಿಗಣಿಸಿದಾಗ, ಪ್ರಸಕ್ತ ವ್ಯವಸ್ಥೆಯನ್ನು ಬಲಪಡಿಸುವುದು ಅವಶ್ಯಕ ಮತ್ತು ಆಡಿಟ್ ವಿಭಾಗಕ್ಕೆ ಸಾಕಷ್ಟು ಸಿಬ್ಬಂದಿಯನ್ನು ನೀಡಬೇಕಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತೇವೆ. ಆಂತರಿಕ ಪರಿಶೋಧನೆಯು, ಸಿಸ್ಟಮ್ ಆಡಿಟ್, ತಾಂತ್ರಿಕ ತನಿಖೆ, ಸಾಮಾಗ್ರಿ, ತಪಶೀಲು ಉಗ್ರಾಣ ತನಿಖೆ ಮತ್ತು ವಿಶೇಷವಾಗಿ ತೆರಿಗೆ ಕಾನೂನು ಮತ್ತು ಕಾರ್ಮಿಕ ಕಾನೂನುಗಳ ಉಪಬಂಧಗಳನ್ನು ಬದ್ಧವಾಗಿ ಪಾಲನೆ ಮಾಡುವ ತನಿಖೆಗೂ ವಿಸ್ತರಿಸಬೇಕಾಗಿರುತ್ತದೆ.	ಕಂಪೆನಿಯ ಪ್ರತಿ ಲೆಕ್ಕ ಘಟಕವು ನಗದು, ಕಂದಾಯ, ಕಾಮಗಾರಿ ಲೆಕ್ಕ ಪತ್ರಗಳು, 'ಸಿ' ರಿಜಿಸ್ಟರ್, ಉಗ್ರಾಣ ದಾಸ್ತಾನು ದಸ್ತಾವೇಜುಗಳು, ಇತ್ಯಾದಿಗಳನ್ನು ಪರಿಶೀಲಿಸಿ ವರದಿ ನೀಡಲು ಲೆಕ್ಕಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಆಂತರಿಕ ಪರಿಶೋಧನಾ ಘಟಕವನ್ನು ಹೊಂದಿರುತ್ತದೆ. ಈ ವಿಭಾಗಗಳ ಆಂತರಿಕ ತನಿಖೆ ವ್ಯವಹಾರಗಳನ್ನು ಕಂಪೆನಿಯ ಆಡಳಿತ ಕಛೇರಿಯಲ್ಲಿ ಆರ್ಥಿಕ ಸಲಹೆಗಾರರು (ಆಂತರಿಕ ಲೆಕ್ಕ ಪರಿಶೋಧನೆ) ಇವರು ಮೇಲ್ವಿಚಾರಣೆ ನಡೆಸಿ ನಿಯಂತ್ರಿಸುತ್ತಾರೆ, ಮತ್ತು ಆಡಳಿತ ಮಂಡಳಿಗೆ ನಿಯಮಿತವಾಗಿ ನ್ಯೂನತೆಗಳ ವರದಿಗಳನ್ನು ಸಲ್ಲಿಸುತ್ತಾರೆ. ಕಂಪೆನಿಯು ತನ್ನ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ, ಸ್ವಯಂ ನಿರ್ಮಿತ ಆಂತರಿಕ ನಿಯಂತ್ರಣವನ್ನು ಹೊಂದಿರುತ್ತದೆ.
8	**ಬಾಕಿ ದೃಢೀಕರಣ/ಸಮನ್ವಯ:** ಕಂಪೆನಿಯು ದಿನಾಂಕ 31.03.2019ರ ಅಂತ್ಯಕ್ಕೆ ಇರುವಂತೆ, ಮೆ। ಕೆಪಿಟಿಸಿಎಲ್. ಕೆಪಿಸಿಎಲ್ ಹಾಗೂ ಇತರ ಎಸ್ಕಾಂಗಳು ಮತ್ತು ಪಿಸಿಕೆಲ್, ವಿವಿಧ ಬಾಕಿದಾರರ, ವಿವಿಧ ಸಾಲಗಾರರ ಶಿಲ್ಕುಗಳು, ಗುತ್ತಿಗೆದಾರರು/ಸರಬರಾಜುದಾರರು/ಸರಕಾರೀ ಪ್ರಾಧಿಕಾರ ಗಳು/ ಗ್ರಾಹಕರು/ ನೌಕರರಿಗೆ ನೀಡಿರುವ ಹಾಗೂ ಪಡೆದ ಠೇವಣಿಗಳ ಶಿಲ್ಕುಗಳು, ವಿವಿಧ ವ್ಯಕ್ತಿಗಳಿಂದ ಬರಬೇಕಾದ ಮುಂಗಡಗಳು ಹಾಗೂ ಇತರ ಸ್ವೀಕೃತಿಗಳ ಶಿಲ್ಕುಗಳನ್ನು ಸಮನ್ವಯಗೊಳಿಸಿ ಧೃಢೀಕರಣಗಳನ್ನು ಪಡೆದುಕೊಂಡಿರುವುದಿಲ್ಲ. ಸಮನ್ವಯದಿಂದ ಉಂಟಾಗುವ ಹೊಂದಾಣಿಕೆ ಮತ್ತು ಹಳೆಯ ಬಾಕಿ ಚುಕ್ತಾ ಮತ್ತು ವಸೂಲಾಗದೇ ಇರುವ ಅಥವಾ ಭಾಗಶಃ ವಸೂಲಾತಿಯಿಂದಾಗಿ ಆಗುವ ನಷ್ಟದ ಸಾಧ್ಯತೆಯನ್ನು ಕಂಡುಹಿಡಿಯಲಾಗಿಲ್ಲ.	ಲೆಕ್ಕಪತ್ರಗಳ ಟಿಪ್ಪಣಿ ಸಂಖ್ಯೆ 46.17 ರಲ್ಲಿ ತಿಳಿಸಿರುವಂತೆ, ವಿವಿಧ ಬಾಕಿದಾರರು, ಸಾಲಗಾರರು, ಸಾಲ ಮತ್ತು ಮುಂಗಡಗಳು ಮತ್ತು ಇತರೆ ಋಣಗಳಿಗೆ ಸಂಬಂಧಿಸಿದ ಶಿಲ್ಕುಗಳು ದೃಢೀಕರಣಕ್ಕೆ ಒಳಪಟ್ಟಿರುತ್ತವೆ. ಆದಾಗ್ಯೂ ಇಂಧನ ಹೊಂದಾಣಿಕೆಗೆ ಸಂಬಂಧಿಸಿದಂತೆ, ದಿನಾಂಕ 31.03.2019ರ ಅಂತ್ಯಕ್ಕಿರುವ ಅಂತರ ಕಂಪೆನಿ ಶಿಲ್ಕುಗಳನ್ನು ಸಮನ್ವಯಗೊಳಿಸಲಾಗಿದೆ. ಕವಿಪ್ರನಿನಿ ಹಾಗೂ ಇತರ ಎಸ್ಕಾಂಗಳೊಂದಿಗಿನ ಇತರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಮನ್ವಯ ಕೆಲಸಗಳು ಪ್ರಗತಿಯಲ್ಲಿದ್ದು, ಮೆಸ್ಕಾಂ ತನ್ನ ಶಿಲ್ಕುಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ನೀಡಿರುತ್ತದೆ.

ಕ್ರ. ಸಂ.	ಶಾಸನಬದ್ಧ ಲೆಕ್ಕ ಪರಿಶೋಧಕರು ಗಮನಿಸಿರುವ ಅಂಶಗಳು	ವ್ಯವಸ್ಥಾಪಕ (ಆಡಳಿತ) ಮಂಡಳಿಯ ಉತ್ತರ
9.	ಗ್ರಾಹಕರ ಭದ್ರತಾ ಠೇವಣಿ ಮತ್ತು ಮಾಪಕ ಭದ್ರತಾ ಠೇವಣಿಗಳಿಗೆ ಸಂಬಂಧಿಸಿದಂತೆ ವಿಭಾಗೀಯ ಮಟ್ಟದ ನಿಯಂತ್ರಣ ಖಾತೆಗಳ ಶಿಲ್ಕು ಹಾಗೂ ಉಪವಿಭಾಗ ಮಟ್ಟದ ನೋಂದಣಿಗಳಲ್ಲಿ ನಮೂದಿಸಿದ ಶಿಲ್ಕುಗಳ ನಡುವಿನ ವ್ಯತ್ಯಾಸವನ್ನು ಸಂಪೂರ್ಣವಾಗಿ ಸಮನ್ವಯ ಗೊಳಿಸಿರುವುದಿಲ್ಲ.	ಅಧಾವೆ ಪತ್ರಿಕೆ ಪುನರ್ರಚನೆಯ ಯೋಜನೆ III ರ ಸಮಯದಲ್ಲಿ, ಮಾಪಕ ಭದ್ರತಾ ಠೇವಣಿಯ ಸ್ವಲ್ಪ ಮೊತ್ತವನ್ನು ಸರ್ಕಾರದ ಸೂಚನೆಯಂತೆ ಬಂಡವಾಳೀಕರಿಸಿದೆ. ಬಂಡವಾಳೀಕರಿಸಿದ್ದರೂ ಕೂಡಾ ಆ ಮೊತ್ತವನ್ನು ಗ್ರಾಹಕರ ಲೆಡ್ಜರ್ ಖಾತೆಯಲ್ಲಿ ಇನ್ನೂ ಹಾಗೇ ಬಾಕಿ ಮುಂದುವರೆಸಿಕೊಳ್ಳಲಾಗಿದೆ. ಆದರೆ ಅಷ್ಟೇ ಮೊತ್ತದ ಮಾಪಕ ಭದ್ರತಾ ಠೇವಣಿಯನ್ನು ಕಂಪೆನಿಯ ಸಂಬಂಧಪಟ್ಟ ಲೆಕ್ಕ ಖಾತೆಯಲ್ಲಿ ಕಡಿಮೆಗೊಳಿಸಿರುವುದು, ಉಪವಿಭಾಗೀಯ ಕಛೇರಿ ಮಟ್ಟದಲ್ಲಿ ನಿರ್ವಹಿಸುವ ಗ್ರಾಹಕರ ಲೆಡ್ಜರ್ ಶಿಲ್ಕಿಗೂ ವಿಭಾಗೀಯ ಕಛೇರಿಯಲ್ಲಿನ ಲೆಕ್ಕ ಖಾತೆಗೂ ವ್ಯತ್ಯಾಸಕ್ಕೆ ಕಾರಣವಾಗಿದೆ. ಮುಂದುವರೆದು, ಠೇವಣಾತಿ ವಹಿಗಳನ್ನು ಉಪ ವಿಭಾಗೀಯ / ಶಾಖಾ ಮಟ್ಟದಲ್ಲಿ ನಿರ್ವಹಿಸಲಾಗುತ್ತಿದ್ದು, ಲೆಕ್ಕ ಪತ್ರಗಳನ್ನು ವಿಭಾಗೀಯ ಮಟ್ಟದಲ್ಲಿ ನಿರ್ವಹಿಸ ಲಾಗುತ್ತಿದೆ. ಠೇವಣಾತಿ ವಹಿಗಳು ಹಾಗೂ ಲೆಕ್ಕ ಪತ್ರಗಳ ಶಿಲ್ಕುಗಳನ್ನು ಹೊಂದಾಣಿಕೆಗೊಳಿಸಲು ಪ್ರಸಕ್ತ ಸಾಲಿನಲ್ಲಿ ಕ್ರಮಕೈಗೊಳ್ಳಲಾಗಿದೆ. ಇದರಲ್ಲಿ ಅಗಾಧ ಕೆಲಸವು ಒಳಗೊಂಡಿದ್ದು ಅದನ್ನು ಸಂಪೂರ್ಣಗೊಳಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.
10.	ಕಂಪೆನಿಯಲ್ಲಿ ನಿರ್ವಹಿಸಲಾಗಿರುವ ಸ್ಥಿರಾಸ್ತಿ ಪುಸ್ತಕಗಳು, ಸ್ಥಿರಾಸ್ತಿ ಗುರುತಿನ ಸಂಖ್ಯೆ ಮತ್ತು ಸ್ಥಿರಾಸ್ತಿಯ ಭೌತಿಕ ನೆಲೆಗಳಂತಹ ವಿವರಗಳನ್ನು ಒಳಗೊಂಡಿರುವುದಿಲ್ಲ.	ವಿದ್ಯುಚ್ಛಕ್ತಿ ವಿತರಣಾ ವ್ಯವಹಾರವು ವಿಶಿಷ್ಟ ಸ್ವರೂಪದ್ದಾಗಿರುವುದರಿಂದ ಹಾಗೂ ಕಂಪೆನಿಯ ಆಸ್ತಿಗಳು ಕಂಪೆನಿಯ ವ್ಯಾಪ್ತಿಯ ಉದ್ದಗಲಕ್ಕೂ ಪಸರಿಸಿರುವುದರಿಂದ ಕಂಪೆನಿಯ ಎಲ್ಲಾ ಆಸ್ತಿಗಳಿಗೆ ಆಸ್ತಿ ಗುರುತಿನ ಸಂಖ್ಯೆಯನ್ನು ನೀಡಲು ಸಾಧ್ಯವಾಗಿಲ್ಲ. ಹಾಗಿದ್ದರೂ ಕೂಡಾ ವಿಭಾಗೀಯ ಕಛೇರಿಗಳಲ್ಲಿ ನಿರ್ವಹಿಸುತ್ತಿರುವ ಸ್ಥಿರಾಸ್ತಿ ವಹಿಯಲ್ಲಿ ಆಸ್ತಿಯ ವಿವರ, ಆಸ್ತಿಯನ್ನು ಸ್ಥಾಪಿಸಿದ / ರಚಿಸಿದ ವರ್ಷ ಇತ್ಯಾದಿ ವಿವರಗಳು ಲಭ್ಯವಿವೆ.
11.	ಕಂಪೆನಿಯ ಸ್ಥಿರಾಸ್ತಿಗಳ ಯಥೋಚಿತ ಭೌತಿಕ ಪರಿಶೀಲನಾ ವರದಿಯ ಅನುಪಸ್ಥಿತಿಯಲ್ಲಿ, ಸ್ಥಿರಾಸ್ತಿಗಳನ್ನು ಸೂಕ್ತ ಕಾಲಾಂತರಗಳಲ್ಲಿ ಪರಿಶೀಲಿಸಿರುವ ಹಾಗೂ ಆ ಸಂದರ್ಭಗಳಲ್ಲಿ ಗಮನಿಸಲಾದ ಕುಂದು ಕೊರತೆಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸಿರುವಲ್ಲಿನ ಯುಕ್ತತೆಯ ಬಗ್ಗೆ ಟಿಪ್ಪಣಿ ಮಾಡಲು ಸಾಧ್ಯವಾಗಿರುವುದಿಲ್ಲ.	ವಿದ್ಯುತ್ ಉಪಕೇಂದ್ರ ಮಟ್ಟದಲ್ಲಿರುವ ಆಸ್ತಿಯ ಭೌತಿಕ ಪರಿಶೀಲನೆಯನ್ನು ಕಂಪೆನಿಯು ಕೈಗೊಂಡಿರುತ್ತದೆ. ಸೇವಾ ಕ್ಷೇತ್ರದ ತುಂಬಾ ಹರಡಿರುವ ಇತರೇ ಆಸ್ತಿಗಳಾದ ಕಂಬಗಳು, ಪರಿವರ್ತಕಗಳು ಹಾಗೂ ಮಾರ್ಗಗಳನ್ನು ಭೌತಿಕವಾಗಿ ಪರಿಶೀಲಿಸಲು ಸಾಧ್ಯವಾಗಿಲ್ಲ.
12.	ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ನಾವು ಪರಿಶೀಲಿಸಿದ ದಾಖಲೆಗಳು ಮತ್ತು ನಮಗೆ ಒದಗಿಸಲಾದ ವರ್ಗಾವಣೆ ಪತ್ರಗಳು/ ನೋಂದಾವಣೆ ಪತ್ರಗಳ ಆಧಾರದ ಮೇಲೆ ನಾವು ವರದಿ ಮಾಡುವುದೇನೆಂದರೆ, ಆಸ್ತಿ – ಹೊಣೆ ಪಟ್ಟಿ ದಿನಾಂಕದಲ್ಲಿರುವಂತೆ ಸ್ಥಿರ ಆಸ್ತಿಗಳಾದ ಭೂಮಿ ಮತ್ತು ಕಟ್ಟಡಗಳ ಶೀರ್ಷಿಕೆ ಪತ್ರಗಳು ಕಂಪೆನಿಯ ಹೆಸರಿನಲ್ಲಿರುತ್ತವೆ. ಆರ್ಥಿಕ ತಃಖ್ತೆಗಳಲ್ಲಿ ಒಳಗೊಂಡಿರುವ ಸ್ಥಿರ ಆಸ್ತಿಗಳಲ್ಲಿ ₹ 51.57 ಲಕ್ಷಗಳ ಮೌಲ್ಯವನ್ನು ಹೊಂದಿರುವ ಒಂದೆರಡು ಪ್ರಕರಣಗಳನ್ನು ಹೊರತುಪಡಿಸಿ ಇತರ ಎಲ್ಲಾ ಭೂಮಿ ಮತ್ತು ಕಟ್ಟಡ ಆಸ್ತಿಗಳ ಗುತ್ತಿಗೆ ಒಪ್ಪಂದಗಳು ಕಂಪೆನಿಯ ಹೆಸರಿನಲ್ಲಿವೆ.	ಮುಲ್ಕಿ ಶಾಖಾ ಕಛೇರಿ ಹಾಗೂ 33 ಕೆ.ವಿ. ವಿದ್ಯುತ್ ಉಪಕೇಂದ್ರ, ಮುಲ್ಕಿ ಗಳನ್ನು ಸ್ಥಾಪಿಸಲಾಗಿರುವ ಭೂ ಆಸ್ತಿಗಳಿಗೆ ಸಂಬಂಧಿಸಿದ ಹಕ್ಕು ಪತ್ರಗಳನ್ನು ಕಂಪೆನಿಯ ಹೆಸರಿಗೆ ವರ್ಗಾಯಿಸಬೇಕಾಗಿದ್ದು, ಈ ಪ್ರಕ್ರಿಯೆಯನ್ನು ಮುಂದಿನ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

ಕ್ರ. ಸಂ.	ಶಾಸನಬದ್ಧ ಲೆಕ್ಕ ಪರಿಶೋಧಕರು ಗಮನಿಸಿರುವ ಅಂಶಗಳು	ವ್ಯವಸ್ಥಾಪಕ (ಆಡಳಿತ) ಮಂಡಳಿಯ ಉತ್ತರ
13.	ಕಂಪೆನಿಯು ರಾಜ್ಯ ಸರಕಾರದಿಂದ ಸ್ವೀಕರಿಸಿದ ಷೇರು ಠೇವಣಿ ಮೊತ್ತದಲ್ಲಿ ₹ 31.24 ಕೋಟಿ ಮೊತ್ತದ ಷೇರು ಠೇವಣಿಗಳಿಗೆ ಷೇರುಗಳ ಹಂಚಿಕೆಯಾಗಿಲ್ಲ ಅಥವಾ ಸ್ವೀಕೃತಿ ದಿನಾಂಕದ 60 ದಿನಗಳ ನಂತರದಲ್ಲಿ ಹಂಚಿಕೆಯಾಗಿದೆ	ಕಂಪೆನಿಯು ದಿನಾಂಕ 31.03.2019 ರ ಅಂತ್ಯಕ್ಕೆ ₹ 31.24 ಕೋಟಿಗಳಷ್ಟು ಷೇರು ಠೇವಣಿಯನ್ನು ಹೊಂದಿದ್ದು, ಈ ಪೈಕಿ ₹ 17.24 ಕೋಟಿಗಳಿಗೆ ಷೇರುಗಳನ್ನು ಮೇ-2019 ನೇ ಮಾಹೆಯಲ್ಲಿ ನೀಡಲಾಗಿದೆ. ಇನ್ನುಳಿದ ₹ 14.00 ಕೋಟಿಗಳು, ವಿದ್ಯುಚ್ಛಕ್ತಿಯ ಕ್ಷೇತ್ರದಲ್ಲಿನ ಹೂಡಿಕೆಗಾಗಿ ಮೆ/. ಪಿಸಿಕೆಎಲ್ ನ ಮುಖಾಂತರ ಮೆ/. ಜುರಾಲ ಪವರ್ ಪ್ರಾಜೆಕ್ಟ್ ಕಂಪೆನಿಗೆ ಕರ್ನಾಟಕ ಸರ್ಕಾರವು ನೀಡಿದ ₹ 70 ಕೋಟಿ ಮೊತ್ತದಲ್ಲಿ ಮೆಸ್ಕಾಂನ ಪಾಲಿಗೆ ಸಂಬಂಧಿಸಿದ್ದಾಗಿದ್ದು ಇದನ್ನು ಮಾನ್ಯ ಕೆಇಆರ್‌ಸಿ ಯು ವಿದ್ಯುತ್ ಜಕಾತಿ ನಿರ್ಧರಣೆಯಲ್ಲಿ ಪರಿಗಣಿಸಬೇಕಾಗಿರುತ್ತದೆ. ಈ ಮೊತ್ತಕ್ಕೆ ಷೇರುಗಳನ್ನು ಹಂಚಿಕೆ ಮಾಡುವ ಬಗ್ಗೆ ಕರ್ನಾಟಕ ಸರ್ಕಾರದಿಂದ ಯಾವುದೇ ನಿರ್ದಿಷ್ಟ ನಿರ್ದೇಶಗಳಿಲ್ಲದಿರುವುದರಿಂದ ಪತ್ರ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ಮುಂದುವರಿದು ಕಂಪೆನಿಗಳ ಕಾಯಿದೆ ಯ ಸೆಕ್ಷನ್ 2(31) ರಲ್ಲಿ ತಿಳಿಸಿರುವ ಠೇವಣಿಯು ರಾಜ್ಯ ಸರ್ಕಾರದಿಂದ ಪಡೆದ ಮೊತ್ತಗಳನ್ನು ಒಳಗೊಳ್ಳದೇ ಇರುವುದರಿಂದ ಕಂಪೆನಿಗಳ ಠೇವಣಿ ಸ್ವೀಕೃತಿ ನಿಯಮಗಳು-2014 ರ ಅವಕಾಶಗಳು ಇಲ್ಲಿ ಅನ್ವಯವಾಗುವುದಿಲ್ಲ.

ಸಹಿ/-
(ಡಾ. ಎನ್.ಮಂಜುಳ)
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 27.09.2019

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತದ ಸದಸ್ಯರಿಗೆ
ಲೆಕ್ಕ ಪರಿಶೋಧಕರ ವರದಿ

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ ಇದರ 31 ಮಾರ್ಚ್ 2019 ಕ್ಕೆ ಅಂತ್ಯಗೊಂಡ ಲೆಕ್ಕಪತ್ರಗಳನ್ನು ಪರಿಶೀಲಿಸಿ, 20 ನೇ ಆಗಸ್ಟ್ 2019 ರಂದು ಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತೇವೆ. ತದನಂತರದಲ್ಲಿ ಲೆಕ್ಕಪತ್ರಗಳನ್ನು ಪರಿಶೀಲಿಸಿ ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲರು ವ್ಯಕ್ತಪಡಿಸಿದ ಅಭಿಪ್ರಾಯಗಳ ಮೇರೆಗೆ ಕಂಪೆನಿಯ ಲೆಕ್ಕಪತ್ರಗಳನ್ನು ಪರಿಷ್ಕರಿಸಲಾಗಿರುತ್ತದೆ. ಆದುದರಿಂದ, ಪರಿಷ್ಕೃತ ಲೆಕ್ಕಪತ್ರಗಳ ಮೇಲೆ ದಿನಾಂಕ 31.03.2019 ರ ಅಂತ್ಯಕ್ಕೆ ಹೊಸದಾಗಿ ಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತೇವೆ. ಪರಿಷ್ಕೃತ ಪರಿಶೀಲನಾ ವರದಿಯು ನಮ್ಮ ಈ ಹಿಂದಿನ ಪರಿಶೋಧನಾ ವರದಿಯನ್ನು ರದ್ದುಗೊಳಿಸುತ್ತದೆ.

ಮೇಲೆ ತಿಳಿಸಲಾದ ಈ ಪರಿಷ್ಕರಣೆಯಿಂದಾಗಿ ಆಸ್ತಿಗಳು, ಸ್ಥಾವರಗಳು ಹಾಗೂ ಯಂತ್ರೋಪಕರಣಗಳಲ್ಲಿ ₹ 116.55 ಲಕ್ಷಗಳಷ್ಟು ಏರಿಕೆಯಾಗಿದೆ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ₹ 32.79 ಲಕ್ಷಗಳಷ್ಟು ಇಳಿಕೆಯಾಗಿದೆ, ನಗದು ಮತ್ತು ನಗದು ಸಮಾನಗಳಲ್ಲಿ ₹ 1.22 ಲಕ್ಷಗಳಷ್ಟು ಏರಿಕೆಯಾಗಿದೆ, ಇತರ ಆರ್ಥಿಕ ಆಸ್ತಿಗಳಲ್ಲಿ ₹ 8848.57 ಲಕ್ಷಗಳಷ್ಟು ಇಳಿಕೆಯಾಗಿದೆ, ಮುಂದೂಡಲಾದ ನಿಯಂತ್ರಣಾ ಆಸ್ತಿ ಖಾತೆಗಳಲ್ಲಿ ₹ 5523.79 ಲಕ್ಷಗಳಷ್ಟು ಇಳಿಕೆಯಾಗಿದೆ, ನಾಚಾಲ್ತಿ ವ್ಯಾಪಾರ ಸಂಬಂಧಿ ಕೊಡತಕ್ಕವುಗಳಲ್ಲಿ ₹ 439.86 ಲಕ್ಷಗಳಷ್ಟು ಇಳಿಕೆಯಾಗಿದೆ, ಚಾಲ್ತಿ ವ್ಯಾಪಾರ ಪಾವತಿಗಳಲ್ಲಿ ₹ 376.35 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ, ಇತರ ಆರ್ಥಿಕ ಜವಾಬ್ದಾರಿಗಳಲ್ಲಿ ₹ 13471.17 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ, ತತ್ಪರಿಣಾಮವಾಗಿ ಒಟ್ಟು ಆಸ್ತಿ ಹಾಗೂ ಜವಾಬ್ದಾರಿಗಳಲ್ಲಿ ₹ 14287.38 ಲಕ್ಷಗಳಷ್ಟು ಇಳಿಕೆಯಾಗಿರುತ್ತದೆ.

ಗುಣಮಟ್ಟದ ಅಭಿಪ್ರಾಯ

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ ("ಕಂಪೆನಿ") ಇದರ ದಿನಾಂಕ 31 ಮಾರ್ಚ್ 2019 ಕ್ಕೆ ಅಂತ್ಯಗೊಂಡ, ಪರಿಷ್ಕೃತ ಆಸ್ತಿ ಹೊಣೆ ಪಟ್ಟಿ, ಲಾಭ ಮತ್ತು ನಷ್ಟ ತಃಖ್ತೆ (ಇತರ ಸಮಗ್ರ ಆದಾಯವನ್ನೂ ಒಳಗೊಂಡಂತೆ), ಷೇರು ಬಂಡವಾಳಗಳಲ್ಲಿನ ಬದಲಾವಣೆ ಹಾಗೂ ನಗದು ಹರಿವು ಪಟ್ಟಿ ಹಾಗೂ ಲೆಕ್ಕಾಚಾರದ ಪ್ರಮುಖ ಕಾರ್ಯನೀತಿಗಳ ಸಾರಾಂಶ ಮತ್ತು ಇತರೆ ವ್ಯಾಖ್ಯಾತ್ಮಕ ವಿವರಣೆಗಳನ್ನು ಒಳಗೊಂಡ ಆರ್ಥಿಕ ತಃಖ್ತೆಗಳನ್ನು ನಾವು ಪರಿಶೀಲಿಸಿರುತ್ತೇವೆ.

ನಮ್ಮ ಅಭಿಪ್ರಾಯದಲ್ಲಿ, ನಮಗೆ ನೀಡಲಾದ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಮೇಲೆ ತಿಳಿಸಲಾದ ಆರ್ಥಿಕ ತಃಖ್ತೆಗಳು **"ಗುಣಮಟ್ಟದ ಅಭಿಪ್ರಾಯಗಳಿಗೆ ತಳಹದಿ"** ಪ್ಯಾರಾದಲ್ಲಿ ವಿವರಿಸಿದ ಅಂಶಗಳ ಪರಿಣಾಮಕ್ಕೆ ಒಳಪಟ್ಟು, ಕಂಪೆನಿಗಳ ಕಾಯಿದೆ 2013 ("ಕಾಯಿದೆ")ರಲ್ಲಿ ಅಪೇಕ್ಷಿತವಾದ ಮಾಹಿತಿಗಳನ್ನು ಒದಗಿಸುತ್ತವೆ ಹಾಗೂ 31.03.2019 ರ ಅಂತ್ಯಕ್ಕಿರುವಂತೆ ಕಂಪೆನಿಯ ವ್ಯವಹಾರಗಳು, ವಾರ್ಷಿಕ ಲಾಭ, ಇತರ ಸಮಗ್ರ ಆದಾಯ, ಬಂಡವಾಳಗಳಲ್ಲಿನ ಬದಲಾವಣೆಗಳು ಮತ್ತು ನಗದು ಹರಿವು ಪಟ್ಟಿಗಳು, ಕಂಪೆನಿಗಳ ಕಾಯಿದೆ 2013 ರ ಕಲಂ 133 ರಲ್ಲಿ ಸೂಚಿತವಾದ ಕಂಪೆನಿಗಳ (ಭಾರತೀಯ ಲೇಖಾ ಮಾನದಂಡಗಳು) ನಿಯಮ 2015 ನ್ನೂ ಒಳಗೊಂಡಂತೆ ಭಾರತೀಯ ಲೇಖಾ ಮಾನದಂಡಗಳು ("ಇಂಡ್ ಎಎಸ್") ಹಾಗೂ ಭಾರತದಲ್ಲಿ ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ಲೆಕ್ಕಾಚಾರದ ನಿಯಮಗಳಿಗೆ ಅನುಸಾರವಾಗಿರುತ್ತವೆ.

ಅಭಿಪ್ರಾಯಗಳಿಗೆ ತಳಹದಿ

ಕಾಯಿದೆಯ ಕಲಂ 143 (10) ರಡಿಯಲ್ಲಿ ರಚಿತವಾದ ತನಿಖಾ ಮಾನದಂಡಗಳಿಗೆ ಅನುಗುಣವಾಗಿ ನಾವು ಆರ್ಥಿಕ ತಃಖ್ತೆಗಳ ಪರಿಶೋಧನೆಯನ್ನು ಕೈಗೊಂಡಿರುತ್ತೇವೆ. ನಮ್ಮ ವರದಿಯ "ಆರ್ಥಿಕ ತಃಖ್ತೆಗಳ ಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು" ಭಾಗದಲ್ಲಿ, ಸದರಿ ತನಿಖಾ ಮಾನದಂಡಗಳ ಅನುಸಾರ ನಮ್ಮ ಜವಾಬ್ದಾರಿಗಳಿಗೆ ಮತ್ತಷ್ಟು ವಿವರಣೆಗಳನ್ನು ನೀಡಲಾಗಿದೆ. ಕಾಯಿದೆ ಹಾಗೂ ಅದರಡಿಯಲ್ಲಿ ರಚಿತವಾದ ನಿಯಮಗಳನುಸಾರ ಆರ್ಥಿಕ ತಃಖ್ತೆಗಳ ಪರಿಶೋಧನೆಗೆ ಸಂಬಂಧಿತ ಸ್ವಾತಂತ್ರ್ಯದ ಆವಶ್ಯಕತೆಗಳೊಂದಿಗೆ ಭಾರತೀಯ ಸನದು ಲೇಖಪಾಲರ ಸಂಸ್ಥೆ (ಐಸಿಎಐ) ಯು ಜಾರಿಗೊಳಿಸಿದ ನೀತಿ ಸಂಹಿತೆಗಳನುಸಾರ ನಾವು ಸ್ವತಂತ್ರರಾಗಿರುತ್ತೇವೆ ಹಾಗೂ ನಾವು ಈ ಅವಶ್ಯಕತೆಗಳನುಸಾರ ಮತ್ತು 'ಐಸಿಎಐ' ಯ ನೀತಿ ಸಂಹಿತೆಗಳನುಸಾರ ನಮ್ಮ ಜವಾಬ್ದಾರಿಗಳನ್ನು ಪೂರೈಸಿರುತ್ತೇವೆ. ನಾವು ಸಂಗ್ರಹಿಸಿದ ತನಿಖಾ ಸಾಕ್ಷ್ಯಾಧಾರಗಳು ನಮ್ಮ ಅಭಿಪ್ರಾಯಗಳಿಗೆ ಉತ್ತಮ ತಳಹದಿಯನ್ನು ಒದಗಿಸಲು ಸಾಕಷ್ಟಾಗಿದ್ದು, ಸಮಂಜಸವಾಗಿರುತ್ತವೆ ಎನ್ನುವುದು ನಮ್ಮ ನಂಬಿಕೆ.

ಗುಣಮಟ್ಟದ ಅಭಿಪ್ರಾಯಗಳಿಗೆ ತಳಹದಿ

1) **ಸಂಚಯ ವ್ಯವಸ್ಥೆ**: ಕಂಪೆನಿಗಳ ಲೆಕ್ಕಪುಸ್ತಕಗಳನ್ನು ಸಂಚಯ ವ್ಯವಸ್ಥೆಯ ಆಧಾರದಲ್ಲಿ ಹಾಗೂ ದ್ವಿ-ನಮೂದು ಪದ್ಧತಿಯಲ್ಲಿ ನಿರ್ವಹಿಸದಿದ್ದಲ್ಲಿ, ಲೆಕ್ಕ ಪುಸ್ತಕಗಳನ್ನು ಕಂಪೆನಿಗಳ ಕಾಯಿದೆ 2013 ರ ಸೆಕ್ಷನ್ 128 (1) ರ ಪ್ರಕಾರ ಕ್ರಮಬದ್ಧವಾಗಿ ನಿರ್ವಹಿಸಲಾಗಿದೆಯೆಂದು ಪರಿಗಣಿಸಲಾಗುವುದಿಲ್ಲ. ಕಂಪೆನಿಯ ಪ್ರಮುಖ ಲೆಕ್ಕನೀತಿಗಳ ಕಂಡಿಕೆ ಸಂಖ್ಯೆ 2.2 ರಲ್ಲಿ ಹೇಳಿಕೊಂಡಿರುವಂತೆ, ವಿದ್ಯುತ್ ಉತ್ಪಾದಕರಿಗೆ ಪಾವತಿಸಬೇಕಾದ ವಿಳಂಬ ಪಾವತಿ ಶುಲ್ಕಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಕಂಪೆನಿಯು ನಗದು ಆಧಾರದಲ್ಲಿ ಗುರುತಿಸಿ ಲೆಕ್ಕಿಸುತ್ತಿದ್ದು, ಇದು ಕಂಪೆನಿಗಳ ಕಾಯಿದೆ 2013 ರ ಸೆಕ್ಷನ್ 128 (1) ರಲ್ಲಿ ಸೂಚಿಸಲ್ಪಟ್ಟ ಸಂಚಯ ಆಧಾರಿತ ಲೆಕ್ಕ ವ್ಯವಸ್ಥೆಗೆ ವ್ಯತಿರಿಕ್ತವಾಗಿರುತ್ತದೆ.

2) **ಭಾರತೀಯ ಲೆಕ್ಕಮಾನದಂಡಗಳ ಉಲ್ಲಂಘನೆಗಳು:**

ಎ) **ಭಾರತೀಯ ಲೇಖಾ ಮಾನದಂಡ 2 – ದಾಸ್ತಾನುಗಳು:** ಕಂಪೆನಿಯು ತನ್ನ ದಾಸ್ತಾನುಗಳನ್ನು ಅವುಗಳ ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯ ಇವೆರಡರ ಪೈಕಿ ಕಡಿಮೆಯಾದುದನ್ನು ಪರಿಗಣಿಸಿ ಮೌಲ್ಯೀಕರಿಸಬೇಕಾದ ಅಗತ್ಯವಿರುತ್ತದೆ. ಆದರೆ, ಕಂಪೆನಿಯು ಅವುಗಳ ಮೌಲ್ಯವನ್ನು ಪರಿಗಣಿಸಿ ಮೌಲ್ಯಮಾಪನಗೊಳಿಸಿದೆ. ಲೇಖಾ ಮಾನದಂಡದ ಈ ವಿಚಲನದ ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಬಿ) **ಭಾರತೀಯ ಲೇಖಾ ಮಾನದಂಡ 12 – ಅದಾಯ ತೆರಿಗೆಗಳು:** ಕಂಪೆನಿಯು ಮುಂದೂಡಿದ ತೆರಿಗೆ ಆಸ್ತಿ / ಜವಾಬ್ದಾರಿಯನ್ನು ಭಾರತೀಯ ಲೇಖಾಮಾನದಂಡ 12 –ರ ಅಗತ್ಯದಂತೆ ಲೆಕ್ಕಿಸಿರುವುದಿಲ್ಲ. ಲೆಕ್ಕ ಪತ್ರಗಳ ಮೇಲೆ ಇದರ ಪರಿಣಾಮವನ್ನು ಅಂದಾಜಿಸಲಾಗುವುದಿಲ್ಲ.

ಸಿ) **ಭಾರತೀಯ ಲೇಖಾ ಮಾನದಂಡ 23– ಎರವಲು ವೆಚ್ಚಗಳು:** ಭಾರತೀಯ ಲೇಖಾಮಾನದಂಡ 23 ಹಾಗೂ ಭಾರತೀಯ ಲೇಖಾಮಾನದಂಡ 109 ಗಳ ಅಗತ್ಯತೆಯಂತೆ ಕಂಪೆನಿಯು ಪರಿಣಾಮಕಾರಿ ಬಡ್ಡಿದರ ವಿಧಾನವನ್ನು ಪರಿಗಣಿಸಿ ಬಡ್ಡಿವೆಚ್ಚಗಳನ್ನು ಲೆಕ್ಕಾಚಾರ ಮಾಡಬೇಕಾಗಿರುತ್ತದೆ. ಆದಾಗ್ಯೂ ಕಂಪೆನಿಯು ಬಡ್ಡಿ ವೆಚ್ಚಗಳಿಗಾಗಿ ಕೂಪನ್ ದರಗಳನ್ನು ಪರಿಗಣಿಸುತ್ತಿದೆ. ಈ ವಿಚಲನದ ಪರಿಣಾಮವನ್ನು ಅಂದಾಜಿಸಲಾಗುವುದಿಲ್ಲ.

ಡಿ) **ಭಾರತೀಯ ಲೇಖಾ ಮಾನದಂಡ 105–ಕಾರ್ಯಾಚರಣೆಯಿಂದ ಸ್ಥಗಿತಗೊಂಡ ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು:** ಕಂಪೆನಿಯು ತನ್ನ ಮಾರಾಟಕ್ಕಿರುವ ಆಸ್ತಿಗಳೆಂದು ವರ್ಗೀಕರಿಸಿದ ನಾಚಾಲ್ತಿ ಆಸ್ತಿಗಳನ್ನು ಅವುಗಳ ಪ್ರಸ್ತುತ ಮೌಲ್ಯ ಅಥವಾ ನಿವ್ವಳ ಮಾರಾಟ ಮೌಲ್ಯ ಇವೆರಡರ ಪೈಕಿ ಕಡಿಮೆಯಾದುದನ್ನು ಪರಿಗಣಿಸಿ ಮೌಲ್ಯೀಕರಿಸಬೇಕಾದ ಅಗತ್ಯವಿರುತ್ತದೆ. ಆದರೆ, ಕಂಪೆನಿಯು ಅವುಗಳನ್ನು ಇಳಿತಗೊಳಿಸಿದ ಮೌಲ್ಯವನ್ನು ಪರಿಗಣಿಸಿ ಮೌಲ್ಯಮಾಪನಗೊಳಿಸಿದೆ. ಲೇಖಾ ಮಾನದಂಡದ ಈ ವಿಚಲನದ ಪರಿಣಾಮವನ್ನು ಅಂದಾಜಿಸಲಾಗುವುದಿಲ್ಲ.

ಇ) ಇಂಡ್.ಎ.ಎಸ್. 109 ರ ಆವಶ್ಯಕತೆಯಂತೆ ಕಂಪೆನಿಯು ನಿರೀಕ್ಷಿತ ಕ್ರೆಡಿಟ್ ನಷ್ಟ ವಿಧಾನದಲ್ಲಿ ವ್ಯಾಪಾರ ಸ್ವೀಕೃತಿಗಳ ದುರ್ಬಲತೆಯನ್ನು ಗುರುತಿಸಿಲ್ಲ.

ಮುಂದುವರಿದು,

1. ಕಂಪೆನಿಯು ಆಂತರಿಕ ಪರಿಶೋಧನೆ ವ್ಯವಸ್ಥೆಯನ್ನು ಹೊಂದಿದೆ. ಆದಾಗ್ಯೂ, ಕಂಪೆನಿಯ ಗಾತ್ರ ಹಾಗೂ ವ್ಯವಹಾರದ ಪರಿಮಾಣವನ್ನು ಪರಿಗಣಿಸಿದಾಗ, ಪ್ರಸಕ್ತ ವ್ಯವಸ್ಥೆಯನ್ನು ಬಲಪಡಿಸುವುದು ಅವಶ್ಯಕ ಮತ್ತು ಆಡಿಟ್ ವಿಭಾಗಕ್ಕೆ ಸಾಕಷ್ಟು ಸಿಬ್ಬಂದಿಯನ್ನು ನೀಡಬೇಕಾಗಿರುತ್ತದೆ ಎಂದು ಅಭಿಪ್ರಾಯಪಡುತ್ತೇವೆ. ಆಂತರಿಕ ಪರಿಶೋಧನೆಯನ್ನು ಸಿಸ್ಟಮ್ ಆಡಿಟ್, ತಾಂತ್ರಿಕ ತನಿಖೆ, ಸಾಮಾಗ್ರಿ, ತಪಶೀಲು ಉಗ್ರಾಣ ತನಿಖೆ ಮತ್ತು ವಿಶೇಷವಾಗಿ ತೆರಿಗೆ ಕಾನೂನು ಮತ್ತು ಕಾರ್ಮಿಕ ಕಾನೂನುಗಳ ಉಪಬಂಧಗಳನ್ನು ಬದ್ಧವಾಗಿ ಪಾಲನೆ ಮಾಡುವ ತನಿಖೆಗೂ ವಿಸ್ತರಿಸಬೇಕಾಗಿರುತ್ತದೆ.
2. **ಬಾಕಿ ದೃಢೀಕರಣ/ಸಮನ್ವಯ:** ಕಂಪೆನಿಯು ದಿನಾಂಕ 31.03.2019ರ ಅಂತ್ಯಕ್ಕೆ ಇರುವಂತೆ, ಮೆ। ಕೆಪಿಟಿಸಿಎಲ್. ಕೆಪಿಸಿಎಲ್ ಹಾಗೂ ಇತರ ಎಸ್ಕಾಂಗಳು ಮತ್ತು ಪಿಸಿಕೆಲ್, ವಿವಿಧ ಬಾಕಿದಾರರ, ವಿವಿಧ ಸಾಲಗಾರರ ಶಿಲ್ಕುಗಳು, ಗುತ್ತಿಗೆದಾರರು/ಸರಬರಾಜುದಾರರು/ಸರಕಾರೀ ಪ್ರಾಧಿಕಾರಗಳು/ ಗ್ರಾಹಕರು/ ನೌಕರರಿಗೆ ನೀಡಿರುವ ಹಾಗೂ ಪಡೆದ ಠೇವಣಿಗಳ ಶಿಲ್ಕುಗಳು, ವಿವಿಧ ವ್ಯಕ್ತಿಗಳಿಂದ ಬರಬೇಕಾದ ಮುಂಗಡಗಳು ಹಾಗೂ ಇತರ ಸ್ವೀಕೃತಿಗಳ ಶಿಲ್ಕುಗಳನ್ನು ಸಮನ್ವಯಗೊಳಿಸಿ ಧೃಢೀಕರಣಗಳನ್ನು ಪಡೆದುಕೊಂಡಿರುವುದಿಲ್ಲ. ಸಮನ್ವಯದಿಂದ ಉಂಟಾಗುವ ಹೊಂದಾಣಿಕೆ ಮತ್ತು ಹಳೆಯ ಬಾಕಿ ಚುಕ್ತಾ ಮತ್ತು ವಸೂಲಾಗದೇ ಇರುವ ಅಥವಾ ಭಾಗಶಃ ವಸೂಲಾತಿಯಿಂದಾಗಿ ಆಗುವ ನಷ್ಟದ ಸಾಧ್ಯತೆಯನ್ನು ಕಂಡುಹಿಡಿಯಲಾಗಿಲ್ಲ.
3. ಗ್ರಾಹಕರ ಭದ್ರತಾ ಠೇವಣಿ ಮತ್ತು ಮಾಪಕ ಭದ್ರತಾ ಠೇವಣಿಗಳಿಗೆ ಸಂಬಂಧಿಸಿದಂತೆ ವಿಭಾಗೀಯ ಮಟ್ಟದ ನಿಯಂತ್ರಣ ಖಾತೆಗಳ ಶಿಲ್ಕು ಹಾಗೂ ಉಪವಿಭಾಗ ಮಟ್ಟದ ನೋಂದಣಿಗಳಲ್ಲಿ ನಮೂದಿಸಿದ ಶಿಲ್ಕುಗಳ ನಡುವಿನ ವ್ಯತ್ಯಾಸವನ್ನು ಸಂಪೂರ್ಣವಾಗಿ ಸಮನ್ವಯಗೊಳಿಸಿರುವುದಿಲ್ಲ.

ಗಮನ ಸೆಳೆಯಲಾದ ವಿಷಯಗಳು

ಈ ಕೆಳಗಿನ ವಿಷಯಗಳ ಕಡೆಗೆ ಗಮನ ಸೆಳೆಯಲಾಗಿದೆ.

1. ದಿನಾಂಕ 31.03.2014 ರ ಅಂತ್ಯಕ್ಕೆ ಇರುವಂತೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಗೆ ಪಾವತಿಸಬೇಕಾಗಿದ್ದ ಬಾಕಿ ಮೊತ್ತದ ಮೇಲೆ ಪಾವತಿಸಬೇಕಾದ ಬಡ್ಡಿಗೆ ಕಂಪೆನಿಯು ಆರ್ಥಿಕ ವರ್ಷ 2014–15ನೇ ಸಾಲಿನವರೆಗೆ ಅವಕಾಶವನ್ನು ಕಲ್ಪಿಸಿದೆ. ಮಾರ್ಚ್ 2014 ರ ಅಂತ್ಯಕ್ಕೆ ಇರುವಂತೆ ಕ.ವಿ.ನಿ.ಗೆ ಪಾವತಿಸಬೇಕಾದ ಮೊತ್ತದ ಮೇಲೆ ಆರ್ಥಿಕ ವರ್ಷ 2015–16ನೇ ಸಾಲಿನಿಂದ ಬಡ್ಡಿಯನ್ನು ಲೆಕ್ಕಿಸಲಾಗುತ್ತಿಲ್ಲ. ಆರ್ಥಿಕ ವರ್ಷ 2015–16, 2016–17 ಹಾಗೂ 2017–18 ನೇ ವರ್ಷಗಳಿಗೆ ಸಂಬಂಧಪಟ್ಟ ಬಡ್ಡಿಯು ₹ 357738.00 ಲಕ್ಷಗಳಷ್ಟಾಗುತ್ತದೆ.
2. ನಿರೀಕ್ಷಿತ ವಸೂಲಾತಿ ದಿನಾಂಕದ ಅಲಭ್ಯತೆಯಿಂದಾಗಿ ಭದ್ರತಾ ಠೇವಣಿಗಳು ಹಾಗೂ ಹಿಡಿದಿಟ್ಟುಕೊಂಡ ಮೊತ್ತಗಳ ನ್ಯಾಯೋಚಿತ ಮೌಲ್ಯಗಳನ್ನು ಅಂದಾಜಿಸಲಾಗುವುದಿಲ್ಲ.

3. ಮ.ವಿ.ಸ.ಕಂ. ಗೆ ₹ 2.80 ರ ದರದಲ್ಲಿ ವಿದ್ಯುತ್ ಸರಬರಾಜು ಮಾಡಲು ಎಎಮ್‌ಆರ್ ಕಂಪೆನಿಯು ಮಾಡಿಕೊಂಡಿರುವ ವಿದ್ಯುತ್ ಖರೀದಿ ಒಪ್ಪಂದವನ್ನು ಜುಲೈ 2011 ರಲ್ಲಿ ರದ್ದುಗೊಳಿಸಿದ ಮಾನ್ಯತೆಗೆ ಸಂಬಂಧಿಸಿದಂತೆ ಮ.ವಿ.ಸ.ಕಂಪೆನಿಯು ಸಲ್ಲಿಸಿದ್ದ ಸಿವಿಲ್ ಮೇಲ್ಮನವಿ ಸಂಖ್ಯೆ 1665/2015 ನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲವು ವಜಾಗೊಳಿಸಿ ಗೌರವಾನ್ವಿತ ಎಟಿಇ ಯ ಆದೇಶವನ್ನು ದೃಢೀಕರಿಸಿ ವಿವಾದಕ್ಕೆ ತೆರೆಯೆಳೆದಿರುತ್ತದೆ. ಮೆ/ ಎಎಮ್‌ಆರ್ ಕಂಪೆನಿಯು ಅಕ್ಟೋಬರ್ 2014 ರವರೆಗೆ ವಿದ್ಯುತ್ ಸರಬರಾಜು ಮಾಡಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲದ ಆದೇಶದ ಉತ್ತರಭಾಗವಾಗಿ ಉತ್ಪಾದಕ ಸಂಸ್ಥೆಯು ಜುಲೈ 2011 ರಿಂದ ಅಕ್ಟೋಬರ್ 2014 ರವರೆಗೆ ವಿದ್ಯುತ್ ಸರಬರಾಜು ಮಾಡಿದ ಬಾಬ್ತು ₹ 4416.00 ಲಕ್ಷಗಳಷ್ಟು ಬಡ್ಡಿಯನ್ನೂ ಒಳಗೊಂಡಂತೆ ₹ 19070.00 ಲಕ್ಷಗಳಷ್ಟು ಮೊತ್ತಕ್ಕೆ ಬೇಡಿಕೆ ಸಲ್ಲಿಸಿದ್ದು ಇದು ಮುಖ್ಯವಾಗಿ ವಿದ್ಯುತ್ ಖರೀದಿ ಒಪ್ಪಂದವನ್ನು ರದ್ದುಗೊಳಿಸಿದ ನಂತರದ ಅವಧಿಯದ್ದಾಗಿರುತ್ತದೆ. ಅಲ್ಲದೆ, ವಿದ್ಯುತ್ ಖರೀದಿ ಒಪ್ಪಂದವನ್ನು ರದ್ದುಗೊಳಿಸಿದ ನಂತರದ ಅವಧಿಯಲ್ಲಿ ಸರಬರಾಜು ಮಾಡಿರುವ ವಿದ್ಯುತ್‌ಗೆ ಮಾರುಕಟ್ಟೆ ದರವನ್ನು ನಿಗಧಿಪಡಿಸುವಂತೆ ಕೋರಿ ಉತ್ಪಾದಕ ಸಂಸ್ಥೆಯು 24.11.2017 ರಲ್ಲಿ ಮಾನ್ಯ ಕ.ವಿ.ನಿ. ಆಯೋಗಕ್ಕೆ ಮನವಿಯನ್ನು ಸಲ್ಲಿಸಿರುತ್ತದೆ. ಜುಲೈ 2011 ರಿಂದ ಅಕ್ಟೋಬರ್ 2014 ರ ನಡುವೆ ಸರಬರಾಜು ಮಾಡಲಾದ ವಿದ್ಯುತ್ ನ ಒಪ್ಪಂದದ ದರ ಹಾಗೂ ಮಾರುಕಟ್ಟೆ ದರಗಳ ನಡುವಿನ ವ್ಯತ್ಯಾಸದ ಮೊತ್ತಕ್ಕೆ ಕಂಪೆನಿಯು ಯಾವುದೇ ಅವಕಾಶವನ್ನು ಕಲ್ಪಿಸಿರುವುದಿಲ್ಲ.

4. ಇಂಡ್.ಎ.ಎಸ್. 23 ರ ಆವಶ್ಯಕತೆಯಂತೆ ಸಾಲ ವೆಚ್ಚಗಳನ್ನು ಲಾಭ ಅಥವಾ ನಷ್ಟಗಳ ಖಾತೆಗೆ ವರ್ಗಾಯಿಸಬೇಕಾಗಿರುತ್ತದೆ. ಯಾವ ಆಸ್ತಿಗಳಿಗಾಗಿ ಸಾಲವನ್ನು ಪಡೆಯಲಾಗಿದೆಯೋ ಅಂತಹ ಆಸ್ತಿಗಳನ್ನು ಅವುಗಳ ಉದ್ದೇಶಿತ ಬಳಕೆ ಅಥವಾ ಮಾರಾಟಕ್ಕೆ ಸಿದ್ಧಪಡಿಸಲು ಸಾಕಷ್ಟು ಸಮಯಾವಕಾಶದ ಅಗತ್ಯವಿದ್ದಲ್ಲಿ ಮಾತ್ರ ಅಂತಹ ಸಾಲ ವೆಚ್ಚಗಳನ್ನು ಬಂಡವಾಳೀಕರಿಸಬಹುದಾಗಿದೆ. ಕಂಪೆನಿಯ 71ನೇ ಮಂಡಳಿಯ ಸಭೆಯ ಕಾರ್ಯಸೂಚಿ ಐಟಂ ಬಿಒಡಿಎಮ್ 71/34 ರ ಕ್ರಮಾಂಕ 3(ಡಿ) ಯ ಅನುಸಾರ "₹ 25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ವೆಚ್ಚದ ಆಸ್ತಿಗಳ ಸ್ವಾಧೀನ, ನಿರ್ಮಾಣ ಅಥವಾ ಉತ್ಪಾದನೆಗೆ ನೇರವಾಗಿ ಕಾರಣವಾಗುವ ಸಾಲ ವೆಚ್ಚ ಮತ್ತು ಆಸ್ತಿಗಳನ್ನು ಅವುಗಳ ಉದ್ದೇಶಿತ ಬಳಕೆ ಅಥವಾ ಮಾರಾಟಕ್ಕೆ ಸಿದ್ಧಪಡಿಸಲು ಒಂದು ವರ್ಷಗಳ ಗಣನೀಯ ಸಮಯಾವಕಾಶ ತೆಗೆದುಕೊಳ್ಳುವುದಾದಲ್ಲಿ ಅಂತಹ ಸಾಲವೆಚ್ಚಗಳನ್ನು ಆಯಾ ಆಸ್ತಿಗಳ ವೆಚ್ಚದ ಭಾಗವಾಗಿ ಬಂಡವಾಳಕರಿಸಲಾಗುವುದು. ಇನ್ನಿತರ ಎಲ್ಲಾ ಸಾಲ ವೆಚ್ಚಗಳನ್ನು ಭರಿಸಲಾದ ಆಯಾ ಅವಧಿಗಳ ವೆಚ್ಚಗಳೆಂದು ಪರಿಗಣಿಸುವುದು". ಆದರೆ ಕಂಪೆನಿಯು ಒಂದು ವರ್ಷಗಳಿಗಿಂತ ಕಡಿಮೆ ಅವದಿ ತೆಗೆದುಕೊಳ್ಳುವ ಆಸ್ತಿಗಳ ಸಾಲವೆಚ್ಚಗಳನ್ನೂ ಸಹ ಬಂಡವಾಳಕರಿಸುತ್ತಿದೆ. ಈ ವಿಚಲನದ ಪರಿಣಾಮವನ್ನು ಅಂದಾಜಿಸಲಾಗುವುದಿಲ್ಲ.

5. ದೀರ್ಘಾವಧಿಯಿಂದ ವಸೂಲಾತಿಗೆ ಬಾಕಿ ಇರುವ ಪ್ರಕರಣಗಳು:

ಕ್ರಮ ಸಂಖ್ಯೆ	ವಿವರಗಳು	ಮೊತ್ತ (ಕೋಟಿ ₹ ಗಳಲ್ಲಿ)
1.	ಶಾಶ್ವತವಾಗಿ ಸಂಪರ್ಕ ಕಡಿತಗೊಳಿಸಲಾದ ಸ್ಥಾವರಗಳಿಂದ ಬಾಕಿ	6.78
2.	ಎಲ್.ಟಿ.-4 (ನೀರಾವರಿ ಪಂಪುಸೆಟ್ಟು ಗ್ರಾಹಕರು) - 2008 ರ ಹಿಂದಿನ ಬಾಕಿ	122.08
3.	ಮೆ/ ತುಂಗಭದ್ರಾ ಶುಗರ್ ವರ್ಕ್ಸ್ ಪ್ರೈ. ಲಿ. -ಹೆಚ್.ಟಿ. - 2010 ರಿಂದ ಬಾಕಿ ಇರುವುದು.	0.93
4.	ಮೈಸೂರ್ ಪೇಪರ್ ಮಿಲ್ಸ್ ಲಿ. - ದೀರ್ಘಾವಧಿಯಿಂದ ಬಾಕಿ ಇರುವುದು	149.33
5.	ಗ್ರಾಮೀಣ ನೀರು ಸರಬರಾಜು ಸ್ಥಾವರಗಳ -ದೀರ್ಘಾವಧಿಯಿಂದ ಬಾಕಿ ಇರುವುದು	27.81
ಒಟ್ಟು ಬಾಕಿ (ಎ)		**306.93**
ಕ.ವಿ.ಪ್ರ.ನಿ.ನಿ.ಯಿಂದ ಸ್ವೀಕೃತವಾದ ಅವಕಾಶಗಳು (i)		35.72
ಕಂಪೆನಿಯಿಂದ ಕಲ್ಪಿಸಲಾದ ಅವಕಾಶ (ii)		20.25
ಲಭ್ಯವಿರುವ ಒಟ್ಟು ಅವಕಾಶ (ಬಿ) (i)+(ii)		**55.97**
ಅವಕಾಶಗಳನ್ನು ಮೀರಿದ ಬಾಕಿ (ಸಿ=ಎ-ಬಿ)		**250.96**
ಅಪಾಯದಲ್ಲಿರುವ ಸ್ವೀಕೃತಿ ಬಾಕಿಗಳು (% ದರದಲ್ಲಿ) (ಸಿ/ಎ)		**81.77%**

ಮೇಲಿನ ₹ 55.97 ಕೋಟಿಗಳ ಅವಕಾಶದ ಮೊತ್ತವು ಸಾಕಷ್ಟಾಗಿದೆ ಎಂಬುವುದು ಕಂಪೆನಿಯ ಅಭಿಪ್ರಾಯವಾಗಿದೆ.

6. ತಾತ್ಕಾಲಿಕ ನೌಕರರಿಗೆ ಪಾವತಿಸಲಾದ ಸಂಬಳ/ವೇತನದ ಮೇಲೆ ಭವಿಷ್ಯ ನಿಧಿ ಮೊತ್ತವನ್ನು ವಿಳಂಬವಾಗಿ ಪಾವತಿಸಿರುವ ಬಗ್ಗೆ ಪಿ.ಎಫ್. ಇಲಾಖೆಯು ಬೇಡಿಕೆ ಮಾಡಿದ ಬಡ್ಡಿ ಹಾಗೂ ದಂಡದ ಮೊತ್ತ ₹ 6,30,03,875/-ಗಳನ್ನು ಕಂಪೆನಿಯು ಆಕ್ಷೇಪಣೆಯೊಂದಿಗೆ ಪಾವತಿಸಿದೆ. ಹುಂಡಿಗಳನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬವು ಕೂಲಿ ಗುತ್ತಿಗೆದಾರರ ಪಿಎಫ್ ವಂತಿಗೆಯ ಪಾವತಿಯಲ್ಲಿನ ವಿಳಂಬಕ್ಕೆ ಕಾರಣವೆಂಬುವುದು ಕಂಪೆನಿಯ ಅಭಿಮತವಾಗಿದೆ. ಆದರೆ ನೌಕರರ ಭವಿಷ್ಯ ನಿಧಿ ಹಾಗೂ ಇತರ ಅವಕಾಶಗಳ ಕಾಯಿದೆ 1952 ರ ಪ್ರಕಾರ ವೇತನ ಪಾತಿಸಲಾದ ತಿಂಗಳ ಅಂತ್ಯದ 15 ದಿನಗಳ ಒಳಗಾಗಿ ಭವಿಷ್ಯ ನಿಧಿ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

7. ₹ 15000/– ಕ್ಕಿಂತ ಹೆಚ್ಚಿನ ಮೊತ್ತದ ವೇತನ ಪಡೆಯುವ ನೌಕರರಿಗೂ ಸಹ ಭವಿಷ್ಯ ನಿಧಿ ವಂತಿಗೆಯನ್ನು ಪಾವತಿಸಲಾಗಿದೆ. ಈ ವಂತಿಗೆಯು ಭವಿಷ್ಯ ನಿಧಿ ಮತ್ತು ಪಿಂಚಣಿಗಳನ್ನು ಒಳಗೊಂಡಿರುತ್ತದೆ. ₹ 15000/– ಕ್ಕಿಂತ ಹೆಚ್ಚಿನ ಮೊತ್ತದ ವೇತನ ಪಡೆಯುವ ನೌಕರರಿಗೂ ಸಹ ಭವಿಷ್ಯ ನಿಧಿ ವಂತಿಗೆಯನ್ನು ಪಾವತಿಸಿರುವುದರಲ್ಲಿ ಯಾವುದೇ ತಪ್ಪಿಲ್ಲದಿದ್ದರೂ ಪಿಂಚಣಿ ವಂತಿಗೆಗಳನ್ನು ₹ 15000/– ರ ಮೇಲೆ ನಿಗದಿತ ದರಗಳಲ್ಲಿ ಮಾಡಲಾಗುವುದೇ ಅಲ್ಲದೆ ₹ 15000/– ವನ್ನು ಮೀರಿದ ಮೊತ್ತಕ್ಕೆ ಮಾಡತಕ್ಕದ್ದಲ್ಲ.

ಈ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಆರ್ಥಿಕ ತಃಖ್ತೆಗಳು ಹಾಗೂ ಅವುಗಳ ಮೇಲಿನ ಲೆಕ್ಕ ಪರಿಶೋಧಕರ ವರದಿಯನ್ನು ಹೊರತುಪಡಿಸಿ ಇತರ ಮಾಹಿತಿಗಳು

ಕಂಪೆನಿಯ ನಿರ್ದೇಶಕ ಮಂಡಳಿಯು ಇತರೆ ಮಾಹಿತಿಗಳನ್ನು ತಯಾರಿಸಲು ಜವಾಬ್ದಾರಿಯಾಗಿರುತ್ತದೆ. ಇತರೆ ಮಾಹಿತಿಯು ನಿರ್ವಹಣಾ ಚರ್ಚೆ ಹಾಗೂ ವಿಶ್ಲೇಷಣೆಗಳಲ್ಲಿ ಒಳಗೊಂಡ ಮಾಹಿತಿಗಳು, ನಿರ್ದೇಶಕ ಮಂಡಳಿಯ ವರದಿಗೆ ಅನುಬಂಧಗಳನ್ನೂ ಒಳಗೊಂಡಂತೆ ನಿರ್ದೇಶಕ ಮಂಡಳಿಯ ವರದಿ, ವ್ಯಾವಹಾರಿಕ ಜವಾಬ್ದಾರಿ ವರದಿ, ಕಾರ್ಪೋರೇಟ್ ಆಡಳಿತ ಹಾಗೂ ಷೇರುದಾರರ ಮಾಹಿತಿಗಳನ್ನು ಒಳಗೊಂಡಿರುತ್ತದೆ. ಆದರೆ ಆರ್ಥಿಕ ತಃಖ್ತೆಗಳು ಹಾಗೂ ಅವುಗಳ ಮೇಲಿನ ನಮ್ಮ ಲೆಕ್ಕ ಪರಿಶೋಧನಾ ವರದಿಯನ್ನು ಒಳಗೊಂಡಿರುವುದಿಲ್ಲ.

ಆರ್ಥಿಕ ತಃಖ್ತೆಗಳ ಮೇಲಿನ ನಮ್ಮ ಅಭಿಪ್ರಾಯಗಳು ಇತರೆ ಮಾಹಿತಿಗಳನ್ನು ಒಳಗೊಂಡಿರುವುದಿಲ್ಲ ಹಾಗೂ ಅವುಗಳ ಮೇಲೆ ನಾವು ಯಾವುದೇ ಭರವಸೆ/ ತೀರ್ಮಾನಗಳನ್ನು ವ್ಯಕ್ತಪಡಿಸುವುದಿಲ್ಲ. ಆರ್ಥಿಕ ತಃಖ್ತೆಗಳ ಮೇಲಿನ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಇತರೆ ಮಾಹಿತಿಗಳನ್ನು ಓದುವುದು ಹಾಗೂ ಈ ಸಂದರ್ಭದಲ್ಲಿ, ಇತರೆ ಮಾಹಿತಿಗಳು ಆರ್ಥಿಕ ತಃಖ್ತೆಗಳಿಗೆ ಅಥವಾ ಪರಿಶೋಧನಾ ಸಮಯದಲ್ಲಿ ನಾವು ಪಡೆದ ಜ್ಞಾನಗಳಿಗೆ ವ್ಯತಿರಿಕ್ತವಾಗಿವೆಯೇ ಅಥವಾ ತಪ್ಪು ಅರ್ಥಗಳನ್ನು ನೀಡುತ್ತವೆಯೇ ಎಂಬುವುದನ್ನು ಪರಿಗಣಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

ನಾವು ನಿರ್ವಹಿಸಿದ ಕೆಲಸಗಳ ಆಧಾರದಲ್ಲಿ ಇತರ ಮಾಹಿತಿಗಳು ತಪ್ಪು ಮಾಹಿತಿಗಳನ್ನು ನೀಡುತ್ತಿರುವುದು ಕಂಡುಬಂದಲ್ಲಿ ಅಂತಹ ವಾಸ್ತವಾಂಶವನ್ನು ನಾವು ವರದಿ ಮಾಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ನಾವು ವರದಿ ಮಾಡಲು ಏನೂ ಇರುವುದಿಲ್ಲ.

ಆರ್ಥಿಕ ತಃಖ್ತೆಗಳ ಮೇಲೆ ನಿರ್ದೇಶಕ ಮಂಡಳಿಯ ಜವಾಬ್ದಾರಿಗಳು

ಕಾಯಿದೆಯ ಸೆಕ್ಷನ್ 134(5) ರ ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ ಭಾರತೀಯ ಲೇಖಾಮಾನದಂಡಗಳು ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕ ತತ್ವಗಳಿಗೆ ಅನುಸಾರವಾಗಿ, ಕಂಪೆನಿಯ ನೈಜ ಹಾಗೂ ಸಮಂಜಸ ನೋಟ, ಆರ್ಥಿಕ ಸ್ಥಿತಿ, ಆರ್ಥಿಕ ಕಾರ್ಯಕ್ಷಮತೆ, ಒಟ್ಟು ಸಮಗ್ರ ಆದಾಯ, ಷೇರು ಬಂಡವಾಳಗಳಲ್ಲಿನ ಬದಲಾವಣೆ ಹಾಗೂ ನಗದು ಹರಿವುಗಳನ್ನು ತೋರಿಸುವ ಹಣಕಾಸು ವಿವರಣಾ ಪಟ್ಟಿಗಳನ್ನುತಯಾರಿಸುವುದು ಕಂಪೆನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಕಂಪೆನಿಯ ಆಸ್ತಿಗಳ ರಕ್ಷಣೆ, ವಂಚನೆ ಹಾಗೂ ಇತರೆ ಅವ್ಯವಸ್ಥೆಗಳ ಕಂಡುಹಿಡಿಯುವಿಕೆ ಹಾಗೂ ತಪ್ಪಿಸುವಿಕೆ, ಯುಕ್ತವಾದ ಲೆಕ್ಕಾಚಾರದ ನೀತಿಗಳ ಆಯ್ಕೆ ಹಾಗೂ ಅಳವಡಿಕೆ, ಸಮಂಜಸವಾದ ಹಾಗೂ ದೂರದೃಷ್ಟಿಯುಳ್ಳ ಅಂದಾಜುಗಳು ಹಾಗೂ ನಿರ್ಣಯಗಳ ಕೈಗೊಳ್ಳುವಿಕೆ, ವಂಚನೆ ಅಥವಾ ತಪ್ಪುಗಳ ಕಾರಣದಿಂದಾಗುವ ಮಿಥ್ಯ ಹೇಳಿಕೆಗಳಿಂದ ಹೊರತಾದ ನೈಜ ಹಾಗೂ ಸಮಂಜಸ ಅಭಿಮತ ನೀಡುವ ಸ್ವತಂತ್ರ ಆರ್ಥಿಕ ತಃಖ್ತೆಗಳನ್ನು ತಯಾರಿಸುವ ಹಾಗೂ ಮಂಡಿಸುವ ಸಲುವಾಗಿನ ಲೆಕ್ಕ ದಾಖಲೆಗಳ ಪರಿಪೂರ್ಣತೆ ಹಾಗೂ ನಿಖರತೆಗಳನ್ನು ಖಚಿತಪಡಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾರ್ಯವೆಸಗುವ ಆಂತರಿಕ ಆರ್ಥಿಕ ನಿಯಂತ್ರಣಾ ವ್ಯವಸ್ಥೆಯ ಅಭಿವೃದ್ಧಿ, ಅನುಷ್ಠಾನ ಹಾಗೂ ನಿರ್ವಹಣೆಯಂತಹ ಜವಾಬ್ದಾರಿಗಳನ್ನು ಇದು ಒಳಗೊಂಡಿರುತ್ತದೆ.

ಆರ್ಥಿಕ ತಃಖ್ತೆಗಳನ್ನು ಸಿದ್ಧಪಡಿಸುವಲ್ಲಿ, ಮುನ್ನಡೆಯುತ್ತಿರುವ ವ್ಯವಹಾರವಾಗಿ ಮುಂದುವರೆಯುವಲ್ಲಿ ಕಂಪೆನಿಯ ಸಾಮರ್ಥ್ಯವನ್ನು ಅಂದಾಜಿಸಲು, ಮುನ್ನಡೆಯುತ್ತಿರುವ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಅನ್ವಯವಾಗುವಂತೆ ಬಹಿರಂಗಪಡಿಸಲು ಹಾಗೂ ಆಡಳಿತ ಮಂಡಳಿಯು ಕಂಪೆನಿಯನ್ನು ದಿವಾಳಿಯಾಗಿಸಲು ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಉದ್ದೇಶಿಸದ ಹೊರತು ಅಥವಾ ಆ ರೀತಿ ಮಾಡಲು ಯಾವುದೇ ವಾಸ್ತವಿಕ ಪರ್ಯಾಯವನ್ನು ಹೊಂದದ ಹೊರತು ಮಂದುವರೆಯುವ ವ್ಯಾವಹಾರಿಕ ಲೆಕ್ಕಪದ್ಧತಿಯನ್ನು ಬಳಸಲು ಕಂಪೆನಿಯ ಆಡಳಿತ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ.

ಕಂಪೆನಿಯ ಆರ್ಥಿಕ ವರದಿ ತಯಾರಿಕಾ ಪ್ರಕ್ರಿಯೆಗಳ ಮೇಲ್ವಿಚಾರಣೆಯು ನಿರ್ದೇಶಕ ಮಂಡಳಿಯದ್ದಾಗಿರುತ್ತದೆ.

ಆರ್ಥಿಕ ತಃಖ್ತೆಗಳ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು

ಒಟ್ಟಾರೆಯಾಗಿ ಆರ್ಥಿಕ ತಃಖ್ತೆಗಳು ವಂಚನೆ ಅಥವಾ ದೋಷಗಳ ಕಾರಣದಿಂದಾದ ತಪ್ಪುಗ್ರಹಿಕೆಗಳಿಂದ ಮುಕ್ತವಾಗಿದೆ ಎಂಬುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ಭರವಸೆಯನ್ನು ಪಡೆಯುವುದು ಹಾಗೂ ನಮ್ಮ ಅಭಿಪ್ರಾಯವನ್ನು ಒಳಗೊಂಡ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶವಾಗಿದೆ. ಸಮಂಜಸ ಭರವಸೆಯೆಂದರೆ ಅದು ಉನ್ನತ ಮಟ್ಟದ ಭರವಸೆಯಾಗಿದೆ ಆದರೆ ಎಸ್.ಎ. ಗಳಿಗೆ ಅನುಗುಣವಾಗಿ ನಿರ್ವಹಿಸಿದ ಲೆಕ್ಕ ಪರಿಶೋಧನೆಯು ಎಲ್ಲಾ ಸಂದರ್ಭಗಳಲ್ಲಿಯೂ ಅಸ್ತಿತ್ವದಲ್ಲಿರುವ ತಪ್ಪುಗ್ರಹಿಕೆಗಳನ್ನು ಪತ್ತೆ ಮಾಡುವುದೆಂಬ ಖಾತರಿಯಿರುವುದಿಲ್ಲ. ತಪ್ಪುಗಳು, ವಂಚನೆ ಅಥವಾ ದೋಷದಿಂದ ಉದ್ಭವಿಸಬಹುದಾಗಿದೆ ಮತ್ತು ಆರ್ಥಿಕ ತಃಖ್ತೆಗಳ ಆಧಾರದ ಮೇಲೆ ಬಳಕೆದಾರರು ತೆಗೆದುಕೊಳ್ಳುವ ನಿರ್ಧಾರಗಳ ಮೇಲೆ ಇವುಗಳು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಪ್ರಭಾವಗಳನ್ನು ಬೀರುವವೆಂದು ನಿರೀಕ್ಷಿಸಬಹುದಾದಲ್ಲಿ ಇವುಗಳನ್ನು ಗಣನೀಯವೆಂದು ಪರಿಗಣಿಸಲಾಗುವುದು.

ಎಸ್.ಎ.ಗಳಿಗೆ ಅನುಗುಣವಾಗಿ ಕೈಗೊಂಡ ಲೆಕ್ಕಪರಿಶೋಧನೆಯ ಭಾಗವಾಗಿ, ನಾವು ವೃತ್ತಿಪರ ತೀರ್ಪುಗಳನ್ನು ನೀಡುತ್ತೇವೆ ಹಾಗೂ ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರ ಸಂದೇಹವನ್ನು ಕಾಪಾಡಿಕೊಳ್ಳುತ್ತೇವೆ.ಇದರೊಂದಿಗೆ ನಾವು,

- ವಂಚನೆ ಅಥವಾ ದೋಷದಿಂದಾಗಿ ಆರ್ಥಿಕ ತಃಖ್ತೆಗಳ ತಪ್ಪುದಾರಿಗೆಳೆಯುವಿಕೆಯ ಅಪಾಯಗಳನ್ನು ಗುರುತಿಸಿ ಮತ್ತು ನಿರ್ಣಯಿಸಿ ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ ನಿರ್ವಹಿಸುತ್ತೇವೆ ಮತ್ತು ನಮ್ಮ ಅಭಿಪ್ರಾಯಗಳಿಗೆ ಆಧಾರವನ್ನು ಒದಗಿಸಲು ಸೂಕ್ತವಾದ ಸಾಕಷ್ಟು ಪುರಾವೆಗಳನ್ನು ಪಡೆದುಕೊಳ್ಳುತ್ತೇವೆ.

ವಂಚನೆಯು ಒಡನಾಟ, ಮೋಸ, ಉದ್ದೇಶಪೂರ್ವಕ ಲೋಪಗಳು, ತಪ್ಪಾದ ನಿರೂಪಣೆ ಅಥವಾ ಆಂತರಿಕ ನಿಯಂತ್ರಣಗಳ ಅತಿಕ್ರಮಣಗಳನ್ನು ಒಳಗೊಂಡಿರಬಹುದಾಗಿರುವುದರಿಂದ, ವಂಚನೆಯಿಂದ ಉಂಟಾಗುವ ಗಣನೀಯ ತಪ್ಪುಗ್ರಹಿಕೆಗಳನ್ನು ಪತ್ತೆ ಮಾಡದಿರುವುದರಿಂದ ಉಂಟಾಗುವ ಅಪಾಯವು ದೋಷದಿಂದ ಉಂಟಾಗುವ ತಪ್ಪುಗ್ರಹಿಕೆಗಳ ಅಪಾಯಕ್ಕಿಂತ ಹೆಚ್ಚಿನದ್ದಾಗಿರುತ್ತದೆ.

- ಅಗತ್ಯ ಸಂದರ್ಭಗಳಲ್ಲಿ ಸಮಂಜಸವಾದ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸುವ ಸಲುವಾಗಿ ನಾವು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಂತರಿಕ ನಿಯಂತ್ರಣಗಳ ತಿಳುವಳಿಕೆಯನ್ನು ಪಡೆದುಕೊಳ್ಳುತ್ತೇವೆ. ಕಂಪೆನಿಯು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಾ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ನಾವು ಕಾಯಿದೆಯ ಸೆಕ್ಷನ್ 143 (3) (ಐ) ಯಡಿಯಲ್ಲಿ ಹೊಂದಿದ್ದೇವೆ.

  ಆಡಳಿತ ಮಂಡಳಿಯು ಬಳಸಿದ ಲೆಕ್ಕನೀತಿಗಳ ಸೂಕ್ತತೆ ಹಾಗೂ ಲೆಕ್ಕೀಕರಣದಲ್ಲಿ ಅಂದಾಜುಗಳ ಬಳಕೆಯ ಸಮಂಜಸತೆ ಹಾಗೂ ಅನ್ವಯವಾಗುವ ಬಹಿರಂಗಪಡಿಸುವಿಕೆಗಳನ್ನು ನೀಡಿರುವುದನ್ನು ನಾವು ಮೌಲ್ಯಮಾಪನ ಮಾಡುತ್ತೇವೆ.

- ಮುಂದುವರಿಯುವ ವ್ಯಾಪಾರಗಳ ಲೆಕ್ಕೀಕರಣದ ಆಧಾರಗಳನ್ನು ಕಂಪೆನಿಯ ಆಡಳಿತ ಮಂಡಳಿಯು ಬಳಸಿಕೊಂಡ ಸೂಕ್ತತೆ ಹಾಗೂ ಲೆಕ್ಕಪರಿಶೋಧನೆಯಲ್ಲಿ ಪಡೆದ ಸಾಕ್ಷ್ಯಗಳ ಆಧಾರದ ಮೇಲೆ ಕಂಪೆನಿಯು ವ್ಯವಹಾರದಲ್ಲಿ ಮುಂದುವರೆಯುವ ಸಾಮರ್ಥ್ಯಗಳ ಮೇಲೆ ಅನುಮಾನವನ್ನುಂಟುಮಾಡುವ ಘಟನೆಗಳು ಅಥವಾ ಷರತ್ತುಗಳಿಗೆ ಸಂಬಂಧಿಸಿದಂತೆ ಇರುವ ಗಣನೀಯ ಅನಿಶ್ಚಿತತೆಗಳನ್ನು ನಿರ್ಧರಿಸಬೇಕಾಗಿರುತ್ತದೆ. ಅಂತಹ ಅನಿಶ್ಚಿತತೆಗಳು ಅಸ್ತಿತ್ವದಲ್ಲಿವೆಯೆಂದು ನಾವು ತೀರ್ಮಾನಿಸಿದಲ್ಲಿ, ಆರ್ಥಿಕ ತಃಖ್ತೆಗಳಲ್ಲಿನ ಸಂಬಂಧಿಸಿದ ಬಹಿರಂಗಪಡಿಸುವಿಕೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ನಾವು ಗಮನ ಸೆಳೆಯಬೇಕಾಗಿದೆ ಅಥವಾ ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದಲ್ಲಿ ನಾವು ನಮ್ಮ ಅಭಿಪ್ರಾಯಗಳನ್ನು ಮಾರ್ಪಡಿಸಬೇಕಾಗಿರುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದ ಲೆಕ್ಕಪರಿಶೋಧನೆಯ ಪುರಾವೆಗಳನ್ನು ಆಧರಿಸಿರುತ್ತವೆ. ಆದಾಗ್ಯೂ ಭವಿಷ್ಯದ ಘಟನೆಗಳು ಅಥವಾ ಪರಿಸ್ಥಿತಿಗಳು ಕಂಪೆನಿಯು ವ್ಯವಹಾರದಲ್ಲಿ ಮುಂದುವರೆಯುವುದನ್ನು ನಿಲ್ಲಿಸಲು ಕಾರಣವಾಗಬಹುದು.

- ಬಹಿರಂಗಪಡಿಸುವಿಕೆಗಳು ಸೇರಿದಂತೆ, ಆರ್ಥಿಕ ತಃಖ್ತೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಹಾಗೂ ವಸ್ತುವಿಷಯಗಳನ್ನು ಮತ್ತು ಆರ್ಥಿಕ ತಃಖ್ತೆಗಳು ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ನಿಟ್ಟಿನಲ್ಲಿ ಆಧಾರವಾಗಿರುವ ವಹಿವಾಟುಗಳನ್ನು ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆಯೇ ಎಂದು ಮೌಲ್ಯಮಾಪನ ಮಾಡಬೇಕಾಗಿರುತ್ತದೆ.

  ಸಮಂಜಸವಾದ ಜ್ಞಾನವುಳ್ಳ ಆರ್ಥಿಕ ತಃಖ್ತೆಗಳ ಬಳಕೆದಾರರ ಆರ್ಥಿಕ ನಿರ್ಧಾರಗಳ ಮೇಲೆ ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಪ್ರಭಾವ ಬೀರಬಹುದಾದಷ್ಟು ಪ್ರಮಾಣದಲ್ಲಿ ತಪ್ಪು ಹೇಳಿಕೆಗಳು ಆರ್ಥಿಕ ತಃಖ್ತೆಗಳಲ್ಲಿದ್ದಲ್ಲಿ ಅದು ಗಣನೀಯವಾಗಿರುತ್ತದೆ. ನಾವು, (1) ನಮ್ಮ ಲೆಕ್ಕಪರಿಶೋಧನೆಯ ಕಾರ್ಯವ್ಯಾಪ್ತಿಯನ್ನು ಯೋಜಿಸುವಲ್ಲಿ ಮತ್ತು ನಮ್ಮ ಕೆಲಸದ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡುವಲ್ಲಿ ಮತ್ತು (2) ಆರ್ಥಿಕ ತಃಖ್ತೆಗಳಲ್ಲಿ ಗುರುತಿಸಲಾದ ಯಾವುದೇ ತಪ್ಪು ಮಾಹಿತಿಗಳ ಪರಿಣಾಮವನ್ನು ಮೌಲ್ಯಮಾಪನ ಮಾಡಲು ಪರಿಮಾಣಾತ್ಮಕ ಗಣನೀಯತೆ ಹಾಗೂ ಗುಣಾತ್ಮಕ ಅಂಶಗಳನ್ನು ಪರಿಗಣಿಸುತ್ತೇವೆ.

  ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನತೆಗಳನ್ನು ಒಳಗೊಂಡಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಮಹತ್ವದ ಲೆಕ್ಕಪರಿಶೋಧನೆಯ ಆವಿಷ್ಕಾರಗಳ ಬಗ್ಗೆ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರೊಂದಿಗೆ ಸಂವಹನ ನಡೆಸುತ್ತೇವೆ.

  ನಾವು ನಮ್ಮ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳನ್ನು ಅನುಸರಿಸಿರುವ ಬಗ್ಗೆ ವಿವರಗಳನ್ನು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ನೀಡುತ್ತೇವೆ ಮತ್ತು ನಮ್ಮ ಸ್ವಾತಂತ್ರ್ಯದ ಬಗ್ಗೆ ಸಮಂಜಸವೆಂದು ಭಾವಿಸಬಹುದಾದ ಸಂಬಂಧಗಳು ಮತ್ತು ಅನ್ವಯವಾಗುವಲ್ಲಿ ಸಂಬಂಧಿತ ಸುರಕ್ಷತೆಗಳನ್ನೂ ಒಳಗೊಂಡು ಇತರ ವಿಷಯಗಳನ್ನು ಸಹ ಅವರೊಂದಿಗೆ ಸಂವಹನ ನಡೆಸುತ್ತೇವೆ.

ಇತರ ಕಾನೂನುಬದ್ಧ ಹಾಗೂ ನಿಯಂತ್ರಣಾ ಅವಶ್ಯಕತೆಗಳ ಮೇಲಿನ ವರದಿ

ಕಾಯಿದೆಯ ಕಲಂ 143 (3) ರ ಅಗತ್ಯತೆಯಂತೆ ನಾವು ವರದಿ ಮಾಡುವುದೇನೆಂದರೆ:

ಎ) ನಮ್ಮ ತಿಳುವಳಿಕೆ ಮತ್ತು ನಂಬಿಕೆ ಪ್ರಕಾರ, ಲೆಕ್ಕ ಪರಿಶೋಧನೆಗೆ ಅಗತ್ಯವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಪಡೆದಿದ್ದೇವೆ;

ಬಿ) ನಮ್ಮ ಅಭಿಪ್ರಾಯದಲ್ಲಿ ಕಂಪೆನಿಯು ಕಾನೂನುಗಳ ಪ್ರಕಾರ ಅಗತ್ಯವಿರುವ ಲೆಕ್ಕಪುಸ್ತಕಗಳನ್ನು ನಿರ್ವಹಿಸುತ್ತಿರುವುದು ಈ ಪುಸ್ತಕಗಳ ಪರಿಶೀಲನೆಯಿಂದ ಕಂಡುಬರುತ್ತದೆ.

ಸಿ) ಈ ವರದಿಯಲ್ಲಿ ಪ್ರಸ್ತಾಪಿಸಿರುವ ಆಸ್ತಿ ಹೊಣೆ ಪಟ್ಟಿ ಮತ್ತು ಲಾಭ ನಷ್ಟ ತಃಖ್ತೆ, ಬಂಡವಾಳಗಳಲ್ಲಿನ ಬದಲಾವಣೆ ತಃಖ್ತೆಗಳು ಹಾಗೂ ನಗದು ಹರಿವು ಪಟ್ಟಿಗಳು ಕಂಪೆನಿಯ ಲೆಕ್ಕ ಪುಸ್ತಕಗಳೊಂದಿಗೆ ತಾಳೆಯಾಗಿರುತ್ತವೆ

ಡಿ) ನಮ್ಮ ಅಭಿಪ್ರಾಯದಲ್ಲಿ, ನಮ್ಮ ವರದಿಯ, ಗುಣಮಟ್ಟದ ಅಭಿಪ್ರಾಯಗಳಿಗೆ ತಳಹದಿ ಪ್ಯಾರಾದಲ್ಲಿ ಉಲ್ಲೇಖಿಸಲಾದ ಅಂಶಗಳನ್ನು ಹೊರತುಪಡಿಸಿ, ಕಂಪೆನಿಯ ಮೇಲೆ ತಿಳಿಸಿದ ಆರ್ಥಿಕ ತಃಖ್ತೆಗಳು ಕಂಪೆನಿಗಳ ಕಾಯಿದೆ 2013 ರ ಸೆಕ್ಷನ್ 133 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಇಂಡ್ ಎಎಸ್ ಗಳಿಗೆ ಹಾಗೂ ಕಂಪೆನಿಗಳ (ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್) ನಿಯಮಗಳು 2015 ಗಳಿಗೆ ಅನುಸಾರವಾಗಿವೆ.

ಇ) ಮಾರ್ಚ್ 31, 2019 ರಲ್ಲಿರುವಂತೆ ನಿರ್ದೇಶಕ ಮಂಡಳಿಯಿಂದ ದಾಖಲೆಗೆ ತೆಗೆದುಕೊಳ್ಳಲಾದ, ನಿರ್ದೇಶಕರಿಂದ ಪಡೆದ ಲಿಖಿತ ಪ್ರಾತಿನಿಧ್ಯದ ಆಧಾರದಲ್ಲಿ, ಮಾರ್ಚ್ 31, 2019 ರಲ್ಲಿರುವಂತೆ, ಕಾಯಿದೆಯ ಸೆಕ್ಷನ್ 164 (2) ರ ಪ್ರಕಾರ ನಿರ್ದೇಶಕರಾಗಿ ನೇಮಕಗೊಳ್ಳಲು ಯಾವುದೇ ನಿರ್ದೇಶಕರನ್ನು ಅನರ್ಹಗೊಳಿಸಲಾಗಿಲ್ಲ.

ಎಫ್) ಕಂಪೆನಿಯ ಆರ್ಥಿಕ ವರದಿಗಳ ಮೇಲಿನ ಆಂತರಿಕ ನಿಯಂತ್ರಣಗಳ ಅರ್ಹತೆ ಹಾಗೂ ಅವುಗಳ ಕಾರ್ಯಸಾಧನೆಗೆ ಅನುಗುಣವಾಗಿ ನಮ್ಮ ಪ್ರತ್ಯೇಕ ವರದಿ ಅನುಬಂಧ– I ನ್ನು ಉಲ್ಲೇಖಿಸುವುದು. ಆರ್ಥಿಕ ತಃಖ್ತೆಗಳ ಮೇಲೆ ಕಂಪೆನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಮತ್ತು ಕಾರ್ಯಾಚರಣೆಯ ಪರಿಣಾಮಕತ್ವದ ಕುರಿತು ನಮ್ಮ ವರದಿಯು ಮಾರ್ಪಡಿಸಿದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

ಜಿ) ಕಾಯಿದೆಯ ತಿದ್ದುಪಡಿ ಮಾಡಲಾದ ಸೆಕ್ಷನ್ 197(16) ರ ಆವಶ್ಯಕತೆಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರ ವಿಷಯಗಳಿಗೆ ಸಂಬಂಧಿಸಿದಂತೆ:

ನಮ್ಮ ಅಭಿಪ್ರಾಯದಲ್ಲಿ, ನಮಗೆ ನೀಡಲಾದ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ ಈ ವರ್ಷದಲ್ಲಿ ಕಂಪೆನಿಯು ತನ್ನ ನಿರ್ದೇಶಕರಿಗೆ ಪಾವತಿಸಿದ ಸಂಭಾವನೆಯು ಕಾಯಿದೆಯಲ್ಲಿ ನಿಗದಿಪಡಿಸಲಾದ ಮಿತಿಯೊಳಗಿರುತ್ತದೆ.

ಹೆಚ್) ಕಂಪೆನಿಗಳ ಕಾಯಿದೆ 2013 ರ ತಿದ್ದುಪಡಿಗೊಳಗಾದ ಸೆಕ್ಷನ್ 133 ರ ಹಾಗೂ ಕಂಪೆನಿಗಳ (ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್) ನಿಯಮಗಳು 2015 ಗಳ ಪ್ರಕಾರ, ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರ ವಿಷಯಗಳಿಗೆ ಸಂಬಂಧಪಟ್ಟಂತೆ, ನಮ್ಮ ಅಭಿಪ್ರಾಯದಲ್ಲಿ, ನಮಗೆ ಲಭ್ಯ ಮಾಹಿತಿಗಳ ಪ್ರಕಾರ ಹಾಗೂ ನಮಗೆ ನೀಡಲಾದ ವಿವರಣೆಗಳ ಪ್ರಕಾರ,

1) ಕಂಪೆನಿಯು ಬಾಕಿ ಇರುವ ವ್ಯಾಜ್ಯಗಳು ಹಾಗೂ ಆರ್ಥಿಕ ಸ್ಥಿತಿಯ ಮೇಲೆ ಇವುಗಳ ಪರಿಣಾಮಗಳ ವಿವರವನ್ನು ತನ್ನ ಆರ್ಥಿಕ ತಃಖ್ತೆಗಳಲ್ಲಿ ಕಾಣಿಸಿದೆ.

2) ನಮ್ಮ ವರದಿಯ ಗಮನ ಸೆಳೆಯಲಾದ ವಿಷಯಗಳು ಪ್ಯಾರಗ್ರಾಫ್ ನ ಪಾಯಿಂಟ್ ನಂ. 3 ಕ್ಕೆ ಒಳಪಟ್ಟು, ವ್ಯುತ್ಪನ್ನ ಒಪ್ಪಂದಗಳೂ ಸೇರಿದಂತೆ, ದೀರ್ಘಾವಧಿ ಗುತ್ತಿಗೆಗಳ ಬಾಬ್ತು ಬರಬಹುದಾದ ಸಂಭವನೀಯ ನಷ್ಟಗಳಿಗೆ, ಸಂಬಂಧಪಟ್ಟ ಕಾನೂನು ಅಥವಾ ಲೇಖಾಮಾನದಂಡಗಳಲ್ಲಿನ ಆವಶ್ಯಕತೆಗಳಿಗೆ ಅನುಗುಣವಾಗಿ ಕಂಪೆನಿಯು ಅವಕಾಶವನ್ನು ಕಲ್ಪಿಸಿರುತ್ತದೆ.

3) ಕಂಪೆನಿಯಿಂದ, ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾವಣೆ ಮಾಡಬೇಕಾದ ಯಾವುದೇ ಮೊತ್ತವನ್ನು ವರ್ಗಾಯಿಸುವಲ್ಲಿ ವಿಳಂಬವಾಗಿರುವುದಿಲ್ಲ.

2. ಕಾಯಿದೆಯ ಕಲಂ 143ರ ಉಪಕಲಂ (11) ರ ಮೇರೆಗೆ, ಕೇಂದ್ರ ಸರಕಾರ ಜಾರಿಗೊಳಿಸಿದ ಕಂಪೆನಿಗಳ (ಲೆಕ್ಕಪರಿಶೋಧಕರುಗಳ ವರದಿ) ಆದೇಶ 2016 ರ ('ಆದೇಶ') ಅನುಸಾರ ಸದರಿ ಆದೇಶದ ಕಂಡಿಕೆ 3 ಮತ್ತು 4 ರಲ್ಲಿ ತಿಳಿಸಿರುವ ವಿಷಯಗಳಿಗೆ ಸಂಬಂಧಿಸಿದ ವಿವರಣಾ ಪಟ್ಟಿಯನ್ನು ಅನ್ವಯವಾಗುವಷ್ಟರ ಮಟ್ಟಿಗೆ ಅನುಬಂಧ–II ರಲ್ಲಿ ನೀಡಿದ್ದೇವೆ.

3. ಕಂಪೆನಿಯು ನಮಗೆ ನೀಡಿರುವ ಮಾಹಿತಿ ಹಾಗೂ ಸ್ಪಷ್ಟೀಕರಣಗಳ ಆಧಾರದ ಮೇರೆಗೆ ಲೆಕ್ಕಪತ್ರಗಳನ್ನು ಪರಿಶೀಲಿಸಿ ಮಹಾಲೇಖಪಾಲರು ಕಂಪೆನಿಗಳ ಕಾಯ್ದೆ 2013 ಕಲಂ 143(5) ರಂತೆ ನೀಡಿರುವ ನಿರ್ದೇಶನಗಳು ಹಾಗೂ ಕಂಪೆನಿಯ ನಿಶ್ಚಿತ ಹೆಚ್ಚುವರಿ ನಿರ್ದೇಶನಗಳಲ್ಲಿ ಅಪೇಕ್ಷಿಸಿರುವ ವಿಷಯಗಳಿಗೆ ಸಂಬಂಧಿಸಿದ ವಿವರಣಾ ಪಟ್ಟಿಯನ್ನು ಅನ್ವಯವಾಗುವಷ್ಟರ ಮಟ್ಟಿಗೆ ಅನುಬಂಧ–III ರಲ್ಲಿ ನೀಡಿರುತ್ತೇವೆ.

ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
(ಸಂಸ್ಥೆ ನೋಂ.ಸಂ. 000960 ಎಸ್)

ಸಹಿ/–
ಸಿ.ಎ. ಕೆ.ಆರ್. ಸುರೇಶ್
ಪಾಲುದಾರರು
ಮೆಂಬರ್‌ಶಿಪ್ ನಂ. 025453
ಯುಡಿಐಎನ್:19025453ಎಎಎಸಿಡಬ್ಲ್ಯೂ3705

ಸ್ಥಳ: ಮಂಗಳೂರು
ದಿನಾಂಕ: 19.09.2019

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯ ಆರ್ಥಿಕ ತಖ್ತೆಗಳ ಮೇಲಿನ ಸಮ ದಿನಾಂಕದ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ –I

(ಸಮ ದಿನಾಂಕದ ನಮ್ಮ ಲೆಕ್ಕಪರಿಶೋಧನಾ ವರದಿಯ ಇತರ ಕಾನೂನು ಬದ್ಧ ಹಾಗೂ ನಿಯಂತ್ರಣಾ ಅವಶ್ಯಕತೆಗಳ ಮೇಲಿನ ವರದಿಯ ಪ್ಯಾರಾ ಸಂಖ್ಯೆ (1)ರಲ್ಲಿ ಉಲ್ಲೇಖಿಸಲ್ಪಟ್ಟಂತೆ ಅನುಬಂಧ)

ಕಂಪೆನಿಗಳ ಕಾಯಿದೆ 2013 ರ (ಕಾಯಿದೆ) ಕಲಂ 143ರ, ಉಪ ಕಲಂ–3ರ, ಪರಿಚ್ಛೇದ (ಐ) ರ ಅನ್ವಯ ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲಿನ ವರದಿ.

ನಾವು ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯ (ಕಂಪೆನಿ) ದಿನಾಂಕ 31.03.2019 ರ ಅಂತ್ಯಕ್ಕಿರುವ ಆರ್ಥಿಕ ತಖ್ತೇಗಳ ಮೇಲಿನ ನಮ್ಮ ಲೆಕ್ಕ ಪರಿಶೋಧನೆಯ ಸಂಯೋಗದೊಂದಿಗೆ, ಸದರಿ ವರ್ಷದ ಅಂತ್ಯಕ್ಕಿರುವ ಆರ್ಥಿಕ ವರದಿ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆಯನ್ನು ನಡೆಸಿರುತ್ತೇವೆ.

ಆಂತರಿಕ ಆರ್ಥಿಕ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ವ್ಯವಸ್ಥಾಪನಾ ಮಂಡಳಿಯ ಜವಾಬ್ದಾರಿ

ಭಾರತೀಯ ಸನದು ಲೆಕ್ಕ ಪರಿಶೋಧಕ ಸಂಸ್ಥೆ (ಐ.ಸಿ.ಎ.ಐ.)ಯು ನೀಡಿದ ಆರ್ಥಿಕ ವರದಿ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಮಾರ್ಗದರ್ಶನ ಟಿಪ್ಪಣಿಯನ್ನು ಪರಿಗಣಿಸಿ ಕಂಪೆನಿಯು ಸ್ಥಾಪಿಸಿದ ಆರ್ಥಿಕ ವರದಿಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಅಳತೆಗೋಲುಗಳ ಆಧಾರದ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಕಂಪೆನಿಯ ವ್ಯವಸ್ಥಾಪನಾ ಮಂಡಳಿಯದ್ದಾಗಿರುತ್ತದೆ. ಈ ಜವಾಬ್ದಾರಿಗಳು ಕಂಪೆನಿಗಳ ಕಾಯಿದೆ 2013 ರ ಅನ್ವಯ ಕಂಪೆನಿಯು ಕ್ರಮಬದ್ಧವಾಗಿ ದಕ್ಷತೆಯಿಂದ ಫಲಪ್ರದವಾಗಿ ಕಾರ್ಯನಿರ್ವಹಿಸುವ, ವ್ಯವಹಾರವನ್ನು ದಕ್ಷತೆಯಿಂದ ನಡೆಸುವ, ಕಂಪೆನಿಯ ಕಾರ್ಯ ನೀತಿಗಳಿಗೆ ಬದ್ಧವಾಗಿರುವ, ಕಂಪೆನಿಯ ಆಸ್ತಿಗಳನ್ನು ಕಾಪಾಡುವ, ತಪ್ಪುಗಳು ಹಾಗೂ ಮೋಸಗಳನ್ನು ಕಂಡುಹಿಡಿಯುವ ಮತ್ತು ತಡೆಗಟ್ಟುವ, ಲೆಕ್ಕಗಳ ದಾಖಲೆಗಳ ಪರಿಪೂರ್ಣತೆ ಹಾಗೂ ನಿಖರತೆಯನ್ನು ನಿರ್ವಹಿಸುವ ಮತ್ತು ಗುಣಮಟ್ಟದ ಆರ್ಥಿಕ ತಃಖ್ತೆಗಳನ್ನು ನಿಗದಿತ ಅವಧಿಯೊಳಗೆ ತಯಾರಿಸಲು ಅನುಕೂಲಕರವಾಗಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾರ್ಯವೆಸಗುವ ಆಂತರಿಕ ಆರ್ಥಿಕ ನಿಯಂತ್ರಣಾ ವ್ಯವಸ್ಥೆಯ ಅಭಿವೃದ್ಧಿ, ಅನುಷ್ಠಾನ ಹಾಗೂ ನಿರ್ವಹಣೆಗಳನ್ನು ಒಳಗೊಂಡಿರುತ್ತದೆ.

ಲೆಕ್ಕ ಪರಿಶೋಧಕರ ಜವಾಬ್ದಾರಿ

ಕಂಪೆನಿಯ ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ನಾವು ಕೈಗೊಂಡ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಆಂತರಿಕ ಆರ್ಥಿಕ ನಿಯಂತ್ರಣಗಳ ಪರಿಶೋಧನೆಗೆ ಅನ್ವಯವಾಗುವ ಹಾಗೂ ಭಾರತೀಯ ಸನದು ಲೆಕ್ಕ ಪರಿಶೋಧಕರ ಸಂಸ್ಥೆಯಿಂದ ನೀಡಲಾದ ಆಂತರಿಕ ಆರ್ಥಿಕ ನಿಯಂತ್ರಣಗಳ ತನಿಖೆಗೆ ನಿಗದಿಪಡಿಸಲಾದ ಮಾರ್ಗದರ್ಶನ ಟಿಪ್ಪಣಿ ಹಾಗೂ ಕಂಪೆನಿಗಳ ಕಾಯಿದೆ 2013ರ ಕಲಂ 143(10) ರಡಿಯಲ್ಲಿ ರಚಿಸಲ್ಪಟ್ಟಿದೆಯೆಂದು ನಂಬಲಾದ ಲೆಕ್ಕ ಪರಿಶೋಧನೆಯ ಮಾನದಂಡಗಳನ್ನು ಆಂತರಿಕ ಆರ್ಥಿಕ ಪರಿಶೋಧನೆಗೆ ಅನ್ವಯವಾಗುವಷ್ಟರ ಮಟ್ಟಿಗೆ ಪರಿಗಣಿಸಿ ನಾವು ತನಿಖೆಯನ್ನು ನಡೆಸಿರುತ್ತೇವೆ. ಈ ಮಾನದಂಡಗಳು ಹಾಗೂ ಮಾರ್ಗದರ್ಶನ ಟಿಪ್ಪಣಿಗಳು ನಾವು ಅಗತ್ಯ ನೈತಿಕ ತತ್ವಗಳನ್ನು ಪೂರೈಸಿರುವುದನ್ನು ಹಾಗೂ ಆರ್ಥಿಕ ವರದಿಯ ಮೇಲೆ ಸಾಕಷ್ಟು ಆಂತರಿಕ ಆರ್ಥಿಕ ನಿಯಂತ್ರಣಗಳು ಸ್ಥಾಪಿತವಾಗಿರುವುದನ್ನು ಹಾಗೂ ಈ ನಿಯಂತ್ರಣಗಳು ಎಲ್ಲಾ ಗಣನೀಯ ಅಂಶಗಳ ಮೇಲೆ ಪರಿಣಾಮಕಾರಿಯಾಗಿ ಅನುಷ್ಠಾನವಾಗಿರುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಯುಕ್ತವಾದ ಯೋಜನೆ ರೂಪಿಸಿ ತನಿಖೆ ನಡೆಸುವುದನ್ನು ಅಪೇಕ್ಷಿಸುತ್ತವೆ.

ನಮ್ಮ ಪರಿಶೋಧನೆಯು ಆರ್ಥಿಕ ವರದಿಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳು ಸಾಕಷ್ಟಿರುವ ಬಗ್ಗೆ ಹಾಗೂ ಅವುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ತನಿಖಾ ಸಾಕ್ಷ್ಯಗಳನ್ನು ಸಂಗ್ರಹಿಸುವುದನ್ನು ಒಳಗೊಂಡಿರುತ್ತವೆ. ಆರ್ಥಿಕ ವರದಿ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ನಮ್ಮ ಲೆಕ್ಕ ತನಿಖೆಯು ಆರ್ಥಿಕ ವರದಿಗಳ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ಪಡೆದು ಅರ್ಥೈಸಿಕೊಳ್ಳುವುದು, ಅಲ್ಲಿರುವ ಅಪಾಯಗಳನ್ನು ನಿರ್ಧರಿಸುವುದು ಮತ್ತು ಅವುಗಳ ಮಾದರಿ ಮತ್ತು ಕಾರ್ಯಕ್ಷಮತೆಯನ್ನು ಅಂದಾಜಿಸುವ ಅಪಾಯಗಳಿಗನುಗುಣವಾಗಿ ಪರೀಕ್ಷಿಸಿ ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿರುತ್ತದೆ. ಆರಿಸಿಕೊಂಡ ಕಾರ್ಯವಿಧಾನವು, ವಂಚನೆ ಅಥವಾ ತಪ್ಪುಗಳ ಕಾರಣದಿಂದ ಆರ್ಥಿಕ ತಃಖ್ತೆಗಳಲ್ಲಿನ ಮಿಥ್ಯ ಹೇಳಿಕೆಗಳ ಅಪಾಯಗಳನ್ನು ಗ್ರಹಿಸುವಲ್ಲಿ ಲೆಕ್ಕ ಪರಿಶೋಧಕರ ವಿಮರ್ಶೆಯನ್ನು ಅವಲಂಬಿಸಿರುತ್ತದೆ.

ನಾವು ಸಂಗ್ರಹಿಸಿದ ತನಿಖಾ ಸಾಕ್ಷ್ಯಾಧಾರಗಳು ಕಂಪೆನಿಯ ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಪರಿಶೋಧನೆಯ ತನಿಖಾ ವರದಿಗೆ ಉತ್ತಮ ತಳಹದಿಯನ್ನು ಒದಗಿಸಲು ಸಾಕಷ್ಟು ಸಮಂಜಸವಾಗಿರುತ್ತದೆಯೆಂಬುದು ನಮ್ಮ ನಂಬಿಕೆ.

ಆರ್ಥಿಕ ವರದಿಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ಅರ್ಥ

ಸಾಮಾನ್ಯವಾಗಿ ಸ್ವೀಕರಿಸಿದ ಲೆಕ್ಕಾಚಾರ ತತ್ವಗಳಿಗೆ ಅನುಗುಣವಾಗಿ ಬಾಹ್ಯ ಉದ್ದೇಶಗಳಿಗಾಗಿ ಆರ್ಥಿಕ ತಃಖ್ತೆಗಳ ತಯಾರಿ ಹಾಗೂ ಆರ್ಥಿಕ ವರದಿಗಳ ವಿಶ್ವಾಸಾರ್ಹತೆಗಳ ಮೇಲೆ ಯುಕ್ತವಾದ ಭರವಸೆಯನ್ನಿಡಲು ರಚಿಸಲಾದ ಕಾರ್ಯವಿಧಾನವೇ ಕಂಪೆನಿಯ ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಾ ವ್ಯವಸ್ಥೆಯಾಗಿರುತ್ತದೆ.

ಕಂಪೆನಿಯ ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವು ಒಳಗೊಂಡ ನೀತಿ ಹಾಗೂ ಕಾರ್ಯ ವಿಧಾನಗಳು

(1) ಕಂಪೆನಿಯ ಆಸ್ತಿಗಳ ವಹಿವಾಟುಗಳು ಹಾಗೂ ಹಂಚಿಕೆಗಳನ್ನು ಸಮಂಜಸವಾಗಿ ಹಾಗೂ ಕರಾರುವಕ್ಕಾಗಿ ಬಿಂಬಿಸಲು ಅಗತ್ಯವಿರುವ ಎಲ್ಲಾ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದ್ದಾಗಿರುತ್ತವೆ;

(2) ಸಾಮಾನ್ಯವಾಗಿ ಸ್ವೀಕರಿಸಿದ ಲೆಕ್ಕಾಚಾರದ ತತ್ವಗಳಿಗೆ ಅನುಗುಣವಾಗಿ ಆರ್ಥಿಕ ತಃಖ್ತೆಗಳನ್ನು ತಯಾರಿಸುವುದಕ್ಕಾಗಿ ವ್ಯವಹಾರಗಳನ್ನು ದಾಖಲಿಸಿರುವುದಾಗಿಯೂ, ಮತ್ತು ಕಂಪೆನಿಯ ಆದಾಯ ಮತ್ತು ವೆಚ್ಚಗಳನ್ನು ಆಡಳಿತ ಮಂಡಳಿ ಹಾಗೂ ನಿರ್ದೇಶಕರಿಂದ ಅನುಮೋದನೆಗೊಳಪಟ್ಟು ಮಾಡಲಾಗಿದೆಯೆಂಬುದರ ಬಗ್ಗೆ ಯುಕ್ತವಾದ ಭರವಸೆಯನ್ನು ಒದಗಿಸುತ್ತವೆ; ಮತ್ತು

(3) ಕಂಪೆನಿಯ ಆರ್ಥಿಕ ತಃಖ್ತೆಗಳ ಮೇಲೆ ಗಣನೀಯ ಪ್ರಭಾವ ಬೀರುವಂತಹ ಕಂಪೆನಿಯ ಆಸ್ತಿಗಳ ಅನಧಿಕೃತ ಸ್ವಾಧೀನಪಡಿಸುವಿಕೆ, ಬಳಕೆ ಅಥವಾ ಹಂಚಿಕೆಗಳನ್ನು ಕ್ಲಪ್ತ ಸಮಯದಲ್ಲಿ ಕಂಡುಹಿಡಿಯುವಲ್ಲಿ ಹಾಗೂ ತಡೆಗಟ್ಟುವಲ್ಲಿ ಯುಕ್ತವಾದ ಭರವಸೆಯನ್ನು ಒದಗಿಸುತ್ತವೆ.

ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಸ್ವಾಭಾವಿಕ ನಿರ್ಬಂಧಗಳು

ಒಳಸಂಚು ಹಾಗೂ ಆಡಳಿತ ಮಂಡಳಿಯಿಂದ ನಿಯಂತ್ರಣಗಳ ಅಸಮಂಜಸ ರದ್ದುಗೊಳಿಸುವಿಕೆಗಳ ಸಾಧ್ಯತೆಗಳನ್ನು ಒಳಗೊಂಡು ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ಹಲವಾರು ಸ್ವಾಭಾವಿಕ ನಿರ್ಬಂಧಗಳು ಇರುವುದರಿಂದ ಒಳಸಂಚಿನಿಂದ ಕೂಡಿದ ತಪ್ಪು ಅಥವಾ ಮೋಸದಿಂದ ಗಣನೀಯ ಮಿಥ್ಯ ಹೇಳಿಕೆಗಳಾದರೂ ಸಹ ಕಂಡು ಹಿಡಿಯಲು ಸಾಧ್ಯವಾಗುವುದಿಲ್ಲ. ಮುಂದಿನ ವರ್ಷಗಳ ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ಅಂದಾಜಿಸುವುದು, ಪರಿಸ್ಥಿತಿಯ ಬದಲಾವಣೆಗಳಿಂದಾಗಿ ಆರ್ಥಿಕ ವರದಿಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ಕಾರ್ಯನೀತಿಗಳ ಅನುಸರಣಾ ಮಟ್ಟವು ಹದಗೆಡುವ ಸಾಧ್ಯತೆ ಇರುತ್ತದೆ.

ಅಭಿಪ್ರಾಯ

ಕಂಪೆನಿಯು ನಮಗೆ ನೀಡಿದಂತಹ ಮಾಹಿತಿ ಹಾಗೂ ಸ್ಪಷ್ಟೀಕರಣದ ಪ್ರಕಾರ ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳಿಗೆ ಸಂಬಂಧಪಟ್ಟು ಭಾರತೀಯ ಸನದು ಲೆಕ್ಕ ಪರಿಶೋಧಕರ ಸಂಸ್ಥೆಯು ನಿಗದಿಪಡಿಸಿದ ಮಾರ್ಗದರ್ಶನಗಳ ಆವಶ್ಯಕ ಅಂಶಗಳನ್ನು ಪರಿಗಣಿಸಿ ಕಂಪೆನಿಯು ಆರ್ಥಿಕ ವರದಿಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ರೂಪಿಸಿರುವುದಿಲ್ಲ. ಈ ಕಾರಣದಿಂದ ಕಂಪೆನಿಯು ಆರ್ಥಿಕ ವರದಿಗಳ ಮೇಲೆ ಸಾಕಷ್ಟು ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ಹೊಂದಿರುವ ಮತ್ತು ಅವುಗಳು ದಿನಾಂಕ 31.03.2019 ರ ಅಂತ್ಯಕ್ಕೆ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಶ್ಯಕವಾದ ಪುರಾವೆಗಳನ್ನು ಸಂಗ್ರಹಿಸಲು ಸಾಧ್ಯವಾಗಿರುವುದಿಲ್ಲ.

ಕಂಪೆನಿಯ ಆರ್ಥಿಕ ತಃಖ್ತೆಗಳ ಪರಿಶೋಧನೆಯಲ್ಲಿ ಅಳವಡಿಸಿದ ತನಿಖಾ ವಿಧಾನಗಳು, ಸಮಯ ಮತ್ತು ಸ್ವಭಾವಗಳನ್ನು ನಿರ್ಧರಿಸಲು ನಾವು ಮೇಲೆ ತಿಳಿಸಲಾದ ನಿರಾಕರಣೆಯನ್ನು ಪರಿಗಣಿಸಿರುತ್ತೇವೆ ಮತ್ತು ಈ ನಿರಾಕರಣೆಯು ಕಂಪೆನಿಯ ಆರ್ಥಿಕ ತಃಖ್ತೆಗಳ ಮೇಲಿನ ನಮ್ಮ ಅಭಿಪ್ರಾಯಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
(ಸಂಸ್ಥೆ ನೋಂ.ಸಂ. 000960 ಎಸ್)

ಸಹಿ/–
ಸಿ.ಎ. ಕೆ.ಆರ್. ಸುರೇಶ್
ಪಾಲುದಾರರು
ಮೆಂಬರ್ ಶಿಪ್ ನಂ. 025453
ಯುಡಿಐಎನ್:19025453ಎಎಎಸಿಡಬ್ಲ್ಯೂ3705

ಸ್ಥಳ: ಮಂಗಳೂರು
ದಿನಾಂಕ: 19.09.2019

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ –II

(ಸಮ ದಿನಾಂಕದ ನಮ್ಮ ಲೆಕ್ಕಪರಿಶೋಧನಾ ವರದಿಯ ಇತರ ಕಾನೂನು ಬದ್ಧ ಹಾಗೂ ನಿಯಂತ್ರಣಾ ಅವಶ್ಯಕತೆಗಳ ಮೇಲಿನ ವರದಿಯ ಪ್ಯಾರಾ ಸಂಖ್ಯೆ (2)ರಲ್ಲಿ ಉಲ್ಲೇಖಿಸಲ್ಪಟ್ಟಂತೆ ಅನುಬಂಧ)

ಲೆಕ್ಕ ಪರಿಶೋಧಿಸುವ ಸಂದರ್ಭದಲ್ಲಿ ಕಂಪೆನಿಯು ನಮಗೆ ನೀಡಿದ ಮಾಹಿತಿ, ಸ್ಪಷ್ಟೀಕರಣ ಹಾಗೂ ಪುಸ್ತಕಗಳನ್ನು ಮತ್ತು ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಮತ್ತು ನಮ್ಮ ಜ್ಞಾನ ಮತ್ತು ವಿಶ್ವಾಸದ ಮೇರೆಗೆ ನಾವು ಈ ಕೆಳಗಿನಂತೆ ವರದಿಯನ್ನು ನೀಡಿರುತ್ತೇವೆ.

I) ಎ) ಕಂಪೆನಿಯಲ್ಲಿ ನಿರ್ವಹಿಸಲಾಗಿರುವ ಸ್ಥಿರಾಸ್ತಿ ಪುಸ್ತಕಗಳು, ಸ್ಥಿರಾಸ್ತಿ ಗುರುತಿನ ಸಂಖ್ಯೆ ಮತ್ತು ಸ್ಥಿರಾಸ್ತಿಯ ಭೌತಿಕ ನೆಲೆಗಳಂತಹ ವಿವರಗಳನ್ನು ಒಳಗೊಂಡಿರುವುದಿಲ್ಲ.

ಬಿ) ಕಂಪೆನಿಯ ಸ್ಥಿರಾಸ್ತಿಗಳ ಯಥೋಚಿತ ಭೌತಿಕ ಪರಿಶೀಲನಾ ವರದಿಯ ಅನುಪಸ್ಥಿತಿಯಲ್ಲಿ, ಸ್ಥಿರಾಸ್ತಿಗಳನ್ನು ಸೂಕ್ತ ಕಾಲಾಂತರಗಳಲ್ಲಿ ಪರಿಶೀಲಿಸಿರುವ ಹಾಗೂ ಆ ಸಂದರ್ಭಗಳಲ್ಲಿ ಗಮನಿಸಲಾದ ಕುಂದು ಕೊರತೆಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸಿರುವಲ್ಲಿನ ಯುಕ್ತತೆಯ ಬಗ್ಗೆ ಟಿಪ್ಪಣಿ ಮಾಡಲು ಸಾಧ್ಯವಾಗಿರುವುದಿಲ್ಲ.

ಸಿ) ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ನಾವು ಪರಿಶೀಲಿಸಿದ ದಾಖಲೆಗಳು ಮತ್ತು ನಮಗೆ ಒದಗಿಸಲಾದ ವರ್ಗಾವಣೆ ಪತ್ರಗಳು/ ನೋಂದಾವಣೆ ಪತ್ರಗಳ ಆಧಾರದ ಮೇಲೆ ನಾವು ವರದಿ ಮಾಡುವುದೇನೆಂದರೆ, ಆಸ್ತಿ – ಹೊಣೆ ಪಟ್ಟಿ ದಿನಾಂಕದಲ್ಲಿರುವಂತೆ ಸ್ಥಿರ ಆಸ್ತಿಗಳಾದ ಭೂಮಿ ಮತ್ತು ಕಟ್ಟಡಗಳ ಶೀರ್ಷಿಕೆ ಪತ್ರಗಳು ಕಂಪೆನಿಯ ಹೆಸರಿನಲ್ಲಿರುತ್ತವೆ. ಆರ್ಥಿಕ ತಃಖ್ತೆಗಳಲ್ಲಿ ಒಳಗೊಂಡಿರುವ ಸ್ಥಿರ ಆಸ್ತಿಗಳಲ್ಲಿ ₹ 51.57 ಲಕ್ಷಗಳ ಮೌಲ್ಯವನ್ನು ಹೊಂದಿರುವ ಒಂದೆರಡು ಪ್ರಕರಣಗಳನ್ನು ಹೊರತುಪಡಿಸಿ ಇತರ ಎಲ್ಲಾ ಭೂಮಿ ಮತ್ತು ಕಟ್ಟಡ ಆಸ್ತಿಗಳ ಗುತ್ತಿಗೆ ಒಪ್ಪಂದಗಳು ಕಂಪೆನಿಯ ಹೆಸರಿನಲ್ಲಿವೆ.

II) ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ಕಂಪೆನಿಯ ವ್ಯವಸ್ಥಾಪಕ ಮಂಡಳಿಯು ಸೂಕ್ತ ಕಾಲಾಂತರಗಳಲ್ಲಿ ನಡೆಸುತ್ತಿದ್ದು, ಭೌತಿಕ ಪರಿಶೀಲನೆಯಲ್ಲಿ ಕಂಡು ಬಂದಂತಹ ದೋಷ / ತಪ್ಪುಗಳನ್ನು ಸೂಕ್ತ ರೀತಿಯಲ್ಲಿ ಆರ್ಥಿಕ ತಃಖ್ತೆಗಳಲ್ಲಿ ಸಮರ್ಪಕವಾಗಿ ಅಳವಡಿಸಿಕೊಳ್ಳಲಾಗಿದೆ.

III) ಕಂಪೆನಿಗಳ ಕಾಯಿದೆ 2013 ರ ಕಲಂ – 189 ರನ್ವಯ ನಿರ್ವಹಿಸಿರುವ ರಿಜಿಸ್ಟರ್‌ನಲ್ಲಿ ಪಟ್ಟಿ ಮಾಡಿರುವ ಯಾವುದೇ ಕಂಪೆನಿ, ಎಲ್‌ಎಲ್‌ಪಿ ಅಥವಾ ಇತರ ವ್ಯಕ್ತಿಗಳಿಗೆ ಕಂಪೆನಿಯು ಸಾಲ ನೀಡಿರುವುದಿಲ್ಲ. ಈ ಕಲಂಗೆ ಸಂಬಂಧಿಸಿದ 3 (ಎ), 3(ಬಿ) & 3(ಸಿ) ಗಳು ಅನ್ವಯವಾಗುವುದಿಲ್ಲ.

IV) ಕಂಪೆನಿಗಳ ಕಾಯಿದೆ 2013 ರ ಕಲಂ–185 & 186 ಗಳು ಅನ್ವಯವಾಗುವಲ್ಲಿ ಕಂಪೆನಿಯು ಯಾವುದೇ ರೀತಿಯಾದ ಸಾಲಗಳು/ಹೂಡಿಕೆಗಳು/ಜಾಮೀನುಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಡೆಸಿರುವುದಿಲ್ಲ .

V) ಕಂಪೆನಿಯು ರಾಜ್ಯ ಸರಕಾರದಿಂದ ಸ್ವೀಕರಿಸಿದ ಷೇರು ಠೇವಣಿ ಮೊತ್ತದಲ್ಲಿ ₹ 31.24 ಕೋಟಿ ಮೊತ್ತದ ಷೇರು ಠೇವಣಿಗಳಿಗೆ ಷೇರುಗಳ ಹಂಚಿಕೆಯಾಗಿಲ್ಲ ಅಥವಾ ಸ್ವೀಕೃತಿ ದಿನಾಂಕದ 60 ದಿನಗಳ ನಂತರದಲ್ಲಿ ಹಂಚಿಕೆಯಾಗಿದೆ.

vi) ವಿದ್ಯುಚ್ಛಕ್ತಿ ವಿತರಣೆಗೆ ಸಂಬಂಧಿಸಿದಂತೆ ಮೂಲವೆಚ್ಚ ದಾಖಲೆ (Cost records) ನಿರ್ವಹಣೆಯ ಬಗ್ಗೆ ಕಂಪೆನಿಗಳ ಕಾಯ್ದೆ 2013 ರ ಕಲಂ 148ರ ಉಪ ಕಲಂ (1) ರ ಪ್ರಕಾರ ಕೇಂದ್ರ ಸರ್ಕಾರವು ರೂಪಿಸಿದ ನಿಯಮಗಳ ರೀತ್ಯಾ ಕಂಪೆನಿಯು ನಿರ್ವಹಿಸಿದ ದಾಖಲೆಗಳನ್ನು ಸ್ಥೂಲವಾಗಿ ಪರಿಶೀಲಿಸಿದ್ದೇವೆ ಮತ್ತು ನಮ್ಮ ಅಭಿಪ್ರಾಯದಂತೆ, ನಿಗದಿತ ಲೆಕ್ಕ ಮತ್ತು ದಾಖಲೆಗಳನ್ನು ನಿರ್ವಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಆದಾಗ್ಯೂ ನಾವು ಸದರಿ ದಾಖಲೆ ಪತ್ರಗಳು ಸರಿಯಾಗಿರುವ ಅಥವಾ ಪರಿಪೂರ್ಣವಾಗಿರುವುದನ್ನು ಪರೀಕ್ಷಿಸುವ ನಿಟ್ಟಿನಲ್ಲಿ ಸುದೀರ್ಘವಾಗಿ ಪರಿಶೀಲನೆ ನಡೆಸಿರುವುದಿಲ್ಲ.

vii) ಎ)ವಿವಾದ ರಹಿತ ಶಾಸನಬದ್ಧ ಪಾವತಿಗಳಾದ ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಆಯಾಂತ ಸುಂಕ, ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಉಪಕರ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಕಂಪೆನಿಯು ಕ್ರಮಬದ್ಧವಾಗಿ ಪಾವತಿಸುತ್ತಾ ಬಂದಿರುತ್ತದೆ ಹಾಗೂ ಈ ಕೆಳಗಿನವುಗಳನ್ನು ಹೊರತುಪಡಿಸಿ ದಿನಾಂಕ 31.03.2019 ರ ಅಂತ್ಯಕ್ಕೆ 6 ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ಸಂಚಿತಗೊಂಡ ಯಾವುದೇ ಮೊತ್ತಗಳನ್ನು ಪಾವತಿಗೆ ಬಾಕಿ ಉಳಿಸಿಕೊಂಡಿರುವುದಿಲ್ಲ.

ಕಾಯಿದೆಯ ಹೆಸರು	ಬಾಕಿಯ ವಿವರ	ಮೊತ್ತ (₹ ಗಳಲ್ಲಿ)	ಬಾಕಿಯು ಯಾವ ಅವಧಿಗೆ ಸಂಬಂಧಿಸಿದ್ದು	ಪಾವತಿಸಬೇಕಾದ ದಿನಾಂಕ	ಪಾವತಿಸಿದ ದಿನಾಂಕ	ಷರಾ
ಆದಾಯ ತೆರಿಗೆ ಕಾಯ್ದೆ 1961	ಟಿಡಿಎಸ್ ಬೇಡಿಕೆ	2007-08	16,58,580			
		2008-09	3,86,430			
		2009-10	1,22,950			
		2010-11	1,24,500			
		2011-12	1,26,260			
		2012-13	4,36,100			
		2013-14	1,44,450			
		2014-15	2,10,540			
		2015-16	1,73,120			
		2016-17	2,17,820			
		2017-18	3,50,250			
		2018-19 (Q1)	26,080			
		2018-19 (Q2)	14,43,130			
	ಒಟ್ಟು		**54,20,210**			

(ಬಿ) ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಯಂತೆ ಮತ್ತು ತನಿಖೆ ಮಾಡಿದ ದಾಖಲೆಗಳ ಮೇರೆಗೆ, ಮಾರಾಟ ತೆರಿಗೆ, ಆಯಾತ ಸುಂಕ ಮತ್ತು ಮೌಲ್ಯ ವರ್ಧಿತ ತೆರಿಗೆ ಸಂಬಂಧಿಸಿದ ವಿವಾದಗಳ ಕಾರಣದಿಂದ ಜಮೆಯಾಗದಿರುವ ಬಾಕಿಗಳು ಇರುವುದಿಲ್ಲ. ವಿವಾದಗಳ ಕಾರಣದಿಂದ ಜಮಾಗೊಳಿಸದೇ ಬಾಕಿ ಇರುವ ನೌಕರರ ಭವಿಷ್ಯನಿಧಿ, ಸೇವಾ ತೆರಿಗೆ ಮತ್ತು ಆದಾಯ ತೆರಿಗೆ ಬಾಕಿಗಳ ವಿವರಗಳು ಈ ಕೆಳಗಿನಂತಿವೆ:

ಕ್ರ. ಸಂ.	ಪಾವತಿಯ ಸ್ವರೂಪ	ಬೇಡಿಕೆ ಮೊತ್ತ	ಪಾವತಿಸಿರುವ ಮೊತ್ತ	ಯಾವ ಅವಧಿಗೆ ಸೇರಿದ ಬೇಡಿಕೆ	ಯಾವ ಪ್ರಾಧಿಕಾರದಲ್ಲಿ ವಿವಾದಗಳು ಬಾಕಿ ಇದೆ
1	ಗುತ್ತಿಗೆ ನೌಕರರ ಭವಿಷ್ಯನಿಧಿ ಮೊತ್ತದ ಬೇಡಿಕೆಯ ಲೆಕ್ಕಾಚಾರದಲ್ಲಿ ತಪ್ಪಾಗಿರುವುದು ಮೇಲ್ಮನವಿ ಸಂಖ್ಯೆ 489(6)/07 ಡಬ್ಲ್ಯೂಪಿ ನಂ. 33264/2011 ಜಿಎಮ್–ಪಿಎಫ್)	₹ 4,44,06,265	₹ 1,77,63,000	2007	ಪ್ರಕರಣವನ್ನು ಪಿ.ಎಫ್ ಕಛೇರಿ ಮಂಗಳೂರಿಗೆ ಹಿಂತಿರುಗಿಸಲಾಗಿದೆ
2.	ಸರಕು ಸಾಗಾಣಿಕೆ ಏಜೆನ್ಸಿ ಸೇವೆಗಳ ಮೇಲೆ ತೆರಿಗೆ	ಸೇವಾ ತೆರಿಗೆ = ₹ 4595328/- ದಂಡ = ₹ 4595328/-	ಪಾವತಿಸಿರುವುದಿಲ್ಲ.	–	CESTAT ಬೆಂಗಳೂರು.
3.	ಭವಿಷ್ಯ ನಿಧಿ – 7 ಕ್ಯೂ ಮತ್ತು 14ಬಿ ಪ್ರಕಾರ ಬಡ್ಡಿ ಹಾಗೂ ದಂಡ ಗಳ ಪಾವತಿಗಾಗಿ (ಮಂಗಳೂರು ವಿಭಾಗ) (ಇ.ಪಿ.ಎಫ್/ಎ.ಟಿ.ಎ –1275(6)/2014)	ಬಡ್ಡಿ – ₹ 8325618/- ದಂಡ – ₹ 10695493/-	ಪೂರ್ತಿ ಪಾವತಿಯಾಗಿರುತ್ತದೆ	2002 ರಿಂದ 2012	ಕೇಂದ್ರ ಸರಕಾರದ ಕೈಗಾರಿಕಾ ನ್ಯಾಯಾಧೀಕರಣ ಹಾಗೂ ಲೇಬರ್ ಕೋರ್ಟ್ ಬೆಂಗಳೂರು
4.	ಭವಿಷ್ಯ ನಿಧಿ ಕಂಡಿಕೆ 7 ಕ್ಯೂ ಮತ್ತು 14ಬಿ ಪ್ರಕಾರ ಬಡ್ಡಿ ಹಾಗೂ ದಂಡ ಗಳ ಪಾವತಿಗಾಗಿ (ಪುತ್ತೂರು ವಿಭಾಗ) (ಇ.ಪಿ.ಎಫ್/ಎ.ಟಿ.ಎ 630(6)/2013)	ಬಡ್ಡಿ – ₹ 6436970/- ದಂಡ – ₹ 8343738/-	ಪೂರ್ತಿ ಪಾವತಿಯಾಗಿರುತ್ತದೆ	01.06.02 ರಿಂದ 2008 ಮಜ್ದೂರ್ ಗ್ಯಾಂಗ್‌ಮೆನ್	ಕೇಂದ್ರ ಸರಕಾರದ ಕೈಗಾರಿಕಾ ನ್ಯಾಯಾಧೀಕರಣ ಹಾಗೂ ಲೇಬರ್ ಕೋರ್ಟ್ ಬೆಂಗಳೂರು
5.	ಭವಿಷ್ಯ ನಿಧಿ – ಕಂಡಿಕೆ 7 ಕ್ಯೂ ಮತ್ತು 14ಬಿ ಪ್ರಕಾರ ಬಡ್ಡಿ ಹಾಗೂ ದಂಡ ಗಳ ಪಾವತಿಗಾಗಿ (ಶಿವಮೊಗ್ಗ ವಿಭಾಗ) (ಇ.ಪಿ.ಎಫ್/ಎ.ಟಿ.ಎ 114(6)/2016)	ಬಡ್ಡಿ – ₹ 757961/- ದಂಡ – ₹ 383386/-	ಪೂರ್ತಿ ಪಾವತಿಯಾಗಿರುತ್ತದೆ	ಎಲ್.ಸಿ. ಕಾಮಗಾರಿ 3/06 ರಿಂದ 7/2013	ಕೇಂದ್ರ ಸರಕಾರದ ಕೈಗಾರಿಕಾ ನ್ಯಾಯಾಧೀಕರಣ ಹಾಗೂ ಲೇಬರ್ ಕೋರ್ಟ್ ಬೆಂಗಳೂರು
6.	ಭವಿಷ್ಯ ನಿಧಿ – ಕಂಡಿಕೆ 7 ಕ್ಯೂ ಮತ್ತು 14ಬಿ ಪ್ರಕಾರ ಬಡ್ಡಿ ಹಾಗೂ ದಂಡ ಗಳ ಪಾವತಿಗಾಗಿ	ಬಡ್ಡಿ – ₹ 3828351/- ದಂಡ – ₹ 3377361/-	ಬಡ್ಡಿ – ₹ 3828351/- ದಂಡ – ₹ 2533021	ಮಜ್ದೂರ್ ಗ್ಯಾಂಗ್‌ಮೆನ್ 1999–05	ಕೇಂದ್ರ ಸರಕಾರದ ಕೈಗಾರಿಕಾ ನ್ಯಾಯಾಧೀಕರಣ ಹಾಗೂ ಲೇಬರ್ ಕೋರ್ಟ್

ಕಾಯ್ದೆ ಹೆಸರು	ವಿವಾದಾತ್ಮಕ ಬಾಕಿಗಳ ಸ್ವರೂಪ	ಮೊತ್ತ (₹ ಗಳಲ್ಲಿ)	ಆಕ್ಷೇಪಣೆಯೊಂದಿಗೆ ಪಾವತಿಸಿರುವುದು	ಯಾವ ಅವಧಿಗೆ ಸೇರಿದ	ಯಾವ ಪ್ರಾಧಿಕಾರದಲ್ಲಿ ವಿವಾದಗಳು ಬಾಕಿ ಇದೆ
	(ಸಾಗರ ವಿಭಾಗ) (ಇ.ಪಿ.ಎಫ್/ಎ.ಟಿ.ಎ-1084(6)/2015)				ಬೆಂಗಳೂರು
7.	ಭವಿಷ್ಯ ನಿಧಿ - ಕಂಡಿಕೆ 7 ಕ್ಯೂ ಮತ್ತು 14ಬಿ ಪ್ರಕಾರ ಬಡ್ಡಿ ಹಾಗೂ ದಂಡ ಗಳ ಪಾವತಿಗಾಗಿ (ಚಿಕ್ಕಮಗಳೂರು ವಿಭಾಗ) (ಇ.ಪಿ.ಎಫ್/ಎ.ಟಿ.ಎ 742(6)/2014)	ಬಡ್ಡಿ - ₹ 6540760/- ದಂಡ - ₹ 7499653/-	ಪೂರ್ತಿ ಪಾವತಿಯಾಗಿರುತ್ತದೆ	2002 ರಿಂದ 2010 ಮಜ್ದೂರ್ ಗ್ಯಾಂಗ್‌ಮೆನ್	ಕೇಂದ್ರ ಸರಕಾರದ ಕೈಗಾರಿಕಾ ನ್ಯಾಯಾಧೀಕರಣ ಹಾಗೂ ಲೇಬರ್ ಕೋರ್ಟ್ ಬೆಂಗಳೂರು
8.	ಭವಿಷ್ಯ ನಿಧಿ - ಕಂಡಿಕೆ 7 ಕ್ಯೂ ಮತ್ತು 14ಬಿ ಪ್ರಕಾರ ಬಡ್ಡಿ ಹಾಗೂ ದಂಡ ಗಳ ಪಾವತಿಗಾಗಿ (ಉಡುಪಿ ವಿಭಾಗ) (ಇ.ಪಿ.ಎಫ್/ಎ.ಟಿ.ಎ. 793(6)/2013)	₹ 5419453/-	ಪೂರ್ತಿ ಪಾವತಿಯಾಗಿರುತ್ತದೆ	2003 ರಿಂದ 2008	ಕೇಂದ್ರ ಸರಕಾರದ ಕೈಗಾರಿಕಾ ನ್ಯಾಯಾಧೀಕರಣ ಹಾಗೂ ಲೇಬರ್ ಕೋರ್ಟ್ ಬೆಂಗಳೂರು
9.	ಭವಿಷ್ಯ ನಿಧಿ - ಕಂಡಿಕೆ 7 ಕ್ಯೂ ಮತ್ತು 14ಬಿ ಪ್ರಕಾರ ಬಡ್ಡಿ ಹಾಗೂ ದಂಡ ಗಳ ಪಾವತಿಗಾಗಿ (ಕಡೂರು ವಿಭಾಗ) (ಇ.ಪಿ.ಎಫ್/ಎ.ಟಿ.ಎ. 743(6)/2014)	ಬಡ್ಡಿ - ₹ 599890/- ದಂಡ - ₹ 1105063/-	ಪೂರ್ತಿ ಪಾವತಿಯಾಗಿರುತ್ತದೆ	08/2006 ರಿಂದ 3/2010 ಮಜ್ದೂರ್ ಗ್ಯಾಂಗ್‌ಮೆನ್	ಕೇಂದ್ರ ಸರಕಾರದ ಕೈಗಾರಿಕಾ ನ್ಯಾಯಾಧೀಕರಣ ಹಾಗೂ ಲೇಬರ್ ಕೋರ್ಟ್ ಬೆಂಗಳೂರು
10.	ಆದಾಯ ತೆರಿಗೆ - 80ಐಎ ಬಗ್ಗೆ ಕಂಪೆನಿಯ ಕ್ಲೈಮನ್ನು ನಿರಾಕರಿಸಿರುವ ಬಗ್ಗೆ ಕ.ನಿ. ವರ್ಷ 2006-07	₹ 256162603	ಪೂರ್ತಿ ಪಾವತಿಯಾಗಿರುತ್ತದೆ	ಕರ ನಿರ್ಧರಣಾ ವರ್ಷ 2006-07	ಕರ್ನಾಟಕ ಉಚ್ಚ ನ್ಯಾಯಾಲಯ
11.	ಭವಿಷ್ಯ ನಿಧಿ - ಕೋಡ್ ಸಂಖ್ಯೆ ಕೆಎನ್/ಎಮ್ ಎಲ್‌ಆರ್/0020898 ಗೆ ಸಂಬಂಧಿಸಿದಂತೆ ಪಾವತಿಸಿದ ಬಡ್ಡಿ ಮತ್ತು ದಂಡದ ಮೊತ್ತಗಳು	₹ 534518/-	ಪೂರ್ತಿ ಪಾವತಿಯಾಗಿರುತ್ತದೆ	ಆರ್ಥಿಕ ವರ್ಷ 2003-08 ಮತ್ತು 2012-18	ಪಿಎಫ್ ಮೇಲ್ಮನವಿ ನ್ಯಾಯಾಧೀಕರಣ

8. ನಮ್ಮ ತನಿಖಾ ಕಾರ್ಯಗಳ ಆಧಾರದ ಮೇಲೆ ನಾವು ಅಭಿಪ್ರಾಯ ಪಡುವುದೇನೆಂದರೆ, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಅಥವಾ ಸರ್ಕಾರಕ್ಕೆ ಕಂಪೆನಿಯು ಪಾವತಿಸಬೇಕಾದ ಬಾಕಿಗಳನ್ನು ಪಾವತಿಸಲು ತಪ್ಪಿರುವುದಿಲ್ಲ.

9. ಆರ್ಥಿಕ ವರ್ಷದಲ್ಲಿ ಕಂಪೆನಿಯ ಆರಂಭಿಕ ಸಾರ್ವಜನಿಕ ಪ್ರಸ್ತಾಪ/ ಮುಂದುವರೆದ ಸಾರ್ವಜನಿಕ ಪ್ರಸ್ತಾಪದ ಮುಖಾಂತರ ಬಂಡವಾಳವನ್ನು ಸಂಗ್ರಹಿಸಿರುವುದಿಲ್ಲ. ಈ ವರ್ಷದಲ್ಲಿ ಅವಧಿ ಸಾಲಗಳ ಮುಖಾಂತರ ಸಂಗ್ರಹಿಸಿದ ಹಣವನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಲಾಗಿರುತ್ತದೆಯೆಂದು ಅಭಿಪ್ರಾಯಪಡುತ್ತೇವೆ.

10. ನಮ್ಮ ತನಿಖಾ ಕಾರ್ಯಗಳ ಆಧಾರದ ಮೇಲೆ, ನಾವು ವರದಿ ಮಾಡುವುದೇನೆಂದರೆ ಕಂಪೆನಿಯಿಂದಾಗಲೀ ಅಥವಾ ಅದರ ಅಧಿಕಾರಿ ಅಥವಾ ನೌಕರರಿಂದ ಕಂಪೆನಿಗಾಗಲೀ, ಯಾವುದೇ ರೀತಿಯ ಗಣನೀಯ ಮೋಸಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ.

11. ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 463 (ಇ) ದಿನಾಂಕ 05.06.2015 ರ ಅನ್ವಯ ಕಂಪೆನಿ ಕಾಯಿದೆ 2013 ರ ಕಲಂ 197 ಸರಕಾರದ ಕಂಪೆನಿಗಳಿಗೆ ಅನ್ವಯವಾಗುವುದಿಲ್ಲ.

12. ಕಂಪೆನಿಯು ಒಂದು ನಿಧಿ ಕಂಪೆನಿಯಾಗಿರದೇ ಇರುವುದರಿಂದ ಆದೇಶದ ಷರತ್ತು 3(12) ಅನ್ವಯಿಸುವುದಿಲ್ಲ.

13. ನಮ್ಮ ಲೆಕ್ಕ ತನಿಖಾ ಕಾರ್ಯಗಳ ಆಧಾರದ ಮೇಲೆ ತಿಳಿಸುವುದೇನೆಂದರೆ, ಸಂಬಂಧಿತ ಭಾಗೀದಾರರೊಂದಿಗೆ ನಡೆಸಿದ ವಹಿವಾಟುಗಳನ್ನು ಕಂಪೆನಿಗಳ ಕಾಯಿದೆ – 2013 ರ ಕಲಂ 177 & 188 ಗಳಿಗೆ ಅನುಗುಣವಾಗಿರುತ್ತವೆ ಹಾಗೂ ಇದಕ್ಕೆ ಸಂಬಂಧಿಸಿದ ಮಾಹಿತಿಗಳನ್ನೂ ಕಂಪೆನಿ ಕಾಯಿದೆ ಮತ್ತು ಲೇಖಮಾನದಂಡಗಳನ್ವಯ ಆರ್ಥಿಕ ತಃಖ್ತೆಗಳಲ್ಲಿ ಪ್ರಕಟಿಸಲಾಗಿದೆ.

14. ಕಂಪೆನಿಯು ಪ್ರಸಕ್ತ ಸಾಲಿನಲ್ಲಿ ಶೇರುಗಳ ವಿಶೇಷ ಹಂಚಿಕೆಯನ್ನು/ಖಾಸಗಿ ಹಂಚಿಕೆಯನ್ನು ಮಾಡಿರುವುದಿಲ್ಲವಾದ್ದರಿಂದ ಆದೇಶದ ಷರತ್ತು 3(xiv) ಕಂಪೆನಿಗೆ ಅನ್ವಯಿಸುವುದಿಲ್ಲ.

15. ಕಂಪೆನಿಯು ಕಂಪೆನಿಗಳ ಕಾಯಿದೆಯ ಕಲಂ 192 ರಲ್ಲಿ ಹೇಳಿರುವಂತೆ ತನ್ನ ನಿರ್ದೇಶಕರು/ಅವರೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳ ಜೊತೆಗೆ ಯಾವುದೇ ರೀತಿಯ ನಗದು ರಹಿತ ಚಟುವಟಿಕೆಗಳನ್ನು ಕೈಗೊಂಡಿರುವುದಿಲ್ಲವಾದ್ದರಿಂದ ಆದೇಶದ ಷರತ್ತು - 3 (xv) ಕಂಪೆನಿಗೆ ಅನ್ವಯಿಸುವುದಿಲ್ಲ.

16. ನಮ್ಮ ಅಭಿಪ್ರಾಯದಂತೆ, ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ 1934 ರ ಕಲಂ 45 –1A ರ ಅನ್ವಯ ಕಂಪೆನಿಯು ನೋಂದಾಯಿಸಿಕೊಳ್ಳಬೇಕಾದ ಅವಶ್ಯಕತೆ ಇರುವುದಿಲ್ಲ.

ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
(ಸಂಸ್ಥೆ ನೋಂ.ಸಂ. 000960 ಎಸ್)
ಸಹಿ/–
ಸಿ.ಎ. ಕೆ.ಆರ್. ಸುರೇಶ್
ಪಾಲುದಾರರು
ಮೆಂಬರ್‌ಶಿಪ್ ನಂ. 025453
ಯುಡಿಐಎನ್:19025453ಎಎಎಸಿಡಬ್ಲ್ಯೂ3705

ಸ್ಥಳ: ಬೆಂಗಳೂರು
ದಿನಾಂಕ: 19/09/2019

ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ-3

ಕ್ರಮ ಸಂಖ್ಯೆ	ನಿರ್ದೇಶನಗಳು	ಲೆಕ್ಕಪರಿಶೋಧಕರ ಉತ್ತರ
1	ಕಂಪೆನಿಯು ಐಟಿ ಸಿಸ್ಟಮ್ ಮೂಲಕ ತನ್ನ ವಹಿವಾಟುಗಳ ಎಲ್ಲಾ ಲೆಕ್ಕಪತ್ರಗಳನ್ನು ಪ್ರಕ್ರಿಯೆಗೊಳಿಸಲು ವ್ಯವಸ್ಥೆಯನ್ನು ಹೊಂದಿದೆಯೇ? ಇದ್ದಲ್ಲಿ ಐಟಿ ಸಿಸ್ಟಮ್ ನ ಹೊರಗೆ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸುವುದರಿಂದ ಲೆಕ್ಕಪತ್ರಗಳ ಸಮಗ್ರತೆಯ ಮೇಲಿನ ಪರಿಣಾಮ ಹಾಗೂ ಆರ್ಥಿಕ ಪರಿಣಾಮಗಳನ್ನು ವರದಿ ಮಾಡುವುದು.	ಪ್ರಸ್ತುತ, ಕಂಪೆನಿಯ ಲೆಕ್ಕಪತ್ರಗಳನ್ನು ಮ್ಯಾನ್ಯುವೆಲ್ ಆಗಿ ನಿರ್ವಹಿಸಲಾಗುತ್ತಿದ್ದು, ಗ್ರಾಹಕರ ಬಿಲ್ಲಿಂಗ್‌ಗಳನ್ನು ಮಾತ್ರ ಐಟಿ ಸಿಸ್ಟಮ್ ಮೂಲಕ ನಿರ್ವಹಿಸಲಾಗುತ್ತಿದೆ. ಐಟಿ ಸಿಸ್ಟಮ್ ಮೂಲಕ ಎಲ್ಲಾ ವಹಿವಾಟುಗಳ ಲೆಕ್ಕಪತ್ರಗಳನ್ನು ಪ್ರಕ್ರಿಯೆಗೊಳಿಸಲು ಆಂತರಿಕವಾಗಿ ಒಂದು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.
2.	ಪ್ರಸ್ತುತ ಹೊಂದಿರುವ ಯಾವುದೇ ಸಾಲಗಳ ಪುನರ್ರಚನೆಯ ಪ್ರಕರಣಗಳು ಅಥವಾ ಸಾಲವನ್ನು ಮರುಪಾವತಿಸುವಲ್ಲಿನ ಕಂಪೆನಿಯ ಅಸಮರ್ಥತೆಯಿಂದಾಗಿ ಸಾಲಗಳು ಅಥವಾ ಬಡ್ಡಿಯ ಮೊತ್ತಗಳನ್ನು ಸಾಲಗಾರನು ಮನ್ನಾ ಮಾಡಿದ ಪ್ರಕರಣಗಳು ಕಂಡುಬಂದಿದೆಯೇ? ಇದ್ದಲ್ಲಿ ಆರ್ಥಿಕ ಪರಿಣಾಮಗಳನ್ನು ವರದಿ ಮಾಡುವುದು.	ವರದಿ ಮಾಡಲಾದ ವರ್ಷದಲ್ಲಿ ಅಂತಹ ಯಾವುದೇ ಸಾಲಗಳ ಪುನರ್ರಚನೆಯನ್ನು ಕೈಗೊಂಡಿರುವುದಿಲ್ಲ ಅಥವಾ ಸಾಲಗಾರರಿಂದ ಮನ್ನಾ ಮಾಡಲಾದ ಯಾವುದೇ ಪ್ರಕರಣಗಳಿರುವುದಿಲ್ಲ.
3.	ರಾಜ್ಯ ಅಥವಾ ಕೇಂದ್ರ ಸರಕಾರಗಳ ಸಂಸ್ಥೆಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಸ್ವೀಕರಿಸಿದ/ ಸ್ವೀಕರಿಸಬಹುದಾದ ನಿಧಿಗಳನ್ನು ಸರಿಯಾಗಿ ಲೆಕ್ಕೀಕರಿಸಲಾಗಿದೆಯೇ?/ ಬಳಸಲಾಗಿದೆಯೇ? ವಿಚಲನ ಪ್ರಕರಣಗಳನ್ನು ಪಟ್ಟಿ ಮಾಡುವುದು.	ರಾಜ್ಯ ಅಥವಾ ಕೇಂದ್ರ ಸರಕಾರಗಳ ಸಂಸ್ಥೆಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಸ್ವೀಕರಿಸಿದ/ ಸ್ವೀಕರಿಸಬಹುದಾದ ನಿಧಿಗಳನ್ನು ಸರಿಯಾಗಿ ಲೆಕ್ಕೀಕರಿಸಲಾಗಿದೆ ಹಾಗೂ ನಿರ್ದಿಷ್ಟ ಯೋಜನೆಗಳ ನಿಯಮಗಳು ಮತ್ತು ಷರತ್ತುಗಳ ಅನುಸಾರ ಬಳಕೆ ಮಾಡಲಾಗಿದೆ.

ಕಂಪೆನಿಯ ನಿಶ್ಚಿತ ಹೆಚ್ಚುವರಿ ನಿರ್ದೇಶನಗಳು

ಕ್ರಮ ಸಂಖ್ಯೆ	ನಿರ್ದೇಶನಗಳು	ಲೆಕ್ಕಪರಿಶೋಧಕರ ಉತ್ತರ
(ಎ)	ಕಂಪೆನಿಯಲ್ಲಿ ಕಂದಾಯ ಬಿಲ್ಲಿಂಗ್ ಮತ್ತು ವಸೂಲಾತಿಗಳ ವ್ಯವಸ್ಥೆಯ ಪರಿಣಾಮಕತ್ವ ಶಕ್ತಿಯ ಬಗ್ಗೆ ವರದಿ ಮಾಡುವುದು. ಎಲ್ಲಾ ಗ್ರಾಹಕರಿಗೂ ಹಸ್ತಕ್ಷೇಪ ನಿರೋಧಕ ಮಾಪಕಗಳನ್ನು ಅಳವಡಿಸಲಾಗಿದೆಯೇ? ಇಲ್ಲದಿದ್ದಲ್ಲಿ, ಬಿಲ್ಲಿಂಗ್‌ನ ನಿಖರತೆಯನ್ನು ಯಾವ ರೀತಿಯಲ್ಲಿ ಖಚಿತಪಡಿಸಿ ಕೊಳ್ಳಲಾಗುವುದು, ಪರಿಶೀಲಿಸಿ.	ಮಾಪಕ ಓದುವ, ಬಿಲ್ಲು ಮಾಡುವ ಹಾಗೂ ಕಂದಾಯ ವಸೂಲಾತಿ ಕಾರ್ಯವನ್ನು ಟಿಆರ್‌ಎಮ್ (ಸಮಗ್ರ ಕಂದಾಯ ನಿರ್ವಹಣೆ) ಏಜೆನ್ಸಿಗಳಿಗೆ ವಹಿಸಲಾಗಿರುತ್ತದೆ. ನಿಗದಿತ ದಿನಾಂಕಗಳಂದು ಮಾಪಕದ ರೀಡಿಂಗ್ ಪಡೆದು ಸ್ಥಳದಲ್ಲೇ ಬಿಲ್ಲು ತಯಾರಿಸುವ ಯಂತ್ರದಿಂದ ಗ್ರಾಹಕರಿಗೆ ಬಿಲ್ಲು ನೀಡಲಾಗುವುದು. ಆರ್ಥಿಕ ವರ್ಷ 2018-19 ನೇ ಸಾಲಿನಲ್ಲಿ ಕಂಪೆನಿಯ ಬಿಲ್ಲಿಂಗ್ ಮತ್ತು ವಸೂಲಾತಿ ದಕ್ಷತೆಗಳು ಕ್ರಮವಾಗಿ ಶೇ. 99.50 ಮತ್ತು ಶೇ. 99.81 ಆಗಿರುತ್ತವೆ. ತಾಂತ್ರಿಕ ಶಾಖೆಯಿಂದ ನೀಡಲಾದ ಮಾಹಿತಿಗಳ ಪ್ರಕಾರ ಸಿಂಗಲ್‌ಫೇಸ್ ಹಾಗೂ ಮೂರು ಫೇಸ್ ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್‌ಗಳನ್ನು ಎಲೆಕ್ಟ್ರೋಸ್ಟ್ಯಾಟಿಕ್ ಮೀಟರುಗಳಿಂದ ಬದಲಾಯಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.
(ಬಿ)	ಉತ್ಪಾದನಾ, ಪ್ರಸರಣಾ ಹಾಗೂ ವಿತರಣಾ ಕಂಪೆನಿಗಳ ನಡುವಿನ ಸ್ವೀಕೃತಿ ಮತ್ತು ಪಾವತಿ ಶಿಲ್ಕುಗಳನ್ನು ಸಮನ್ವಯಗೊಳಿಸಿಕೊಳ್ಳಲಾಗಿದೆಯೇ? ವ್ಯತ್ಯಾಸದ ಕಾರಣಗಳನ್ನು ಪರಿಶೀಲಿಸುವುದು.	ಸಂಬಂಧಪಟ್ಟ ಇತರ ಉತ್ಪಾದನಾ, ಪ್ರಸರಣಾ ಹಾಗೂ ವಿತರಣಾ ಕಂಪೆನಿಗಳಿಂದ ಅಗತ್ಯ ಸ್ಪಂದನೆ ಇಲ್ಲದಿರುವುದರಿಂದ ಉತ್ಪಾದನಾ, ಪ್ರಸರಣಾ ಹಾಗೂ ವಿತರಣಾ ಕಂಪೆನಿಗಳ ನಡುವಿನ ಸ್ವೀಕೃತಿ ಮತ್ತು ಪಾವತಿ ಶಿಲ್ಕುಗಳನ್ನು ಸಮನ್ವಯಗೊಳಿಸಿಕೊಳ್ಳಲಾಗಿಲ್ಲ. ಆದಾಗ್ಯೂ, ಸ್ವೀಕೃತಿ ಮತ್ತು ಪಾವತಿ ಶಿಲ್ಕುಗಳನ್ನು ಸಮನ್ವಯಗೊಳಿಸಿ ಕೊಳ್ಳುವ ಬಗ್ಗೆ ಕಂಪೆನಿಯಿಂದ ಪ್ರಸ್ತುತ ಸಾಲಿನಲ್ಲಿ ಪ್ರಯತ್ನಗಳನ್ನು ಮಾಡಲಾಗಿದೆ.

ಕ್ರಮ ಸಂಖ್ಯೆ	ನಿರ್ದೇಶನಗಳು	ಲೆಕ್ಕಪರಿಶೋಧಕರ ಉತ್ತರ
(ಸಿ)	ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು (SERC) ಅನುಮೋದಿಸಿದ ಇಂಧನ ಹಾಗೂ ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚ (FPPCA) ಗಳನ್ನು ಕಂಪೆನಿಯು ವಸೂಲಿ ಮಾಡಿ ಲೆಕ್ಕೀಕರಿಸಿದೆಯೇ?	ಆರ್ಥಿಕ ತಃಖ್ತೆಗಳ ಮೇಲಿನ ಟಿಪ್ಪಣಿ ಸಂಖ್ಯೆ 38.7.1, 38.7.2, 38.7.3 ಮತ್ತು 38.7.5 ಗಳಲ್ಲಿ ತಿಳಿಸಲಾದ ಕೆಲವೊಂದು ಪ್ರಕರಣಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಕಂಪೆನಿಯು ಕೆಇಆರ್‌ಸಿ/ ಸಿಇಆರ್‌ಸಿ.ಗಳು ಅನುಮೋದಿಸಿದ ಇಂಧನ ಹಾಗೂ ವಿದ್ಯುತ್ ಖರೀದಿ ಹೊಂದಾಣಿಕೆಗಳನ್ನು ಲೆಕ್ಕೀಕರಿಸಿ ವಸೂಲಿ ಮಾಡುತ್ತಲಿದೆ.
(ಡಿ)	ಪ್ರಸ್ತುತ ಸಾಲಿನಲ್ಲಿ ಅನುಮೋದಿಸಲಾದ ಹಾಗೂ ಲೆಕ್ಕೀಕರಿಸಿದ ಜಕಾತಿ ಸಹಾಯ ಧನವೆಷ್ಟು? ಇದನ್ನು ಸರಕಾರದಿಂದ ನಿಯತವಾಗಿ ಪಾವತಿಸಲಾಗುತ್ತಿದೆಯೇ?	ಆರ್ಥಿಕ ವರ್ಷ 2018-19 ನೇ ಸಾಲಿನಲ್ಲಿ, 10 ಹೆಚ್. ಪಿ. ವರೆಗಿನ ನೀರಾವರಿ ಪಂಪುಸೆಟ್‌ಗಳಿಗೆ ಹಾಗೂ 40 ಯೂನಿಟ್‌ಗಳವರೆಗೆ ವಿದ್ಯುತ್ ಬಳಸುವ ಭಾಗ್ಯಜ್ಯೋತಿ/ ಕುಟೀರಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ಸರಬರಾಜು ನೀಡಿದ ಬಾಬ್ತು ₹ 89462.78 ಲಕ್ಷಗಳನ್ನು ಸರಕಾರದಿಂದ ಬರಬೇಕಾದ ಮೊತ್ತವೆಂದು ಲೆಕ್ಕೀಕರಿಸಿದೆ. ಈ ಪೈಕಿ ₹ 53958.02 ಲಕ್ಷಗಳನ್ನು ಸರಕಾರವು ಪ್ರಸ್ತುತ ಸಾಲಿನಲ್ಲಿ ಬಿಡುಗಡೆಗೊಳಿಸಿದ್ದು ದಿನಾಂಕ 31.03.2019 ರ ಅಂತ್ಯಕ್ಕೆ ₹ 35504.76 ಲಕ್ಷ ಬಿಡುಗಡೆಯಾಗಲು ಬಾಕಿ ಇರುತ್ತದೆ. ಮುಂದುವರೆದು, ಕರ್ನಾಟಕ ರಾಜ್ಯ ಸರ್ಕಾರವು 2017-18 ಸಾಲಿಗೆ ಸಂಬಂಧಿಸಿದಂತೆ ಬಾಕಿ ಇರುವ ಸಹಾಯ ಧನ ₹ 8916.00 ಲಕ್ಷಗಳನ್ನು ಸಹ ಬಿಡುಗಡೆ ಮಾಡಿದೆ. ಪ್ರಸ್ತುತ ಸಾಲಿನ ಬಾಕಿ ಮೊತ್ತ ₹ 35504.76 ಲಕ್ಷಗಳನ್ನೂ ಒಳಗೊಂಡು ದಿನಾಂಕ 31.03.2019 ರ ಅಂತ್ಯಕ್ಕೆ ಬರಬೇಕಾದ ಒಟ್ಟು ಬಾಕಿ ಮೊತ್ತವು ₹ 91326.35 ಲಕ್ಷಗಳಾಗಿರುತ್ತದೆ.
(ಇ)	ಪರಿಶೀಲನೆಗೊಳಪಡಿಸಿದ ಸಂಸ್ಥೆಯು ತನ್ನ ಚಟುವಟಿಕೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಗಣಕೀಕರಣಗೊಳಿಸಿದ್ದಲ್ಲಿ, ಕಂಪೆನಿಯಲ್ಲಿ ವಿದ್ಯುನ್ಮಾನ ರೂಪದಲ್ಲಿರುವ ಮಾಹಿತಿಯ ಪ್ರಮಾಣವೆಷ್ಟು; ಲೆಕ್ಕೀಕರಣ, ಮಾರಾಟ, ಸಿಬ್ಬಂದಿ ವಿವರಗಳು, ವೇತನ, ಸಾಮಾಗ್ರಿ ದಾಸ್ತಾನುಗಳಂತಹ ಯಾವ ಕ್ಷೇತ್ರಗಳನ್ನು ಗಣಕೀಕರಣಗೊಳಿಸಲಾಗಿದೆ; ಮತ್ತು ಮಾಹಿತಿ/ ತಂತ್ರಾಂಶ/ ಯಂತ್ರಾಂಶಗಳ ಭದ್ರತೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆಯೇ?	ಗ್ರಾಹಕರ ಕಂದಾಯ ಖಾತೆಗಳ ಬಿಲ್ಲಿಂಗ್ ಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲಾಗಿದೆ ಮತ್ತು ಇತರ ಎಲ್ಲಾ ವಿಭಾಗಗಳು/ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ಗಣಕೀಕರಣವು ಪ್ರಗತಿಯಲ್ಲಿದೆ. ಮಾಪಕ ಓದುವ, ಬಿಲ್ಲು ಮಾಡುವ ಹಾಗೂ ಕಂದಾಯ ವಸೂಲಾತಿ ಕಾರ್ಯವನ್ನು ಟಿಆರ್‌ಎಮ್ (ಸಮಗ್ರ ಕಂದಾಯ ನಿರ್ವಹಣೆ) ಏಜೆನ್ಸಿಗಳಿಗೆ ವಹಿಸಲಾಗಿರುತ್ತದೆ. ನಿಗದಿತ ದಿನಾಂಕಗಳಂದು ಮಾಪಕದ ರೀಡಿಂಗ್ ಪಡೆದು ಸ್ಥಳದಲ್ಲೇ ಬಿಲ್ಲು ತಯಾರಿಸುವ ಯಂತ್ರದಿಂದ ಗ್ರಾಹಕರಿಗೆ ಬಿಲ್ಲು ನೀಡಲಾಗುವುದು. ವ್ಯವಸ್ಥಾ ಕಾರ್ಯನಿರ್ವಾಹಕರಿಂದ ತಂತ್ರಾಂಶ/ ಮಾಹಿತಿಗಳ ನಿರ್ವಹಣೆ ಮತ್ತು ನಿಯಂತ್ರಣ ಕಾರ್ಯವನ್ನು ಮಾಡಲಾಗುತ್ತಿದೆ. ಸಂಬಂಧಿಸಿದ ಕಾರ್ಯನಿರ್ವಾಹಕರ ಒಪ್ಪಿಗೆ ಇಲ್ಲದೇ ತಂತ್ರಾಂಶದಲ್ಲಿನ ಮಾಹಿತಿಯನ್ನು ಮಾರ್ಪಡಿಸಲು/ ಬದಲಾಯಿಸಲು ಅವಕಾಶ ಇರುವುದಿಲ್ಲ. ಆದ್ದರಿಂದ, ತಂತ್ರಾಂಶ/ಮಾಹಿತಿಯನ್ನು ಸಂರಕ್ಷಿಸಲು ಕೇಂದ್ರೀಯ ಯಾಂತ್ರಿಕ ಕೌಶಲ್ಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆದಾಗ್ಯೂ, ಭದ್ರತೆಯ ದೃಷ್ಟಿಯಿಂದ ಕಂಪ್ಯೂಟರ್ ತರಬೇತಿ ಪಡೆದ/ಪರಿಣತಿ ಹೊಂದಿದ ನುರಿತ ಲೆಕ್ಕ ಪರಿಶೋಧಕರಿಂದ ತಂತ್ರಾಂಶದ ಬಗ್ಗೆ ತನಿಖೆಯನ್ನು ನಡೆಸುವಂತೆ ನಾವು ಪ್ರಸ್ತಾಪಿಸುತ್ತಿದ್ದೇವೆ.

ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
(ಸಂಸ್ಥೆ ನೋಂ.ಸಂ. 000960 ಎಸ್)
ಸಹಿ/-
ಸಿ.ಎ. ಕೆ.ಆರ್. ಸುರೇಶ್
ಪಾಲುದಾರರು
ಯುಡಿಐಎನ್:19025453ಎಎಎಸಿಡಬ್ಲ್ಯೂ3705

ಸ್ಥಳ: ಬೆಂಗಳೂರು
ದಿನಾಂಕ: 19/09/2019

ಕಂಪೆನಿಗಳ ಕಾಯ್ದೆ 2013ರ ಕಲಂ 143(6)(ಬಿ)ರ ಪ್ರಕಾರ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ, ಮಂಗಳೂರು ಇದರ 31ನೇ ಮಾರ್ಚ್ 2019ಕ್ಕೆ ಅಂತ್ಯಗೊಂಡ ಆರ್ಥಿಕ ತಃಖ್ತೆಗಳ ಮೇಲೆ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಟೀಕೆ, ವಿಮರ್ಶೆಗಳು.

ಕ್ರಮಾಂಕ ಎಜಿ/(ಇಎಂಡ್ಆರ್ಎಸ್ಎ)/ಇಎಸ್–11/ಪಿಎಸ್–11/2019–20/ಕೆ:03(35)/ಸಿ–23 ದಿನಾಂಕ 24.9.2019

ಕಂಪೆನಿಗಳ ಕಾಯ್ದೆ 2013 ರಲ್ಲಿ ನಿಗದಿಗೊಳಿಸಿದ ಆರ್ಥಿಕ ವರದಿಯ ಚೌಕಟ್ಟಿನಲ್ಲಿ, ದಿನಾಂಕ **31.03.2019**ಕ್ಕೆ ಅಂತ್ಯಗೊಂಡ, **ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯ** ಆರ್ಥಿಕ ತಃಖ್ತೆಗಳನ್ನು ತಯಾರಿಸುವ ಜವಾಬ್ದಾರಿಯು ಕಂಪೆನಿ ಆಡಳಿತ ಮಂಡಳಿಯದ್ದಾಗಿದೆ. ಕಂಪೆನಿಗಳ ಕಾಯ್ದೆ 2013 ರ ಕಲಂ 143 (10)ರನ್ವಯ ನಿಗದಿಪಡಿಸಿದ ಮಾನದಂಡಗಳಿಗನುಗುಣವಾಗಿ ಕಂಪೆನಿಗಳ ಕಾಯ್ದೆಯ ಕಲಂ 143 ರಡಿಯಲ್ಲಿನ ಸ್ವತಂತ್ರ ತನಿಖೆಯನ್ನು ಆಧರಿಸಿ ಆರ್ಥಿಕ ತಃಖ್ತೆಗಳ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯು, ಕಂಪೆನಿಗಳ ಕಾಯ್ದೆಯ ಕಲಂ 139(5) ರನ್ವಯ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಿಸಿದ ಶಾಸನಬದ್ಧ ಲೆಕ್ಕ ಪರಿಶೋಧಕರದ್ದಾಗಿರುತ್ತದೆ. ಇದನ್ನು ಸದರಿಯವರು ನಿರ್ವಹಿಸಿರುತ್ತಾರೆಂದು ದಿನಾಂಕ **19.09.2019 ರಂದು ಅವರು ಸಲ್ಲಿಸಿದ ಪರಿಷ್ಕೃತ** ಲೆಕ್ಕ ಪರಿಶೋಧನಾ ವರದಿಯಲ್ಲಿ ಹೇಳಲಾಗಿದೆ. ಸದರಿ ವರದಿಯು ಈ ಹಿಂದೆ ದಿನಾಂಕ 20.08.2019 ರಂದು ಸಲ್ಲಿಸಿದ ಲೆಕ್ಕಪರಿಶೋಧನಾ ವರದಿಯನ್ನು ರದ್ದುಗೊಳಿಸುತ್ತದೆ.

ದಿನಾಂಕ 31.03.2019 ಕ್ಕೆ ಅಂತ್ಯಗೊಂಡ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ, ಮಂಗಳೂರು ರವರ ಆರ್ಥಿಕ ತಃಖ್ತೆಗಳ ಪೂರಕ ಲೆಕ್ಕಪರಿಶೋಧನೆಯನ್ನು ಕಂಪೆನಿಗಳ ಕಾಯ್ದೆಯ ಕಲಂ ಸಂಖ್ಯೆ 143(6)(ಎ) ಯ ರೀತ್ಯಾ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲಕರ ಪರವಾಗಿ ನಾನು ನಡೆಸಿರುತ್ತೇನೆ. ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಲೆಕ್ಕೀಕರಿಸಿದ ದಾಖಲೆಗಳ ಸಂಪರ್ಕವಿಲ್ಲದೆ ಸ್ವತಂತ್ರವಾಗಿ ನಡೆಸಲಾಗಿರುತ್ತದೆ ಮತ್ತು ಪ್ರಧಾನವಾಗಿ ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪೆನಿಯ ಸಿಬ್ಬಂದಿಯವರ ವಿಚಾರಣೆಗಳಿಗೆ ಮತ್ತು ಆಯ್ದ ಕೆಲವು ಲೆಕ್ಕಪತ್ರಗಳ ಪರಿವೀಕ್ಷಣೆಗೆ ಸೀಮಿತವಾಗಿದೆ.

ಆರ್ಥಿಕ ತಖ್ತೇಃಗಳ ಮೇಲಿನ ಟಿಪ್ಪಣಿ ಸಂಖ್ಯೆ 47 ರಲ್ಲಿ ಸೂಚಿಸಿರುವಂತೆ, ಪೂರಕ ಲೆಕ್ಕ ಪರಿಶೋಧನೆಯಲ್ಲಿ ಎತ್ತಿ ತೋರಿಸಲಾದ ನನ್ನ ಲೆಕ್ಕಪರಿಶೋಧನಾ ವೀಕ್ಷಣೆಗನುಗುಣವಾಗಿ ಆಡಳಿತ ವರ್ಗದಿಂದ ಆರ್ಥಿಕ ತಃಖ್ತೆಗಳಲ್ಲಿ ಪರಿಷ್ಕರಣೆಯನ್ನು ಮಾಡಲಾಗಿರುವುದರಿಂದ, ಕಂಪೆನಿಗಳ ಕಾಯ್ದೆ 2013ರ, ಕಲಂ 143(6)(ಬಿ)ಯ ರೀತ್ಯಾ, ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಯ ಮೇಲೆ ನನಗೆ ಇನ್ನು ಯಾವುದೇ ಮುಂದುವರಿದ ಅಥವಾ ಪೂರಕ ಅಭಿಪ್ರಾಯ ನೀಡಲು ಇರುವುದಿಲ್ಲ.

ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ
ಪರವಾಗಿ ಹಾಗೂ ಅವರ ಹೆಸರಲ್ಲಿ,

ಸಹಿ/–
(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)
ಮಹಾ ಲೇಖಪಾಲರು
(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕ ಪರಿಶೋಧನೆ)
ಕರ್ನಾಟಕ, ಬೆಂಗಳೂರು

ಸ್ಥಳ: ಬೆಂಗಳೂರು
ದಿನಾಂಕ: 24.09.2019

31 ಮಾರ್ಚ್ 2019 ರಲ್ಲಿ ಇದ್ದಂತೆ ಆಸ್ತಿ – ಹೊಣೆ ಪಟ್ಟಿ

(₹ ಲಕ್ಷಗಳಲ್ಲಿ)

ಕ್ರ ಸಂ.	ವಿವರಗಳು	ಟಿಪ್ಪಣಿ ಸಂಖ್ಯೆ	ಮಾರ್ಚ್ 31, 2019ರಲ್ಲಿದ್ದಂತೆ (ಇಂಡ್ ಎ.ಎಸ್)	ಮಾರ್ಚ್ 31, 2018ರಲ್ಲಿದ್ದಂತೆ (ಇಂಡ್ ಎ.ಎಸ್)
	ಆಸ್ತಿಗಳು			
I	**ನಾಚಾಲ್ತಿ ಆಸ್ತಿಗಳು**			
	(ಎ) ಆಸ್ತಿ, ಸ್ಥಾವರ ಮತ್ತು ಸಲಕರಣೆಗಳು	5	1,89,480.86	1,50,886.55
	(ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	6	49,698.97	17,705.56
	(ಸಿ) ಅಭಿವೃದ್ಧಿಯಲ್ಲಿರುವ ಸ್ಪರ್ಶಾತೀತ ಆಸ್ತಿಗಳು	7	1,006.81	776.36
	(ಡಿ) ಆರ್ಥಿಕ ಆಸ್ತಿಗಳು			
	(i) ಹೂಡಿಕೆಗಳು	8	251.00	251.00
	(ii) ಸಾಲಗಳು	9	801.62	728.65
	(iii) ಇತರೆ ಆರ್ಥಿಕ ಆಸ್ತಿಗಳು	10	12,301.74	12,301.74
	(ಇ) ನಾಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ)	11	3,187.88	2,883.36
	(ಎಫ್) ಇತರೆ ನಾಚಾಲ್ತಿ ಆಸ್ತಿಗಳು	12	6,577.93	20,345.80
	ಒಟ್ಟು ನಾಚಾಲ್ತಿ ಆಸ್ತಿಗಳು (I)		**2,63,306.81**	**2,05,879.02**
II	**ಚಾಲ್ತಿ ಆಸ್ತಿಗಳು**			
	(ಎ) ಸರಕುಗಳು ಮತ್ತು ಬಿಡಿಭಾಗಗಳು	13	5,851.89	3,157.45
	(ಬಿ) ಆರ್ಥಿಕ ಆಸ್ತಿಗಳು			
	(i) ವ್ಯಾಪಾರ ಸಂಬಂಧ ಬರತಕ್ಕವುಗಳು	14	40,935.32	39,452.68
	(ii) ನಗದು ಮತ್ತು ನಗದು ಸಮಾನಗಳು	15	6,370.13	3,356.79
	(iii) ಮೇಲಿನ (ii) ನ್ನು ಹೊರತುಪಡಿಸಿ ಇತರ ಬ್ಯಾಂಕ್ ಶಿಲ್ಕುಗಳು	16	1,020.34	6.84
	(iv) ಸಾಲಗಳು	17	112.58	116.50
	(v) ಇತರೆ ಆರ್ಥಿಕ ಆಸ್ತಿಗಳು	18	1,42,191.87	1,23,190.11
	(ಸಿ) ಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ)	19	568.52	265.73
	(ಡಿ) ಇತರೆ ಚಾಲ್ತಿ ಆಸ್ತಿಗಳು	20	232.79	197.44
	ಉಪ ಮೊತ್ತ		**1,97,283.44**	**1,69,743.54**
	ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು	21	523.87	575.37
	ಒಟ್ಟು ಚಾಲ್ತಿ ಆಸ್ತಿಗಳು (II)		**1,97,807.31**	**1,70,318.91**
	ಒಟ್ಟು ಆಸ್ತಿಗಳು (I+II)		**4,61,114.12**	**3,76,197.93**
III	ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿಗಳು – ಖರ್ಚು ಶಿಲ್ಕು	22	63,552.22	91,190.10
	ಒಟ್ಟು ಆಸ್ತಿಗಳು ಮತ್ತು ನಿಯಂತ್ರಣಾ ಆಸ್ತಿ ಖಾತೆಗಳ ಶಿಲ್ಕುಗಳು (I+II+III)		**5,24,666.34**	**4,67,388.03**
	ಷೇರು ಬಂಡವಾಳ ಹಾಗೂ ಹೊಣೆಗಾರಿಕೆಗಳು			
I	**ಈಕ್ವಿಟಿ**			
	(ಎ) ಈಕ್ವಿಟಿ ಷೇರು ಬಂಡವಾಳ	23	48,182.02	35,807.02
	(ಬಿ) ಇತರೆ ಈಕ್ವಿಟಿ	24	28,404.18	25,164.48
	ಒಟ್ಟು ಈಕ್ವಿಟಿ (I)		**76,586.20**	**60,971.50**
II	**ಹೊಣೆಗಾರಿಕೆಗಳು**			
	ನಾಚಾಲ್ತಿ ಹೊಣೆಗಾರಿಕೆಗಳು			
	(ಎ) ಆರ್ಥಿಕ ಹೊಣೆಗಾರಿಕೆಗಳು			
	(i) ಸಾಲಗಳು	25	73,212.35	59,895.76
	(ii) ವ್ಯಾಪಾರ ಸಂಬಂಧಿ ಕೊಡತಕ್ಕವುಗಳು	26	57,961.02	60,381.36
	(ii) ಇತರೆ ಆರ್ಥಿಕ ಹೊಣೆಗಾರಿಕೆಗಳು	27	1,22,506.78	1,07,895.15
	(ಬಿ) ಅವಕಾಶಗಳು	28	5,211.40	5,240.86
	(ಸಿ) ಮುಂದೂಡಿದ ಆದಾಯ	29	40,224.62	20,565.60
	(ಡಿ) ಇತರೆ ನಾಚಾಲ್ತಿ ಹೊಣೆಗಾರಿಕೆಗಳು	30	48.03	48.49
	ಒಟ್ಟು ಇತರೆ ನಾಚಾಲ್ತಿ ಹೊಣೆಗಾರಿಕೆಗಳು (II)		**2,99,164.20**	**2,54,027.22**
III	**ಚಾಲ್ತಿ ಹೊಣೆಗಾರಿಕೆಗಳು**			
	(ಎ) ಆರ್ಥಿಕ ಹೊಣೆಗಾರಿಕೆಗಳು			
	(i) ಸಾಲಗಳು	31	35,489.26	31,418.72
	(ii) ವ್ಯಾಪಾರ ಸಂಬಂಧಿ ಕೊಡತಕ್ಕವುಗಳು	32	22,486.82	27,052.54
	(iii) ಇತರೆ ಆರ್ಥಿಕ ಹೊಣೆಗಾರಿಕೆಗಳು	33	72,830.48	79,207.24
	(ಬಿ) ಇತರೆ ಚಾಲ್ತಿ ಹೊಣೆಗಾರಿಕೆಗಳು	34	14,629.54	13,164.55
	(ಸಿ) ಅವಕಾಶಗಳು	35	1,823.47	961.50
	(ಡಿ) ಮುಂದೂಡಿದ ಆದಾಯ	29	1,656.37	584.76
	ಒಟ್ಟು ಚಾಲ್ತಿ ಹೊಣೆಗಾರಿಕೆಗಳು (III)		**1,48,915.94**	**1,52,389.31**
	ಒಟ್ಟು ಹೊಣೆಗಾರಿಕೆಗಳು		**4,48,080.14**	**4,06,416.53**
	ಒಟ್ಟು ಷೇರು ಬಂಡವಾಳ ಹಾಗೂ ಹೊಣೆಗಾರಿಕೆಗಳು		**5,24,666.34**	**4,67,388.03**

ಟಿಪ್ಪಣಿ ಸಂಖ್ಯೆ 1 ರಿಂದ 48 ಗಳು ಆರ್ಥಿಕ ತಃಖ್ತೆಗಳ ಅವಿಭಾಜ್ಯ ಅಂಗಗಳಾಗಿರುತ್ತವೆ.

ಸಹಿ/–	ಸಹಿ/–	ಸಹಿ/–	ಸಹಿ/–
(ಪ್ರಭಾತ್ ಜೋಶಿ)	(ಡಿ.ಆರ್. ಶ್ರೀನಿವಾಸ್)	(ರಘುಪ್ರಕಾಶ್ ಎನ್.)	(ಸ್ನೇಹಲ್ ಆರ್. ಭಾ.ಆ.ಸೇ.)
ಕಂಪೆನಿ ಕಾರ್ಯದರ್ಶಿ	ಮುಖ್ಯ ಆರ್ಥಿಕ ಅಧಿಕಾರಿ	ನಿರ್ದೇಶಕರು (ತಾಂತ್ರಿಕ)	ವ್ಯವಸ್ಥಾಪಕ ನಿರ್ದೇಶಕರು

ಸಮದಿನಾಂಕದ ನಮ್ಮ ವರದಿಯನ್ವಯ
ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
ಸಂಸ್ಥೆ ನೋಂ. ಸಂ. 000960 ಎಸ್
ಸಹಿ/–
ಸಿ.ಎ. ಕೆ. ಆರ್. ಸುರೇಶ್
ಪಾಲುದಾರರು
ಮೆಂಬರ್‌ಶಿಪ್ ನಂ. 25453

ಸ್ಥಳ : ಮಂಗಳೂರು
ದಿನಾಂಕ : 19.09.2019

31.03.2019 ರ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟ ತಃಖ್ತೆ

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್, 2019ರ ವರ್ಷಾಂತಕ್ಕೆ (ಇಂಡ್ ಎ.ಎಸ್)	31 ಮಾರ್ಚ್, 2018ರ ವರ್ಷಾಂತಕ್ಕೆ (ಇಂಡ್ ಎ.ಎಸ್)
I	ವ್ಯವಹಾರದಿಂದ ಬಂದ ಕಂದಾಯ	36	3,31,686.13	3,19,034.40
II	ಇತರೆ ಆದಾಯ	37	11,123.92	8,783.17
III	**ಒಟ್ಟು ಆದಾಯ (I + II)**		**3,42,810.05**	**3,27,817.57**
IV	**ವೆಚ್ಚಗಳು**			
	ವಿದ್ಯುತ್ ಖರೀದಿ	38	2,22,303.75	2,50,801.33
	ಸಿಬ್ಬಂದಿ ಸವಲತ್ತುಗಳ ವೆಚ್ಚಗಳು	39	39,240.33	35,567.58
	ಆರ್ಥಿಕ ವೆಚ್ಚಗಳು	40	9,849.68	8,256.05
	ಸವಕಳಿ ಮತ್ತು ಋಣ ಮುಕ್ತತೆಯ ವೆಚ್ಚಗಳು	41	12,569.26	9,038.78
	ಇತರೆ ವೆಚ್ಚಗಳು	42	21,893.61	16,583.00
	ಒಟ್ಟು ವೆಚ್ಚಗಳು (IV)		**3,05,856.63**	**3,20,246.74**
V	**ಅಪವಾದಾತ್ಮಕ ಹಾಗೂ ಅಸಾಧಾರಣ ಅಂಶಗಳ ಮುಂಚಿನ ಲಾಭ (III-IV)**		**36,953.42**	**7,570.83**
VI	ಅಪವಾದಾತ್ಮಕ ಅಂಶಗಳು (ಆದಾಯ)/ವೆಚ್ಚಗಳು (ನಿವ್ವಳ)	43	3,660.00	4,847.86
VII	**ತೆರಿಗೆಯ ಮುಂಚಿನ ಲಾಭ/ನಷ್ಟ (V + VI)**		**33,293.42**	**2,722.97**
VIII	**ತೆರಿಗೆ ವೆಚ್ಚಗಳು**			
	(1) ಚಾಲ್ತಿ ತೆರಿಗೆ	44	1,208.78	478.69
	(2) ಮುಂದೂಡಿದ ತೆರಿಗೆ	-	-	-
	ಕಳೆ: ಕನಿಷ್ಠ ಪರ್ಯಾಯ ತೆರಿಗೆ ಜಮೆಯ ಮೇಲಿನ ಹಕ್ಕುಗಳು		(1,192.44)	(478.69)
	ಒಟ್ಟು ತೆರಿಗೆ ವೆಚ್ಚಗಳು (VIII)		**16.34**	**-**
IX	**ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿ ಖಾತೆಗಳ ಗಣನೆಗೆ ಮುಂಚಿನ ಲಾಭ/(ನಷ್ಟ) (VIII - IX)**		**33,277.08**	**2,722.97**
X	ಲಾಭ/(ನಷ್ಟ) ಗಳಿಗೆ ಸಂಬಂಧಪಟ್ಟ ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿ ಖಾತೆಗಳು	45	(27,637.88)	419.17
XI	**ವಾರ್ಷಿಕ ಲಾಭ ಮತ್ತು ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿ ಖಾತೆಗಳು (IX+X)**		**5,639.20**	**3,142.14**
XII	**ಇತರ ಸಮಗ್ರ ಆದಾಯ**			
	ಎ. (i) ಲಾಭ ಮತ್ತು ನಷ್ಟಗಳಿಗೆ ಮರುವರ್ಗೀಕರಣ ಮಾಡದ ಅಂಶಗಳು		-	-
	(ii) ಲಾಭ ಮತ್ತು ನಷ್ಟಗಳಿಗೆ ಮರುವರ್ಗೀಕರಣ ಮಾಡದ ಅಂಶಗಳ ಮೇಲಿನ ಆದಾಯ ತೆರಿಗೆ		-	-
	ಬಿ. (i) ಲಾಭ ಮತ್ತು ನಷ್ಟಗಳಿಗೆ ಮರುವರ್ಗೀಕರಣ ಮಾಡುವ ಅಂಶಗಳು		-	-
	(ii) ಲಾಭ ಮತ್ತು ನಷ್ಟಗಳಿಗೆ ಮರುವರ್ಗೀಕರಣ ಮಾಡುವ ಅಂಶಗಳ ಮೇಲಿನ ಆದಾಯ ತೆರಿಗೆ		-	-
	ಒಟ್ಟು ಇತರ ಸಮಗ್ರ ಆದಾಯಗಳು (XII)		**-**	**-**
XIII	**ವರ್ಷದ ಒಟ್ಟು ಸಮಗ್ರ ಆದಾಯಗಳು (XI+XII)**		**5,639.20**	**3,142.14**
XIV	**ಷೇರುವಾರು ಗಳಿಕೆ:**			
	ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿ ಖಾತೆ ಶಿಲ್ಕುಗಳ ಗಣನೆಗೆ ಮೊದಲು			
	(1) ಮೂಲ (₹ ಗಳಲ್ಲಿ)		6.74	0.76
	(2) ದುರ್ಬಲ (₹ ಗಳಲ್ಲಿ)		-	0.65
	ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿ ಖಾತೆ ಶಿಲ್ಕುಗಳ ಗಣನೆಗೆ ನಂತರ			
	(1) ಮೂಲ (₹ ಗಳಲ್ಲಿ)		1.14	0.88
	(2) ದುರ್ಬಲ (₹ ಗಳಲ್ಲಿ)		-	0.74

ಸಹಿ/-
(ಪ್ರಭಾತ್ ಜೋಶಿ)
ಕಂಪೆನಿ ಕಾರ್ಯದರ್ಶಿ

ಸಹಿ/-
(ಡಿ.ಆರ್. ಶ್ರೀನಿವಾಸ್)
ಮುಖ್ಯ ಆರ್ಥಿಕ ಅಧಿಕಾರಿ

ಸಹಿ/-
(ರಘುಪ್ರಕಾಶ್ ಎನ್.)
ನಿರ್ದೇಶಕರು (ತಾಂತ್ರಿಕ)

ಸಹಿ/-
(ಸ್ನೇಹಲ್ ಆರ್. ಭಾ.ಆ.ಸೇ.)
ವ್ಯವಸ್ಥಾಪಕ ನಿರ್ದೇಶಕರು

ಸಮದಿನಾಂಕದ ನಮ್ಮ ವರದಿಯನ್ವಯ
ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
ಸಂಸ್ಥೆ ನೋಂ. ಸಂ. 000960 ಎಸ್
ಸಹಿ/-
ಸಿ.ಎ. ಕೆ. ಆರ್. ಸುರೇಶ್
ಪಾಲುದಾರರು
ಮೆಂಬರ್‌ಶಿಪ್ ನಂ. 25453

ಸ್ಥಳ : ಮಂಗಳೂರು
ದಿನಾಂಕ : 19.09.2019

31.03.2019 ವರ್ಷಾಂತ್ಯದಲ್ಲಿರುವಂತೆ ನಗದು ಹರಿವು ಪಟ್ಟಿ (₹ ಲಕ್ಷಗಳಲ್ಲಿ)

ನಂ	ವಿವರಗಳು	ಮಾರ್ಚ್ 31, 2019 ರ ವರ್ಷಾಂತ್ಯಕ್ಕೆ (ಇಂಡ್ ಎ ಎಸ್)		ಮಾರ್ಚ್ 31, 2018ರ ವರ್ಷಾಂತ್ಯಕ್ಕೆ (ಇಂಡ್ ಎ ಎಸ್)	
ಎ	**ಕಾರ್ಯಾಚರಣೆಯಿಂದ ಬಂದ ನಗದು ಹರಿವು**				
	ತೆರಿಗೆ ಹಾಗೂ ಅಸಾಧಾರಣ ಅಂಶಗಳ ಮುಂಚಿನ ಲಾಭ	5,655.54		3,142.14	
	ಹೊಂದಾಣಿಕೆಗಳು:				
	ಸವಕಳಿ	12,569.26		9,038.78	
	ತೆರಿಗೆ ವೆಚ್ಚಗಳು	-		-	
	ಬಡ್ಡಿ ಆದಾಯ	2.33		(25.78)	
	ಲಾಭಾಂಶ ಆದಾಯ	–		-	
	ಪೂರ್ವಪಾವತಿಗಳ ಋಣಮುಕ್ತತೆ	9.01		21.37	
	ಆಸ್ತಿಗಳ ಮಾರಾಟದಿಂದ ಲಾಭ/ನಷ್ಟ	146.22		129.29	
	ಬಡ್ಡಿ ವೆಚ್ಚಗಳು	9,849.68		8,256.05	
	ದುಡಿಯುವ ಬಂಡವಾಳದ ಬದಲಾವಣೆಗಿಂತ ಮುಂಚಿನ ವ್ಯಾವಹಾರಿಕ ಲಾಭ		**28,232.03**		**20,561.85**
	ಸಾಮಾಗ್ರಿ ಬೆಲೆ ವ್ಯತ್ಯಾಸದ ಮೀಸಲುಗಳಲ್ಲಿನ ಬದಲಾವಣೆ (ಇತರ ಈಕ್ವಿಟಿಯಲ್ಲಿನ ಬದಲಾವಣೆ)	3,409.17		(69.39)	
	ನಾಚಾಲ್ತಿ ಅವಕಾಶಗಳಲ್ಲಿನ ಇಳಿಕೆ(+)/ಏರಿಕೆ(–)	(29.46)		1,054.03	
	ವ್ಯಾಪಾರ ಸಂಬಂಧ ಬರತಕ್ಕವುಗಳ ಮೊತ್ತದಲ್ಲಿನ ಇಳಿಕೆ(+)/ಏರಿಕೆ(–)	(1,482.64)		(7,847.97)	
	ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿ ಖಾತೆಗಳಲ್ಲಿನ ಇಳಿಕೆ(+)/ಏರಿಕೆ(–)	27,637.88		(419.17)	
	ಸಾಲಗಳಲ್ಲಿನ ಇಳಿಕೆ(+)/ಏರಿಕೆ(–)	3.92		0.83	
	ಆರ್ಥಿಕ/ಇತರೆ ಚಾಲ್ತಿ ಆಸ್ತಿಗಳಲ್ಲಿನ ಇಳಿಕೆ(+)/ಏರಿಕೆ(–)	(18,131.12)		11,027.99	
	ಮಾರಾಟಕ್ಕಿರುವ ಇತರೆ ನಾಚಾಲ್ತಿ ಆಸ್ತಿಗಳಲ್ಲಿನ ಇಳಿಕೆ (+)/ಏರಿಕೆ(–)	(94.72)		(253.86)	
	ಸರಕು ಮತ್ತು ಬಿಡಿಭಾಗಗಳ ಮೊತ್ತದಲ್ಲಿನ ಇಳಿಕೆ(+)/ಏರಿಕೆ(–)	(2,694.44)		614.96	
	ಅಲ್ಪಾವಧಿ ಸಾಲಗಳಲ್ಲಿ ಏರಿಕೆ(+)/ಇಳಿಕೆ(–)	4,070.54		5,006.58	
	ವ್ಯಾಪಾರ ಸಂಬಂಧಿ ಕೊಡತಕ್ಕ ಮೊತ್ತಗಳಲ್ಲಿನ ಏರಿಕೆ(+)/ಇಳಿಕೆ(–)	(6,986.06)		(36,101.06)	
	ಅವಕಾಶಗಳ ಮೊತ್ತದಲ್ಲಿನ ಏರಿಕೆ(+)/ಇಳಿಕೆ(–)	861.98		70.65	
	ಆರ್ಥಿಕ/ಇತರೆ ಚಾಲ್ತಿ ಹೊಣೆಗಾರಿಕೆಯಲ್ಲಿನ ಏರಿಕೆ(+)/ಇಳಿಕೆ(–)	(4,911.78)	1,653.26	22,312.47	(4,603.95)
	ಕಾರ್ಯ ಚಟುವಟಿಕೆಗಳಿಂದ ಬಂದ ನಗದು		**29,885.29**		**15,957.90**
	ಆದಾಯ ತೆರಿಗೆ ಪಾವತಿ	1,208.78		478.69	
	ಅಸಾಧಾರಣ ಅಂಶಗಳ ಮುಂಚಿನ ನಗದು ಹರಿವು		**28,676.51**		**15,479.21**
	ಅಸಾಧಾರಣ ಅಂಶಗಳು (ನಿರ್ಧಿಷ್ಟ ಸ್ವಭಾವದೊಂದಿಗೆ)		-		-
	ಕಾರ್ಯಾಚರಣೆಯಿಂದ ಬಂದ ನಿವ್ವಳ ನಗದು (ಎ)		**28,676.51**		**15,479.21**
ಬಿ	**ಹೂಡಿಕೆ ಚಟುವಟಿಕೆಗಳಿಂದ ನಗದು ಹರಿವು**				
	ಸ್ಪರ್ಶವೇದ್ಯ ಸ್ಥಿರಾಸ್ತಿಗಳ ಖರೀದಿ	(51,163.57)		(39,903.05)	
	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿನ ಏರಿಕೆ(–)/ ಇಳಿಕೆ(+)	(31,993.41)		(3,049.82)	
	ಸ್ಪರ್ಶಾತೀತ ಸ್ಥಿರಾಸ್ತಿಗಳ ಖರೀದಿ	(230.46)		(350.95)	
	ಇತರೆ ನಾಚಾಲ್ತಿ ಆಸ್ತಿಗಳಲ್ಲಿನ ಏರಿಕೆ(–)/ಇಳಿಕೆ(+)	13,454.34		(9,114.62)	
	ಸ್ವೀಕೃತಿಯಾದ ಬಡ್ಡಿ	(2.33)		25.78	
	ಹೂಡಿಕೆ ಚಟುವಟಿಕೆಗಳಿಂದ ಬಂದ ನಿವ್ವಳ ನಗದು (ಬಿ)		**(69,935.43)**		**(52,392.66)**
ಸಿ	**ಆರ್ಥಿಕ ಚಟುವಟಿಕೆಗಳಿಂದ ಬಂದ ನಗದು ಹರಿವು**				
	ಆರ್ಥಿಕ/ಇತರೆ ನಾಚಾಲ್ತಿ ಹೊಣೆಗಾರಿಕೆಯಲ್ಲಿನ ಏರಿಕೆ(+)/ಇಳಿಕೆ(–)	14,611.16		7,314.11	
	ಇತರೆ ದೀರ್ಘಾವಧಿ ಸಾಲಗಳಲ್ಲಿನ ಏರಿಕೆ(–)/ ಇಳಿಕೆ(+)	(72.97)		(45.59)	
	ಷೇರು ಬಂಡವಾಳ ನೀಡಿಕೆಯಿಂದ ಬಂದ ನಗದು	6,550.00		9,113.00	
	ಇತರೆ ದೀರ್ಘಾವಧಿ ಸಾಲಗಳಲ್ಲಿನ ಏರಿಕೆ(+)/ಇಳಿಕೆ(–)	13,316.60		13,853.12	
	ಮುಂದೂಡಿದ ಆದಾಯ	20,730.64		11,039.93	
	ಪಾವತಿಸಿದ ಬಡ್ಡಿ	(9,849.68)		(8,256.05)	
	ಪಾವತಿಸಿದ ಲಾಭಾಂಶ	-		-	
	ಲಾಭಾಂಶ ಹಂಚಿಕೆಯ ತೆರಿಗೆ	-		-	
	ನೌಕರರಿಗೆ ಷೇರು ನೀಡುವಿಕೆಯಿಂದ ಬಂದ ಹಣ	-		-	
	ಆರ್ಥಿಕ ಚಟುವಟಿಕೆಗಳಲ್ಲಿ ಬಳಕೆಯಾದ ನಿವ್ವಳ ನಗದು (ಸಿ)		**45,285.75**		**33,018.52**
	ನಗದು ಹಾಗೂ ನಗದು ಸಮಾನಗಳಲ್ಲಿನ ನಿವ್ವಳ ಏರಿಕೆ(+)/ ಇಳಿಕೆ (–) (ಎ+ಬಿ+ಸಿ)		**4,026.84**		**(3,894.93)**
	ಆರಂಭಿಕ ನಗದು ಮತ್ತು ನಗದು ಸಮಾನಗಳು		**3,363.63**		**7,258.56**
	ಅಂತಿಮ ನಗದು ಮತ್ತು ನಗದು ಸಮಾನಗಳು		**7,390.47**		**3,363.63**

ಸಹಿ/–	**ಸಹಿ/–**	**ಸಹಿ/–**	**ಸಹಿ/–**
(ಪ್ರಭಾತ್ ಜೋಶಿ)	**(ಡಿ.ಆರ್. ಶ್ರೀನಿವಾಸ್)**	**(ರಘುಪ್ರಕಾಶ್ ಎನ್.)**	**(ಸ್ನೇಹಲ್ ಆರ್. ಭಾ.ಆ.ಸೇ.)**
ಕಂಪೆನಿ ಕಾರ್ಯದರ್ಶಿ	**ಮುಖ್ಯ ಆರ್ಥಿಕ ಅಧಿಕಾರಿ**	**ನಿರ್ದೇಶಕರು (ತಾಂತ್ರಿಕ)**	**ವ್ಯವಸ್ಥಾಪಕ ನಿರ್ದೇಶಕರು**

ಸಮದಿನಾಂಕದ ನಮ್ಮ ವರದಿಯನ್ವಯ
ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
ಸಂಸ್ಥೆ ನೋಂ. ಸಂ. 000960 ಎಸ್
ಸಹಿ/–
ಸಿ.ಎ. ಕೆ. ಆರ್. ಸುರೇಶ್
ಪಾಲುದಾರರು
ಮೆಂಬರ್‌ಶಿಪ್ ನಂ. 25453

ಸ್ಥಳ : ಮಂಗಳೂರು
ದಿನಾಂಕ : 19.09.2019

ಮಾರ್ಚ್ 2019 ರಂದು ಅಂತ್ಯಗೊಂಡ ವರ್ಷಕ್ಕೆ ಬಂಡವಾಳಗಳಲ್ಲಿನ ಬದಲಾವಣೆಯ ವಿವರಣಾ ಪಟ್ಟಿ

ಎ. ಈಕ್ವಿಟಿ ಷೇರು ಬಂಡವಾಳ

ವಿವರಗಳು	₹ ಲಕ್ಷಗಳಲ್ಲಿ
ಮಾರ್ಚ್ 31, 2018 ರ ಅಂತ್ಯಕ್ಕೆ ಇರುವ ಶಿಲ್ಕು	**35,807.02**
ಆರ್ಥಿಕ ವರ್ಷ 2018-19ನೇ ಸಾಲಿನ ಈಕ್ವಿಟಿ ಷೇರು ಬಂಡವಾಳಗಳಲ್ಲಿ ಆದ ಬದಲಾವಣೆ	12,375.00
ಮಾರ್ಚ್ 31, 2019 ರ ಅಂತ್ಯಕ್ಕೆ ಇರುವ ಶಿಲ್ಕು	**48,182.02**

ಬಿ. ಇತರೆ ಈಕ್ವಿಟಿ

ವಿವರಗಳು	ಹಂಚಿಕೆಗೆ ಬಾಕಿ ಇರುವ ಷೇರು ಹಣ	ಮೀಸಲು ಮತ್ತು ಮಿಗತೆ				ಒಟ್ಟು
		ನೆಟ್‌ವರ್ತ್‌ಗೆ ಪ್ರಸ್ತಾವಿತ ಹೊಂದಾಣಿಕೆ	ಬಂಡವಾಳ ಮೀಸಲು	ಸಾಮಾಗ್ರಿ ಬೆಲೆ ವ್ಯತ್ಯಾಸದ ಮೀಸಲು	ಉಳಿಸಿಕೊಂಡ ಗಳಿಕೆ	
ಏಪ್ರಿಲ್ 1, 2018 ರ ಅಂತ್ಯಕ್ಕೆ ಇರುವ ಶಿಲ್ಕು	**10,513.00**	**-2,896.00**	**132.66**	**4,271.66**	**13,143.16**	**25,164.48**
ಹೊಂದಾಣಿಕೆಗಳು:						
ಹಿಂದಿನ ಅವಧಿಯ ಆದಾಯ/(ವೆಚ್ಚಗಳು)	-	-	-	-		-
ವರದಿ ಮಾಡಲಾದ ಅವಧಿಯ ಆರಂಭದಲ್ಲಿ ಮರುಸ್ಥಾಪಿಸಿದ ಶಿಲ್ಕು	**10,513.00**	**-2,896.00**	**132.66**	**4,271.66**	**13,143.16**	**25,164.48**
ವರ್ಷದಲ್ಲಿ ಸ್ವೀಕೃತಿಯಾದ ಹಂಚಿಕೆಗೆ ಬಾಕಿ ಇರುವ ಷೇರು ಹಣ	**6,550.00**	**-**	**-**	**-**	**-**	**6,550.00**
ವರ್ಷದ ಆದಾಯ	-	-	-	-	5,639.20	5,639.20
ವರ್ಷಾವಧಿಯಲ್ಲಿ ವರ್ಗಾವಣೆ	-	3,660.00	-		-	3,660.00
ಬಿಡುಗಡೆಮಾಡಿದ ಈಕ್ವಿಟಿ ಷೇರು ಬಂಡವಾಳ	(12,375.00)					(12,375.00)
ಪ್ರಸಕ್ತ ವರ್ಷದಲ್ಲಿ ಬಳಸಿಕೊಂಡಿರುವುದು	-		-	(234.50)	-	(234.50)
ಮಾರ್ಚ್ 31, 2019 ರ ಅಂತ್ಯಕ್ಕೆ ಇರುವ ಶಿಲ್ಕು	**4,688.00**	**764.00**	**132.66**	**4,037.16**	**18,782.36**	**28,404.18**

ಸಹಿ/-
(ಪ್ರಭಾತ್ ಜೋಶಿ)
ಕಂಪೆನಿ ಕಾರ್ಯದರ್ಶಿ

ಸಹಿ/-
(ಡಿ.ಆರ್. ಶ್ರೀನಿವಾಸ್)
ಮುಖ್ಯ ಆರ್ಥಿಕ ಅಧಿಕಾರಿ

ಸಹಿ/-
(ರಘುಪ್ರಕಾಶ್ ಎನ್.)
ನಿರ್ದೇಶಕರು (ತಾಂತ್ರಿಕ)

ಸಹಿ/-
(ಸ್ನೇಹಲ್ ಆರ್. ಭಾ.ಆ.ಸೇ.)
ವ್ಯವಸ್ಥಾಪಕ ನಿರ್ದೇಶಕರು

ಸಮದಿನಾಂಕದ ನಮ್ಮ ವರದಿಯನ್ವಯ
ಗೋಪಾಲಯ್ಯರ್ & ಸುಬ್ರಮಣ್ಯನ್
ಚಾರ್ಟರ್ಡ್ ಅಕೌಂಟೆಂಟ್ಸ್‌ರವರ ಪರವಾಗಿ
ಸಂಸ್ಥೆ ನೋಂ. ಸಂ. 000960 ಎಸ್
ಸಹಿ/-
ಸಿ.ಎ. ಕೆ. ಆರ್. ಸುರೇಶ್
ಪಾಲುದಾರರು
ಮೆಂಬರ್‌ಶಿಪ್ ನಂ. 25453

ಸ್ಥಳ : ಮಂಗಳೂರು
ದಿನಾಂಕ : 19.09.2019

ದಿನಾಂಕ 31.03.2019 ರ ಅಂತ್ಯಕ್ಕೆ ಕೊನೆಗೊಂಡ ಹಣಕಾಸು ವಿವರಣಾ ಪಟ್ಟಿಗಳ ಮೇಲಿನ ಟಿಪ್ಪಣಿಗಳು

1) **ಕಾರ್ಪೋರೇಟ್ ಮಾಹಿತಿಗಳು:**

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯು ಕರ್ನಾಟಕ ರಾಜ್ಯದ ಒಂದು ಪ್ರಮುಖ ವಿದ್ಯುತ್ ವಿತರಣಾ ಕಂಪೆನಿಯಾಗಿರುತ್ತದೆ ಮತ್ತು ಇದು ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ. ಕಂಪೆನಿಯು ಕರ್ನಾಟಕದ ನಾಲ್ಕು ಕಂದಾಯ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಯ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತದೆ. ಕಂಪೆನಿಯು 1956ರ ಕಂಪೆನಿಗಳ ಕಾಯ್ದೆಯ ಅವಕಾಶಗಳಡಿ ನೋಂದಾಯಿಸಲ್ಪಟ್ಟಿರುತ್ತದೆ. ಈ ಕಂಪೆನಿಯು ವಿದ್ಯುಚ್ಛಕ್ತಿ ಕಾಯ್ದೆ 2003ರ ಕಲಂ 14 ರಡಿಯಲ್ಲಿ ವಿತರಣಾ ಪರವಾನಗಿದಾರನಾಗಿರುತ್ತದೆ. ಇದರ ನೋಂದಾಯಿತ ಕಛೇರಿಯು ಭಾರತದಲ್ಲಿ 'ಮೆಸ್ಕಾಂ ಭವನ', ಕಾವೂರು ಅಡ್ಡ ರಸ್ತೆ, ಬಿಜೈ, ಮಂಗಳೂರು – 575004 ಇಲ್ಲಿ ಸ್ಥಾಪಿತವಾಗಿ ನಿಗಮಿತಗೊಂಡಿದೆ.

ಇದಕ್ಕೂ ಮೊದಲು ಕರ್ನಾಟಕ ರಾಜ್ಯದ ವಿದ್ಯುತ್ ಕ್ಷೇತ್ರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ನಿರ್ವಹಿಸಲ್ಪಡುತ್ತಿತ್ತು. ಬೆಳೆಯುತ್ತಿರುವ ಆರ್ಥಿಕತೆಯ ಅಗತ್ಯತೆಗಳಿಗೆ ಅನುಗುಣವಾಗಿ ಕರ್ನಾಟಕ ರಾಜ್ಯವು 1999 ನೇ ವರ್ಷದಲ್ಲಿ ವಿದ್ಯುತ್ ಕ್ಷೇತ್ರದ ಸುಧಾರಣಾ ಪ್ರಕ್ರಿಯೆಯನ್ನು ಆರಂಭಿಸಿತು. ಮೊದಲನೇ ಹಂತವಾಗಿ 1999 ನೇ ವರ್ಷದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ (ಕವಿಪ್ರನಿನಿ) ಹಾಗೂ ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ (ವಿವಿಎನ್‌ಎಲ್) ಗಳೆಂಬ ಎರಡು ಕಂಪೆನಿಗಳಾಗಿ ವಿಭಾಗಿಸಲಾಯಿತು. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವನ್ನೂ ಸಹ 1999 ನೇ ವರ್ಷದಲ್ಲಿ ಸ್ಥಾಪಿಸಲಾಯಿತು. ಸುಧಾರಣಾ ಪ್ರಕ್ರಿಯೆಯ ಮುಂದಿನ ಹಂತದಲ್ಲಿ ಕವಿಪ್ರನಿನಿಯು ನಿರ್ವಹಿಸುತ್ತಿದ್ದ ವಿದ್ಯುತ್ ವಿತರಣಾ ಚಟುವಟಿಕೆಯನ್ನು ಬೇರ್ಪಡಿಸಿ ಜೂನ್ 2002 ರಲ್ಲಿ ನಾಲ್ಕು ವಿದ್ಯುತ್ ವಿತರಣಾ ಕಂಪೆನಿಗಳನ್ನು ಸ್ಥಾಪಿಸಲಾಯಿತು. ಈ ರೀತಿ ಸ್ಥಾಪಿಸಲಾದ ವಿದ್ಯುತ್ ವಿತರಣಾ ಕಂಪೆನಿಗಳಲ್ಲಿ ಮಂಗಳೂರಿನಲ್ಲಿ ಕೇಂದ್ರ ಕಛೇರಿಯನ್ನು ಹೊಂದಿರುವ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯೂ ಒಂದಾಗಿರುತ್ತದೆ. ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯನ್ನು ಏಪ್ರಿಲ್ 2005ರಲ್ಲಿ ಮತ್ತೊಮ್ಮೆ ವಿಭಾಗಿಸಿ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮವನ್ನು ಸ್ಥಾಪಿಸಲಾಯಿತು.

2. **ಲೆಕ್ಕಾಚಾರದ ಪ್ರಮುಖ ಕಾರ್ಯನೀತಿಗಳು**

2.1. ಅನುಸರಣಾ ಸಂಬಂಧಿ ಹೇಳಿಕೆಗಳು:

ಕಂಪೆನಿಗಳ (ಭಾರತೀಯ ಲೆಖಾಮಾನದಂಡಗಳು) ನಿಯಮ 2015 (ತಿದ್ದುಪಡಿ ಮಾಡಲಾದ) ಗಳಡಿಯಲ್ಲಿ ರೂಪಿಸಲಾದ ಭಾರತೀಯ ಲೆಖಾಮಾನದಂಡಗಳನ್ನು ("ಇಂಡ್ ಎ.ಎಸ್."ಎಂದು ಕರೆಯಲಾದ), ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ದಿನಾಂಕ 16ನೇ ಫೆಬ್ರವರಿ 2015 ರ ಅಧಿಸೂಚನೆಯ ಅನುಸಾರ, ದಿನಾಂಕ 01.04.2017 ರಿಂದ ಅನ್ವಯಾಗುವಂತೆ ಕಂಪೆನಿಯು ಅಳವಡಿಸಿಕೊಂಡಿದೆ.

ಭಾರತೀಯ ಲೆಖಾಮಾನದಂಡಗಳಿಗೆ ಪರಿವರ್ತನಾ ದಿನಾಂಕವು 01.04.2016 ಆಗಿರುತ್ತದೆ.

ಭಾರತೀಯ ಲೆಖಾಮಾನ ದಂಡಗಳಿಗೆ ಸರಿಹೊಂದುವಂತೆ, ಹಿಂದಿನ ವರ್ಷಗಳ ಅಂಕಿಅಂಶಗಳ ಪ್ರಸ್ತುತಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ.

ಕಂಪೆನಿಯು ದಿನಾಂಕ 31.03.2017 ರವರೆಗೆ, ಭಾರತದಲ್ಲಿ ಚಾಲ್ತಿಯಲ್ಲಿರುವ, ಸಾಮಾನ್ಯವಾಗಿ ಸ್ವೀಕರಿಸಿದ ಹಣಕಾಸಿನ ತತ್ವಗಳು (Previous GAAP), 2013ರ ಕಂಪನಿಗಳ ಕಾಯ್ದೆ ಮತ್ತು ಕಂಪೆನಿಗಳ (ಲೆಕ್ಕಗಳ) ನಿಯಮಗಳು 2014 ಗಳಡಿಯಲ್ಲಿ ಹೊರಡಿಸಲಾದ ಲೆಖಾ ಮಾನದಂಡಗಳು ಹಾಗೂ ಅನ್ವಯವಾಗುವಷ್ಟರ ಮಟ್ಟಿಗೆ ವಿದ್ಯುಚ್ಛಕ್ತಿ ಕಾಯಿದೆ 2003 ಗಳ ಅವಕಾಶಗಳಿಗೆ ಹೊಂದಿಕೆಯಾಗುವಂತೆ, ಪ್ರಾಪ್ತವಾಗುವ ಆಧಾರದ ಮೇಲೆ ಗುರುತಿಸಿ, ಐತಿಹಾಸಿಕ ವೆಚ್ಚಗಳ ಸಮಾವೇಶದ ನೆಲೆಗಟ್ಟಿನಲ್ಲಿ ಲೆಕ್ಕಪತ್ರಗಳನ್ನು ಸಿದ್ದಪಡಿಸಿರುತ್ತದೆ.

ಭಾರತೀಯ ಲೆಖಾ ಮಾನದಂಡ 101 –"ಪ್ರಥಮ ಬಾರಿಗೆ ಭಾರತೀಯ ಲೆಖಾ ಮಾನದಂಡಗಳ ಅನ್ವಯಿಸುವಿಕೆ" ರ ಆವಶ್ಯಕತೆಯಂತೆ ದಿನಾಂಕ 31.03.2017 ಹಾಗೂ ದಿನಾಂಕ 01.04.2016 ಗಳಲ್ಲಿದ್ದಂತೆ ಹಿಂದಿನ, ಸಾಮಾನ್ಯವಾಗಿ ಸ್ವೀಕರಿಸಿದ ಹಣಕಾಸಿನ ತತ್ವಗಳ (Previous GAAP) ಪ್ರಕಾರ ಮತ್ತು ಇಂಡ್ ಎಎಸ್ ಪ್ರಕಾರ ಷೇರುದಾರರ ಈಕ್ವಿಟಿಯ ಸಮನ್ವಯಪಟ್ಟಿ ಮತ್ತು ದಿನಾಂಕ 31.03.2017ರ ಅಂತ್ಯಕ್ಕೆ ಇರುವಂತೆ ಹಿಂದಿನ, ಸಾಮಾನ್ಯವಾಗಿ ಸ್ವೀಕರಿಸಿದ ಹಣಕಾಸಿನ ತತ್ವಗಳ (Previous GAAP) ಪ್ರಕಾರ ತೆರಿಗೆ ಪೂರ್ವ ಲಾಭ/ನಷ್ಟ ಮತ್ತು ಭಾರತೀಯ ಲೆಖಾಮಾನ ದಂಡಗಳ ಪ್ರಕಾರ ಒಟ್ಟು ಸಮಗ್ರ ಆದಾಯಗಳ ಸಮನ್ವಯಪಟ್ಟಿಗಳನ್ನು ಕಂಪೆನಿಯು ಪ್ರಸ್ತುತಿಪಡಿಸಿದೆ.

2.2. ಹಣಕಾಸು ವಿವರಣಾ ಪಟ್ಟಿ ತಯಾರಿಕೆಯ ಆಧಾರಗಳು :

ಲೆಕ್ಕನೀತಿಗಳಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸಲ್ಪಟ್ಟಿರುವುದನ್ನು ಹೊರತುಪಡಿಸಿ, ಹಣಕಾಸು ವಿವರಣಾ ಪಟ್ಟಿಗಳನ್ನು, ಕಂಪೆನಿಗಳ (ಭಾರತೀಯ ಲೆಖಾಮಾನದಂಡಗಳು) ನಿಯಮ 2015 ಮತ್ತು ಹಣಕಾಸು ವಿವರಣಾ ಪಟ್ಟಿಗಳಿಗೆ ಸಂಬಂಧಪಟ್ಟಂತೆ ಸದರಿ ನಿಯಮಗಳಿಗೆ ತದನಂತರದಲ್ಲಿ ಮಾಡಲಾದ ತಿದ್ದುಪಡಿಗಳನ್ನೂ ಪರಿಗಣಿಸಿ ಕಾರ್ಪೋರೇಟ್ ವ್ಯವಹಾರಗಳ

ಸಚಿವಾಲಯವು ಹೊರಡಿಸಿರುವ ಭಾರತೀಯ ಲೆಖಾಮಾನದಂಡಗಳು (ಇಂಡ್ ಎಎಸ್) ಮತ್ತು ಅನ್ವಯವಾಗುವಷ್ಟರ ಮಟ್ಟಿಗೆ ವಿದ್ಯುಚ್ಛಕ್ತಿ ಕಾಯಿದೆ 2003 ಗಳ ಅವಕಾಶಗಳಿಗೆ ಹೊಂದಿಕೆಯಾಗುವಂತೆ, ಪ್ರಾಪ್ತವಾಗುವ ಆಧಾರದ ಮೇಲೆ ಗುರುತಿಸಿ ಐತಿಹಾಸಿಕ ವೆಚ್ಚಗಳ ಸಮಾವೇಶದ ನೆಲೆಗಟ್ಟಿನಲ್ಲಿ ಕಂಪೆನಿಯು ಲೆಕ್ಕಪತ್ರಗಳನ್ನು ಸಿದ್ದಪಡಿಸಿರುತ್ತದೆ.

ಕೆಳಕಂಡಂತವುಗಳನ್ನು ಹೊರತುಪಡಿಸಿ ಹಣಕಾಸು ವಿವರಣಾ ಪಟ್ಟಿಗಳ ಮೇಲೆ ಗಣನೀಯ ಪರಿಣಾಮಗಳನ್ನು ಬೀರುವ ಎಲ್ಲಾ ದಾಖಲೆಗಳನ್ನು ಪ್ರಾಪ್ತವಾಗುವ ಆಧಾರದ ಮೇಲೆ ಗುರುತಿಸಿ ಲೆಕ್ಕಿಸಲಾಗಿದೆ.

- ❖ ವಾಸ್ತವಿಕ ಸ್ವೀಕೃತಿ ಆಧಾರದಲ್ಲಿ ಲೆಕ್ಕಿಸಲಾಗುವ, ಸರಕಾರದಿಂದ ಬಂಡವಾಳ ಕಾಮಗಾರಿಗಳಿಗಾಗಿ ಬಿಡುಗಡೆಯಾಗುವ ಅನುದಾನಗಳು ಹಾಗೂ ಸಹಾಯಧನಗಳು.
- ❖ ಸರಬರಾಜುದಾರರಿಂದ ಬೇಡಿಕೆ ಸಲ್ಲಿಸಲ್ಪಟ್ಟಾಗ ಲೆಕ್ಕಿಸಲಾಗುವ, ವಿದ್ಯುತ್ ಉತ್ಪಾದಕರಿಗೆ ಪಾವತಿಸಬೇಕಾಗಿರುವ ವಿಳಂಬ ಪಾವತಿ ಶುಲ್ಕಗಳು.
- ❖ ವಸೂಲಿ ಮಾಡಲಾದಾಗ ಆದಾಯವೆಂದು ಲೆಕ್ಕಿಸಲಾಗುವ, ಗುತ್ತಿಗೆದಾರರು ಮತ್ತು ಮಾರಾಟಗಾರರಿಂದ ವಸೂಲಿ ಮಾಡಲಾಗುವ ದಂಡಗಳು ಮತ್ತು ನಷ್ಟಗಳು.

2.3. ತೀರ್ಪುಗಳು ಮತ್ತು ಅಂದಾಜುಗಳ ಬಳಕೆ:

ಆಡಳಿತ ಮಂಡಳಿಯು ಹಣಕಾಸಿನ ವಿವರಣಾ ಪಟ್ಟಿಗಳನ್ನು ತಯಾರಿಸುವಾಗ, ವರದಿ ಮಾಡಲಾದ ಅವಧಿಯಲ್ಲಿ ವರದಿ ಮಾಡಲಾದ ಆಸ್ತಿ, ಜವಾಬ್ದಾರಿ, ಕಂದಾಯ ಮತ್ತು ಖರ್ಚು ಮೊತ್ತಗಳ ಮೇಲೆ ಪರಿಣಾಮ ಬೀರಬಹುದಾದ ಅಂದಾಜುಗಳು, ತೀರ್ಪುಗಳು ಹಾಗೂ ಊಹನೆಗಳನ್ನು ಪರಿಗಣಿಸುವ ಅಗತ್ಯವಿದೆ. ಅಂತಹ ಅಂದಾಜು ಹಾಗೂ ಊಹನೆಗಳನ್ನು ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ಸಮಂಜಸವಾಗಿ ಹಾಗೂ ವಿವೇಕಯುತವಾಗಿ ಮಾಡಲಾಗಿದ್ದರೂ ಸಹ ವಾಸ್ತವಿಕ ಫಲಿತಾಂಶಗಳು ಅಂದಾಜುಗಳಿಗಿಂತ ಭಿನ್ನವಾಗಿರಬಹುದಾಗಿರುತ್ತದೆ. ಅಂದಾಜುಗಳು ಹಾಗೂ ಆಧಾರವಾಗಿರುವ ಊಹನೆಗಳನ್ನು, ಮುನ್ನಡೆಯುತ್ತಿರುವ ಆಧಾರದ ಮೇಲೆ ಪರಿಶೀಲಿಸಿ ಅಗತ್ಯ ಪರಿಷ್ಕರಣೆಗಳನ್ನು ಭವಿಷ್ಯದಲ್ಲಿ ಪರಿಗಣಿಸಲಾಗುವುದು.

ಆಸ್ತಿ ಮತ್ತು ಜವಾಬ್ದಾರಿ ಖಾತೆಗಳು ಹೊಂದಿರುವ ಮೊತ್ತಗಳ ಮೇಲೆ ಮುಂದಿನ ಆರ್ಥಿಕ ವರ್ಷದ ಒಳಗಾಗಿ ಗಣನೀಯ ಪರಿಣಾಮಗಳನ್ನು ಬೀರಬಹುದಾದ ಅಂದಾಜುಗಳು, ತೀರ್ಪುಗಳು ಹಾಗೂ ಊಹನೆಗಳು ಮುಖ್ಯವಾಗಿ ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳ ಉಪಯುಕ್ತ ಕಾಲಾವಧಿ, ಸಿಬ್ಬಂದಿ ಸೌಲಭ್ಯಗಳ ಜವಾಬ್ದಾರಿಗಳು, ಆದಾಯ ತೆರಿಗೆ ಅವಕಾಶಗಳು, ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿಗಳು, ಮುಂದೂಡಲ್ಪಟ್ಟ ತೆರಿಗೆ ಲೆಕ್ಕಾಚಾರಗಳಿಗೆ ಸಂಬಂಧಪಟ್ಟವುಗಳಾಗಿರುತ್ತದೆ.

2.4. ಅನುದಾನಗಳು ಹಾಗೂ ಸಹಾಯಧನಗಳು

- ❖ **ಕಂದಾಯ ಅನುದಾನಗಳು**

  ಸರಕಾರ ಅಥವಾ ಇತರೆ ಸಂಸ್ಥೆಗಳಿಂದ ಸ್ವೀಕೃತವಾಗುವ ಕಂದಾಯ ಅನುದಾನಗಳು/ ಜಕಾತಿ ಸಹಾಯ ಧನಗಳನ್ನು, ಅವುಗಳಿಗೆ ಅನ್ವಯವಾಗುವ ಷರತ್ತುಗಳು ಪೂರೈಕೆಯಾಗುವ ಮತ್ತು ಅನುದಾನಗಳು ಸ್ವೀಕೃತಿಯಾಗುವ ಬಗ್ಗೆ ಸಾಕಷ್ಟು ಭರವಸೆಯಿರುವ ಸಂದರ್ಭಗಳಲ್ಲಿ ಮಾತ್ರ ಆದಾಯವಾಗಿ ಗುರುತಿಸಿ ಲೆಕ್ಕಿಸಲಾಗುವುದು.

- ❖ **ಬಂಡವಾಳ ಅನುದಾನಗಳು ಹಾಗೂ ಬಂಡವಾಳ ಕಾಮಗಾರಿಗಳಿಗಾಗಿನ ವಂತಿಗೆಗಳು**

  ಬಂಡವಾಳ ಕಾಮಗಾರಿಗಳಿಗಾಗಿ ಸರಕಾರದಿಂದ ಅಥವಾ ಇತರ ಪ್ರಾಧಿಕಾರಗಳಿಂದ ಬಿಡುಗಡೆಯಾಗುವ ಅನುದಾನ/ ಸಹಾಯಧನಗಳನ್ನು ಮತ್ತು ಬಂಡವಾಳ ಕಾಮಗಾರಿಗಳಿಗಾಗಿನ ಗ್ರಾಹಕರ ವಂತಿಗೆಗಳನ್ನು ಆರಂಭದಲ್ಲಿ ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ ನಂತರದಲ್ಲಿ, ಅಂತಹ ಅನುದಾನ/ಸಹಾಯಧನಗಳು ಬಳಸಲ್ಪಡುವ ಪ್ರವರ್ಗದ ಆಸ್ತಿಗಳಿಗೆ ಅನ್ವಯವಾಗುವ ಸವಕಳಿ ಆಧಾರದಲ್ಲಿ ಆದಾಯಗಳ ಖಾತೆಗೆ ಲೆಕ್ಕಿಸಲಾಗುವುದು.

- ❖ **ಸರಕಾರ ನೀಡಿದ ಸಾಲಗಳು**

  ಸರಕಾರದಿಂದ ರಿಯಾಯಿತಿ ದರಗಳಲ್ಲಿ ಅಥವಾ ಶೂನ್ಯ ಬಡ್ಡಿ ದರಗಳಲ್ಲಿ ನೀಡಲಾದ ಸಾಲಗಳನ್ನು ಆರ್ಥಿಕ ಜವಾಬ್ದಾರಿಗಳೆಂದು ಪರಿಗಣಿಸಲಾಗುವುದು ಹಾಗೂ ಕಂಪೆನಿಯು ಇಂಡ್ ಎಎಸ್ 109– 'ಆರ್ಥಿಕ ಸಾಧನಗಳು' ರ ಅಗತ್ಯತೆಗಳನ್ನು ಅನ್ವಯಿಸಿ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿನ ಸರಕಾರೀ ಸಾಲಗಳ ಪ್ರಯೋಜನವನ್ನು, ಎಮ್‌ಸಿಎಲ್‌ಆರ್ ದರಗಳನ್ನು ಪರಿಗಣಿಸಿ ಸರಕಾರದ ಸಹಾಯಧನವಾಗಿ ಲೆಕ್ಕಿಸಲಾಗುವುದು.

2.5 ದಾಸ್ತಾನುಗಳು

ದಾಸ್ತಾನುಗಳು, ಉಗ್ರಾಣ ಸಾಮಾಗ್ರಿಗಳನ್ನು ಹಾಗೂ ಬಿಡಿ ಭಾಗಗಳನ್ನು ಒಳಗೊಂಡಿರುತ್ತದೆ. ಇವುಗಳನ್ನು ಇಳಿತಗೊಂಡ ಮೌಲ್ಯ ಮತ್ತು ಕೈಗೂಡಬಹುದಾದ ನಿವ್ವಳ ಬೆಲೆಯಲ್ಲಿ ಮೌಲ್ಯ ಮಾಪನಗೊಳಿಸಲಾಗುವುದು. ಇವುಗಳ ಬೆಲೆಯು ಎಲ್ಲಾ ಖರೀದಿ ಸಂಬಂಧಿತ ವೆಚ್ಚಗಳು, ಹಿಂಪಾವತಿಸಲಾಗದ ತೆರಿಗೆಗಳು ಹಾಗೂ ಸುಂಕಗಳು ಮತ್ತು ದಾಸ್ತಾನುಗಳನ್ನು ಅವುಗಳ ಹಾಲಿ ಸ್ಥಳ ಹಾಗೂ ಸ್ಥಿತಿಗಳಿಗೆ ತರಲು ಭರಿಸಲಾದ ಎಲ್ಲಾ ವೆಚ್ಚಗಳನ್ನು ಒಳಗೊಂಡಿರುತ್ತದೆ. ವೆಚ್ಚಗಳನ್ನು ಸರಾಸರಿ ದರಗಳ ಆಧಾರದಲ್ಲಿ ನಿರ್ಧರಿಸಲಾಗುವುದು.

2.6 ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು

ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳನ್ನು ದುರ್ಬಲತೆಯ ನಷ್ಟಗಳು ಮತ್ತು ಸಂಚಿತ ಸವಕಳಿಗಳನ್ನು ಕಳೆದ ಬೆಲೆಯಲ್ಲಿ ಲೆಕ್ಕಿಸಲಾಗುವುದು. ಈ ಬೆಲೆಯು, ಖರೀದಿ ವೆಚ್ಚಗಳು, ಹಿಂಪಾವತಿಸಲಾಗದ ತೆರಿಗೆಗಳು ಹಾಗೂ ಸುಂಕಗಳು, ಅರ್ಹವಾದ ಆಸ್ತಿಗಳ ಮೇಲಿನ ಆರ್ಥಿಕ ವೆಚ್ಚಗಳು, ಆಸ್ತಿಗಳನ್ನು ಆಡಳಿತ ಮಂಡಳಿಯು ಬಯಸುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಶಕ್ತವಾಗುವ ಸ್ಥಳ ಹಾಗೂ ಸ್ಥಿತಿಗೆ ತರಲು ನೇರವಾಗಿ ಕಾರಣವಾಗುವ ಯಾವುದೇ ರೀತಿಯ ವೆಚ್ಚಗಳನ್ನು ಒಳಗೊಂಡಿರುತ್ತದೆ. ಇದು, ಆಸ್ತಿಗಳನ್ನು ಕಳಚಿ, ತೆಗೆದು, ಆಸ್ತಿಗಳನ್ನು ಸ್ಥಾಪಿಸಲಾದ ಸ್ಥಳವನ್ನು ಮರುಸ್ಥಾಪನೆಗೊಳಿಸಲು ತಗಲುವ ಅಂದಾಜು ವೆಚ್ಚಗಳನ್ನು ಒಳಗೊಂಡಿರುವುದಿಲ್ಲ. ಸ್ವತಂತ್ರವಾಗಿ ಹೊಂದಿರುವ ಭೂಮಿಯ ಬೆಲೆಗೆ ಸವಕಳಿ ಆಕರಿಸಲಾಗುವುದಿಲ್ಲ. ಕ.ವಿ.ನಿ ಆಯೋಗದ ಜಕಾತಿ ಆದೇಶ 2009 ದಿನಾಂಕ: 25 ನವೆಂಬರ್ 2009ರಲ್ಲಿ ಅನುಮೋದಿಸಿದಂತೆ ಎಲ್ಲಾ ಆಸ್ತಿಗಳು, ಯಂತ್ರೋಪಕರಣಗಳು ಹಾಗೂ ಸಲಕರಣೆಗಳ ಮೇಲೆ ಸ್ಟ್ರೈಟ್ ಲೈನ್ ವಿಧಾನದಲ್ಲಿ ಸವಕಳಿಯನ್ನು ಆಕರಿಸಲಾಗುವುದು. ಕಂಪೆನಿಯು, ಕಂಪೆನಿಗಳ ಕಾಯಿದೆ 2013 ರ ಅನುಬಂಧ - II ರಲ್ಲಿ ನೀಡಲಾದ ದರಗಳಲ್ಲಿ ಸವಕಳಿಯನ್ನು ಆಕರಿಸುತ್ತಿಲ್ಲ. ಹೊಸದಾಗಿ ಸೇರಿಸಲಾದ ಆಸ್ತಿಗಳಿಗೆ, ಆ ಆಸ್ತಿಗಳು ಉಪಯೋಗಕ್ಕೆ ಬಂದ ತಕ್ಷಣದ ನಂತರದ ಮಾಹೆಯಿಂದ ಸಮಾನುಪಾತದಲ್ಲಿ ಸವಕಳಿಯನ್ನು ಲೆಕ್ಕ ಹಾಕಲಾಗಿದೆ. ಸೂಚಿತ ಸವಕಳಿ ದರಗಳನ್ನು ಕ.ವಿ.ನಿ ಆಯೋಗವು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದಲ್ಲಿ, ಅಂತಹ ದರಗಳನ್ನು, ಕ.ವಿ.ನಿ ಆಯೋಗವು ಅಧಿಸೂಚನೆ ಹೊರಡಿಸಿದ ದಿನಾಂಕದ ನಂತರದ ದಿನಗಳಿಂದ (Prospectively) ಪರಿಗಣಿಸಿ ಲೆಕ್ಕಿಸಲಾಗುವುದು. ಕಂಪೆನಿಗಳ ಕಾಯಿದೆ 2013 ರ ಅನುಸಾರ ಎಲ್ಲಾ ಆಸ್ತಿಗಳ ಕನಿಷ್ಟ ಬೆಲೆಯು 5% ಇರಬೇಕಾಗಿದ್ದಾಗ್ಯೂ, ಕ.ವಿ.ನಿ ಆಯೋಗದ ಆದೇಶದ ಅನುಸಾರ ಎಲ್ಲಾ ಆಸ್ತಿಗಳ ಕನಿಷ್ಟ ಬೆಲೆಯನ್ನು 10%ಕ್ಕೆ ನಿಗಧಿಗೊಳಿಸಲಾಗಿದೆ.

ಕಂಪೆನಿಯಲ್ಲಿ ಬಳಸಲಾಗುತ್ತಿರುವ ಸವಕಳಿ ದರಗಳು ಕೆಳಕಂಡಂತಿರುತ್ತವೆ.

ಆಸ್ತಿಗಳು	ಸವಕಳಿ ದರ
ಕಟ್ಟಡಗಳು	3.34%
ಜಲಕಾರ್ಯಾಗಾರಗಳು	5.28%
ಇತರ ಸಿವಿಲ್ ಕಾಮಗಾರಿಗಳು	3.34%
ಸ್ಥಾವರಗಳು ಮತ್ತು ಯಂತ್ರೋಪಕರಣಗಳು	5.28%
ಮಾರ್ಗಗಳು, ಕೇಬಲ್ ಜಾಲಗಳು	5.28%
ವಾಹನಗಳು	9.50%
ಪೀಠೋಪಕರಣಗಳು	6.33%
ಕಛೇರಿ ಉಪಕರಣಗಳು	6.33%
ಮಾಹಿತಿ ತಂತ್ರಜ್ಞಾನ ಉಪಕರಣಗಳು	15.00%

ಮರುಬಳಕೆಗೆ ಉದ್ದೇಶಿಸಲಾದ ಕಳಚಿದ ಆಸ್ತಿಗಳಿಗೆ ಅದೇ ಪ್ರವರ್ಗಗಳಿಗೆ ಸಂಬಂಧಪಟ್ಟ ಆಸ್ತಿಗಳಿಗೆ ಅಂದರೆ, ಮಾರ್ಗಗಳು, ಕೇಬಲ್ ಜಾಲಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು, ವಾಹನಗಳು ಇತ್ಯಾದಿಗಳಿಗೆ ಅನ್ವಯವಾಗುವ ದರಗಳಲ್ಲಿ ಸವಕಳಿಯನ್ನು ಆಕರಿಸಲಾಗುವುದು.

ಯಾವುದೇ ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳನ್ನು, ವಿಲೇವಾರಿ ಮಾಡಿದಾಗ ಅಥವಾ ಅಂತಹ ಆಸ್ತಿಗಳ ಬಳಕೆಯನ್ನು ಮುಂದುವರೆಸುವುದರಿಂದ ಉದ್ಭವಿಸಬಹುದಾದ ಭವಿಷ್ಯದ ಆರ್ಥಿಕ ಪ್ರಯೋಜನಗಳು ಇಲ್ಲದಾದಾಗ, ಆಸ್ತಿ ಖಾತೆಗಳಿಂದ ಹಿಂಪಡೆಯಲಾಗುವುದು. ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳ ಪುಸ್ತಕದ ಬೆಲೆ ಹಾಗೂ ಮಾರಾಟದ ಬೆಲೆಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಅಂತಹ ಆಸ್ತಿಗಳ ವಿಲೇವಾರಿ ಅಥವಾ ನಿವೃತ್ತಿಯಿಂದ ಉದ್ಭವಿಸಿದ ಲಾಭ ಅಥವಾ ನಷ್ಟವೆಂದು ಪರಿಗಣಿಸಲಾಗುವುದು. ಪ್ರಮುಖ ಬಂಡವಾಳ ಬಿಡಿಭಾಗಗಳನ್ನು ಆಸ್ತಿಗಳ, ಸ್ಥಾವರಗಳ ಮತ್ತು ಯಂತ್ರೋಪಕರಣಗಳ ಖಾತೆಗೆ ಬಂಡವಾಳೀಕರಿಸಿ ಅದರ ಉಪಯುಕ್ತ ಬಳಕೆಯ ಕಾಲಾವಧಿ ಮತ್ತು ಅದೇ ಪ್ರವರ್ಗದ ಸ್ಥಿರಾಸ್ತಿಗಳ ಅಂದಾಜಿಸಿದ ಉಪಯುಕ್ತ ಬಳಕೆಯ ಕಾಲಾವಧಿಗಳಲ್ಲಿ ಕಡಿಮೆಯಿರುವ ಅವಧಿಗೆ ಸವಕಳಿಯನ್ನು ಆಕರಿಸಲಾಗುವುದು ಹಾಗೂ ಬಿಡಿಭಾಗಗಳನ್ನು ಬದಲಾಯಿಸಿದಾಗ ಅವುಗಳ ಇಳಿತಗೊಂಡ ಮೌಲ್ಯವನ್ನು ಲಾಭ ಮತ್ತು ನಷ್ಟಗಳ ಖಾತೆಗೆ ವರ್ಗಾಯಿಸಲಾಗುವುದು.

"ಪೀಠೋಪಕರಣ ಮತ್ತು ಜೋಡಣೆಗಳು" ಮತ್ತು "ಕಛೇರಿ ಸಲಕರಣೆಗಳು" ಗುಂಪುಗಳಲ್ಲಿ ವರ್ಗೀಕರಿಸಿದ ಆಸ್ತಿಗಳನ್ನು ಹೊರತುಪಡಿಸಿ ತಲಾ ₹ 500 ರವರೆಗಿನ ಮೌಲ್ಯದ ಸ್ಥಿರಾಸ್ತಿಗಳನ್ನು ಪ್ರಸಕ್ತ ವರ್ಷದ ಲಾಭ ಮತ್ತು ನಷ್ಟ ಖಾತೆಗೆ ಆಕರಿಸಲಾಗಿದೆ.

ಪ್ರತೀ ಆಸ್ತಿ ಹೊಣೆ ಪಟ್ಟಿ ದಿನಾಂಕದಲ್ಲಿರುವಂತೆ ಬಾಕಿ ಉಳಿದಿರುವ, ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳ ಸ್ವಾಧೀನತೆಗಾಗಿ ಪಾವತಿಸಲಾದ ಮುಂಗಡಗಳನ್ನು ನಾಚಾಲ್ತಿ ಖಾತೆಗಳಡಿಯಲ್ಲಿ ಬಂಡವಾಳ ಮುಂಗಡಗಳೆಂದು

ಲೆಕ್ಕಿಸಲಾಗುವುದು. ಸ್ಥಿರಾಸ್ತಿಗಳ ಉಪಯುಕ್ತ ಕಾಲಾವಧಿ ಮತ್ತು/ಅಥವಾ ದಕ್ಷತೆಗಳ ಸುಧಾರಣೆಗಾಗಿ ನಂತರದಲ್ಲಿ ಮಾಡಲಾದ ನವೀಕರಣ ಹಾಗೂ ಆಧುನೀಕರಣಗಳ ವೆಚ್ಚಗಳನ್ನು ಅವುಗಳಿಂದ ಕಂಪೆನಿಗೆ ಭವಿಷ್ಯದಲ್ಲಿ ಆರ್ಥಿಕ ಲಾಭವಾಗುವ ಸಂಭವವನ್ನು ಪರಿಗಣಿಸಿ ತಕ್ಕಂತೆ ಸಂಬಂಧಪಟ್ಟ ಆಸ್ತಿಗಳ ಮೂಲವೆಚ್ಚಕ್ಕೆ ಸೇರಿಸಲಾಗುವುದು ಅಥವಾ ಪ್ರತ್ಯೇಕ ಆಸ್ತಿಯಾಗಿ ಲೆಕ್ಕಿಸಲಾಗುವುದು.

2.7 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

ಬಂಡವಾಳ ಕಾಮಗಾರಿಗಳಿಗೆ ನೀಡಲಾದ ಸಾಮಾಗ್ರಿಗಳನ್ನು, ಆಯಾ ಸಾಮಾಗ್ರಿಗಳನ್ನು ನೀಡುವ ಮೊದಲು ಇದ್ದ ಸರಾಸರಿ ದರಗಳಲ್ಲಿಯೇ ಮೌಲ್ಯಮಾಪನ ಮಾಡಲಾಗಿದೆ. ಕಾಮಗಾರಿಗಳ ಸಮಾಪನಾ ವರದಿಗಳು ಅಥವಾ ಕಾಮಗಾರಿ ಮುಕ್ತಾಯದ ತಾಂತ್ರಿಕ ಧೃಢೀಕರಣಗಳು ಸ್ವೀಕೃತಗೊಂಡ ನಂತರದಲ್ಲಿ ವೆಚ್ಚಗಳನ್ನು ಆಸ್ತೀಕರಿಸಲಾಗುವುದು. ಸ್ಥಿರಾಸ್ತಿಗಳ ನಿರ್ಮಾಣ ವೆಚ್ಚಕ್ಕೆ ನೇರವಾಗಿ ಆಕರಿಸಬಹುದಾದ ಸಿಬ್ಬಂದಿ ವೆಚ್ಚಗಳು ಹಾಗೂ ಇತರ ವೆಚ್ಚಗಳನ್ನು ಗುರುತಿಸಿ ವ್ಯವಸ್ಥಿತವಾಗಿ ಸಂಬಂಧಪಟ್ಟ ಸ್ಥಿರಾಸ್ತಿಗಳ ವೆಚ್ಚಕ್ಕೆ ಹಂಚಿಕೆ ಮಾಡಿಕೊಳ್ಳಲಾಗಿದೆ.

2.8 ಸ್ಪರ್ಶಾತೀತ ಆಸ್ತಿಗಳು

ಸ್ಪರ್ಶಾತೀತ ಆಸ್ತಿಗಳನ್ನು ಅಂತಹ ಆಸ್ತಿಗಳ ಸ್ವಾಧೀನತೆಗೆ ಭರಿಸಲಾದ ಮೊತ್ತಗಳಲ್ಲಿ ಲೆಕ್ಕೀಕರಿಸಲಾಗಿದೆ. ಸೀಮಿತ ಉಪಯುಕ್ತ ಕಾಲಾವಧಿಯನ್ನು ಹೊಂದಿರುವ ಸ್ಪರ್ಶಾತೀತ ಆಸ್ತಿಗಳನ್ನು ಅವುಗಳ ಸಂಚಿತ ಸವಕಳಿ ಹಾಗೂ ಸಂಚಿತ ನಷ್ಟಗಳನ್ನು ಕಳೆದ ಮೂಲವೆಚ್ಚದಲ್ಲಿ ಲೆಕ್ಕೀಕರಿಸಿದೆ. ಸ್ಪರ್ಶಾತೀತ ಆಸ್ತಿಗಳ ಅಂದಾಜು ಉಪಯುಕ್ತ ಕಾಲಾವಧಿ ಅಂದರೆ, ಗುತ್ತಿಗೆ ಅವಧಿ ಅಥವಾ ಪರವಾನಗಿ ಅವಧಿ ಅಥವಾ ಪರವಾನಗಿಯ ಅನುಪಸ್ಥಿತಿಯಲ್ಲಿ ನಾಲ್ಕು ವರ್ಷಗಳ ಅವಧಿಯಲ್ಲಿ ಸ್ಟ್ರೈಟ್ ಲೈನ್ ವಿಧಾನದಲ್ಲಿ ಸವಕಳಿಯನ್ನು ಆಕರಿಸಲಾಗುವುದು. ವರದಿ ಮಾಡಲಾಗುವ ಪ್ರತೀ ಅವಧಿಯ ಅಂತ್ಯದಲ್ಲಿ ಉಪಯುಕ್ತ ಕಾಲಾವಧಿ ಹಾಗೂ ಸವಕಳಿ ವಿಧಾನಗಳನ್ನು ಪನರ್ ಪರಿಶೀಲಿಸಿ ವ್ಯತ್ಯಾಸಗಳಿದ್ದಲ್ಲಿ ಮುಂದಿನ ಅವಧಿಯಲ್ಲಿ ಲೆಕ್ಕೀಕರಿಸಲಾಗಿದೆ. ಪ್ರತ್ಯೇಕವಾಗಿ ಲೆಕ್ಕೀಕರಿಸಲಾದ ಅನಿರ್ದಿಷ್ಟಾವಧಿಯ ಉಪಯುಕ್ತ ಕಾಲಾವಧಿಯನ್ನು ಹೊಂದಿರುವ ಸ್ಪರ್ಶಾತೀತ ಆಸ್ತಿಗಳನ್ನು, ಅನ್ವಯವಾಗಿದ್ದಲ್ಲಿ ಅವುಗಳ ಸಂಚಿತ ನಷ್ಟಗಳನ್ನು ಕಳೆದ ಮೂಲವೆಚ್ಚದಲ್ಲಿ ಲೆಕ್ಕೀಕರಿಸಿದೆ.

ಸ್ಪರ್ಶಾತೀತ ಆಸ್ತಿಗಳನ್ನು, ವಿಲೇವಾರಿ ಮಾಡಿದಾಗ ಅಥವಾ ಅವುಗಳ ಬಳಕೆಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭ ಇಲ್ಲದಾದಾಗ ಅವುಗಳ ಬೆಲೆಯನ್ನು ಲೆಕ್ಕಪತ್ರಗಳಿಂದ ಹಿಂಪಡೆಯಲಾಗಿದೆ. ಸ್ಪರ್ಶಾತೀತ ಆಸ್ತಿಗಳನ್ನು ವಿಲೇವಾರಿ ಮಾಡಿದಾಗ, ಆಸ್ತಿಗಳ ಪುಸ್ತಕದ ಬೆಲೆ ಹಾಗೂ ಮಾರಾಟದ ಬೆಲೆಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಅಂತಹ ಆಸ್ತಿಗಳ ವಿಲೇವಾರಿ ಅಥವಾ ನಿವೃತ್ತಿಯಿಂದ ಉದ್ಭವಿಸಿದ ಗಳಿಕೆ ಅಥವಾ ನಷ್ಟವೆಂದು ಪರಿಗಣಿಸಿ ಲಾಭ ಅಥವಾ ನಷ್ಟವೆಂದು ಲೆಕ್ಕಿಸಲಾಗುವುದು.

ಭವಿಷ್ಯದ ಬಳಕೆಗಾಗಿ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ತಗಲಿದ ವಾಸ್ತವಿಕ ವೆಚ್ಚಗಳನ್ನು ಪ್ರಗತಿಯಲ್ಲಿರುವ ಸ್ಪರ್ಶಾತೀತ ಆಸ್ತಿಗಳೆಂದು ದಾಖಲಿಸಲಾಗಿದೆ ಮತ್ತು ಸಮಾಪನಾ/ಕಾರ್ಯಾರಂಭ ಪ್ರಮಾಣ ಪತ್ರ ಸ್ವೀಕೃತಿಯಾದಾಕ್ಷಣ ಅವುಗಳನ್ನು ಆಸ್ತೀಕರಿಸಲಾಗುವುದು. ಅವುಗಳನ್ನು ಮೂಲಬೆಲೆಯಲ್ಲಿಯೇ ಲೆಕ್ಕಿಸಲಾಗಿದೆ.

2.9 ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು (ಅಥವಾ ವಿಲೇವಾರಿ ಗುಂಪುಗಳು)

ನಾಚಾಲ್ತಿ ಆಸ್ತಿಗಳ (ಅಥವಾ ವಿಲೇವಾರಿ ಗುಂಪುಗಳು) ಪುಸ್ತಕದ ಬೆಲೆಯನ್ನು, ಮುಖ್ಯವಾಗಿ ಮಾರಾಟ ವಹಿವಾಟಿನಿಂದಲೇ ವಸೂಲಿ ಮಾಡಿಕೊಳ್ಳಬೇಕಾದಾಗ ಹಾಗೂ ಮಾರಾಟವು ಸುಲಭಸಾಧ್ಯವೆಂದು ಪರಿಗಣಿಸಲ್ಪಟ್ಟಿದ್ದಾಗ ಅಂತಹ ನಾಚಾಲ್ತಿ ಆಸ್ತಿಗಳನ್ನು ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳೆಂದು ವರ್ಗೀಕರಿಸಲಾಗಿದೆ. ಆಸ್ತಿ ಅಥವಾ ವಿಲೇವಾರಿ ಗುಂಪುಗಳು ಪ್ರಸ್ತುತ ಇರುವ ಸ್ಥಿತಿಯಲ್ಲಿಯೇ ತಕ್ಷಣದ ಮಾರಾಟಕ್ಕೆ ಲಭ್ಯವಿರುವಾಗ, ಮಾರಾಟವನ್ನು ಹಿಂಪಡೆಯುವುದು ಸಾಧ್ಯವಿಲ್ಲದಿರುವಾಗ ಮತ್ತು ವರ್ಗೀಕರಣದ ಒಂದು ವರ್ಷದ ಒಳಗಾಗಿ ಮಾರಾಟ ಮಾಡಲು ಉದ್ದೇಶಿಸಲಾದ ಸಂದರ್ಭಗಳಲ್ಲಿ ಮಾತ್ರ ಮಾರಾಟವು ಸುಲಭಸಾಧ್ಯವೆಂದು ಪರಿಗಣಿಸಲಾಗುತ್ತದೆ. ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳೆಂದು ವರ್ಗೀಕರಿಸಲಾದ ನಾಚಾಲ್ತಿ ಆಸ್ತಿಗಳು ಅಥವಾ ವಿಲೇವಾರಿ ಗುಂಪುಗಳನ್ನು ಅವುಗಳ ಪುಸ್ತಕದ ಬೆಲೆಯಲ್ಲಿ ದಾಖಲಿಸಲಾಗುತ್ತದೆ. ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳನ್ನು ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳೆಂದು ವರ್ಗೀಕರಿಸಲಾದ ತಕ್ಷಣದಿಂದ ಸವಕಳಿ ಆಕರಿಸುವುದನ್ನು ಸ್ಥಗಿತಗೊಳಿಸಲಾಗುತ್ತದೆ. ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು ಹಾಗೂ ಜವಾಬ್ದಾರಿಗಳನ್ನು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಪ್ರತ್ಯೇಕವಾಗಿ ಪ್ರಸ್ತುತಪಡಿಸಲಾಗುತ್ತದೆ.

2.10 ಆಸ್ತಿಗಳ ಮೌಲ್ಯ ಕುಗ್ಗುವಿಕೆ

ಕಂಪೆನಿಯು ತನ್ನ ಆಸ್ತಿಗಳ ಮೌಲ್ಯ ಕುಗ್ಗಿರುವ ಸೂಚನೆಯನ್ನು ನಿರ್ಧರಿಸಲು, ಒಂದು ನಗದು ಉತ್ಪಾದನಾ ಘಟಕದ ಸ್ಪರ್ಶಾತೀತ ಆಸ್ತಿಗಳು ಮತ್ತು ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳು (ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನೂ ಒಳಗೊಂಡು) ಹೊಂದಿರುವ ಮೌಲ್ಯವನ್ನು ಪರಿಶೀಲಿಸುತ್ತದೆ. ಅಂತಹ ಸೂಚನೆಗಳೇನಾದರೂ ಇದ್ದಲ್ಲಿ, ಆಸ್ತಿಯ ದುರ್ಬಲ ನಷ್ಟದ ವ್ಯಾಪ್ತಿಯನ್ನು (ಯಾವುದಾದರೂ ಇದ್ದಲ್ಲಿ) ನಿರ್ಧರಿಸಲು ಆಸ್ತಿಯ ಮರುಗಳಿಕೆ ಮೊತ್ತವನ್ನು ಅಂದಾಜಿಸಲಾಗುವುದು. ಒಂದು ನಿರ್ಧಿಷ್ಟ ಆಸ್ತಿಯ ಮರುಗಳಿಕೆ ಮೊತ್ತವನ್ನು ಅಂದಾಜಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಆಸ್ತಿಯು ಒಳಗೊಂಡಿರುವ ನಗದು ಉತ್ಪಾದನಾ ಘಟಕದ ಮರುಗಳಿಕೆ ಮೊತ್ತವನ್ನು ಕಂಪೆನಿಯು ಅಂದಾಜಿಸುತ್ತದೆ.

ಹಿಂದೆ ದುರ್ಬಲ ನಷ್ಟವನ್ನು ಗುರುತಿಸದೇ ಇದ್ದಲ್ಲಿ, ಆಸ್ತಿಯು ಹೊಂದಿರುವ ಮೌಲ್ಯವು, ಸವಕಳಿ ಅಥವಾ ಋಣ ಮುಕ್ತತೆಯನ್ನು ಕಳೆದು ಬಂದ ಮೌಲ್ಯವನ್ನು ಮೀರದೇ ಇದ್ದಾಗ ಮಾತ್ರ ದುರ್ಬಲ ನಷ್ಟವನ್ನು ಹಿಂಪಡೆಯಲಾಗುವುದು.

2.11 ಸಾಲ ಸಂಬಂಧಿ ವೆಚ್ಚಗಳು

ಆರ್ಥಿಕ ಸಾಲಗಳಿಗೆ ಸಂಬಂಧಪಟ್ಟಂತೆ ಕಂಪೆನಿಯು ಭರಿಸಿದ ಬಡ್ಡಿಯ ಮೊತ್ತ ಹಾಗೂ ಇತರ ವೆಚ್ಚಗಳನ್ನು, ಸಾಲ ಸಂಬಂಧಿ ವೆಚ್ಚಗಳು ಒಳಗೊಂಡಿರುತ್ತವೆ. ಉದ್ದೇಶಿತ ಬಳಕೆ ಅಥವಾ ಮಾರಾಟಕ್ಕೆ ಸಿದ್ಧತೆಗೊಳ್ಳಲು ಗಣನೀಯ ಕಾಲಾವಕಾಶ ತೆಗೆದುಕೊಳ್ಳುವ ಆಸ್ತಿಗಳ ಸ್ವಾಧೀನ, ನಿರ್ಮಾಣ ಅಥವಾ ಉತ್ಪಾದನೆಗೆ ನೇರವಾಗಿ ಕಾರಣವಾಗುವ ಸಾಲ ಸಂಬಂಧಿ ವೆಚ್ಚಗಳನ್ನು ಸಂಬಂಧಪಟ್ಟ ಆಸ್ತಿಗಳ ವೆಚ್ಚದ ಭಾಗವಾಗಿ ಬಂಡವಾಳೀಕರಿಸಲಾಗುವುದು. ಇತರೆ ಎಲ್ಲಾ ಸಾಲದ ವೆಚ್ಚಗಳನ್ನು ಅವುಗಳನ್ನು ಭರಿಸಲಾದ ಅವಧಿಯ ವೆಚ್ಚಗಳೆಂದು ಪರಿಗಣಿಸಲಾಗುವುದು.

ಸಾಲ ಸಂಬಂಧಿ ವೆಚ್ಚಗಳ ಬಂಡವಾಳೀಕರಣದಲ್ಲಿ ಮಾಡಬೇಕಾದ, ವ್ಯಾವಹಾರಿಕ ವೆಚ್ಚಗಳು, ಪ್ರೀಮಿಯಂಗಳು/ ರಿಯಾಯಿತಿಗಳ ಹೊಂದಾಣಿಕೆ ಮಾಡುವಿಕೆಯ ನಂತರದ ಪರಿಣಾಮಕಾರಿ ಬಡ್ಡಿ ದರದಲ್ಲಿ ಸಾಲ ಸಂಬಂಧಿ ವೆಚ್ಚಗಳನ್ನು ಬಂಡವಾಳೀಕರಣ ಗೊಳಿಸಲಾಗುವುದು.

2.12 ಕಂದಾಯ ಗುರುತಿಸುವಿಕೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ಅನುಮೋದಿತವಾದ ಜಕಾತಿ ದರಗಳ ಆಧಾರದಲ್ಲಿ ವಿದ್ಯುತ್ ಮಾರಾಟವನ್ನು ಲೆಕ್ಕಿಸಲಾಗಿದೆ. ಇನ್ನೂ ಲೆಡ್ಜರ್ ಖಾತೆ ಪ್ರಾರಂಭಿಸದಿರುವ ಆದರೆ ವಿದ್ಯುತ್ತನ್ನು ಬಳಸುತ್ತಿರುವ ಬಳಕೆದಾರರಿಂದ ವಸೂಲಾಗಬೇಕಾಗಿರುವ ಕಂದಾಯವನ್ನು ಅಂದಾಜಿಸಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಕಂಪೆನಿಯು ತೆರಿಗೆ ರಹಿತ ಕಂದಾಯದ ಮೊತ್ತವನ್ನು ಲಾಭ ಮತ್ತು ನಷ್ಟಗಳ ಖಾತೆಯಲ್ಲಿ ದಾಖಲಿಸಿದೆ.

ಬಿಲ್ಲು ಮಾಡದ ಕಂದಾಯ ಬೇಡಿಕೆ ಮೊತ್ತವನ್ನು ಅಂದಾಜಿಸಿ ವರ್ಷದ ಆದಾಯದಲ್ಲಿ ಸೂಕ್ತವಾಗಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

10 ಹೆಚ್.ಪಿ.ಗಿಂತ ಕೆಳಗಿನ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯನ್ನು ಅಂದಾಜಿಸಿ ಲೆಕ್ಕಿಸಿದೆ. ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಮೀಸಲಾಗಿರುವ ಕೃಷಿ ಫೀಡರ್‌ಗಳಲ್ಲಿ ದಾಖಲಾದ ವಿದ್ಯುತ್ ಪ್ರಮಾಣವನ್ನು ಆಧರಿಸಿ 10 ಹೆಚ್.ಪಿ.ಗಿಂತ ಕೆಳಗಿನ ಎಲ್ಲಾ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯನ್ನು ಅಂದಾಜಿಸಿದೆ. ಸದರಿ ಫೀಡರ್ ನಲ್ಲಿ ದಾಖಲಾದ ವಿದ್ಯುತ್ ಒಳಹರಿವಿನ ಪ್ರಮಾಣದಿಂದ ಮಾರ್ಗನಷ್ಟ 7.50% ವನ್ನು ಕಳೆದು ಒಟ್ಟು ಸಂಪರ್ಕಿತ ಪ್ರಮಾಣದಿಂದ ವಿಭಜಿಸಿ ಪ್ರತೀ ಹೆಚ್.ಪಿ.ಯ ವಿದ್ಯುತ್ ಬಳಕೆಯನ್ನು ಕಂಡುಹಿಡಿಯಲಾಗಿದೆ. ಅಂದಾಜಿಸಿದ ವಿದ್ಯುತ್ ಬಳಕೆಗೆ ಅನುಗುಣವಾದ ಕಂದಾಯದ ಮೊತ್ತವನ್ನು, ಆಯೋಗವು ನಿರ್ಧರಿಸಿದ ದರವನ್ನು ಪರಿಗಣಿಸಿ ಕಂಡುಹಿಡಿಯಲಾಗಿದೆ.

2.13 ರೆಗ್ಯೂಲೇಟರಿ ಆಸ್ತಿ/ ಜವಾಬ್ದಾರಿಗಳು

ವಿದ್ಯುಚ್ಛಕ್ತಿ ಕ್ಷೇತ್ರದ ನಿಯಂತ್ರಕರಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು, ಅನ್ವಯಿಸುವ ನಿಯಂತ್ರಣಾ ಚೌಕಟ್ಟಿನೊಳಗೆ ಜಾರಿಗೊಳಿಸಿದ ನೈಜ ಅಥವಾ ನಿರೀಕ್ಷಿತ ಕ್ರಮಗಳ ಪರಿಣಾಮವಾಗಿ ಭವಿಷ್ಯದ ಆರ್ಥಿಕ ಪ್ರಯೋಜನಗಳು ಸಂಸ್ಥೆಗೆ ಹರಿದು ಬರುವ ಸಂಭವವಿದ್ದಲ್ಲಿ ಮತ್ತು ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕಾಚಾರ ಮಾಡಬಹುದಾಗಿದ್ದಲ್ಲಿ, ರೆಗ್ಯೂಲೇಟರಿ ಆಸ್ತಿಯನ್ನು ಗುರುತಿಸಿ ಲೆಕ್ಕಿಸಲಾಗಿದೆ.

ವಿವಿಧ ವರ್ಷಗಳ ವಾರ್ಷಿಕ ಕಂದಾಯದ ಆವಶ್ಯಕತೆ ಹಾಗೂ ಸಂಬಂಧಪಟ್ಟ ವರ್ಷದ ವಾರ್ಷಿಕ ಸಾಧನೆಗಳ ಪುನರಾವಲೋಕನಕ್ಕಾಗಿ ಕಂಪೆನಿಯು ಸಲ್ಲಿಸಿದ ಅರ್ಜಿಗಳ ಮೇಲೆ ಆದೇಶ ನೀಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು, ಜಾರಿಗೊಳಿಸುವ ನೈಜ ಅಥವಾ ನಿರೀಕ್ಷಿತ ಕ್ರಮಗಳ ಪರಿಣಾಮವಾಗಿ ಸಂಸ್ಥೆಗೆ ಹರಿದು ಬರುವ ಸಂಭವನೀಯ ಮುಂದೂಡಲ್ಪಟ್ಟ ಆಸ್ತಿ/ ಜವಾಬ್ದಾರಿಗಳ ಮೊತ್ತವನ್ನು, ರೆಗ್ಯೂಲೇಟರಿ ಆಸ್ತಿ/ ಜವಾಬ್ದಾರಿಯಾಗಿ, ಆಯಾ ವರ್ಷದ ಹೂಡಿಕೆಯ ಮೇಲಿನ ಪ್ರತಿಫಲವು ಹಿಂದಿನ ವರ್ಷದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು ಮಾನ್ಯ ಮಾಡಿದ ಮೊತ್ತಕ್ಕೆ ಮೀರದಂತೆ, ರೆಗ್ಯೂಲೇಟರಿ ಆಸ್ತಿ/ ಜವಾಬ್ದಾರಿ ಮೊತ್ತವನ್ನು ಮಿತಿಗೊಳಿಸಿ, ಪ್ರಾಪ್ತವಾಗುವ ಆಧಾರದ ಮೇಲೆ ಲೆಕ್ಕೀಕರಿಸಲಾಗುವುದು.

2.14 ಇತರೆ ಆದಾಯ

ಅ. ಸೇವೆಗಳನ್ನು ನೀಡಿದ ಬಗೆಗಿನ ಆದಾಯವನ್ನು ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಮಾಡಿಕೊಂಡ ಒಪ್ಪಂದಗಳು/ ವ್ಯವಸ್ಥೆಗಳ ಆಧಾರದಲ್ಲಿ ಗುರುತಿಸಿ ಲೆಕ್ಕಿಸಿದೆ.

ಆ. ಆದಾಯಗಳ ಮೇಲಿನ ಬಡ್ಡಿಯ ಮೊತ್ತವನ್ನು, ಬಾಕಿ ಇರುವ ಮೊತ್ತ ಹಾಗೂ ಬಡ್ಡಿ ದರಗಳನ್ನು ಪರಿಗಣಿಸಿ ಸಮಯಾನುಪಾತದಲ್ಲಿ ಗುರುತಿಸಿ ಲೆಕ್ಕಿಸಿದೆ. ರದ್ದಿ ಸಾಮಾಗ್ರಿಗಳ ಮಾರಾಟದ ಆದಾಯವನ್ನು, ಅವುಗಳಿಗೆ ಸಂಬಂಧಿಸಿದ ಅಪಾಯ ಮತ್ತು ಪ್ರತಿಫಲಗಳು ಗ್ರಾಹಕರಿಗೆ ವರ್ಗಾವಣೆಯಾದೊಡನೆ ಲೆಕ್ಕಿಸಿದೆ.

ಇ. ಗುತ್ತಿಗೆದಾರರು ಹಾಗೂ ಮಾರಾಟಗಾರರಿಂದ ವಸೂಲಾಗಬೇಕಾದ ದಂಡಗಳು ಹಾಗೂ ನಷ್ಟಗಳನ್ನು ಅವುಗಳು ವಸೂಲಿ ಮಾಡಲಾಗುವ ಸಂದರ್ಭದಲ್ಲಿ ಗುರುತಿಸಿ ಲೆಕ್ಕಿಸಿದೆ.

2.15 ವ್ಯಾಪಾರ ಸಂಬಂಧಿ ಬರತಕ್ಕವುಗಳ ಮೌಲ್ಯ ಕುಗ್ಗುವಿಕೆ

ಇಂಡ್ ಎಎಸ್ 109 – "ಆರ್ಥಿಕ ಸಾಧನಗಳು" ರ ಆವಶ್ಯಕತೆಯಂತೆ, ನಿರೀಕ್ಷಿತ ಪೂರ್ಣಾವಧಿ ನಷ್ಟಗಳನ್ನು ಬರತಕ್ಕವುಗಳ ಆರಂಭಿಕ ಗುರುತಿಸುವಿಕೆಯಿಂದಲೇ ಲೆಕ್ಕಿಸುವ ಅಗತ್ಯವಿದ್ದು, ಈ ಸರಳೀಕೃತ ವಿಧಾನವನ್ನು ಕಂಪೆನಿಯು ವ್ಯಾಪಾರ ಸಂಬಂಧಿ ಬರತಕ್ಕವುಗಳಿಗೆ ಅನ್ವಯಿಸಿಕೊಂಡಿದೆ. ಕಂಪೆನಿಯು ಇಂಡ್ ಎ.ಎಸ್. 109ರಲ್ಲಿ ಅನುಮತಿಸಲಾದ, ಪ್ರಾಯೋಗಿಕವಾಗಿ ಅನುಕೂಲಕರವಾದ ಒಂದು ವಿಧಾನವನ್ನು ಬಳಸುತ್ತಿದೆ. ವರದಿ ಮಾಡಲಾದ ಅವಧಿಯ ಅಂತ್ಯದಲ್ಲಿರುವ ವ್ಯಾಪಾರ ಸಂಬಂಧಿ ಬರತಕ್ಕವುಗಳ ಬಾಕಿ ಮೊತ್ತದ 4% ರಷ್ಟನ್ನು ಅನುಮಾನಾಸ್ಪದ ಸಾಲಗಳಿಗೆ ಸಾಮಾನ್ಯ ಅವಕಾಶ ಕಲ್ಪಿಸುವ ಆಧಾರದಲ್ಲಿ ಈ ನಿರೀಕ್ಷಿತ ಸಾಲ ನಷ್ಟಗಳನ್ನು ಲೆಕ್ಕಾಚಾರ ಮಾಡಲಾಗಿದೆ. ಹೆಚ್. ಟಿ. ಸ್ಥಾವರಗಳಿಗೆ ಸಂಬಂಧಿಸಿದಂತೆ ಪ್ರಕರಣವಾರು ವಿಮರ್ಶೆ ಮಾಡಿ, ಅನುಮಾನಾಸ್ಪದ ಸಾಲದ ಮೊತ್ತವು 4% ಅವಕಾಶವನ್ನು ಮೀರಿದ್ದಲ್ಲಿ, ಅಂತಹ ಹೆಚ್ಚಿನ ಮೊತ್ತಕ್ಕೆ ಹೆಚ್ಚುವರಿ ಅವಕಾಶವನ್ನು ಕಲ್ಪಿಸಲಾಗಿದೆ.

2.16 ಸಿಬ್ಬಂದಿ ಸವಲತ್ತುಗಳು

ಅಲ್ಪಾವಧಿ ಸಿಬ್ಬಂದಿ ಸವಲತ್ತುಗಳು

ನೌಕರರು ಸಲ್ಲಿಸಿದ ಸೇವೆಯ ಬದಲಾಗಿ ಪಾವತಿಸಬೇಕೆಂದು ನಿರೀಕ್ಷಿಸಿದ ಅಲ್ಪಾವಧಿ ಸಿಬ್ಬಂದಿ ಸವಲತ್ತು ಮೊತ್ತಗಳನ್ನು ನೌಕರರು ಸೇವೆ ಸಲ್ಲಿಸಿದ ವರ್ಷದಲ್ಲಿಯೇ ಗುರುತಿಸಿ ಲೆಕ್ಕಿಸಲಾಗಿದೆ. ಈ ಸವಲತ್ತುಗಳು, ನೌಕರರು ಸಂಬಂಧಿತ ಸೇವೆಗಳನ್ನು ಸಲ್ಲಿಸಿದ ಅವಧಿಯ ನಂತರದ ಹನ್ನೆರಡು ತಿಂಗಳ ಒಳಗೆ ಸಂಭವಿಸಬಹುದೆಂದು ನಿರೀಕ್ಷಿಸಿದ ಪ್ರೋತ್ಸಾಹ ಧನಗಳು ಹಾಗೂ ಗೈರು ಪರಿಹಾರಗಳನ್ನೂ ಒಳಗೊಂಡಿದೆ.

ಅಲ್ಪಾವಧಿ ಗೈರು ಪರಿಹಾರ ವೆಚ್ಚಗಳನ್ನು ಕೆಳಕಂಡಂತೆ ಲೆಕ್ಕಿಸಲಾಗಿದೆ:

- ಸಂಚಯವಾಗುವ ಗೈರು ಪರಿಹಾರಗಳ ಪ್ರಕರಣಗಳಲ್ಲಿ, ನೌಕರರು ತಮ್ಮ ಭವಿಷ್ಯದ ಗೈರು ಪರಿಹಾರಗಳ ಮೇಲಿನ ಅರ್ಹತೆಯನ್ನು ಹೆಚ್ಚಿಸುವ ಸೇವೆಗಳನ್ನು ಸಲ್ಲಿಸಿದ ಸಂದರ್ಭಗಳಲ್ಲಿ; ಹಾಗೂ
- ಸಂಚಯವಾಗದ ಗೈರು ಪರಿಹಾರಗಳ ಪ್ರಕರಣಗಳಲ್ಲಿ, ಗೈರು ಸಂಭವಿಸಿದಾಗ.

ದೀರ್ಘಾವಧಿ ಸಿಬ್ಬಂದಿ ಸವಲತ್ತುಗಳು

ಗಳಿಕೆ ರಜೆ ಯೋಜನೆ ಹಾಗೂ ಕುಟುಂಬ ಸಹಾಯ ನಿಧಿಗಳನ್ನು ಒಳಗೊಂಡ ದೀರ್ಘಾವಧಿ ಸಿಬ್ಬಂದಿ ಸವಲತ್ತುಗಳನ್ನು, ವ್ಯಾಖ್ಯಾನಿಸಿದ ಸವಲತ್ತು ಹೊಣೆಗಾರಿಕೆಗಳ ಪ್ರಸಕ್ತ ಮೌಲ್ಯದ ಆಧಾರದಲ್ಲಿ ಗುರುತಿಸಲಾಗಿದೆ ಮತ್ತು ಪ್ರತೀ ವರ್ಷದ ವರದಿ ಮಾಡಲಾಗುವ ಅವಧಿಯ ಅಂತ್ಯಕ್ಕೆ ಇರುವಂತೆ ಕೈಗೊಂಡ ವಾಸ್ತವಿಕ ಮೌಲ್ಯಮಾಪನಗಳೊಂದಿಗೆ ಯೋಜಿತ ಘಟಕ ಜಮಾ ವಿಧಾನವನ್ನು ಬಳಸಿ ಲೆಕ್ಕಾಚಾರ ಮಾಡಲಾಗಿದೆ ಮತ್ತು ಅದೇ ವರ್ಷದ ಲಾಭ ಮತ್ತು ನಷ್ಟಗಳ ಖಾತೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಉದ್ಯೋಗ ನಂತರದ ಸವಲತ್ತುಗಳು

ವ್ಯಾಖ್ಯಾನಿಸಿದ ವಂತಿಗೆ ಯೋಜನೆಗಳು

ದಿನಾಂಕ 01.4.2006 ರ ನಂತರ ಸೇವೆಗೆ ಸೇರಿದ ನೌಕರರ ಪಿಂಚಣಿ ನಿಧಿ ಹಾಗೂ ಉಪದಾನ ನಿಧಿಗಳನ್ನು ಒಳಗೊಂಡಿರುವ ವ್ಯಾಖ್ಯಾನಿಸಿದ ವಂತಿಗೆ ಯೋಜನೆಗಳಡಿಯ ಉದ್ಯೋಗ ನಂತರದ ಸಿಬ್ಬಂದಿ ಸವಲತ್ತುಗಳನ್ನು, ಈ ಯೋಜನೆಗೆ ಕಂಪೆನಿಯ ಪಾವತಿ ಜವಾಬ್ದಾರಿಗಳ ಆಧಾರದಲ್ಲಿ ಗುರುತಿಸಿ ಲೆಕ್ಕಿಸಿದೆ (ಮೂಲವೇತನ + ಡಿಯರ್‌ನೆಸ್ಸ್ ವೇತನ + ತುಟ್ಟಿ ಭತ್ಯೆಗಳ 10% ಮೊತ್ತ ನೌಕರರ ಸಮಾನ ವಂತಿಗೆ ಮೊತ್ತದೊಂದಿಗೆ). ಈ ಮೊತ್ತವನ್ನು ಕವಿಪ್ರನಿನಿ/ಎಸ್ಕಾಂಗಳ ಪಿಂಚಣಿ ಮತ್ತು ಉಪದಾನ ಪ್ರತಿಷ್ಠಾನಕ್ಕೆ ಪಾವತಿಸಿ ಅದೇ ವರ್ಷದ ಲಾಭ ಮತ್ತು ನಷ್ಟಗಳ ಖಾತೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ದಿನಾಂಕ 01.04.2006 ರ ಮೊದಲು ಸೇವೆಗೆ ಸೇರಿದ ನೌಕರರಿಗೆ ಸಂಬಂಧಪಟ್ಟಂತೆ, ಕವಿಪ್ರನಿನಿ ಎಸ್ಕಾಂಗಳ ಪಿಂಚಣಿ ಹಾಗೂ ಉಪದಾನ ಪ್ರತಿಷ್ಠಾನವು ವಾಸ್ತವಿಕ ಮೌಲೀಕರಣದ ಆಧಾರದಲ್ಲಿ ನಿಗಧಿಪಡಿಸಿದ ದರದಲ್ಲಿ ಪಿಂಚಣಿ ಮತ್ತು ಉಪದಾನದ ಬಾಬ್ತು ಕಂಪೆನಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ವಾಸ್ತವಿಕ ಮೌಲ್ಯಮಾಪನದ ಕಾರಣದಿಂದ ಕೊಡುಗೆ ದರಗಳಲ್ಲಿ ಯಾವುದೇ ಪರಿಷ್ಕರಣೆಯಾದಲ್ಲಿ, ಪ್ರತಿಷ್ಠಾನವು ಕಂಪೆನಿಗೆ ಮಾಹಿತಿ ನೀಡಿದ ಆರ್ಥಿಕ ವರ್ಷದಲ್ಲಿಯೇ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುತ್ತದೆ.

ಕಂಪೆನಿಯ ವಂತಿಗೆ ಮೊತ್ತಗಳನ್ನು ಪ್ರತಿಷ್ಠಾನವು ಸಂಗ್ರಹಿಸಿ ನಿರ್ವಹಿಸುತ್ತಿರುವುದರಿಂದ ಹಾಗೂ ಕಂಪೆನಿಯಿಂದ ವಂತಿಗೆಯನ್ನು "ಪೇ ಆ್ಯಸ್ ಯು ಗೋ" ಆಧಾರದಲ್ಲಿ ಪಾವತಿಸಲಾಗುತ್ತಿರುವುದರಿಂದ, ಈ ಯೋಜನೆಯನ್ನು ಇಂಡ್ ಎ.ಎಸ್.19 ಕ್ಕೆ ಅನುಗುಣವಾಗಿ ವ್ಯಾಖ್ಯಾನಿಸಿದ ವಂತಿಗೆ ಯೋಜನೆ ಎಂದು ಪರಿಗಣಿಸಿದೆ.

2.17 ಅವಕಾಶಗಳು, ಅನಿಶ್ಚಿತ ಹೊಣೆಗಾರಿಕೆಗಳು ಹಾಗೂ ಅನಿಶ್ಚಿತ ಆಸ್ತಿಗಳು

ಹಿಂದಿನ ಅವಧಿಯಲ್ಲಿ ನಡೆದ ಘಟನೆಗಳ ಪರಿಣಾಮವಾಗಿ ಕಂಪೆನಿಯು ಪ್ರಸ್ತುತ ಯಾವುದೇ ಜವಾಬ್ದಾರಿಗಳನ್ನು ಹೊಂದಿದ್ದಲ್ಲಿ ಹಾಗೂ ಈ ಜವಾಬ್ದಾರಿಗಳನ್ನು ಪಾವತಿಸಲು ಹಣಕಾಸಿನ ಹೊರಹರಿವಿನ ಆವಶ್ಯಕತೆಯು ಸಂಭವನೀಯವಾಗಿದ್ದಲ್ಲಿ, ತಾಂತ್ರಿಕ ಮೌಲ್ಯಮಾಪನ ಹಾಗೂ ಹಿಂದಿನ ಅನುಭವಗಳ ಆಧಾರದಲ್ಲಿ ವಿಶ್ವಾಸಾರ್ಹವಾಗಿ ಅಂದಾಜಿಸಿ ಅವಕಾಶಗಳನ್ನು ಕಲ್ಪಿಸಲಾಗಿದೆ.

ಅವಕಾಶ ಕಲ್ಪಿಸಲಾದ ಮೊತ್ತವು, ಜವಾಬ್ದಾರಿಯನ್ನು ಆವರಿಸಿರುವ ಅಪಾಯ ಹಾಗೂ ಅನಿಶ್ಚಿತತೆಗಳನ್ನು ಪರಿಗಣಿಸಿ, ವರದಿ ಮಾಡಲಾದ ಅವಧಿಯ ಅಂತ್ಯದಲ್ಲಿರುವ ಜವಾಬ್ದಾರಿಯನ್ನು ಪಾವತಿಸಲು ಅಗತ್ಯವಿರುವ, ಸಂಪನ್ಮೂಲದ ಅತ್ಯುತ್ತಮ ಅಂದಾಜಾಗಿರುತ್ತದೆ.

ಪ್ರಸ್ತುತ ಜವಾಬ್ದಾರಿಯನ್ನು ಪಾವತಿಸಲು ಅಗತ್ಯವಿರುವ ನಗದು ಹರಿವನ್ನು ಬಳಸಿ ಅವಕಾಶವನ್ನು ಅಳೆಯಲಾಗಿದ್ದರೆ, ಅದರ ಪ್ರಚಲಿತ ಮೊತ್ತವು ನಗದು ಹರಿವಿನ ವರ್ತಮಾನದ ಮೌಲ್ಯವಾಗಿರುತ್ತದೆ (ಹಣದ ಸಮಯ ಮೌಲ್ಯದ ಪರಿಣಾಮವು ಗಣನೀಯವಾಗಿರುವಾಗ). ರಿಯಾಯಿತಿಯನ್ನು ಬಳಸಿದಾಗ, ಸಮಯದ ಹರಿವಿನ ಪರಿಣಾಮವಾಗಿ ಅವಕಾಶಗಳ ಮೊತ್ತದಲ್ಲಿ ಆದ ಏರಿಕೆಯನ್ನು ಆರ್ಥಿಕ ವೆಚ್ಚವಾಗಿ ಗುರುತಿಸಿ ಲೆಕ್ಕಿಸಲಾಗುವುದು.

ಆರ್ಥಿಕ ಪ್ರಯೋಜನಗಳ ಒಳಹರಿವು ಸಂಭವನೀಯವಾಗಿರುವಾಗ ಅನಿಶ್ಚಿತ ಆಸ್ತಿಗಳನ್ನು ಗುರುತಿಸಿ, ಹಣಕಾಸು ವಿವರಣಾ ಪಟ್ಟಿಗಳಲ್ಲಿ ಟಿಪ್ಪಣಿಗಳ ಮುಖಾಂತರ ಬಹಿರಂಗಪಡಿಸಲಾಗುವುದು.

ಆಡಳಿತ ವರ್ಗದ ನಿರ್ಧಾರದ ಆಧಾರದಲ್ಲಿ, ಸಂಪನ್ಮೂಲಗಳ ಹೊರ ಹರಿವಿನ ಸಂಭವನೀಯತೆಯು ವಿರಳವಾಗಿದ್ದಾಗ, ಅನಿಶ್ಚಿತ ಹೊಣೆಗಾರಿಕೆಗಳನ್ನು ಗುರುತಿಸಿ, ಹಣಕಾಸು ವಿವರಣಾ ಪಟ್ಟಿಗಳಲ್ಲಿ ಟಿಪ್ಪಣಿಗಳ ಮುಖಾಂತರ ಬಹಿರಂಗಪಡಿಸಲಾಗುವುದು ಹಾಗೂ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಪುನರ್‌ಪರಿಶೀಲಿಸಿ ನಿರ್ವಹಣಾ ಮಂಡಳಿಯ ಪ್ರಸಕ್ತ ಅಂದಾಜುಗಳಲ್ಲಿ ಪ್ರತಿಫಲಿಸುವಂತೆ ಹೊಂದಾಣಿಕೆ ಮಾಡಲಾಗುವುದು.

2.18 ಆದಾಯಗಳ ಮೇಲಿನ ತೆರಿಗೆ

ಆದಾಯ ತೆರಿಗೆ ವೆಚ್ಚವು, ಪ್ರಸ್ತುತ ಪಾವತಿಸಬೇಕಾದ ಪ್ರಚಲಿತ ತೆರಿಗೆ ಹಾಗೂ ಮುಂದೂಡಿದ ತೆರಿಗೆಗಳ ಒಟ್ಟು ಮೊತ್ತವನ್ನು ಪ್ರತಿನಿಧಿಸುತ್ತದೆ.

ಪ್ರಚಲಿತ ತೆರಿಗೆ

ಪಾವತಿಸಬೇಕಾದ ಪ್ರಚಲಿತ ತೆರಿಗೆಯು, ತೆರಿಗೆ ಯೋಗ್ಯ ಲಾಭದ ಮೊತ್ತದ ಮೇಲೆ ಆಧರಿತವಾಗಿರುತ್ತದೆ. ಇತರ ವರ್ಷಗಳ, ತೆರಿಗೆ ವಿಧಿಸಬಹುದಾದ ಅಥವಾ ಕಳೆಯಬಹುದಾದ ಆದಾಯ ಅಥವಾ ವೆಚ್ಚಗಳಂದಾಗಿ ಮತ್ತು ತೆರಿಗೆ ವಿಧಿಸಲೇಬಾರದ ಅಥವಾ ಕಳೆಯಬಾರದ ಅಂಶಗಳಂದಾಗಿ, ತೆರಿಗೆ ಯೋಗ್ಯ ಲಾಭದ ಮೊತ್ತವು ಲಾಭ ಮತ್ತು ನಷ್ಟಗಳ ಖಾತೆಯಲ್ಲಿನ ತೆರಿಗೆ ಪೂರ್ವ ಲಾಭದ ಮೊತ್ತಕ್ಕಿಂತ ಭಿನ್ನವಾಗಿರುತ್ತದೆ. ಜಾರಿ ಮಾಡಲಾಗಿರುವ ತೆರಿಗೆ ದರಗಳಲ್ಲಿ ಅಥವಾ ವರದಿ ಮಾಡಲಾದ ಅವಧಿಯ ಅಂತ್ಯದಲ್ಲಿ ಮೂಲಭೂತವಾಗಿ ಜಾರಿಗೊಳಿಸಲಾದ ತೆರಿಗೆ ದರಗಳನ್ನು ಬಳಸಿ ಕಂಪೆನಿಯ ಪ್ರಚಲಿತ ತೆರಿಗೆಗಳನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಮುಂದೂಡಲಾದ ತೆರಿಗೆಗಳು

ಹಣಕಾಸು ವಿವರಣಾ ಪಟ್ಟಿಗಳ ಪ್ರಕಾರ ಆಸ್ತಿಗಳು ಮತ್ತು ಜವಾಬ್ದಾರಿಗಳ ಪ್ರಚಲಿತ ಮೌಲ್ಯ ಮತ್ತು ಅದಕ್ಕನುಗುಣವಾಗಿ, ತೆರಿಗೆ ಯೋಗ್ಯ ಲಾಭವನ್ನು ನಿರ್ಧರಿಸಲು ಬಳಸಲಾದ ತೆರಿಗೆ ಮೂಲಗಳ ನಡುವಿನ ತಾತ್ಕಾಲಿಕ ವ್ಯತ್ಯಾಸದ ಮೊತ್ತದ ಆಧಾರದ ಮೇಲೆ ಮುಂದೂಡಲಾದ ತೆರಿಗೆಗಳನ್ನು ಲೆಕ್ಕಹಾಕಲಾಗುವುದು. ಕಂಪೆನಿಯ ಮುಂದೂಡಲಾದ ತೆರಿಗೆ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು, ಜಾರಿ ಮಾಡಲಾಗಿರುವ ತೆರಿಗೆ ದರಗಳು (ಮತ್ತು ತೆರಿಗೆ ಕಾನೂನುಗಳು) ಅಥವಾ ವರದಿ ಮಾಡಲಾದ ಅವಧಿಯ ಅಂತ್ಯದಲ್ಲಿ ಮೂಲಭೂತವಾಗಿ ಜಾರಿಗೊಳಿಸಲಾದ ತೆರಿಗೆ ದರಗಳನ್ನು ಆದರಿಸಿ, ಜವಾಬ್ದಾರಿಗಳು ಪಾವತಿಯಾಗುವ ಅಥವಾ ಆಸ್ತಿಗಳು ಸ್ವೀಕೃತವಾಗುವ ಅವಧಿಯಲ್ಲಿ ಅನ್ವಯವಾಗಬಹುದೆಂದು ಅಂದಾಜಿಸಲಾದ ತೆರಿಗೆ ದರಗಳಲ್ಲಿ ಮೌಲ್ಯಮಾಪನ ಮಾಡಲಾಗುವುದು.

ಸಾಮಾನ್ಯವಾಗಿ, ಕಳೆಯಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ ಎದುರಾಗಿ ಬಳಸಬಹುದಾದ, ತೆರಿಗೆ ಯೋಗ್ಯ ಲಾಭಗಳಿರುವ ಸಂಭವನೀಯತೆಯಿದ್ದಲ್ಲಿ ಅಷ್ಟಕ್ಕೆ ಮಿತಿಗೊಳಿಸಿ ಎಲ್ಲಾ ತೆರಿಗೆಯೋಗ್ಯ ತಾತ್ಕಾಲಿಕ ವ್ಯತ್ಯಾಸಗಳಿಗೆ ಮುಂದೂಡಲಾದ ತೆರಿಗೆ ಜವಾಬ್ದಾರಿಗಳನ್ನು ಗುರುತಿಸಲಾಗುವುದು. ತಾತ್ಕಾಲಿಕ ವ್ಯತ್ಯಾಸಗಳಿಗೆ ಎದುರಾಗಿ ಬಳಸಬಹುದಾದ, ಭವಿಷ್ಯದ ತೆರಿಗೆಯೋಗ್ಯ ಲಾಭಗಳಿರುವ ಸಂಭವನೀಯತೆಯಿದ್ದಲ್ಲಿ ಅಷ್ಟಕ್ಕೆ ಮಿತಿಗೊಳಿಸಿ ಮುಂದೂಡಲಾದ ತೆರಿಗೆ ಆಸ್ತಿಗಳನ್ನು ಗುರುತಿಸಲಾಗುವುದು. ಪ್ರಚಲಿತ ಮೌಲ್ಯಗಳನ್ನು ಪ್ರತೀ ವರದಿ ಮಾಡಲಾಗುವ ಅವಧಿಯ ಅಂತ್ಯದಲ್ಲಿ ವಿಮರ್ಶಿಸಿ, ಅವುಗಳಿಗೆ ಸಂಬಂಧಪಟ್ಟ ತೆರಿಗೆ ಪ್ರಯೋಜನಗಳು ಮುಂದೆಂದೂ ಸ್ವೀಕೃತಿಯಾಗದಿರುವ ಸಂಭವನೀಯತೆಯಿರುವಲ್ಲಿ, ಅಷ್ಟರ ಮಟ್ಟಿಗೆ ಅವುಗಳನ್ನು ಕಡಿಮೆಗೊಳಿಸಿಕೊಳ್ಳಲಾಗುವುದು. ಕಾಲಿಕ ವ್ಯತ್ಯಾಸವು ತೆರಿಗೆ ರಜಾ ಅವಧಿ ಅಥವಾ ವಿನಾಯಿತಿ ಅವಧಿಯಲ್ಲಿ ಹೊಂದಾಣಿಕೆಯಾಗುವ ನಿರೀಕ್ಷೆಯಿದ್ದು ಆದಾಯವು ತೆರಿಗೆ ಮುಕ್ತವಾಗಿದ್ದಲ್ಲಿ, ತಾತ್ಕಾಲಿಕ ಕಾಲಿಕ ವ್ಯತ್ಯಾಸಕ್ಕೆ ಮುಂದೂಡಿದ ತೆರಿಗೆ ಆಸ್ತಿ/ ಜವಾಬ್ದಾರಿಗಳನ್ನು ಸೃಷ್ಟಿಸಲಾಗುವುದಿಲ್ಲ.

ಪ್ರಚಲಿತ ತೆರಿಗೆ ಹಾಗೂ ಮುಂದೂಡಿದ ತೆರಿಗೆಗಳು ಅನ್ವಯವಾಗುವ ಅಂಶಗಳು ಹಾಗೂ ಪ್ರಚಲಿತ ತೆರಿಗೆ ಮತ್ತು ಮುಂದೂಡಿದ ತೆರಿಗೆಗಳು ಇತರ ಸಮಗ್ರ ಆದಾಯಗಳಲ್ಲಿ ಅಥವಾ ನೇರವಾಗಿ ಬಂಡವಾಳದಲ್ಲಿ ಗುರುತಿಸಲಾಗಿರುವ ಪ್ರಕರಣಗಳನ್ನು ಹೊರತುಪಡಿಸಿ, ಪ್ರಚಲಿತ ತೆರಿಗೆ ಹಾಗೂ ಮುಂದೂಡಿದ ತೆರಿಗೆಗಳನ್ನು ಲಾಭ ಮತ್ತು ನಷ್ಟ ಖಾತೆಯಲ್ಲಿ ಲೆಕ್ಕಿಸಲಾಗುವುದು.

ಪಾವತಿಸಬೇಕಾದ ಕನಿಷ್ಟ ಪರ್ಯಾಯ ತೆರಿಗೆ ಮೊತ್ತವನ್ನು ಪ್ರಚಲಿತ ತೆರಿಗೆಯಾಗಿ ಲೆಕ್ಕಿಸಲಾಗುವುದು ಹಾಗೂ ಅದೇ ಸಂದರ್ಭದಲ್ಲಿ, ಭವಿಷ್ಯದ ತೆರಿಗೆ ಜವಾಬ್ದಾರಿಗಳಿಗೆ ಹೊಂದಾಣಿಕೆ ಮಾಡಲಾಗುವ ಸಾಧ್ಯತೆಯನ್ನು ಪರಿಗಣಿಸಿ, ಈ ಮೊತ್ತವನ್ನು ಲಾಭ ಮತ್ತು ನಷ್ಟ ಖಾತೆಯಲ್ಲಿ ಜಮೆ ತೆಗೆದುಕೊಳ್ಳಲಾಗುವುದು.

2.19 ನಗದು ಹರಿವು ಪಟ್ಟಿ

ನಗದು ಹರಿವನ್ನು ಪರೋಕ್ಷ ವಿಧಾನವನ್ನು ಬಳಸಿ ವರದಿ ಮಾಡಲಾಗಿದೆ. ಇಲ್ಲಿ ನಗದಲ್ಲದ ವ್ಯವಹಾರಗಳ ಪರಿಣಾಮಗಳನ್ನು, ಹಿಂದಿನ ಅಥವಾ ಭವಿಷ್ಯದ ಕಾರ್ಯಚಟುವಟಿಕೆಗಳ ನಗದು ಸ್ವೀಕೃತಿ ಅಥವಾ ಪಾವತಿಗಳು ಮತ್ತು ಹೂಡಿಕೆ ಅಥವಾ ಆರ್ಥಿಕ ನಗದು ಹರಿವಿಗೆ ಸಂಬಂಧಿಸಿದ, ಆದಾಯ ಅಥವಾ ವೆಚ್ಚಗಳ ಮುಂದೂಡುವಿಕೆ ಅಥವಾ ಸಂಚಯಗಳನ್ನು, ತೆರಿಗೆ ಪೂರ್ವ ಲಾಭ/ನಷ್ಟಗಳಿಗೆ ಹೊಂದಾಣಿಕೆ ಮಾಡಲಾಗಿದೆ. ನಗದು ಹರಿವುಗಳನ್ನು ಹೂಡಿಕೆ, ಕಾರ್ಯಚಟುವಟಿಕೆ ಮತ್ತು ಆರ್ಥಿಕ ಚಟುವಟಿಕೆಗಳೆಂದು ಪ್ರತ್ಯೇಕಿಸಿದೆ.

2.20 ಆರ್ಥಿಕ ಸಾಧನಗಳು

ಉತ್ಪನ್ನವಲ್ಲದ ಆರ್ಥಿಕ ಸಾಧನಗಳನ್ನು ಕೆಳಕಂಡಂತೆ ವಿಂಗಡಿಸಲಾಗಿದೆ.

ಆರ್ಥಿಕ ಆಸ್ತಿಗಳನ್ನು ಈ ರೀತಿ ಮೌಲ್ಯಮಾಪನ ಮಾಡಲಾಗುವುದು.

- ಋಣಮುಕ್ತತೆಗೊಳಿಸಿದ ದರ
- ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯ
- ಇತರ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ

ಆರ್ಥಿಕ ಜವಾಬ್ದಾರಿಗಳನ್ನು ಈ ರೀತಿ ಮೌಲ್ಯಮಾಪನ ಮಾಡಲಾಗುವುದು.

- ಋಣಮುಕ್ತತೆಗೊಳಿಸಿದ ದರ
- ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯ

ಆರಂಭಿಕ ಮಾನ್ಯತೆ ಹಾಗೂ ಮೌಲ್ಯಮಾಪನ

ಆರ್ಥಿಕ ಸಾಧನಗಳ ಒಪ್ಪಂದದ ನಿಬಂಧನೆಗಳಿಗೆ ಕಂಪೆನಿಯು ಭಾಗಿಯಾಗಿದ್ದಾಗ, ಆರ್ಥಿಕ ಆಸ್ತಿಗಳನ್ನು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು ಕಂಪೆನಿಯ ಆರ್ಥಿಕ ಸ್ಥಿತಿಗತಿಯ ವಿವರಣಾ ಪಟ್ಟಿಗಳಲ್ಲಿ ಗುರುತಿಸಿದೆ. ಕಂಪೆನಿಯು ತನ್ನ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳ ವರ್ಗೀಕರಣವನ್ನು ಆರಂಭಿಕ ಗುರುತಿಸುವಿಕೆಯ ರೀತ್ಯಾ ನಿರ್ಧರಿಸುತ್ತದೆ. ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯಮಾಪನ ಮಾಡಿದ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು ಹೊರತುಪಡಿಸಿ ಇತರ ಎಲ್ಲಾ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು, ಅವುಗಳ ನ್ಯಾಯೋಚಿತ ಮೌಲ್ಯದಿಂದ ನೇರವಾಗಿ ವಿಧಿಸಬಹುದಾದ ವ್ಯಾವಹಾರಿಕ ವೆಚ್ಚಗಳನ್ನು ಕೂಡಿ ಅಥವಾ ಕಳೆದು ಪ್ರಾರಂಭಿಕವಾಗಿ ಗುರುತಿಸಲಾಗಿದೆ. ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯಮಾಪನ ಮಾಡಿದ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು ಪ್ರಾರಂಭಿಕವಾಗಿ ನ್ಯಾಯೋಚಿತ ಮೌಲ್ಯದಲ್ಲಿಯೇ ಗುರುತಿಸಲಾಗಿದೆ ಮತ್ತು ವ್ಯಾವಹಾರಿಕ ವೆಚ್ಚಗಳನ್ನು ಆದಾಯಗಳ ನಿರೂಪಣಾ ಪಟ್ಟಿಯಲ್ಲಿ ವೆಚ್ಚಗಳೆಂದು ದಾಖಲಿಸಲಾಗಿದೆ.

ತದನಂತರದ ಮೌಲ್ಯಮಾಪನ

ಆರ್ಥಿಕ ಆಸ್ತಿಗಳ ತದನಂತರದ ಲೆಕ್ಕಾಚಾರಗಳು ಮುಂದಿನಂತಿರುವ ಅವುಗಳ ವರ್ಗೀಕರಣವನ್ನು ಆಧರಿಸಿರುತ್ತವೆ:

ಋಣಮುಕ್ತತೆಗೊಳಿಸಿದ ದರದಲ್ಲಿ ಲೆಕ್ಕಾಚಾರ ಮಾಡಲ್ಪಟ್ಟ ಆರ್ಥಿಕ ಆಸ್ತಿಗಳು/ಆರ್ಥಿಕ ಹೊಣೆಗಾರಿಕೆಗಳು

ಬಾಕಿ ಇರುವ ಅಸಲು ಮೊಬಲಗಿನ ಕಂತು ಹಾಗೂ ಬಡ್ಡಿಯನ್ನು ಪಾವತಿಸುವ ಸಲುವಾಗಿ ನಿರ್ದಿಷ್ಟ ದಿನಾಂಕಗಳಂದು ನಗದು ಪಾವತಿಸುವಿಕೆಯ ನಿಮಿತ್ತ, ಕರಾರುಬದ್ಧ ನಗದು ಹರಿಯುವಿಕೆ ಹಾಗೂ ಕರಾರುಬದ್ಧತೆಯ ಪ್ರಕಾರ ಆಸ್ತಿಯನ್ನು ಹೊಂದಲು, ಅಂತಹ ಆಸ್ತಿಗಳನ್ನು ವ್ಯವಹಾರಿಕ ನಮೂನೆಯಾಗಿ ಹೊಂದುವ ಉದ್ದೇಶವಿದ್ದಲ್ಲಿ, ತದನಂತರದಲ್ಲಿ ಆರ್ಥಿಕ ಆಸ್ತಿ ಅಥವಾ ಆರ್ಥಿಕ ಹೊಣೆಗಾರಿಕೆಗಳನ್ನು ಋಣಮುಕ್ತತೆಗೊಳಿಸಿದ ದರದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ,

ಇತರ ಸಮಗ್ರ ಆದಾಯಗಳ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಆರ್ಥಿಕ ಆಸ್ತಿಗಳು

ಬಾಕಿ ಇರುವ ಅಸಲು ಮೊಬಲಗಿನ ಕಂತು ಹಾಗೂ ಬಡ್ಡಿಯನ್ನು ಪಾವತಿಸುವ ಸಲುವಾಗಿ ನಿರ್ದಿಷ್ಟ ದಿನಾಂಕಗಳಂದು ನಗದು ಪಾವತಿಸುವಿಕೆಯ ನಿಮಿತ್ತ, ಆರ್ಥಿಕ ಆಸ್ತಿಗಳನ್ನು ಮಾರಾಟ ಮಾಡಿ, ಕರಾರುಬದ್ಧ ನಗದು ಹರಿಯುವಿಕೆಯನ್ನು ಹೊಂದಲು, ಅಂತಹ ಆಸ್ತಿಗಳನ್ನು ವ್ಯವಹಾರಿಕ ನಮೂನೆಯಾಗಿ ಹೊಂದುವ ಉದ್ದೇಶವನ್ನು ಸಾಧಿಸಿದ್ದಲ್ಲಿ, ತದನಂತರದಲ್ಲಿ ಆರ್ಥಿಕ ಆಸ್ತಿಗಳನ್ನು ಇತರ ಸಮಗ್ರ ಆದಾಯಗಳ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ.

ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಆರ್ಥಿಕ ಆಸ್ತಿಗಳು/ಆರ್ಥಿಕ ಹೊಣೆಗಾರಿಕೆಗಳು:

ಮೇಲಿನ ಯಾವುದೇ ವರ್ಗದಲ್ಲಿ ಒಳಪಡಿಸಿರದ ಆರ್ಥಿಕ ಆಸ್ತಿ ಅಥವಾ ಆರ್ಥಿಕ ಹೊಣೆಗಾರಿಕೆಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ.

ಅಮಾನ್ಯಗೊಳಿಸುವಿಕೆ:

ಆರ್ಥಿಕ ಆಸ್ತಿಗಳು

ಆಸ್ತಿಗಳಿಂದ ನಗದು ಹರಿಯುವಿಕೆಯ ಕರಾರುಬದ್ಧ ಹಕ್ಕುಗಳು ಮುಕ್ತಾಯವಾದಾಗ ಅಥವಾ ಆರ್ಥಿಕ ಆಸ್ತಿಯ ಒಡೆತನದ ಸಹಿತ ಅದರ ಎಲ್ಲಾ ಅಪಾಯಕಾರಿ ಅಂಶಗಳು ಹಾಗೂ ಅದರ ಪ್ರತಿಫಲಗಳನ್ನು ವರ್ಗಾವಣೆಗೊಂಡಾಗ ಮಾತ್ರ ಕಂಪನಿಯು ಆರ್ಥಿಕ ಆಸ್ತಿಯನ್ನು ಅಮಾನ್ಯಗೊಳಿಸುತ್ತದೆ.

ಆರ್ಥಿಕ ಹೊಣೆಗಾರಿಕೆಗಳು

ಹೊಣೆಗಾರಿಕೆಯಡಿಯಲ್ಲಿನ ಭಾದ್ಯತೆಯನ್ನು ನಿರ್ವಹಿಸಿದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಮುಕ್ತಾಯಗೊಳಿಸಿದಾಗ ಆರ್ಥಿಕ ಹೊಣೆಗಾರಿಕೆಯನ್ನು ಅಮಾನ್ಯಗೊಳಿಸಲಾಗುತ್ತದೆ. ಹಾಲಿ ಆರ್ಥಿಕ ಹೊಣೆಗಾರಿಕೆಯನ್ನು ಅದೇ ನೀಡಿಕೆದಾರರಿಂದ ಬೇರೊಂದು ಷರತ್ತುಗಳೊಂದಿಗೆ ಬೇರೆ ಹೊಣೆಗಾರಿಕೆಯಿಂದ ಬದಲಾಯಿಸಿದಾಗ ಅಥವಾ ಹಾಲಿ ಹೊಣೆಗಾರಿಕೆಗಳ ಷರತ್ತುಗಳನ್ನು ಸಾಕಷ್ಟು ಮಾರ್ಪಾಡುಗೊಳಿಸಿದಾಗ, ಅಂತಹ ಬದಲಾವಣೆ ಅಥವಾ ಮಾರ್ಪಾಡುಗಳನ್ನು ಮೂಲ ಹೊಣೆಗಾರಿಕೆಯ ಅಮಾನ್ಯವಾಗಿದೆ ಎಂದು ಪರಿಗಣಿಸಲಾಗುತ್ತದೆ ಹಾಗೂ ಹೊಸ ಹೊಣೆಗಾರಿಕೆಯ ಮಾನ್ಯಗೊಳಿಸುವಿಕೆಯು ಹಾಗೂ ಆಯಾ ಹೊಣೆಗಾರಿಕೆಗಳ ನಡುವಿನ ವ್ಯತ್ಯಯಗಳ ಪ್ರಮಾಣವನ್ನು ಆದಾಯ ನಿರೂಪಣಾ ವರದಿಯಲ್ಲಿ ಮಾನ್ಯಗೊಳಿಸಲಾಗುತ್ತದೆ.

2.21 ಭೋಗ್ಯಗಳು:

ಭೋಗ್ಯದ ಷರತ್ತುಗಳು, ಮಾಲೀಕತ್ವದ ಸಂಪೂರ್ಣ ಅಪಾಯಕಾರಿ ಅಂಶಗಳನ್ನು ಹಾಗೂ ಅದರ ಪ್ರತಿಫಲಗಳನ್ನು ಗಣನೀಯವಾಗಿ ಅನುಭವದಾರರಿಗೆ ವರ್ಗಾಯಿಸುವಂತಾಗಿದ್ದಾಗ ಅಂತಹ ಭೋಗ್ಯಗಳನ್ನು ಆರ್ಥಿಕ ಭೋಗ್ಯಗಳು ಎಂದು ವರ್ಗೀಕರಿಸಲಾಗುತ್ತದೆ. ಪ್ರತೀ ಭೋಗ್ಯಗಳ ಆರಂಭದಲ್ಲಿಯೇ ನಿರ್ಧರಿಸಲಾಗುವ, ಭೋಗ್ಯದ ಆಸ್ತಿಗಳ ನ್ಯಾಯೋಚಿತ ಮೌಲ್ಯ ಅಥವಾ ಒಂದು ವೇಳೆ ಕಡಿಮೆಯಿದ್ದಲ್ಲಿ, ಕನಿಷ್ಟ ಗೇಣಿ ಪಾವತಿಯ ಪ್ರಚಲಿತ ಮೌಲ್ಯಗಳಲ್ಲಿ ಆರ್ಥಿಕ ಭೋಗ್ಯಗಳನ್ನು ಅನುಭವದಾರರು ಗುರುತಿಸಿ ಲೆಕ್ಕಿಸಬೇಕಾಗುತ್ತದೆ. ಭೋಗ್ಯಗಳ ಮೇಲಿನ ಯಾವುದೇ ಆರಂಭಿಕ ನೇರ ವೆಚ್ಚಗಳನ್ನು ಆಸ್ತಿಗಳೆಂದು ಮಾನ್ಯಗೊಳಿಸಿದ ಮೊಬಲಗಿಗೆ ಸೇರ್ಪಡೆಯಾಗಿಸತಕ್ಕದ್ದು. ಕನಿಷ್ಟ ಭೋಗ್ಯದ ಪಾವತಿಗಳನ್ನು ಆರ್ಥಿಕ ಶುಲ್ಕಗಳು ಹಾಗೂ ಬಾಕಿಯಿರುವ ಹೊಣೆಗಾರಿಕೆಗಳ ಇಳಿಕೆಗಳ ನಡುವೆ ಸಮನಾಗಿ ಹಂಚಿಕೆ ಮಾಡತಕ್ಕದ್ದು. ಪ್ರತೀ ಲೆಕ್ಕಾಚಾರದ ಅವಧಿಯಲ್ಲಿ, ಸವಕಳಿ ಯೋಗ್ಯ ಆಸ್ತಿಗಳ ಮೇಲಿನ ಸವಕಳಿ ವೆಚ್ಚ ಹಾಗೂ ಹಣಕಾಸು ವೆಚ್ಚಗಳಿಗೆ ಹಣಕಾಸು ಭೋಗ್ಯವು ಎಡೆ ಮಾಡಿಕೊಡುತ್ತವೆ. ಭೋಗ್ಯದ ವಸ್ತುವಿಗೆ ಸಂಬಂಧಿಸಿದ ಮಾಲೀಕತ್ವದ ಸಂಪೂರ್ಣ ಅಪಾಯಕಾರಿ ಅಂಶಗಳು ಹಾಗೂ ಅದರ ಪ್ರತಿಫಲಗಳನ್ನು ಗಣನೀಯವಾಗಿ ಗೇಣಿದಾರರೇ ಉಳಿಸಿಕೊಂಡಿದ್ದಲ್ಲಿ ಅಂತಹ ಭೋಗ್ಯಗಳನ್ನು ಕಾರ್ಯಾಚರಣಾ ಭೋಗ್ಯಗಳು ಎಂದು ವರ್ಗೀಕರಿಸಲಾಗುತ್ತದೆ. ಸಾಮಾನ್ಯ ಹಣದುಬ್ಬರಗಳಿಗೆ ಅನುಗುಣವಾಗಿ ಭೋಗ್ಯದ ಶುಲ್ಕಗಳು ಏರಿಕೆಯಾಗುವ ಪ್ರಕರಣಗಳನ್ನು ಹೊರತುಪಡಿಸಿ, ಕಾರ್ಯಾಚರಣಾ ಭೋಗ್ಯಗಳ ಪಾವತಿಗಳನ್ನು ಸ್ಟ್ರೈಟ್ ಲೈನ್ ವಿಧಾನದಲ್ಲಿ ಲಾಭ ಮತ್ತು ನಷ್ಟದ ಖಾತೆಗೆ ಖರ್ಚು ದಾಖಲಿಸಲಾಗುವುದು.

ಭೋಗ್ಯದ ಅವಧಿಯ ಅಂತ್ಯದಲ್ಲಿ ಭೂಮಿಯ ಮಾಲೀಕತ್ವವು ಕಂಪೆನಿಯ ಹೆಸರಿಗೆ ವರ್ಗಾವಣೆಯಾಗದ ಭೋಗ್ಯದ ಭೂಮಿಗಳನ್ನು ಕಾರ್ಯಾಚರಣಾ ಭೋಗ್ಯಗಳೆಂದು ವರ್ಗೀಕರಿಸಿದೆ. ಮುಂದೆ ಪಾವತಿಸತಕ್ಕ ಕಾರ್ಯಾಚರಣಾ ಭೋಗ್ಯದ ಪಾವತಿಗಳನ್ನು ಪೂರ್ವಪಾವತಿಗಳೆಂದು ಗುರುತಿಸಲಾಗುವುದು ಹಾಗೂ ಭೋಗ್ಯದ ಅವಧಿಯಲ್ಲಿ ಸ್ಟ್ರೈಟ್ ಲೈನ್ ವಿಧಾನದಲ್ಲಿ ಋಣಮುಕ್ತತೆಗೊಳಿಸಲಾಗುವುದು.

ಭೋಗ್ಯದ ಅವಧಿಯ ಅಂತ್ಯದಲ್ಲಿ ಭೂಮಿಯ ಮಾಲೀಕತ್ವವು ಕಂಪೆನಿಯ ಹೆಸರಿಗೆ ವರ್ಗಾವಣೆಯಾಗುವುದಾದಲ್ಲಿ ಅಂತಹ ಭೋಗ್ಯದ ಭೂಮಿಗಳನ್ನು ಆರ್ಥಿಕ ಭೋಗ್ಯಗಳೆಂದು ವರ್ಗೀಕರಿಸಿದೆ. ಅಂತಹ ಭೋಗ್ಯದ ಭೂಮಿಗಳನ್ನು 'ಆಸ್ತಿಗಳು, ಸ್ಥಾವರಗಳು ಹಾಗೂ ಯತ್ರೋಪಕರಣಗಳಡಿಯಲ್ಲಿ ಪ್ರಸ್ತುತಪಡಿಸಲಾಗುವುದು ಹಾಗೂ ಸವಕಳಿ ಆಕರಿಸಲಾಗುವುದಿಲ್ಲ.

2.22 ವಿದ್ಯುತ್ ಖರೀದಿ:

ಕರ್ನಾಟಕ ಸರ್ಕಾರವು, ಮ.ವಿ.ಸ. ಕಂಪನಿಗೆ ವಿದ್ಯುತ್ ಮಾರಾಟದ ಮೂಲಕ ಸರಬರಾಜು ಮಾಡಲು ಗೊತ್ತುಪಡಿಸಿರುವ ವಿದ್ಯುತ್ ಉತ್ಪಾದನೆ ಸಂಸ್ಥೆಗಳು ಮಾಡುವ ಬಿಲ್ಲಿಗೆ ಸಂಬಂಧಿಸಿ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಎನ್ 131 ಪಿಎಸ್‌ಆರ್ 2003 ದಿನಾಂಕ 10ನೇ ಮೇ 2005 ಹಾಗೂ ಕಾಲಕಾಲಕ್ಕೆ ಹೊರಡಿಸುವ ತದನಂತರದ ಆದೇಶಗಳ ಪ್ರಕಾರ ವಿದ್ಯುತ್ ಖರೀದಿ ಬೆಲೆಯನ್ನು ಗೊತ್ತುಪಡಿಸಲಾಗುತ್ತದೆ. ಮ.ವಿ.ಸ.ಕಂಪನಿಯು, ತನ್ನ ಸರಬರಾಜಿನ ಅಂತರ್ಗತ ಬಿಂದುವಿನಲ್ಲಿ ಪ್ರತಿ ವಿದ್ಯುತ್ ಉತ್ಪಾದಕ ಸರಬರಾಜುದಾರರ ರೀಡಿಂಗನ್ನು ದಾಖಲಿಸುತ್ತದೆ. ಕರ್ನಾಟಕ ಸರ್ಕಾರದ ದಿನಾಂಕ 24.03.2010ರ ಆದೇಶದ ಪ್ರಕಾರ ಗೊತ್ತುಪಡಿಸಲ್ಪಟ್ಟ ಪ್ರಮಾಣದ ಪ್ರಕಾರ ಕಂಪನಿಯು ರವಾನಿಸಲ್ಪಟ್ಟ ವಿದ್ಯುತ್ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ.

ಕರ್ನಾಟಕ ಸರ್ಕಾರದ ದಿನಾಂಕ 24.03.2010ರ ಆದೇಶದ ಪ್ರಕಾರ ಒಟ್ಟು ಉತ್ಪಾದನಾ ಸಾಮರ್ಥ್ಯದ ಆಧಾರದ ಮೇಲೆ ಮ.ವಿ.ಸ.ಕಂಪನಿಗೆ ಹಂಚಲ್ಪಟ್ಟ ವಿದ್ಯುತ್ ಖರೀದಿಯನ್ನು ಆಧರಿಸಿ ಪ್ರಸರಣ ವೆಚ್ಚವನ್ನು ನಿರ್ಧರಿಸಲಾಗುತ್ತದೆ.

ವಿದ್ಯುತ್ ಪ್ರಸರಣೆಯ ಲೆಕ್ಕಾಚಾರ ಮಾಡಲು ಕಂಪನಿಯು ಕೆಳಕಂಡಂತೆ ಅಂತರ್ಗತ ಬಿಂದುಗಳನ್ನು ಗೊತ್ತುಪಡಿಸಿದೆ:

(ಎ) ಇ.ಎಚ್.ಟಿ. ಗ್ರಾಹಕರ ವಿಷಯದಲ್ಲಿ, ಇ.ಎಚ್.ಟಿ. ಗ್ರಾಹಕರ ಸ್ಥಾಪನದಲ್ಲಿ ದಾಖಲಾದ ಬಳಕೆ (66ಕೆವಿ ಹಾಗೂ ಹೆಚ್ಚಿನ ಸಾಮರ್ಥ್ಯದ ಸ್ಥಾಪನಗಳು)

(ಬಿ) ವಿವಿಧ ಉಪವಿಭಾಗಗಳಲ್ಲಿ ಸ್ಥಾಪಿಸಿರುವ 11ಕೆವಿ ಬ್ಯಾಂಕ್‌ಗಳಲ್ಲಿ(ಅಂತರ್ಗತ ಬಿಂದುಗಳು) ದಾಖಲಾದ ವಿದ್ಯುತ್ ಪ್ರಮಾಣ.

ಸರ್ಕಾರದ ನೀತಿ ನಿರ್ಣಯ ಹಾಗೂ ವಿದ್ಯುತ್ ಖರೀದಿ ಒಪ್ಪಂದದ ನಿಬಂಧನೆಗಳು, ಕ.ವಿ.ನಿ. ಆಯೋಗ ಮತ್ತು ಕೇಂ.ವಿ.ನಿ.ಆಯೋಗಗಳ ವಿದ್ಯುತ್ ದರ ಆದೇಶದ ಪ್ರಕಾರ, ತಡ ಪಾವತಿಗಾಗಿ ಬಡ್ಡಿ, ಪ್ರಕಟಣೆ ವೆಚ್ಚ, ಪಾವತಿಸಿದ ಆದಾಯ ತೆರಿಗೆಗಳನ್ನೊಳಗೊಂಡ ವಿದ್ಯುತ್ ಖರೀದಿ ವೆಚ್ಚದ ಅಂಕಿಗಳನ್ನು ಸರಬರಾಜು ಮಾಡಿದ ವಿದ್ಯುತ್ ಪ್ರಮಾಣದ ಮೇಲೆ ತಯಾರಿಸಿದ ಬಿಲ್ ಆಧರಿಸಿ ತೋರಿಸಲಾಗಿದೆ.

ವಿದ್ಯುತ್ ವರ್ಗಾವಣೆಯ ಲೆಕ್ಕಾಚಾರದ ಪ್ರಯುಕ್ತ ಕಂಪನಿಯು ಬಿಲ್ ತಯಾರಿಸುವುದಕ್ಕಾಗಿ, ಅಂತರ್ಗತ ಬಿಂದುಗಳಲ್ಲಿ ಕಂಪನಿಗೆ ಸರಬರಾಜಾಗುತ್ತಿರುವ ವಿದ್ಯುತ್‌ನಲ್ಲಿ 66ಕೆವಿಗಿಂತ ಹೆಚ್ಚಿನ ವೋಲ್ಟೇಜಿನ ಇ.ಎಚ್.ಟಿ. ಸರಬರಾಜೂ ಸಹ ಸೇರಿದೆ. ಕವಿಪ್ರನಿನಿಯಿಂದ ಖರೀದಿಸಲ್ಪಡುವ ಇ.ಎಚ್.ಟಿ. ವಿದ್ಯುತ್ ಖರೀದಿಯ ಮೇಲಿನ ಯಾವುದೇ ಪ್ರಸರಣ ನಷ್ಟವನ್ನು ಕಂಪನಿಯು ತನ್ನ ಲೆಕ್ಕಪುಸ್ತಕಗಳಲ್ಲಿ ಮಾನ್ಯಗೊಳಿಸಿಲ್ಲ.

ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಇಎನ್ 131 ಪಿಎಸ್‌ಆರ್ 2003, ದಿನಾಂಕ 10.05.2005ರ ಪ್ರಕಾರ ಹಾಗೂ ಕಾಲಕಾಲಕ್ಕೆ ಹೊರಡಿಸುವ ಆದೇಶಗಳ ಪ್ರಕಾರ ನಿಗದಿಪಡಿಸಿರುವಂತೆ, ಕಂಪನಿಯು ದಿನಾಂಕ 10.06.2005ರಿಂದ ವಿದ್ಯುತ್ ಉತ್ಪಾದನಾ ಘಟಕಗಳಿಂದ ನೇರವಾಗಿ ವಿದ್ಯುತ್ ಖರೀದಿಸುತ್ತಿದೆ. ಹೀಗೆ ನಿಗದಿಪಡಿಸಿದ/ಗೊತ್ತುಪಡಿಸಿದ ವಿದ್ಯುತ್ ಖರೀದಿಗೆ ಪಿ.ಪಿ.ಎ/ಕೇಂ.ವಿ.ನಿ.ಆ/ ಕ.ವಿ.ನಿ.ಆ./ಕರ್ನಾಟಕ ಸರ್ಕಾರದಿಂದ ಅನುಮೋದಿತವಾದ ವಾಣಿಜ್ಯ/ ಪೂರ್ವನಿರ್ಧಾರಿತ ದರವನ್ನು ಅನ್ವಯಿಸಲಾಗುತ್ತಿದೆ.

ವಿದ್ಯುತ್ ಖರೀದಿಯಿಂದಾಗಿ, ವಿದ್ಯುತ್ ಉತ್ಪಾದನಾ ಬಿಂದುವಿನಿಂದ ಪ್ರಸರಣ ಬಿಂದುವಿನ ನಡುವೆ ಉಂಟಾಗುವ ಪ್ರಸರಣ ನಷ್ಟವನ್ನು, ವಿದ್ಯುತ್ ಖರೀದಿ ಪ್ರಮಾಣಕ್ಕೆ ಅನುಗುಣವಾಗಿ ಸರ್ಕಾರದ ಆದೇಶದ ಪ್ರಕಾರ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಈ ಪ್ರಸರಣ ನಷ್ಟ ಪ್ರಮಾಣವನ್ನು ಪಿ.ಸಿ.ಕೆ.ಎಲ್/ ಎಸ್.ಎಲ್.ಡಿ.ಸಿ, ಕವಿಪ್ರನಿನಿಯು ತಿಳಿಸುತ್ತದೆ.

ವಿದ್ಯುತ್ ದರಗಳ ಪರಿಷ್ಕರಣೆಯಿಂದ ಖರೀದಿ ವೆಚ್ಚದಲ್ಲಿ ಯಾವುದೇ ಬದಲಾವಣೆಗಳಾದಲ್ಲಿ ಅದನ್ನು ದರ ಪರಿಷ್ಕರಣೆಗೊಂಡ ವರ್ಷದ ವೆಚ್ಚವಾಗಿಯೇ ಲೆಕ್ಕಿಸಲಾಗುವುದು.

2.23 ಲಾಭಾಂಶ :

ಸಂಬಂಧಪಟ್ಟ ವರ್ಷಕ್ಕೆ ಪಾವತಿಸಿದ/ಪಾವತಿಸಬೇಕಾದ ಲಾಭಾಂಶವನ್ನು, ಷೇರುದಾರರು ಅಥವಾ ನಿರ್ದೇಶಕ ಮಂಡಳಿಯು ಅನುಮೋದಿಸಿದ ವರ್ಷದಲ್ಲಿ ಯುಕ್ತವಾದ ರೀತಿಯಲ್ಲಿ ಮಾನ್ಯಗೊಳಿಸಲಾಗುತ್ತದೆ.

3.00 ಪ್ರತಿ ಷೇರಿನ ಗಳಿಕೆ:

ಕಂಪನಿಯ ಪ್ರತಿ ಷೇರಿನ ಗಳಿಕೆಯನ್ನು ಗೊತ್ತುಪಡಿಸಿಕೊಳ್ಳಲು ಪರಿಗಣಿಸಲ್ಪಟ್ಟಿರುವ ಆದಾಯದ ಗಳಿಕೆಯು ಸ್ವಾಮ್ಯ ಷೇರುದಾರರಿಗೆ ವಿಧಿಸಬೇಕಾದ ತೆರಿಗೆಯ ನಂತರದ ನಿವ್ವಳ ಲಾಭವಾಗಿರುತ್ತದೆ. ಪ್ರತಿ ಷೇರಿನ ಮೂಲ ಗಳಿಕೆಯನ್ನು ಲೆಕ್ಕಾಚಾರ ಮಾಡಲು ಗಣಿಸಿರುವ ಷೇರುಗಳ ಸಂಖ್ಯೆಯು, ಆ ವರ್ಷದಲ್ಲಿ ಬಾಕಿ ಇರುವ ಸರಾಸರಿ ಷೇರು ದರವಾಗಿರುತ್ತದೆ. ಹಾಗೆ ಆ ವರ್ಷದಲ್ಲಿ ಬಾಕಿ ಇರುವ ಸರಾಸರಿ ಷೇರು ಸಂಖ್ಯೆಗಳನ್ನು ಬೋನಸ್ ಪಾವತಿಗಾಗಿ: ಹಾಲಿ ಷೇರುದಾರರಿಗೆ ಹಕ್ಕುಭಾದ್ಯತೆಯ ಬೋನಸ್ ಷೇರು: ಷೇರು ವಿಭಜನೆ ಹಾಗೂ ಆ ವಿಭಜನೆಯ ನಿವರ್ತನದ ಅಂಶಗಳಿಗೆ ಹೊಂದಾಣಿಕೆ ಮಾಡಲಾಗುತ್ತದೆ.

ಇಳಿತಗೊಳ್ಳಬಹುದಾದ ಸ್ವಾಮ್ಯ ಷೇರುಗಳ ಪರಿಣಾಮವನ್ನು, ಹೊಂದಾಣಿಕೆ ಮಾಡಿದ ನಂತರ ಇಳಿತಗೊಂಡ ಪ್ರತಿ ಷೇರಿನ ಗಳಿಕೆಯನ್ನು, ಷೇರು ಠೇವಣಿ ಮೊತ್ತಗಳನ್ನೂ ಒಳಗೊಂಡಂತೆ ಪ್ರತಿ ಷೇರಿನ ಮೂಲ ಗಳಿಕೆ ಎಂದು ಆಧರಿಸಿ ಲೆಕ್ಕಾಚಾರ ಮಾಡಲ್ಪಡುತ್ತದೆ.

4.00 ಪೂರ್ವಾವಧಿಯ ವಿಷಯಗಳು

ಹಿಂದಿನ ವರ್ಷಗಳ ಗಣನೀಯ ದೋಷಗಳನ್ನು ಅವುಗಳು ಪತ್ತೆಯಾದಾಗ, ಮಂಡಿಸಲು ಅನುಮೋದಿಸಲಾದ ಮೊದಲ ಆರ್ಥಿಕ ನಿರೂಪಣೆಯಲ್ಲಿ ಪ್ರಸ್ತುತಪಡಿಸಲಾದ ಹಿಂದಿನ ಅವಧಿಯ (ಗಳ) ಮೊತ್ತಗಳನ್ನು ಪೂರ್ವಾನ್ವಯವಾಗಿ ಸೂಕ್ತವಾಗಿ ಮಾರ್ಪಾಡು ಮಾಡುವ ಮೂಲಕ ಸರಿಪಡಿಸಲಾಗಿದೆ. ಒಂದು ವೇಳೆ ದೋಷಗಳು, ಆರ್ಥಿಕ ನಿರೂಪಣೆಯಲ್ಲಿ ಪ್ರಸ್ತುತಪಡಿಸಲಾದ ಪ್ರಥಮ ವರ್ಷಕ್ಕಿಂತಲೂ ಹಿಂದಿನ ಅವಧಿಗೆ ಸಂಬಂಧಪಟ್ಟಿದ್ದಾಗಿದ್ದಲ್ಲಿ ಪ್ರಥಮ ವರ್ಷದ ಆಸ್ತಿಗಳು, ಹೊಣೆಗಾರಿಕೆಗಳು ಮತ್ತು ಷೇರು ಬಂಡವಾಳಗಳ ಆರಂಭಿಕ ಶಿಲ್ಕುಗಳಲ್ಲಿ ಮಾರ್ಪಾಡುಗೊಳಿಸಿದೆ.

ಟಿಪ್ಪಣಿ : 5.1 ಸ್ಪರ್ಶವೇಧ್ಯ ಆಸ್ತಿಗಳು

ಎ. ಆರ್ಥಿಕ ವರ್ಷ 2018–19ನೇ ಸಾಲಿನ ಆಸ್ತಿ, ಸ್ಥಾವರ ಮತ್ತು ಸಲಕರಣೆಗಳು

(₹ ಲಕ್ಷಗಳಲ್ಲಿ)

ವಿವರಗಳು	ಲೆ. ಸಂ	ಮೂಲ ಬೆಲೆ				ಲೆ. ಸಂ	ಸವಕಳಿ				ನಿವ್ವಳ ಬೆಲೆ	
		01.04.2018 ರಂದು ಇದ್ದಂತೆ	ಪ್ರಸಕ್ತ ವರ್ಷದಲ್ಲಿ ಸೇರ್ಪಡೆ	ವರ್ಷಾವದಿ . ಯಲ್ಲಿ ಕಡಿತ/ನಿವೃತ್ತಿ	31.03.2019 ರಂದು ಇದ್ದಂತೆ		01.04.2018 ರಂದು ಇದ್ದಂತೆ	ಪ್ರಸಕ್ತ ವರ್ಷದಲ್ಲಿ ಸೇರ್ಪಡೆ	ವರ್ಷಾವಧಿಯಲ್ಲಿ ಕಡಿತ/ ಹೊಂದಾಣಿಕೆಗಳು	31.03.2019 ರಂದು ಇದ್ದಂತೆ	31.03.2018 ರಂದು ಇದ್ದಂತೆ	31.03.2019 ರಂದು ಇದ್ದಂತೆ
ಸ್ಪರ್ಶವೇಧ್ಯ ಆಸ್ತಿಗಳು												
ಸ್ವತಂತ್ರವಾಗಿ ಹೊಂದಿರುವ ಭೂಮಿ	**10.101**	602.13	2.43	-	604.56	**12.1**	-	-	-	-	602.13	604.56
ಕಟ್ಟಡಗಳು	**10.2**	8057.25	1580.82	3.02	9635.05	**12.2**	1293.27	298.40	-	1591.67	6763.98	8043.38
ಜಲಕಾರ್ಯಾಗಾರಗಳು	**10.3**	284.85	28.00	-	312.85	**12.3**	126.94	14.98	-	141.92	157.91	170.93
ಇತರ ಸಿವಿಲ್ ಕಾಮಗಾರಿಗಳು	**10.4**	71.70	10.48	-	82.18	**12.4**	18.74	2.88	-	21.62	52.96	60.56
ಸ್ಥಾವರ ಮತ್ತು ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು	**10.5, 10.6**	209860.57	51346.08	4143.03	257063.62	**12.5, 12.6**	69379.72	11401.28	1407.85	79373.15	140480.85	177690.47
ವಾಹನಗಳು	**10.7**	678.56	393.40	60.54	1011.42	**12.7**	313.60	41.44	54.49	300.55	364.96	710.87
ಪೀಠೋಪಕರಣ ಮತ್ತು ಜೋಡಣೆಗಳು	**10.8**	802.15	9.24	1.97	809.42	**12.8**	236.39	41.77	4.18	273.98	565.76	535.44
ಕಛೇರಿ ಸಲಕರಣೆಗಳು	**10.9**	329.48	576.07	4.10	901.45	**12.9**	70.16	36.71	2.52	104.35	259.32	797.10
ಉಪ ಮೊತ್ತ		**220686.69**	**53946.52**	**4212.66**	**270420.55**	–	**71438.82**	**11837.46**	**1469.04**	**81807.24**	**149247.87**	**188613.31**
ಮರು ಬಳಸಬಹುದಾದ, ಕಳಚಿದ ಯಂತ್ರೋಪಕರಣಗಳು, ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು	**16.2**	1638.68	-771.13	–	867.55	–	-	-		-	1638.68	867.55
ಒಟ್ಟು	**10+16**	**222325.37**	**53175.39**	**4212.66**	**271288.10**		**71438.82**	**11837.46**	**1469.04**	**81807.24**	**150886.55**	**189480.86**
ಹಿಂದಿನ ವರ್ಷದ ಅಂಕಿ ಅಂಶಗಳು	10	183707.13	43478.55	4860.30	222325.37		63684.86	9038.77	1284.81	71438.82	120022.27	150886.55

ಲೆಕ್ಕಶೀರ್ಷಿಕೆ 10.101 – ರಲ್ಲಿನ ಭೋಗ್ಯದ ಮೇಲೆ ಹೊಂದಿರುವ ಆಸ್ತಿಗಳಲ್ಲಿ ಶಿಕಾರಿಪುರ ವಿಭಾಗದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ₹ 14.36 ಲಕ್ಷ ಮೌಲ್ಯಕ್ಕೆ ಖರೀದಿಸಿದ ಜಮೀನು ಒಳಗೊಂಡಿದ್ದು ಖರೀದಿ ಪತ್ರದ ಒಡಂಬಡಿಕೆಯಲ್ಲಿ ಸದರಿ ಜಮೀನನ್ನು ಖರೀದಿ ಮಾಡಿದ ದಿನಾಂಕದಿಂದ 10 ವರ್ಷ ಪೂರ್ಣಗೊಳ್ಳುವವರೆಗೆ ಮಾರಾಟ ಮಾಡಬಾರದೆಂಬ ಷರತ್ತು ಇರುತ್ತದೆ.

31.03.2019 ಕ್ಕೆ ಅಂತ್ಯಗೊಂಡ ವರ್ಷದ ಆರ್ಥಿಕ ತಃಖ್ತೆಗಳ ಮೇಲಿನ ಟಿಪ್ಪಣಿ

ಟಿಪ್ಪಣಿ : 5.2 – ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳು – ಸ್ಪರ್ಶವೇಧ್ಯ ಆಸ್ತಿಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
5.2.1	ಸ್ವತಂತ್ರವಾಗಿ ಹೊಂದಿರುವ ಭೂಮಿ	10.101	604.56	602.13
5.2.2	ಕಟ್ಟಡಗಳು	10.2	8043.38	6763.98
5.2.3	ಜಲಕಾರ್ಯಾಗಾರಗಳು	10.3	170.93	157.91
5.2.4	ಇತರ ಸಿವಿಲ್ ಕಾಮಗಾರಿಗಳು	10.4	60.56	52.96
5.2.5	ಸ್ಥಾವರ ಮತ್ತು ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು	10.5, 10.6	177690.47	140480.86
5.2.6	ವಾಹನಗಳು	10.7	710.87	364.96
5.2.7	ಪೀಠೋಪಕರಣ ಮತ್ತು ಜೋಡಣೆಗಳು	10.8	535.44	565.76
5.2.8	ಕಛೇರಿ ಸಲಕರಣೆಗಳು	10.9	797.10	259.32
	ಉಪ ಮೊತ್ತ		**188613.31**	**149247.88**
5.2.9	ಮರು ಬಳಸಬಹುದಾದ, ಕಳಚಿದ ಯಂತ್ರೋಪಕರಣಗಳು, ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು	16.2	867.55	1638.67
	ಒಟ್ಟು		**189480.86**	**150886.55**

5.2.10 ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ (ಕ.ವಿ.ಪ್ರ.ನಿ.ನಿ) ದಿಂದ ವರ್ಗಾಯಿಸಲಾದ ಆಸ್ತಿಗಳನ್ನು ಕ.ವಿ.ಪ್ರ.ನಿ.ನಿ.ಯ ವರ್ಗಾವಣೆ ದಾಖಲೆಗಳಲ್ಲಿ ಸೂಚಿಸಿರುವ ಮೌಲ್ಯದಲ್ಲಿಯೇ ಪರಿಗಣಿಸಲಾಗಿದೆ.

5.2.11 ಮೂಲ್ಕಿ ಶಾಖಾ ಕಛೇರಿ ಕಟ್ಟಡವಿರುವ ಭೂಮಿ (ಸ. ನಂ. 57/1ಎ. 0.48 ಎಕ್ರೆ) ಹಾಗೂ ಮೂಲ್ಕಿ 33 ಕೆ.ವಿ. ಉಪಕೇಂದ್ರ ಕಟ್ಟಡವಿರುವ ಭೂಮಿ (ಸ. ನಂ. 59/ಸಿ, 5.92 ಎಕ್ರೆ) ಗಳನ್ನು ಹೊರತುಪಡಿಸಿ ಇತರ ಎಲ್ಲಾ ಸ್ವತಂತ್ರ ಹಾಗೂ ಭೋಗ್ಯದ ಭೂ–ಆಸ್ತಿಗಳಿಗೆ ಕಂಪೆನಿಯು ಹಕ್ಕುಪತ್ರ/ ಭೋಗ್ಯದ ಕರಾರುಗಳನ್ನು ಹೊಂದಿರುತ್ತದೆ.

5.2.12 ಟಿಪ್ಪಣಿ ಸಂಖ್ಯೆ 25.3 ರಲ್ಲಿ ಉಲ್ಲೇಖಿಸಿರುವಂತೆ ಕಂಪೆನಿಯ ಸ್ಥಿರಾಸ್ತಿಗಳನ್ನು ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಅಡಮಾನ ಮಾಡಲಾಗಿದೆ.

5.2.13 ಟಿಪ್ಪಣಿ ಸಂಖ್ಯೆ 29 ರಲ್ಲಿ ನಮೂದಿಸಿರುವಂತೆ ಗ್ರಾಹಕರ ವಂತಿಗೆ ಹಾಗೂ ಸರಕಾರದ ಅನುದಾನಗಳಿಂದ ರಚಿಸಲಾದ ಆಸ್ತಿಗಳಿಗೆ ಸಂಬಂಧಪಟ್ಟ ಸವಕಳಿಯನ್ನು ಲೆಕ್ಕಾಚಾರ ಮಾಡಿ ಆ ಪ್ರಯುಕ್ತ ₹ 1801.49 ಲಕ್ಷಗಳನ್ನು ಮುಂದೂಡಿದ ಆದಾಯಗಳಿಗೆ ಹೊಂದಾಣಿಕೆ ಮಾಡಲಾಗಿದೆ.

ಅಲ್ಲದೆ, ಗ್ರಾಹಕರ ವಂತಿಗೆ ಹಾಗೂ ಸರಕಾರದ ಅನುದಾನಗಳಿಂದ 31.03.2016 ರವರೆಗೆ ರಚಿಸಲಾದ ಆಸ್ತಿಗಳಿಗೆ ಸಂಬಂಧಪಟ್ಟ ಸವಕಳಿ ಮೊತ್ತ ₹ 2710.96 ಲಕ್ಷಗಳನ್ನು ಒಟ್ಟು ಸವಕಳಿಯಿಂದ ಕಳೆಯಲಾಗಿದೆ.

ಟಿಪ್ಪಣಿ : 6 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
6.1	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	14	49560.69	17462.87
6.2	ಬಂಡವಾಳ ಕಾಮಗಾರಿಗಳ ಮೇಲೆ ಹಂಚಲು ಬಾಕಿ ಇರುವ ಕಂದಾಯ ವೆಚ್ಚಗಳು – ಬಡ್ಡಿ	15.206	79.76	201.22
6.3	ಮಂಜೂರಾಗಬೇಕಾಗಿರುವ ಯೋಜನೆಗಳ ಪೂರ್ವಭಾವೀ ಅಧ್ಯಯನ / ಸರ್ವೇಕ್ಷಣೆಗಳ ವೆಚ್ಚ	17.301	58.52	41.47
	ಒಟ್ಟು		**49698.97**	**17705.56**

6.4 ಬಂಡವಾಳ ಕಾಮಗಾರಿಗಾಗಿ ಪಡೆದ ಸಾಲದ ಮೇಲಿನ ಬಡ್ಡಿ ₹ 209.53 ಲಕ್ಷಗಳನ್ನು ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಿಸಿದೆ.

ಟಿಪ್ಪಣಿ: 7 ಪ್ರಗತಿಯಲ್ಲಿರುವ ಸ್ಪರ್ಶಾತೀತ ಆಸ್ತಿಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
7.1	**ಆಂತರಿಕ ಬಳಕೆಗಾಗಿ ಗಳಿಸಿದ/ಖರೀದಿಸಿದ ತಂತ್ರಾಂಶ**			
7.1.1	ಎನರ್ಜಿ ಸಿಂಕ್– ಇ.ಆರ್.ಪಿ. ತಂತ್ರಾಂಶ	18.101	527.12	632.54
7.1.2	ಆರ್.ಎ.ಪಿ.ಡಿ.ಆರ್.ಪಿ.– ಟಿ.ಆರ್.ಎಮ್. ತಂತ್ರಾಂಶ	18.101	208.79	-
7.1.3	ನೀರಾವರಿ ಪಂಪುಸೆಟ್ಟುಗಳ ಜಿಪಿಎಸ್ ಸರ್ವೆ, ಎಣಿಕೆ, ಊರ್ಜಿತಗೊಳಿಸುವಿಕೆ ಹಾಗೂ ಪೂರ್ಣಗೊಳಿಸುವಿಕೆ.	18.102	270.90	97.81
7.1.4	ಇತರೆ	18.101	-	46.00
	ಒಟ್ಟು		**1006.81**	**776.36**

ಟಿಪ್ಪಣಿ : 7.2 ಸ್ಪರ್ಶಾತೀತ ಆಸ್ತಿಗಳು

(₹ ಲಕ್ಷಗಳಲ್ಲಿ)

ವಿವರಗಳು	ಲೆ. ಸಂ	ಮೂಲ ಬೆಲೆ				ಲೆ. ಸಂ	ಸವಕಳಿ				ನಿವ್ವಳ ಬೆಲೆ	
		01.04.2018 ರಂದು ಇದ್ದಂತೆ	ಪ್ರಸಕ್ತ ವರ್ಷದಲ್ಲಿ ಸೇರ್ಪಡೆ	ವರ್ಷಾವದಿ . ಯಲ್ಲಿ ಕಡಿತ/ನಿವೃತ್ತಿ	31.03.2019 ರಂದು ಇದ್ದಂತೆ		01.04.2018 ರಂದು ಇದ್ದಂತೆ	ಪ್ರಸಕ್ತ ವರ್ಷದಲ್ಲಿ ಸೇರ್ಪಡೆ	ವರ್ಷಾವಧಿಯಲ್ಲಿ ಕಡಿತ/ ಹೊಂದಾಣಿಕೆಗಳು	31.03.2019 ರಂದು ಇದ್ದಂತೆ	31.03.2018 ರಂದು ಇದ್ದಂತೆ	31.03.2019 ರಂದು ಇದ್ದಂತೆ
ಆಂತರಿಕ ಬಳಕೆಗಾಗಿ ಗಳಿಸಿದ/ ಖರೀದಿಸಿದ ತಂತ್ರಾಂಶ												
ಎನರ್ಜಿ ಸಿಂಕ್- ಇ.ಆರ್.ಪಿ. ತಂತ್ರಾಂಶ	**18.101**	632.54	-	-	632.54	**12.802**	-	105.42	-	105.42	632.54	527.12
ಆರ್.ಎ.ಪಿ.ಡಿ.ಆರ್.ಪಿ.- ಟಿ.ಆರ್.ಎಮ್. ತಂತ್ರಾಂಶ	**18.101**	-	835.17	-	835.17	**12.802**	-	626.38	-	626.38	-	208.79
ನೀರಾವರಿ ಪಂಪುಸೆಟ್ಟುಗಳ ಜಿಪಿಎಸ್ ಸರ್ವೆ, ಎಣಿಕೆ, ಊರ್ಜಿತಗೊಳಿಸುವಿಕೆ ಹಾಗೂ ಪೂರ್ಣಗೊಳಿಸುವಿಕೆ.	**18.102**	97.81	173.09	-	270.90	**12.802**	-	-	-	-	97.81	270.90
ಇತರೆ	**18.101**	46.00	-	46.00	-	**12.802**	-	-	-	-	46.00	–
ಒಟ್ಟು		**776.35**	**1008.26**	**46.00**	**1738.61**		**-**	**731.80**	**-**	**731.80**	**776.35**	**1006.81**

ಟಿಪ್ಪಣಿ : 8 ಹೂಡಿಕೆಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
8.1	**(ಸಂಪೂರ್ಣವಾಗಿ ಪಾವತಿಸಲಾದ ಉಲ್ಲೇಖಿಸಲ್ಪಡದಿರುವ ಹೂಡಿಕೆಗಳು)**			
8.1.1	ಮೆ। ಪವರ್ ಕಂಪೆನಿ ಆಫ್ ಕರ್ನಾಟಕ ಲಿ. ನ ಈಕ್ವಿಟಿ ಷೇರುಬಂಡವಾಳದಲ್ಲಿ ಹೂಡಿಕೆ (ತಲಾ ₹ 1000/- ಮುಖಬೆಲೆಯ 25100 ಷೇರುಗಳು)	20.291	251.00	251.00
	ಒಟ್ಟು		**251.00**	**251.00**

ಟಿಪ್ಪಣಿ : 9 ಮುಂಗಡಗಳು (ನಾ-ಚಾಲ್ತಿ) (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
9.1	**(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)**			
9.1.1	ಇತರರಲ್ಲಿರುವ ಠೇವಣಿಗಳು	28.935	801.62	728.65
	ಒಟ್ಟು		**801.62**	**728.65**

9.1.1(ಎ) ಇತರರಲ್ಲಿರುವ ಠೇವಣಿಗಳಲ್ಲಿ ಬಿಎಸ್‌ಎನ್‌ಎಲ್ ನಲ್ಲಿ ಇರಿಸಿದ ಠೇವಣಿಗಳು, ನ್ಯಾಯಾಲಯಗಳಲ್ಲಿ ಇರಿಸಿದ ಠೇವಣಿಗಳು, ವಿದ್ಯುತ್ ಉತ್ಪಾದಕರಾದ ಮೆ। ಕೋಸ್ಟಲ್ ತಮಿಳುನಾಡು ಪವರ್ಸ್ ಲಿ., ಬಿಹಾರ್ ಮೆಗಾ ಪವರ್ ಲಿ., ಡಿಯೋಗರ್ ಮೆಗಾ ಪವರ್ ಲಿ. ಇತ್ಯಾದಿಗಳಲ್ಲಿ ಇಡಲಾದ ಠೇವಣಿಗಳು ಒಳಗೊಂಡಿರುತ್ತವೆ.

ಟಿಪ್ಪಣಿ : 10 ಇತರೆ ನಾಚಾಲ್ತಿ ಆರ್ಥಿಕ ಆಸ್ತಿಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
10.1	**(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)**			
10.1.1	ಮೆ। ಆಂಧ್ರಪ್ರದೇಶ ವಿದ್ಯುತ್ ಉತ್ಪಾದನಾ ಸಂಸ್ಥೆರವರಲ್ಲಿ ಠೇವಣಿಯಿರಿಸಿದ ಮೊತ್ತ	28.935	1400.00	1400.00
10.1.2	ಕರ್ನಾಟಕ ಸರ್ಕಾರದಿಂದ ಬರತಕ್ಕ ಸಹಾಯಧನ / ಅನುದಾನಗಳು	28.620	10901.74	10901.74
	ಒಟ್ಟು		**12301.74**	**12301.74**

10.1.1(ಎ) ಮೆ। ಜುರಾಲಾ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ರವರ ವಿದ್ಯುತ್ ಖರೀದಿ ವೆಚ್ಚದ ಬಾಬ್ತು ಪಾವತಿಸಲಾದ 50% ಮುಂಗಡ ಮೊತ್ತ ₹ 70.00 ಕೋಟಿಗಳನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಎನ್ 58 ಪಿಎಸ್‌ಆರ್2013 /ಬೆಂಗಳೂರು ದಿನಾಂಕ 23.09.2013 ರಲ್ಲಿ ಸಮಾನುಪಾತದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ನಡುವೆ ಹಂಚಿಕೆ ಮಾಡಲಾಗಿರುತ್ತದೆ. ಈ ಮೊತ್ತವನ್ನು ಆಂದ್ರಪ್ರದೇಶ ವಿದ್ಯುತ್ ಉತ್ಪಾದನಾ ಸಂಸ್ಥೆಗೆ ಮೆ। ಪಿ.ಸಿ.ಕೆ.ಎಲ್ ನಿಂದ ವಿದ್ಯುತ್ ಸರಬರಾಜು ಕಂಪೆನಿಗಳ ಪರವಾಗಿ ಪಾವತಿಸಲಾಗಿರುತ್ತದೆ. ಇದರಲ್ಲಿ ಮೆಸ್ಕಾಂನ ಪಾಲು ₹ 14.00 ಕೋಟಿಗಳನ್ನು ಸರಕಾರದಿಂದ ಸ್ವೀಕೃತವಾದ ಷೇರು ಠೇವಣಿಯಾಗಿ ಹಾಗೂ ಮೆ। ಆಂಧ್ರಪ್ರದೇಶ ವಿದ್ಯುತ್ ಉತ್ಪಾದನಾ ಸಂಸ್ಥೆಯಲ್ಲಿ ಠೇವಣಿ ಇಟ್ಟಿರುವುದಾಗಿ ಲೆಕ್ಕ ಶೀರ್ಷಿಕೆ 28.935 ರಲ್ಲಿ ಲೆಕ್ಕೀಕರಿಸಲಾಗಿದೆ.

10.1.2(ಎ) ಕರ್ನಾಟಕ ಸರಕಾರವು ತನ್ನ ದಿನಾಂಕ 19.08.2010 ರ ಆದೇಶ ಸಂಖ್ಯೆ ಇಎನ್ 34 ಪಿಎಸ್‌ಆರ್ 2008 ರಲ್ಲಿ ದಿನಾಂಕ 01.04.2001 ರಿಂದ 31.03.2003ರ ಅವಧಿಯಲ್ಲಿ ರೈತರು ಪಾವತಿಸಿದ ಮೊತ್ತವನ್ನು ಹಿಂಪಾವತಿಸುವಂತೆ ಆದೇಶಿಸಿದ್ದು, ಅದನ್ನು ಮೆಸ್ಕಾಂ ಅಳವಡಿಸಿಕೊಂಡು ₹ 3179.74 ಲಕ್ಷದ ಮೊತ್ತವನ್ನು ಸರಕಾರದಿಂದ ಬರಬೇಕಾದ ಮೊತ್ತ ಎಂದು ತೋರಿಸಿದೆ. ಮುಂದುವರೆದು, ಇದು ಕ.ವಿ.ಪ್ರ.ನಿ.ನಿ.ಯಿಂದ ವರ್ಗಾಯಿಸಲಾದ ಹಿಂದಿನ ವರ್ಷಗಳ ಸಹಾಯಧನದ ಬಾಕಿ ಮೊತ್ತ ₹ 7722.00 ಲಕ್ಷಗಳನ್ನೂ ಒಳಗೊಂಡಿರುತ್ತದೆ.

ಟಿಪ್ಪಣಿ : 11 ನಾಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ) (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
11.1	ಆದಾಯ ತೆರಿಗೆಗಾಗಿ ಮುಂಗಡ ಪಾವತಿ (ತೆರಿಗೆ ಆಸ್ತಿಗಳು)	28.821	3281.45	2976.92
11.2	**ಕಳೆ:** ಚಾಲ್ತಿ ತೆರಿಗೆ ಹೊಣೆಗಾರಿಕೆಗೆ ಕಾದಿರಿಸಿದ ಅವಕಾಶ (ಕರ ನಿರ್ಧರಣಾ ವರ್ಷ 2006-07)	46.800	93.57	93.57
	ಒಟ್ಟು		**3187.88**	**2883.36**

ಟಿಪ್ಪಣಿ :12 ಇತರೆ ನಾಜಾಲ್ತಿ ಆಸ್ತಿಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
12.1	**(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)**			
12.1.1	ಭೋಗ್ಯದ ಮೇಲೆ ಹೊಂದಿರುವ ಭೂಮಿಯ ಪೂರ್ವಪಾವತಿ	10.102	219.29	228.30
12.1.2	ಕನಿಷ್ಠ ಪರ್ಯಾಯ ತೆರಿಗೆ ಜಮೆಯ ಮೇಲಿನ ಹಕ್ಕುಗಳು	28.802	3584.86	2447.55
12.1.3	ಭವಿಷ್ಯನಿಧಿ ಸಂಸ್ಥೆಯಲ್ಲಿ ಠೇವಣಿಯಿರಿಸಿದ ಮೊತ್ತ	46.930	807.04	770.39
12.2	**ಬಂಡವಾಳ ಮುಂಗಡಗಳು:**			
12.2.1	ಸರಬರಾಜುದಾರರಿಗೆ ಮುಂಗಡಗಳು (ಸಂಪೂರ್ಣ ಸುರಕ್ಷಿತ ಮತ್ತು ಸುಭದ್ರ)	25.501	570.98	2928.00
12.2.2	ಗುತ್ತಿಗೆದಾರರಿಗೆ ನೀಡಿದ ಮುಂಗಡಗಳು	26.6	1395.76	13971.56
	ಒಟ್ಟು		**6577.93**	**20345.80**

12.1.3(ಎ) ಆಕ್ಷೇಪಣೆಯೊಂದಿಗೆ ಭವಿಷ್ಯ ನಿಧಿ ಸಂಸ್ಥೆಯಲ್ಲಿ ಠೇವಣಿಯಿರಿಸಿದ ಮೊತ್ತವಾಗಿರುತ್ತದೆ.

12.2(ಎ) ಸಾಮಗ್ರಿ ಪೂರೈಕೆ ಹಾಗೂ ಕಾಮಗಾರಿಗಳ ನಿರ್ವಹಣೆಗಾಗಿ ಸರಬರಾಜುದಾರರು ಹಾಗೂ ಗುತ್ತಿಗೆದಾರರಿಂದ ಬ್ಯಾಂಕ್ ಗ್ಯಾರಂಟಿಗಳನ್ನು ಪಡೆದು ಮುಂಗಡಗಳನ್ನು ನೀಡಲಾಗಿರುತ್ತದೆ.

ಟಿಪ್ಪಣಿ : 13 ದಾಸ್ತಾನುಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
13.1	**ಉಗ್ರಾಣ ಮತ್ತು ಬಿಡಿಭಾಗಗಳು**			
13.1.1	ಸರಕು ದಾಸ್ತಾನು ಲೆಕ್ಕ	22.610	5844.98	3141.43
13.1.2	ಕೈಗಡ ಸಾಮಾಗ್ರಿಗಳ ಲೆಕ್ಕ	22.641	4.19	11.90
13.1.3	ತಾತ್ಕಾಲಿಕ ಕಾಮಗಾರಿಗಳಿಗೆ ನೀಡಿದ ಸಾಮಾಗ್ರಿಗಳ ಲೆಕ್ಕ	22.731	2.72	4.12
	ಒಟ್ಟು		**5851.89**	**3157.45**

13.2 ದಾಸ್ತಾನು ಸಾಮಾಗ್ರಿಗಳ ಮೌಲ್ಯಮಾಪನಾ ವಿಧಾನವು ಟಿಪ್ಪಣಿ ಸಂಖ್ಯೆ 2.5 ರಲ್ಲಿ ನಮೂದಿಸಿರುವಂತಿರುತ್ತದೆ.

13.3 ಟಿಪ್ಪಣಿ ಸಂಖ್ಯೆ 31.2 ರಲ್ಲಿ ನಮೂದಿಸಿರುವಂತೆ ದಾಸ್ತಾನು ಸಾಮಾಗ್ರಿಗಳನ್ನು ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಅಡಮಾನ ಮಾಡಲಾಗಿದೆ.

ಟಿಪ್ಪಣಿ : 14 ಆರ್ಥಿಕ ವ್ಯಾಪಾರ ಸಂಬಂಧಿ ಬರತಕ್ಕವುಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
14.1	**ವಿದ್ಯುತ್ ಮಾರಾಟ ಬಾಬ್ತು ವಿವಿಧ ಬಾಕಿದಾರರು** – ಎಲ್.ಟಿ., ಹೆಚ್.ಟಿ ಮತ್ತು ಇತರೆ (ಬಿಲ್ಲು ಮಾಡದ ಕಂದಾಯವನ್ನು ಹೊರತುಪಡಿಸಿ)			
14.1.1	ಸಂಪೂರ್ಣ ಸುರಕ್ಷಿತ ಮತ್ತು ಸುಭದ್ರವೆಂದು ಪರಿಗಣಿಸಲಾಗಿರುವುದು	23.1, 23.2, 23.5, 23.7, 47.607, 47.609	23805.08	19974.18
14.1.2	ಅಸುರಕ್ಷಿತ ಮತ್ತು ಸುಭದ್ರವೆಂದು ಪರಿಗಣಿಸಲಾಗಿರುವುದು		20314.33	21965.79
14.1.3	ವಿದ್ಯುತ್ ಮಾರಾಟ ಬಾಬ್ತು – ವಿದ್ಯುಚ್ಛಕ್ತಿ ತೆರಿಗೆ	23.3	3159.85	3168.76
14.1.4	**ಕಳೆ** : ಕಂದಾಯ ಬೇಡಿಕೆ ಹಿಂಪಡೆತಕ್ಕೆ ಅವಕಾಶ	23.800	746.28	145.05
14.1.5	**ಕಳೆ** : ಗ್ರಾಹಕರಿಂದ ಬರಬೇಕಾದ ಅನುಮಾನಾಸ್ಪದ ಬಾಕಿಗಳು	23.900	5597.66	5511.00
	ವಿದ್ಯುತ್ ಸರಬರಾಜಿಗೆ ನಿವ್ವಳ ಬರತಕ್ಕವುಗಳು		**40935.32**	**39452.68**

14.2 ಪ್ರತೀ ಗ್ರಾಹಕರಿಂದ ಎರಡು ತಿಂಗಳ ಸರಾಸರಿ ಬಿಲ್ಲಿನ ಮೊತ್ತವನ್ನು ಭದ್ರತಾ ಠೇವಣಿಯಾಗಿ ಸ್ವೀಕರಿಸಲಾಗುವುದು. ಅಂತಹ ಸ್ವೀಕೃತಿಗಳನ್ನು ಸುರಕ್ಷಿತ ಮತ್ತು ಸುಭದ್ರವೆಂದು ಪರಿಗಣಿಸಲಾಗಿರುವುದು

14.3 ಕಂದಾಯ ಅಮಾನತು ಖಾತೆಯಲ್ಲಿನ ಶಿಲ್ಕು ಮೊತ್ತವು ಗ್ರಾಹಕರಿಂದ ವಸೂಲಿಯಾದ ಮೊತ್ತವಾಗಿದ್ದು, ಕೆಲವು ವಿವರಗಳಿಗಾಗಿ ಕಂಪೆನಿಯಲ್ಲಿಯೇ ಜಮೆ ಇರುವುದರಿಂದ ಈ ಮೊತ್ತವನ್ನು ವಿದ್ಯುತ್ ಬಾಕಿದಾರರ ಒಟ್ಟು ಮೊತ್ತದಿಂದ ಕಡಿತಗೊಳಿಸಿ ತೋರಿಸಲಾಗಿದೆ.

14.4 **ಮೈಸೂರು ಪೇಪರ್ಸ್ ಮಿಲ್ಸ್‌ರವರಿಂದ ಬಾಕಿ ಇರುವ ಮೊತ್ತ** : ವ್ಯಾಪಾರ ಸಂಬಂಧಿ ಬರತಕ್ಕವುಗಳಲ್ಲಿ ₹ 14932.90 ಲಕ್ಷಗಳಷ್ಟು ಮೊಬಲಗು ಮೆ। ಎಮ್‌ಪಿಎಮ್ ಭದ್ರಾವತಿ ರವರಿಂದ ಬರಬೇಕಾದ ಬಾಕಿ ಮೊತ್ತವಾಗಿರುತ್ತದೆ. ದಿನಾಂಕ 31.03.2019ರ ಅಂತ್ಯಕ್ಕಿರುವ ಸದರಿ ಬಾಕಿಯು ₹ 10662.83 ಲಕ್ಷಗಳಷ್ಟು ಅಸಲು ಹಾಗೂ ₹ 4270.07 ಲಕ್ಷಗಳಷ್ಟು ಬಡ್ಡಿ ಮೊತ್ತಗಳನ್ನು ಒಳಗೊಂಡಿರುತ್ತದೆ. ಸದರಿ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಕಂಪನಿಯು ಎಲ್ಲಾ ಸಂಭಾವ್ಯ ಪ್ರಯತ್ನಗಳನ್ನು ಮಾಡಿದ್ದು, ಬಾಕಿ ಮೊಬಲಗಿನ ಹೊಂದಾಣಿಕೆಗಾಗಿ ಮೆಸ್ಕಾಂ, ಎಮ್‌ಪಿಎಮ್ ಮತ್ತು ಕರ್ನಾಟಕ ಸರ್ಕಾರಗಳ ನಡುವೆ ಪತ್ರವ್ಯವಹಾರಗಳು ಮುಂದುವರೆದಿರುತ್ತದೆ. ಮೆ। ಎಮ್‌ಪಿಎಮ್ ಸರ್ಕಾರಿ ಸಾಮ್ಯದ ಸಂಸ್ಥೆಯಾಗಿದ್ದು, ಅತ್ಯಂತ ಅನಿವಾರ್ಯ ಸಂದರ್ಭದಲ್ಲಿ ಸರ್ಕಾರದ ಮಧ್ಯಸ್ಥಿಕೆಯು ನಿರೀಕ್ಷಿತವಾಗಿರುವುದರಿಂದ ಈ ಸಂಬಂಧ ಲೆಕ್ಕ ಪತ್ರಗಳಲ್ಲಿ ಸಂದೇಹಾಸ್ಪದ ಬಾಕಿಗೆ ಯಾವುದೇ ಹೆಚ್ಚುವರಿ ಅವಕಾಶಗಳನ್ನು ಕಲ್ಪಿಸಲಾಗಿರುವುದಿಲ್ಲ.

ಟಿಪ್ಪಣಿ : 15 ನಗದು ಮತ್ತು ನಗದು ಸಮಾನಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
15.1	**ಬ್ಯಾಂಕ್‌ಗಳಲ್ಲಿರುವ ಶಿಲ್ಕುಗಳು**			
15.1.1	ಸ್ವೀಕೃತಿ ಬ್ಯಾಂಕ್ ಖಾತೆಗಳು (ನಾಚಾಲ್ತಿ ಖಾತೆಗಳು)	24.300	827.45	1235.39
15.1.2	ವಿತರಣಾ ಬ್ಯಾಂಕ್ ಲೆಕ್ಕಗಳು (ಚಾಲ್ತಿ ಖಾತೆ)	24.400	4775.16	1651.91
	ಉಪ ಮೊತ್ತ		**5602.61**	**2887.29**
15.2	ಕೈಯಲ್ಲಿರುವ ನಗದು	24.110, 24.210	238.35	354.75
15.3	ಕೈಯಲ್ಲಿರುವ ಚೆಕ್	24.110	515.55	85.05
15.4	ಕೈಯಲ್ಲಿರುವ ಅಂಚೆ ಚೀಟಿಗಳು	24.120	3.02	2.50
15.5	ಕೇಂದ್ರ ಕಛೇರಿಯೊಂದಿಗಿನ ನಿಧಿವರ್ಗಾವಣೆ ಲೆಕ್ಕಗಳು	24.5, 24.6	10.60	27.20
	ಒಟ್ಟು		**6370.13**	**3356.79**

ಟಿಪ್ಪಣಿ : 16 ಇತರೆ ಬ್ಯಾಂಕ್ ಶಿಲ್ಕುಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
16.1	ಐಪಿಡಿಎಸ್ ಯೋಜನೆಯ ಬಳಕೆಯಾಗದ ನಿಧಿ	20.280	900.00	-
16.2	ನಿರ್ಬಂಧಿತ ಬ್ಯಾಂಕ್ ಶಿಲ್ಕು – ನ್ಯಾಯಾಲಯದಲ್ಲಿನ ಠೇವಣಿಗಳು	20.280	3.84	3.84
16.3	ಬ್ಯಾಂಕ್ ಗ್ಯಾರಂಟಿಗಳಿಗಾಗಿ ಬ್ಯಾಂಕುಗಳಲ್ಲಿನ ಠೇವಣಿಗಳು	28.936	116.50	3.00
	ಒಟ್ಟು		**1020.34**	**6.84**

ಟಿಪ್ಪಣಿ : 17 ಚಾಲ್ತಿ ಸಾಲಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
	(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)			
17.1	**ಸಿಬ್ಬಂದಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು**			
17.1.1	ಹಬ್ಬದ ಮುಂಗಡ	27.203	37.51	47.89
17.1.2	ವೈದ್ಯಕೀಯ ಮುಂಗಡ	27.204	32.42	41.85
17.1.3	ಪ್ರಯಾಣ ಭತ್ಯೆ ಮುಂಗಡ	27.202	6.49	6.80
17.1.4	ವೆಚ್ಚಗಳ ಬಾಬ್ತು ಸಿಬ್ಬಂದಿಗೆ ಮುಂಗಡ	27.205	35.96	19.75
17.1.5	ಕಂಪೆನಿಯ ಸಿಬ್ಬಂದಿಯವರಲ್ಲಿರುವ ರಿಪೇರಿಗಾಗಿ ನೀಡಿದ ಪರಿವರ್ತಕಗಳು	27.210	0.20	0.21
	ಒಟ್ಟು		**112.58**	**116.50**

ಟಿಪ್ಪಣಿ 18 – ಇತರೆ ಚಾಲ್ತಿ ಆರ್ಥಿಕ ಆಸ್ತಿಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
	(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)			
18.1	**ಕೆ.ಪಿ.ಟಿ.ಸಿ.ಎಲ್ ಮತ್ತು ಇತರೆ ಎಸ್ಕಾಂ ಗಳಿಂದ ಬರತಕ್ಕವುಗಳು**			
18.1.1	ಮೆ/ ಕೆ.ಪಿ.ಟಿ.ಸಿ.ಎಲ್ ನಿಂದ ಬರಬೇಕಾಗಿರುವುದು	28.826, 28.831, 28.836, 28.841, 28.881"	10335.74	10170.70
18.1.2	ಕಳೆ: ಮೆ/ ಕೆ.ಪಿ.ಟಿ.ಸಿ.ಎಲ್‌ಗೆ ಪಾವತಿಸಬೇಕಾಗಿರುವುದು	42.214,42.219, 42.224,42.229, 46.106	4003.25	4001.41
	ಮೆ/ ಕೆ.ಪಿ.ಟಿ.ಸಿ.ಎಲ್ ನಿಂದ ನಿವ್ವಳ ಬರಬೇಕಾಗಿರುವುದು		**6332.49**	**6169.29**
18.1.3	ಮೆ/ ಹೆಸ್ಕಾಂ ನಿಂದ ಬರಬೇಕಾಗಿರುವುದು	28.829,28.839, 28.844	27135.23	27134.00
18.1.4	ಕಳೆ: ಮೆ/ ಹೆಸ್ಕಾಂಗೆ ಪಾವತಿಸಬೇಕಾಗಿರುವುದು	42.216,42.222, 42.232"	17241.83	12407.13
	ಮೆ/ ಹೆಸ್ಕಾಂ ನಿಂದ ನಿವ್ವಳ ಬರಬೇಕಾಗಿರುವುದು		**9893.40**	**14726.87**
18.1.5	ಮೆ/ ಜೆಸ್ಕಾಂ ನಿಂದ ಬರಬೇಕಾಗಿರುವುದು	28.840,28.845	-	11894.12
18.1.6	ಕಳೆ: ಮೆ/ ಜೆಸ್ಕಾಂಗೆ ಪಾವತಿಸಬೇಕಾಗಿರುವುದು	42.233	-	9122.86
	ಮೆ/ ಜೆಸ್ಕಾಂ ನಿಂದ ನಿವ್ವಳ ಬರಬೇಕಾಗಿರುವುದು		**-**	**2771.27**
18.1.7	ಮೆ/ ಸೆಸ್ಕೋ ನಿಂದ ಬರಬೇಕಾಗಿರುವುದು	28.850, 28.790	3328.81	4328.70
18.1.8	ಆಸ್ತಿಗಳ ವರ್ಗಾವಣೆ ಪ್ರಯುಕ್ತ ಮೆ/ ಸೆಸ್ಕೋ ನಿಂದ ಬರಬೇಕಾಗಿರುವುದು	28.851	22476.92	22476.92
18.1.9	ಕಳೆ: ಮೆ/ ಸೆಸ್ಕೋಗೆ ಪಾವತಿಸಬೇಕಾಗಿರುವುದು	42.790,	4602.88	3360.68
	ಮೆ/ ಸೆಸ್ಕೋ ನಿಂದ ನಿವ್ವಳ ಬರಬೇಕಾಗಿರುವುದು		**21202.85**	**23444.94**
18.1.10	ಮೆ/ ಕೆ.ಪಿ.ಸಿ.ಎಲ್ ನಿಂದ ಬರಬೇಕಾಗಿರುವುದು	28.865,28.874	4.09	4.09
18.1.11	ಕಳೆ: ಮೆ/ ಕೆ.ಪಿ.ಸಿ.ಎಲ್ ಗೆ ಪಾವತಿಸಬೇಕಾಗಿರುವುದು	42.203,42.213,	3.48	3.48
	ಮೆ/ ಕೆ.ಪಿ.ಸಿ.ಎಲ್ ನಿಂದ ನಿವ್ವಳ ಬರಬೇಕಾಗಿರುವುದು		**0.61**	**0.61**
18.2	ಬಿಲ್ಲು ಮಾಡದ ಕಂದಾಯಗಳಿಗಾಗಿ ವಿವಿಧ ಬಾಕಿದಾರರು	23.400	20695.69	19860.41
18.3	**ಕರ್ನಾಟಕ ಸರ್ಕಾರದಿಂದ ಬರಬೇಕಾಗಿರುವುದು**			
18.3.1	ನೀರಾವರಿ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಸರಬರಾಜು ಬಾಬ್ತು ರಾಜ್ಯ ಸರಕಾರದಿಂದ ಬರಬೇಕಾದ ಸಹಾಯಧನ	28.627	80424.61	53835.85
18.3.2	ಗ್ರಾಮೀಣ ನೀರು ಸರಬರಾಜು ಸ್ಥಾವರಗಳ ವಿದ್ಯುದೀಕರಣಕ್ಕಾಗಿ ಗ್ರಾಮ ಪಂಚಾಯತ್‌ಗಳಿಂದ ಬರಬೇಕಾದ ಮೊತ್ತ	28.801	2781.10	1568.04
	ಉಪ ಮೊತ್ತ		**83205.71**	**55403.89**
18.4	ಸಿಬ್ಬಂದಿಯಿಂದ ವಸೂಲಾಗಬೇಕಾದ ಮೊತ್ತ	28.401, 28.402, 28.409	101.21	60.07
18.5	ಪಿ&ಜಿ ಟ್ರಸ್ಟ್ ನಿಂದ ಬರಬೇಕಾದ ಮೊತ್ತ	28.907	150.89	204.15
18.6	ಗ್ರಾಹಕರು/ಗುತ್ತಿಗೆದಾರರಿಂದ ವಸೂಲಾತಿಯಾಗಬೇಕಾದ ಸೇವಾ ತೆರಿಗೆ ಮೊತ್ತ	28.852	182.77	200.78
18.7	ಕಂಪೆನಿಯು ಮುಂಗಡವಾಗಿ ಪಾವತಿಸಿದ ಸರಕು ಮತ್ತು ಸೇವಾ ತೆರಿಗೆ ಗ್ರಾಹಕರಿಂದ ವಸೂಲಿಯಾಗಬೇಕಾಗಿರುವುದು	28.853	44.66	-
18.8	ವಿದ್ಯುತ್ ಸರಬರಾಜುದಾರರಿಂದ ವಸೂಲಾಗಬೇಕಾದ ಮೊತ್ತ	41	7.82	15.42
18.9	ಇತರರಿಂದ ವಸೂಲಾಗಬೇಕಾದ ಮೊತ್ತ	28	373.77	332.41
	ಒಟ್ಟು		**142191.87**	**123190.11**

ಟಿಪ್ಪಣಿ 19 – ಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ) (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
19.1	ಆದಾಯ ತೆರಿಗೆಗಾಗಿ ಮುಂಗಡ ಪಾವತಿ (ತೆರಿಗೆ ಆಸ್ತಿ)	28.821	568.52	265.73
19.2	ಕಳೆ: ಪ್ರಚಲಿತ ತೆರಿಗೆ ಜವಾಬ್ದಾರಿಗಳಿಗೆ ಚಾಲ್ತಿ ಅವಕಾಶ	46.800	-	-
	ಒಟ್ಟು		**568.52**	**265.73**

ಟಿಪ್ಪಣಿ 20 – ಇತರೆ ಚಾಲ್ತಿ ಆಸ್ತಿಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
	(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)			
20.1	ಭೋಗ್ಯದ ಮೇಲೆ ಹೊಂದಿರುವ ಭೂಮಿಗಳ ಪೂರ್ವಪಾವತಿಗಳು	10.102	9.01	9.01
20.2	ಪಿಸಿಕೆಎಲ್‌ಗೆ ಪಾವತಿಸಿದ ಮುಂಗಡ	28.9	32.23	87.36
20.3	ಯು.ಐ ವೆಚ್ಚಗಳಿಗಾಗಿ ಎಸ್.ಎಲ್.ಡಿ.ಸಿ ಗೆ ಪಾವತಿಸಿದ ಮುಂಗಡ	28.910	146.26	75.23
20.4	ಅಂತರ್‌ಘಟಕ ಲೆಕ್ಕಗಳು (ನಿವ್ವಳ)	31 to 37	2.43	-
20.5	**ಇತರೆ**			
20.5.1	ಮುಂಗಡ ಪಾವತಿಸಿದ ವೆಚ್ಚಗಳು	28.820,	18.54	15.40
20.5.2	ಎಲ್.ಇ.ಡಿ ಸೋಲಾರ್ ಲ್ಯಾಟಿನ್ ಪೂರೈಕೆಗಾಗಿ ಮೆ! ಕೆ.ಆರ್.ಇ. ಡಿ.ಎಲ್ ರವರಿಗೆ ಪಾವತಿಸಲಾದ ಮುಂಗಡ	28.918	10.42	10.44
20.5.3	ಸಾವು, ಗಾಯ & ಹಾನಿಗಳಿಗಾಗಿ ಸಿಬ್ಬಂದಿ ಹಾಗೂ ಇತರರಿಗೆ ಪಾವತಿಸಲಾದ ಪರಿಹಾರಗಳು ವಿಚಾರಣೆಗೆ ಬಾಕಿ ಇರುವುದು.	28.939	13.90	-
	ಉಪ – ಮೊತ್ತ		**42.86**	**25.84**
	ಒಟ್ಟು		**232.79**	**197.44**

20.2 (ಎ) ಮೆ। ಪಿ.ಸಿ.ಕೆ.ಎಲ್‌ನ ಕಂದಾಯ ವೆಚ್ಚಗಳನ್ನು ವಿದ್ಯುತ್ ಸರಬರಾಜು ಕಂಪೆನಿಗಳಿಂದ ನೀಡಲಾದ ಮೂಲಧನದ ಕೊಡುಗೆ ಹಣದಿಂದ ಭರಿಸಲಾಗುತ್ತದೆ. ಪಿಸಿಕೆಎಲ್ ಹಾಗೂ ವಿಸಕಂಗಳ ನಡುವಿನ ಒಪ್ಪಂದದ ಅನುಸಾರ ವೆಚ್ಚಗಳನ್ನು ವಿದ್ಯುತ್ ಸರಬರಾಜು ಕಂಪೆನಿಗಳಿಗೆ ಹಂಚಿಕೆ ಮಾಡಲಾಗುತ್ತದೆ. ಕಂಪೆನಿಯಿಂದ ನೀಡಲಾದ ಮೂಲಧನವನ್ನು ಲೆಕ್ಕ ಶೀರ್ಷಿಕೆ 28.913 ರಲ್ಲಿ ಮುಂಗಡವಾಗಿ ಲೆಕ್ಕೀಕರಿಸಲಾಗುತ್ತದೆ.

ಟಿಪ್ಪಣಿ 21 – ಮಾರಾಟಕ್ಕಿರುವ ಇತರೆ ಚಾಲ್ತಿ ಆಸ್ತಿಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
21.1	ಸ್ಥಾವರ ಮತ್ತು ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು	16.100	523.87	575.37
	ಒಟ್ಟು		**523.87**	**575.37**

21.1(ಎ) ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು ಬಳಕೆಯಲ್ಲಿಲ್ಲದ/ ನಿಷ್ಕ್ರಿಯಗೊಂಡ ಸ್ಥಾವರ ಮತ್ತು ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು ಇತ್ಯಾದಿಗಳ ಇಳಿತಗೊಂಡ ಮೌಲ್ಯವನ್ನು ಒಳಗೊಂಡಿರುತ್ತದೆ.

ಟಿಪ್ಪಣಿ 22 – ಮುಂದೂಡಲಾದ ನಿಯಂತ್ರಣಾ ಆಸ್ತಿಗಳ ಖರ್ಚು ಶಿಲ್ಕುಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
22.1	ನಿಯಂತ್ರಣಾ ಆಸ್ತಿಗಳು – ಕೆ.ಇ.ಆರ್.ಸಿ	28.922	63552.22	91190.10
	ಒಟ್ಟು		**63552.22**	**91190.10**

ಟಿಪ್ಪಣಿ 23 –ಈಕ್ವಿಟಿ ಷೇರು ಬಂಡವಾಳ (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
23.1	**ಅಧಿಕೃತ ಷೇರು ಬಂಡವಾಳ**			
	ಪ್ರತೀ ಷೇರಿನ ಮೌಲ್ಯ ₹. 10/- ರಂತೆ 100,00,00,000 ಈಕ್ವಿಟಿ ಷೇರುಗಳು		100000.00	50000.00
23.2	ಬಿಡುಗಡೆಮಾಡಿದ/ಒಪ್ಪಿತವಾದ ಮತ್ತು ಪೂರ್ಣ ಪಾವತಿಸಲಾದ ಷೇರು ಬಂಡವಾಳ ತಲಾ ₹. 10/- ರ 48,18,20,231/- ಈಕ್ವಿಟಿ ಷೇರುಗಳು	52.301 52.302	48182.02	35807.02
	ಒಟ್ಟು		**48182.02**	**35807.02**

23.3 ವರದಿ ಮಾಡಲಾದ ಅವಧಿಯ ವರ್ಷಾರಂಭ ಹಾಗೂ ವರ್ಷಾಂತ್ಯದಲ್ಲಿ ಸಮನ್ವಯ ಮಾಡಲ್ಪಟ್ಟಂತೆ ಈಕ್ವಿಟಿ ಷೇರುಗಳು ಈ ಕೆಳಕಂಡಂತಿವೆ.

ವಿವರಗಳು	ಷೇರುಗಳ ಸಂಖ್ಯೆ (₹ ಲಕ್ಷಗಳಲ್ಲಿ)	ಷೇರು ಬಂಡವಾಳ (₹ ಲಕ್ಷಗಳಲ್ಲಿ)
ದಿನಾಂಕ ಏಪ್ರಿಲ್ 1, 2017 ರಲ್ಲಿದ್ದಂತೆ ಶಿಲ್ಕು	**3580.70**	**35807.02**
ಪ್ರಸಕ್ತ ವರ್ಷದಲ್ಲಿನ ಬದಲಾವಣೆಗಳು	-	-
ದಿನಾಂಕ ಮಾರ್ಚ್ 31, 2018 ರಲ್ಲಿದ್ದಂತೆ ಬಾಕಿ	**3580.70**	**35807.02**
ಪ್ರಸಕ್ತ ವರ್ಷದಲ್ಲಿನ ಬದಲಾವಣೆಗಳು	1237.50	12375.00
ದಿನಾಂಕ ಮಾರ್ಚ್ 31, 2019 ರಲ್ಲಿದ್ದಂತೆ ಬಾಕಿ	**4818.20**	**48182.02**

23.4 – ಈಕ್ವಿಟಿ ಷೇರುಗಳಿಗೆ ಸಂಬಂಧಿಸಿದ ಷರತ್ತುಗಳು/ ಹಕ್ಕುಗಳು

23.4.1 ಕಂಪೆನಿಯು ತಲಾ ₹ 10/- ರ ಮುಖಬೆಲೆಯುಳ್ಳ ಒಂದೇ ವರ್ಗದ ಈಕ್ವಿಟಿ ಷೇರುಗಳನ್ನು ಹೊಂದಿರುತ್ತದೆ. ಈಕ್ವಿಟಿ ಷೇರುಗಳನ್ನು ಹೊಂದಿರುವ ಪ್ರತಿಯೊಬ್ಬರೂ ಪ್ರತೀ ಷೇರಿಗೆ ಒಂದು ಮತಕ್ಕೆ ಅರ್ಹರಿರುತ್ತಾರೆ. ನಿರ್ದೇಶಕ ಮಂಡಳಿಯಿಂದ ಪ್ರಸ್ತಾವಿಸಲ್ಪಟ್ಟ ಲಾಭಾಂಶದ ಮೊತ್ತವು ಮುಂದಿನ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.

23.4.2 ಕಂಪೆನಿಯು ದಿವಾಳಿಗೊಂಡ ಸಂದರ್ಭಗಳಲ್ಲಿ ಬಾಕಿ ಇರುವ ಆಸ್ತಿಗಳ ವಿತರಣೆಯು ಷೇರುದಾರರು ಹೊಂದಿರುವ ಈಕ್ವಿಟಿ ಷೇರುಗಳ ಸಂಖ್ಯೆಗೆ ಸಮಾನುಪಾತದಲ್ಲಿರುತ್ತದೆ.

23.5 ಕಂಪೆನಿಯಲ್ಲಿ 5% ಕ್ಕಿಂತ ಹೆಚ್ಚಿನ ಈಕ್ವಿಟಿ ಷೇರುಗಳನ್ನು ಹೊಂದಿರುವ ಷೇರುದಾರರ ವಿವರ ಕೆಳಕಂಡಂತಿದೆ.

ಈಕ್ವಿಟಿ ಷೇರುಗಳನ್ನು ಹೊಂದಿರುವವರ ಹೆಸರು : ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು

ರ ಅಂತ್ಯಕ್ಕೆ	ಷೇರುಗಳ ಸಂಖ್ಯೆ ಲಕ್ಷಗಳಲ್ಲಿ	% ವಾರು ಪ್ರಮಾಣ
31.03.2019	**4818.20**	**99.99**
31.03.2018	**3580.70**	**99.99**

23.6 ಷೇರುಗಳ ಮಾರಾಟಕ್ಕಾಗಿ ಅಥವಾ ಬಂಡವಾಳಹರಣಕ್ಕಾಗಿ ಆಯ್ಕೆಗಳು ಮತ್ತು ಗುತ್ತಿಗೆಗಳು ಅಥವಾ ಬದ್ಧತೆಗಳಡಿಯಲ್ಲಿ ನೀಡಲು ಕಾಯ್ದಿರಿಸಿದ ಈಕ್ವಿಟಿ ಷೇರುಗಳು **: ಯಾವುದೂ ಇರುವುದಿಲ್ಲ**.

ಟಿಪ್ಪಣಿ 24 – ಇತರೆ ಈಕ್ವಿಟಿ (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
24.1	ಹಂಚಿಕೆಗೆ ಬಾಕಿ ಇರುವ ಷೇರು ಹಣ	52.304	4688.00	10513.00
24.2	ನೆಟ್‌ವರ್ತ್‌ನ ಪ್ರಸ್ತಾವಿತ ಹೊಂದಾಣಿಕೆಗಳು	52.308	764.00	-2896.00
24.3	ಬಂಡವಾಳ ಮೀಸಲು	56.200	132.66	132.66
24.4	ಸಾಮಾಗ್ರಿ ಬೆಲೆ ವ್ಯತ್ಯಾಸದ ಮೀಸಲು	56.610	4037.17	4271.66
24.5	ಸಂಚಿತ ಲಾಭ	58.200	18782.35	13143.16
	ಒಟ್ಟು		**28404.18**	**25164.48**

24.6 ಇತರೆ ಈಕ್ವಿಟಿಗಳಲ್ಲಿ ಆದ ಬದಲಾವಣೆ

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
1	**ಹಂಚಿಕೆಗೆ ಬಾಕಿ ಇರುವ ಷೇರು ಹಣ**			
	ವರ್ಷದ ಆರಂಭದಲ್ಲಿ ಇರುವ ಶಿಲ್ಕು	52.304	10513.00	1400.00
	ಕೂಡಿರಿ: ಪ್ರಸಕ್ತ ವರ್ಷದಲ್ಲಿ ಸ್ವೀಕೃತಿಯಾಗಿರುವುದು		-5825.00	9113.00
	ವರ್ಷಾಂತ್ಯದಲ್ಲಿ ಇರುವ ಬಾಕಿ		**4688.00**	**10513.00**
2	**ನೆಟ್‌ವರ್ತ್‌ನ ಪ್ರಸ್ತಾವಿತ ಹೊಂದಾಣಿಕೆಗಳು**			
	ವರ್ಷದ ಆರಂಭದಲ್ಲಿ ಇರುವ ಶಿಲ್ಕು	52.308	-2896.00	-2896.00
	ಕೂಡಿರಿ: ಪ್ರಸಕ್ತ ವರ್ಷದಲ್ಲಿ ಸ್ವೀಕೃತಿಯಾಗಿರುವುದು		3660.00	-
	ವರ್ಷಾಂತ್ಯದಲ್ಲಿ ಇರುವ ಶಿಲ್ಕು		**764.00**	**-2896.00**
3	**ಬಂಡವಾಳ ಮೀಸಲು**			
	ವರ್ಷದ ಆರಂಭದಲ್ಲಿ ಇರುವ ಶಿಲ್ಕು	56.200	132.66	132.66
	ಕಳೆಯಿರಿ : ಪ್ರಸಕ್ತ ವರ್ಷದಲ್ಲಿ ಬಳಸಿಕೊಂಡಿರುವುದು		-	-
	ವರ್ಷಾಂತ್ಯದಲ್ಲಿ ಇರುವ ಶಿಲ್ಕು		**132.66**	**132.66**
4	**ಸಾಮಾಗ್ರಿ ಬೆಲೆ ವ್ಯತ್ಯಾಸದ ಮೀಸಲು**			
	ವರ್ಷದ ಆರಂಭದಲ್ಲಿ ಇರುವ ಶಿಲ್ಕು	56.610	4271.66	4341.04
	ಕಳೆಯಿರಿ : ಪ್ರಸಕ್ತ ವರ್ಷದಲ್ಲಿ ಬಳಸಿಕೊಂಡಿರುವುದು		234.50	69.39
	ವರ್ಷಾಂತ್ಯದಲ್ಲಿ ಇರುವ ಶಿಲ್ಕು		**4037.16**	**4271.65**
5	**ಉಳಿಸಿಕೊಂಡ ಗಳಿಕೆಗಳು**			
	ವರ್ಷದ ಆರಂಭದಲ್ಲಿ ಇರುವ ಶಿಲ್ಕು		13143.16	10001.02
	ಕೂಡಿರಿ: ಆರ್ಥಿಕ ವರ್ಷದ ಲಾಭ		5639.20	3142.14
	ವರ್ಷಾಂತ್ಯದಲ್ಲಿ ಇರುವ ಶಿಲ್ಕು		**18782.36**	**13143.16**
	ಒಟ್ಟು		**28404.18**	**25,164.48**

24.1(ಎ) ಹಂಚಿಕೆಗೆ ಬಾಕಿ ಇರುವ ಷೇರು ಹಣವು ಷೇರು ಬಂಡವಾಳಕ್ಕಾಗಿ ಸರಕಾರದಿಂದ ಬಿಡುಗಡೆಯಾದ ಮೊತ್ತವನ್ನು ಪ್ರತಿನಿಧಿಸುತ್ತದೆ.

24.2 (ಎ) ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಇಎನ್ 67 ಪಿಎಸ್‌ಆರ್ 2017 ಬೆಂಗಳೂರು, ದಿನಾಂಕ: 31.07.2017 ರಲ್ಲಿ, ದಿನಾಂಕ: 31.03.2016 ರ ಅಂತ್ಯಕ್ಕೆ ಕ.ವಿ.ಪ್ರ.ನಿ.ನಿ. ಯ ಲೆಕ್ಕಪುಸ್ತಕಗಳಲ್ಲಿರುವ ಕೆ.ಪಿ.ಸಿ.ಎಲ್ ಗೆ ಪಾವತಿಬೇಕಾದ ಅಸಲು ಹಾಗೂ ಬಡ್ಡಿಯ ಶಿಲ್ಕು ಮತ್ತು ಹಳೆಯ ಸಹಾಯಧನದ ಬಾಕಿ ಶಿಲ್ಕುಗಳನ್ನು ವಿದ್ಯುತ್ ಸರಬರಾಜು ಕಂಪೆನಿಗಳಿಗೆ ವರ್ಗಾಯಿಸುವಂತೆ ಆದೇಶಿಸಿದೆ. ಆರ್ಥಿಕ ವರ್ಷ 2016-17ನೇ ಸಾಲಿನಲ್ಲಿ ಈ ಆದೇಶವನ್ನು ಲೆಕ್ಕಿಸುವಾಗ, ಕ.ವಿ.ನಿ. ಗೆ ಪಾವತಿಸಬೇಕಾದ ಬಡ್ಡಿಯ ಮೊತ್ತ ರೂ. 36.60 ಕೋಟಿಗಳನ್ನು ಕಂಪೆನಿಯು ತಪ್ಪಾಗಿ ಲೆಕ್ಕಿಸಿದ್ದು, ಪ್ರಸ್ತುತ ಸರಿಪಡಿಸಲಾಗಿದೆ.

24.3 (ಎ) ಬಂಡವಾಳ ಮೀಸಲು ಮೊತ್ತವು, ಪರಿವರ್ತನಾ ಅವಧಿಯಲ್ಲಿ ಕವಿ.ಪ್ರ.ನಿ.ನಿ.ಯು ರಚಿಸಿ ಮ.ವಿ.ಸ.ಕಂ. ಗೆ ಹಸ್ತಾಂತರಿಸಿದ ಸ್ಥಿರಾಸ್ತಿಗಳ ಮೌಲ್ಯವನ್ನು ಪ್ರತಿನಿಧಿಸುತ್ತದೆ.

24.4 (ಎ) ಸಾಮಾಗ್ರಿ ಬೆಲೆ ವ್ಯತ್ಯಾಸದ ಮೀಸಲು ನಿಧಿಯ ಮೊತ್ತವು, ಕಂಪೆನಿಯು ದಿನಾಂಕ 31.03.2016 ಕ್ಕಿಂತಲೂ ಮೊದಲು ಖರೀದಿಸಿದ ಸಾಮಗ್ರಿಗಳ ಮಾರುಕಟ್ಟೆ ಬೆಲೆ ಹಾಗೂ ಸ್ಟ್ಯಾಂಡರ್ಡ್ ದರಗಳ ನಡುವಿನ ವ್ಯತ್ಯಾಸವನ್ನು ಪ್ರತಿನಿಧಿಸುತ್ತದೆ.

ಟಿಪ್ಪಣಿ: 25 ಸಾಲಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
25.1	**(ಸುರಕ್ಷಿತ – ಋಣಮುಕ್ತತೆಯ ದರದಲ್ಲಿ)**			
25.1.1	**ಕಾಲಾವಧಿ ಸಾಲಗಳು**			
25.1.1.1	ಬ್ಯಾಂಕುಗಳಿಂದ	53.500,	64239.55	55026.79
25.1.1.2	ಇತರೆ ಮೂಲಗಳಿಂದ	53.3	7999.34	3662.07
	ಉಪ – ಮೊತ್ತ		**72238.89**	**58688.86**
25.2	**(ಅಸುರಕ್ಷಿತ– ಋಣಮುಕ್ತತೆಯ ದರದಲ್ಲಿ)**			
25.2.1	**ಕಾಲಾವಧಿ ಸಾಲಗಳು**			
25.2.1.1	ಸರ್ಕಾರದಿಂದ	53.3, 54.7	40.83	48.49
25.2.1.2	ಇತರೆ ಮೂಲಗಳಿಂದ	53.3, 53.9	932.63	1158.41
	ಉಪ – ಮೊತ್ತ		**973.46**	**1206.90**
	ಒಟ್ಟು		**73212.35**	**59895.76**

25.3 -ಬ್ಯಾಂಕ್ ಶಿಲ್ಕುಗಳ ಸಮನ್ವಯ

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಬ್ಯಾಂಕ್/ಸಾಲ ನೀಡಿದವರ ಹೆಸರು	ಪಡೆದ ಸಾಲ	ಋಣಭಾರ ಗುರುತು ಸಂಖ್ಯೆ	ಸಾಲದ ಅವದಿ ವರ್ಷಗಳಲ್ಲಿ	ದಿ. 31.3.19 ರಂದು ಇದ್ದಂತೆ ಚಲ ಬಡ್ಡಿ ದರ (%)	ದಿ. 01.04.18 ರಂದು ಇದ್ದಂತೆ ಸಾಲದ ಶಿಲ್ಕು	2018-19ರಲ್ಲಿ ಪಡೆದ ಸಾಲ	2018-19 ರಲ್ಲಿ ಮರು ಪಾವತಿ	31.03.19 ರಲ್ಲಿದ್ದಂತೆ ಸಾಲದ ಶಿಲ್ಕು	2019-20 ರಲ್ಲಿ ಪಾವತಿಸ ಬೇಕಾಗಿರುವ ಸಾಲದ ಕಂತುಗಳ ವಿವರಗಳು	
										ಕಂತುಗಳ ಸಂಖ್ಯೆ	ಮೊತ್ತ
1	2	3	4	5	6	7	8	9	10	11	12
I	**ಅವಧಿ ಸಾಲ - ಸುರಕ್ಷಿತ**										
ಎ	**ವಾಣಿಜ್ಯ ಬ್ಯಾಂಕ್‌ಗಳು**										
1	**ಸಿಂಡಿಕೇಟ್ ಬ್ಯಾಂಕ್ III/ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ II** ಕಂಪೆನಿಯ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳಾದ ವಿದ್ಯುತ್ ಪರಿವರ್ತಕಗಳು, ಪ್ರಸರಣಾ ಮಾರ್ಗಗಳು, ಮಾಪಕಗಳು, ಕಂಬಗಳು, ವಾಹಕಗಳು, ಕೇಬಲ್‌ಗಳು ಮತ್ತು ಗಣಕಯಂತ್ರಗಳ ಒಟ್ಟು ₹ 40.00 ಕೋಟಿ ಮೌಲ್ಯದ ಆಸ್ತಿಗಳನ್ನು ಪ್ರಥಮ ಋಣಭಾರ (ಚರ) ಆಧಾರದಲ್ಲಿ ಸುರಕ್ಷತೆ ನೀಡಿ ಸಿಂಡಿಕೇಟ್ ಬ್ಯಾಂಕ್‌ನಿಂದ ಪಡೆದ ಸಾಲ	4000	10149317	8 (07/11 ರಿಂದ 06/18)	8.70	121.11	-	121.11	-	-	-
2	**ಸಿಂಡಿಕೇಟ್ ಬ್ಯಾಂಕ್ V/ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ IV:** ಕಂಪೆನಿಯ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳಾದ ವಿದ್ಯುತ್ ಪರಿವರ್ತಕಗಳು, ಪ್ರಸರಣಾ ಮಾರ್ಗಗಳು, ಮಾಪಕಗಳು, ಕಂಬಗಳು, ವಾಹಕಗಳು, ಕೇಬಲ್‌ಗಳು ಮತ್ತು ಗಣಕಯಂತ್ರಗಳ ಒಟ್ಟು ₹ 100.00 ಕೋಟಿ ಮೌಲ್ಯದ ಆಸ್ತಿಗಳನ್ನು ಪ್ರಥಮ ಋಣಭಾರ (ಚರ) ಆಧಾರದಲ್ಲಿ ಸುರಕ್ಷತೆ ನೀಡಿ ಸಿಂಡಿಕೇಟ್ ಬ್ಯಾಂಕ್‌ನಿಂದ ಪಡೆದ ಸಾಲ	10000	10526347	8 (09/14 ರಿಂದ 08/22)	8.70	6309.34	-	1428.53	4880.81	12	1428.53
3	**ಸಿಂಡಿಕೇಟ್ ಬ್ಯಾಂಕ್ VI/ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ V:** ಕಂಪೆನಿಯ ನಿಗಮ ಕಛೇರಿಯಲ್ಲಿರುವ ಈಗಿನ ಮತ್ತು ಭವಿಷ್ಯದ ಸಂಪೂರ್ಣ ಚಾಲ್ತಿ ಆಸ್ತಿಯೊಂದಿಗೆ ದಾಸ್ತಾನು ಸಾಮಾಗ್ರಿಗಳು ಮತ್ತು ಬರತಕ್ಕ ಬಾಕಿ ಮೊತ್ತಗಳನ್ನೊಳಗೊಂಡಂತೆ ಅಡಮಾನ ಮಾಡಿ ಸುರಕ್ಷತೆ ನೀಡಲಾಗಿದೆ.	2600	10550297	40 ತಿಂಗಳು (12/14 ರಿಂದ 03/18)	8.70	65.00	-	65.00	-	-	-
4	**ಸಿಂಡಿಕೇಟ್ ಬ್ಯಾಂಕ್ IV/ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ III:** ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿರುವ ಸ್ಥಾವರ ಮತ್ತು ಯಂತ್ರ, ಮಾರ್ಗಗಳು, ಕಂಬ, ಗೋಪುರ, ಪರಿವರ್ತಕಗಳು, ಮಾಪಕಗಳು, ಇತರೆಗಳನ್ನೊಳಗೊಂಡಂತೆ ಕೇಬಲ್ ಸಮೂಹ, ಪೀಠೋಪಕರಣಗಳು, ಕಛೇರಿ ಸಲಕರಣೆ ಆಸ್ತಿಗಳ ಮೇಲೆ ಪ್ರಥಮ ಋಣಭಾರ ಆಧಾರದಲ್ಲಿ ಸುರಕ್ಷತೆ ನೀಡಲಾಗಿದೆ.	10000	10281594	8 (03/11 ರಿಂದ 02/19)	8.70	1419.56	-	1419.56	-	-	-

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಬ್ಯಾಂಕ್/ಸಾಲ ನೀಡಿದವರ ಹೆಸರು	ಪಡೆದ ಸಾಲ	ಋಣಭಾರ ಗುರುತು ಸಂಖ್ಯೆ	ಸಾಲದ ಅವದಿ ವರ್ಷಗಳಲ್ಲಿ	ದಿ. 31.3.19 ರಂದು ಇದ್ದಂತೆ ಚಲ ಬಡ್ಡಿ ದರ (%)	ದಿ. 01.04.18 ರಂದು ಇದ್ದಂತೆ ಸಾಲದ ಶಿಲ್ಕು	2018-19ರಲ್ಲಿ ಪಡೆದ ಸಾಲ	2018-19 ರಲ್ಲಿ ಮರು ಪಾವತಿ	31.03.19 ರಲ್ಲಿದ್ದಂತೆ ಸಾಲದ ಶಿಲ್ಕು	2019-20 ರಲ್ಲಿ ಪಾವತಿಸ ಬೇಕಾಗಿರುವ ಸಾಲದ ಕಂತುಗಳ ವಿವರಗಳು	
										ಕಂತುಗಳ ಸಂಖ್ಯೆ	ಮೊತ್ತ
1	2	3	4	5	6	7	8	9	10	11	12
5	**ಇಂಡಿಯನ್ ಬ್ಯಾಂಕ್/ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ VII:** ಕಂಪೆನಿಯ ನಿಗಮ ಕಛೇರಿಯಲ್ಲಿರುವ ಈಗಿನ ಮತ್ತು ಭವಿಷ್ಯದ ಸಂಪೂರ್ಣ ಚಾಲ್ತಿ ಆಸ್ತಿಯೊಂದಿಗೆ ದಾಸ್ತಾನು ಸಾಮಾಗ್ರಿಗಳು ಮತ್ತು ಬರತಕ್ಕ ಬಾಕಿ ಮೊತ್ತಗಳನ್ನೊಳಗೊಂಡಂತೆ ಅಡಮಾನ ಮಾಡಿ ಸುರಕ್ಷತೆ ನೀಡಲಾಗಿದೆ.	5000 –	10185366	9 (10/09 ರಿಂದ 09/18)	8.70	312.32	-	312.32	-	-	
6	**ಮೈಸೂರು ಸ್ಟೇಟ್ ಬ್ಯಾಂಕ್ II/ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ VIII:** ಈ ಸಾಲದಿಂದ ನಿರ್ಮಿಸಲಾದ ಸಲಕರಣೆಗಳು, ಮಾಪಕಗಳು, ಪರಿವರ್ತಕಗಳು, ಕಂಬಗಳು, ಅಲ್ಯುಮಿನಿಯಂ ತಂತಿಗಳು, ವಾಹಕಗಳು, ಕೇಬಲ್‌ಗಳು, ಸಿವಿಲ್ ಕಾಮಗಾರಿಗಳು ಇತ್ಯಾದಿಗಳನ್ನು ಅಡಮಾನ ಮಾಡಿ ಸಾಲ ಪಡೆಯಲಾಗಿದೆ.	10000	10369875	8 (08/12 ರಿಂದ 07/20)	8.70	3348.18	-	1385.45	1962.73	12	1385.45
7	**ಕೆನರಾ ಬ್ಯಾಂಕ್ I :** ₹ 50.00 ಕೋಟಿಗಳ ಮಿತಿಗೆ ಒಳಪಟ್ಟು ಕಂಪನಿಯು ಹಾಲಿ ಹಾಗೂ ಭವಿಷ್ಯದ ಸ್ಥಿರ ಆಸ್ತಿಗಳ ಮೇಲೆ ಸಮಾನ ಋಣಭಾರ	5000	10448012	8 (08/13 ರಿಂದ 07/21)	8.90	2441.50	-	714.00	1727.50	12	714.00
8	**ಕೆನರಾ ಬ್ಯಾಂಕ್ II :** ₹ 50.00 ಕೋಟಿಗಳ ಮಿತಿಗೆ ಒಳಪಟ್ಟು ಕಂಪನಿಯು ಹಾಲಿ ಹಾಗೂ ಭವಿಷ್ಯದ ಸ್ಥಿರ ಆಸ್ತಿಗಳ ಮೇಲೆ ಸಮಾನ ಋಣಭಾರ	5000	10448012	8 (08/13 ರಿಂದ 07/21)	8.90	2739.00	-	714.00	2025.00	12	714.00
9	**ಸಿಂಡಿಕೇಟ್ ಬ್ಯಾಂಕ್ – VII / ಯೂನಿಯನ್ ಬ್ಯಾಂಕ್ ಆಫ್ ಇಂಡಿಯ VI** ಕಂಪೆನಿಯು ಹೊಂದಬೇಕಾದ ₹ 62.50 ಕೋಟಿ ಮೌಲ್ಯದ ಸ್ಥಿರಾಸ್ಥಿಗಳ ಮೇಲೆ ಪ್ರತ್ಯೇಕ ಋಣ ಭಾರದ ಸುರಕ್ಷತೆ ನೀಡಲಾಗಿದೆ	5000	10593879	9 (08/15 ರಿಂದ 07/24)	8.70	3958.26	-	625.05	3333.21	12	625.06
10	**ಕೆನರಾ ಬ್ಯಾಂಕ್ III :** ₹ 50.00 ಕೋಟಿಗಳ ಮಿತಿಗೆ ಒಳಪಟ್ಟು ಕಂಪನಿಯ ಹಾಲಿ ಹಾಗೂ ಭವಿಷ್ಯದ ಸ್ಥಿರ ಆಸ್ತಿಗಳ ಮೇಲೆ ಸಮಾನ ಋಣಭಾರ	5000	10448012	8 (07/15 ರಿಂದ 06/23)	8.90	3929.00	-	714.00	3215.00	12	714.00
11	**ಕೆನರಾ ಬ್ಯಾಂಕ್ IV :** ₹ 50.00 ಕೋಟಿಗಳ ಮಿತಿಗೆ ಒಳಪಟ್ಟು ಕಂಪನಿಯ ಹಾಲಿ ಹಾಗೂ ಭವಿಷ್ಯದ ಸ್ಥಿರ ಆಸ್ತಿಗಳ ಮೇಲೆ ಸಮಾನ ಋಣಭಾರ	5000	10448012	8 (09/16 ರಿಂದ 08/24)	8.70	4640.00	-	720.00	3920.00	12	720.00

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಬ್ಯಾಂಕ್/ಸಾಲ ನೀಡಿದವರ ಹೆಸರು	ಪಡೆದ ಸಾಲ	ಋಣಭಾರ ಗುರುತು ಸಂಖ್ಯೆ	ಸಾಲದ ಅವದಿ ವರ್ಷಗಳಲ್ಲಿ	ದಿ. 31.3.19 ರಂದು ಇದ್ದಂತೆ ಚಲ ಬಡ್ಡಿ ದರ (%)	ದಿ. 01.04.18 ರಂದು ಇದ್ದಂತೆ ಸಾಲದ ಶಿಲ್ಕು	2018-19ರಲ್ಲಿ ಪಡೆದ ಸಾಲ	2018-19 ರಲ್ಲಿ ಮರು ಪಾವತಿ	31.03.19 ರಲ್ಲಿದ್ದಂತೆ ಸಾಲದ ಶಿಲ್ಕು	2019-20 ರಲ್ಲಿ ಪಾವತಿಸ ಬೇಕಾಗಿರುವ ಸಾಲದ ಕಂತುಗಳ ವಿವರಗಳು	
										ಕಂತುಗಳ ಸಂಖ್ಯೆ	ಮೊತ್ತ
1	2	3	4	5	6	7	8	9	10	11	12
12	**ಯೂನಿಯನ್ ಬ್ಯಾಂಕ್ ಆಫ್ ಇಂಡಿಯ I :** ಇತರ ಸಾಲದಾತರನ್ನು ಒಳಗೊಂಡು ಕಂಪನಿಯ ಹಾಲಿ ಹಾಗೂ ಭವಿಷ್ಯದ ಸ್ಥಿರ ಆಸ್ತಿಗಳ ಮೇಲಿನ ಋಣಭಾರ	10000	100036293	8 (06/16 ರಿಂದ 05/24)	8.70	8809.52	-	1428.57	7380.95	12	1428.57
13	**ಪಂಜಾಬ್ & ಸಿಂಧ್ ಬ್ಯಾಂಕ್ – II** ಎಂಬಿಎ ನಲ್ಲಿರುವ ಇತರ ಸಾಲದಾತರನ್ನು ಒಳಗೊಂಡು, ಅವಧಿ ಸಾಲದಿಂದ ರಚಿಸಲಾದ ಕಂಪನಿಯ ಹಾಲಿ ಸ್ಥಿರಾಸ್ತಿಗಳು ಮತ್ತು ಬಂಡವಾಳ ಆಸ್ತಿಗಳ ಮೇಲಿನ ಸಮಾನ ಋಣಭಾರ.	10000	100053901	8 (09/16 ರಿಂದ 08/24)	8.90	9167.00	-	1428.00	7739.00	12	1428.00
14	**ಸಿಂಡಿಕೇಟ್ ಬ್ಯಾಂಕ್** ಕಂಪೆನಿಯ ಸ್ಥಿರ ಆಸ್ತಿಗಳ ಮೇಲೆ ಸಮಾನ ಋಣಭಾರದ ಸುರಕ್ಷತೆ ನೀಡಲಾಗಿದೆ.	25000	100134522	10 (11/17 ರಿಂದ 10/26)	9.00	20000.00	5000.00	925.93	24074.07	12	2777.78
15	**ವಿಜಯ ಬ್ಯಾಂಕ್ – II** ಕಂಪೆನಿಯ ಸ್ಥಿರ ಆಸ್ತಿಗಳ ಮೇಲೆ ಸಮಾನ ಋಣಭಾರದ ಸುರಕ್ಷತೆ ಭೂಮಿ ಹಾಗೂ ಕಟ್ಟಡಗಳನ್ನು ಹೊರತುಪಡಿಸಿ ನೀಡಲಾಗಿದೆ.	15000	100189300	10 (06/18 ರಿಂದ 05/27)	8.50	-	15000.00	-	15000.00	10	1388.89
16	**ಯೂನಿಯನ್ ಬ್ಯಾಂಕ್ ಆಫ್ ಇಂಡಿಯ X :** ಇತರ ಸಾಲದಾತರನ್ನು ಒಳಗೊಂಡು, ಭೂಮಿ ಹಾಗೂ ಕಟ್ಟಡಗಳನ್ನು ಹೊರತುಪಡಿಸಿ ಕಂಪನಿಯ ಹಾಲಿ ಹಾಗೂ ಭವಿಷ್ಯದ ಸ್ಥಿರ ಆಸ್ತಿಗಳ ಮೇಲಿನ ಋಣಭಾರ	3000	100222189	10 (12/18 ರಿಂದ 10/27)	8.70	-	3000.00	-	3000.00	5	694.44
17	**ಸಿಂಡಿಕೇಟ್ ಬ್ಯಾಂಕ್ II / ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ:** ಇತರ ಸಾಲದಾತರನ್ನು ಒಳಗೊಂಡು, ಕಂಪನಿಯ ಹಾಲಿ ಮತ್ತು ಭವಿಷ್ಯದ ಸ್ಥಿರಾಸ್ತಿಗಳ ಮೇಲಿನ ಸಮಾನ ಋಣಭಾರದ ಸುರಕ್ಷತೆ ನೀಡಲಾಗಿದೆ.	20000	10610407	36 ತಿಂಗಳು (12/2015 ರಿಂದ 11/2018)	8.70	4444.30	-	4444.30	-	-	-
	ಉಪ ಮೊತ್ತ	**149600**				**71704.09**	**23000.00**	**16445.82**	**78258.27**		**14018.72**
ಬಿ	**ಇತರೆ**										
1	**ಆರ್.ಇ.ಸಿ-ಎ.ಪಿ.ಡಿ.ಆರ್.ಪಿ ಕಾಮಗಾರಿಗಳು:** ಶಿವಮೊಗ್ಗ, ಭದ್ರಾವತಿ ಮತ್ತು ಚಿಕ್ಕಮಗಳೂರು ಗಳಲ್ಲಿನ ಚರಾಸ್ತಿಗಳಾದ ಮೆಷಿನರಿ ಯಂತ್ರಗಳು, ಮೆಷಿನರಿ ಬಿಡಿಭಾಗಗಳು, ಟೂಲ್ಸ್ ಸಲಕರಣೆಗಳು ಮತ್ತು ಸ್ಥಾಪಿಸಿದ ಪೂರಕ ಸಾಮಾಗ್ರಿಗಳು ಮತ್ತು ಯೋಜನೆಯಡಿ ಸೃಷ್ಟಿಸಿದ ಮತ್ತು ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಮಂಜೂರಾದ ಸಾಲದಿಂದ ಖರೀದಿಸಿದ ಯಂತ್ರಗಳನ್ನು ಪ್ರಥಮ ಋಣ ಭಾರದ ಆದ್ಯತೆಯಲ್ಲಿ ಅಡಮಾನ ಮಾಡಿ ಸಾಲ ಪಡೆಯಲಾಗಿದೆ	161	80059293	13 (06/07 ರಿಂದ 05/20)	11.50	59.27	-	16.09	43.18	1	16.09

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಬ್ಯಾಂಕ್/ಸಾಲ ನೀಡಿದವರ ಹೆಸರು	ಪಡೆದ ಸಾಲ	ಋಣಭಾರ ಗುರುತು ಸಂಖ್ಯೆ	ಸಾಲದ ಅವಧಿ ವರ್ಷಗಳಲ್ಲಿ	ದಿ. 31.3.19 ರಂದು ಇದ್ದಂತೆ ಚಲ ಬಡ್ಡಿ ದರ (%)	ದಿ. 01.04.18 ರಂದು ಇದ್ದಂತೆ ಸಾಲದ ಶಿಲ್ಕು	2018-19ರಲ್ಲಿ ಪಡೆದ ಸಾಲ	2018-19 ರಲ್ಲಿ ಮರು ಪಾವತಿ	31.03.19 ರಲ್ಲಿದ್ದಂತೆ ಸಾಲದ ಶಿಲ್ಕು	2019-20 ರಲ್ಲಿ ಪಾವತಿಸ ಬೇಕಾಗಿರುವ ಸಾಲದ ಕಂತುಗಳ ವಿವರಗಳು	
										ಕಂತುಗಳ ಸಂಖ್ಯೆ	ಮೊತ್ತ
1	2	3	4	5	6	7	8	9	10	11	12
2	**ಆರ್.ಇ.ಸಿ – ಸಾಮಾನ್ಯ :** ದಕ್ಷಿಣ ಕನ್ನಡ ಜಿಲ್ಲೆಯ ವಗ್ಗ, ಕುಕ್ಕಿಪಾಡಿ ಮತ್ತು ನೆಲ್ಯಾಡಿಗಳಲ್ಲಿನ ಯೋಜನೆಯ ಕಾಮಗಾರಿಗಳಿಗೆ ಗ್ರಾಮೀಣ ವಿದ್ಯುದೀಕರಣ ನಿಗಮ ದಿಂದ, ಚರಾಸ್ತಿಗಳಾದ ಯಂತ್ರಗಳು, ಉಪಕರಣಗಳು ಪೂರಕ ಯಂತ್ರಗಳು ಟೂಲ್ಸ್, ಸಲಕರಣೆಗಳು ಮತ್ತು ಸ್ಥಾಪಿಸಿದ ಪೂರಕ ಸಾಮಾಗ್ರಿಗಳು ಮತ್ತು ಯೋಜನೆಯಡಿ ಸೃಷ್ಟಿಸಿದ ಮತ್ತು ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಮಂಜೂರಾದ ಸಾಲದಿಂದ ಖರೀದಿಸಿದ ಯಂತ್ರಗಳನ್ನು ಪ್ರಥಮ ಋಣಭಾರದ ಆದ್ಯತೆಯಲ್ಲಿ ಅಡಮಾನ ಮಾಡಿ ಸಾಲ ಪಡೆಯಲಾಗಿದೆ.	634.00	10033614	13 (01/07 ರಿಂದ 12/19)	11.50	126.74	-	63.37	63.37	1	63.37
3	**ಆರ್.ಇ.ಸಿ. – ಸಗಟು ಸಾಲ:** ₹ 89.66 ಕೋಟಿಗಳ ಮಿತಿಗೆ ಒಳಪಟ್ಟು ವ್ಯವಸ್ಥಾ ಸುಧಾರಣೆಗೆ ಬಳಸಿದ ಪರಿವರ್ತಕಗಳು ಹಾಗೂ ವಾಹಕಗಳು	3481.26	10384994	7 (10/12 ರಿಂದ 09/19)	11.00	2088.76	-	696.26	1392.50	2	696.25
4	**ಪಿ.ಎಫ್.ಸಿ – ಆರ್–ಎ.ಪಿ.ಡಿ.ಆರ್.ಪಿ. ಕಾಮಗಾರಿಗಳು :** 1. ಮೆಸ್ಕಾಂನ ಯೋಜನಾ ವ್ಯಾಪ್ತಿಯಲ್ಲಿ ಆರ್ಥಿಕ ನೆರವಿನಿಂದ ಹೊಸದಾಗಿ ಸ್ಥಾಪಿಸಲಾದ ಚರಾಸ್ತಿಗಳು. 2.ಕಂಪೆನಿಯ ಈಗಿರುವ ಮತ್ತು ಪ್ರಸ್ತಾವಿತ ಚರ ಆಸ್ತಿಗಳಾದ ಸ್ಥಾವರ ಮತ್ತು ಯಂತ್ರಗಳ ಸುರಕ್ಷತೆ ನೀಡಿ ಪಿ.ಎಫ್.ಸಿ.ಯಿಂದ ಸಾಲ ಪಡೆಯಲಾಗಿದೆ.	2884.47	10184171	10 (02/09 ರಿಂದ 01/19)	9.00	2163.02	683.65	2846.67	-	-	-
5	**ಆರ್.ಇ.ಸಿ. – ಐಪಿಡಿಎಸ್:** ಮಂಜೂರಾದ ಸಾಲದ ಮೊತ್ತದ 110% ದ ಮಿತಿಗೆ ಒಳಪಟ್ಟು ಯೋಜನೆಗೆ ಮಂಜೂರಾದ ಸಾಲದಿಂದ ಭವಿಷ್ಯದಲ್ಲಿ ರಚಿಸಲಾಗುವ ಆಸ್ತಿಗಳ ಭದ್ರತೆ ನೀಡಲಾಗಿದೆ.	1000.00	100189300	13 Yrs	9.75	-	1000.00	-	1000.00	-	-
6	**ಆರ್.ಇ.ಸಿ. – ಡಿಡಿಜಿಯುಜಿಜೆವೈ:** ಮಂಜೂರಾದ ಸಾಲದ ಮೊತ್ತದ 110% ದ ಮಿತಿಗೆ ಒಳಪಟ್ಟು ಯೋಜನೆಗೆ ಮಂಜೂರಾದ ಸಾಲದಿಂದ ಭವಿಷ್ಯದಲ್ಲಿ ರಚಿಸಲಾಗುವ ಆಸ್ತಿಗಳ ಭದ್ರತೆ ನೀಡಲಾಗಿದೆ.	6276.00	100189300	13 Yrs	9.75	-	6276.00	-	6276.00	-	-
	ಉಪ ಮೊತ್ತ	**14436.73**				**4437.79**	**7959.65**	**3622.39**	**8775.05**	**4.00**	**775.71**
	ಒಟ್ಟು ಸುರಕ್ಷಿತ ಸಾಲಗಳು	**164036.73**				**76141.88**	**30959.65**	**20068.21**	**87033.32**	**-**	**14794.43**

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಬ್ಯಾಂಕ್/ಸಾಲ ನೀಡಿದವರ ಹೆಸರು	ಪಡೆದ ಸಾಲ	ಋಣಭಾರ ಗುರುತು ಸಂಖ್ಯೆ	ಸಾಲದ ಅವದಿ ವರ್ಷಗಳಲ್ಲಿ	ದಿ. 31.3.19 ರಂದು ಇದ್ದಂತೆ ಚಲ ಬಡ್ಡಿ ದರ (%)	ದಿ. 01.04.18 ರಂದು ಇದ್ದಂತೆ ಸಾಲದ ಶಿಲ್ಕು	2018–19ರಲ್ಲಿ ಪಡೆದ ಸಾಲ	2018–19 ರಲ್ಲಿ ಮರು ಪಾವತಿ	31.03.19 ರಲ್ಲಿದ್ದಂತೆ ಸಾಲದ ಶಿಲ್ಕು	2019–20 ರಲ್ಲಿ ಪಾವತಿಸ ಬೇಕಾಗಿರುವ ಸಾಲದ ಕಂತುಗಳ ವಿವರಗಳು	
										ಕಂತುಗಳ ಸಂಖ್ಯೆ	ಮೊತ್ತ
1	2	3	4	5	6	7	8	9	10	11	12
II	**ಅಸುರಕ್ಷಿತ–ಅವಧಿ ಸಾಲಗಳು**										
1	ಪಿ.ಎಂ.ಜಿ.ವೈ–ಸಾಲ	126.00	- -	20 (12/04 to 11/24)	12.00	56.14	-	7.65	48.49	1	7.65
2	ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಆರ್.ಜಿ.ಜಿ.ವಿ.ವೈ ಕಾಮಗಾರಿಗಳಿಗಾಗಿ ಆರ್.ಇ.ಸಿಯಿಂದ ಪಡೆದ ಸಾಲ	765.32	-		10.75	445.90	-	74.32	371.58	1	74.32
3	ದ.ಕ. ಮತ್ತು ಉಡುಪಿ ಜಿಲ್ಲೆಗಳ ಆರ್.ಜಿ.ಜಿ.ವಿ.ವೈ ಕಾಮಗಾರಿಗಳಿಗಾಗಿ ಆರ್.ಇ.ಸಿಯಿಂದ ಪಡೆದ ಸಾಲ	786.82			10.75	786.82	9.54	80.50	715.86	1	80.50
	ಉಪ ಮೊತ್ತ	**1678.14**				**1288.86**	**9.54**	**162.47**	**1135.93**	**3.00**	**162.47**
	ಒಟ್ಟು ದೀರ್ಘಾವಧಿ ಸಾಲಗಳು	**165714.87**				**77430.74**	**30969.19**	**20230.68**	**88169.25**		**14956.90**
	ಮುಂದಿನ ವರ್ಷ ಮರುಪಾವತಿಸಲು ಬಾಕಿ ಇರುವ ಅವಧಿ ಸಾಲ (ಟಿಪ್ಪಣಿ ಸಂಖ್ಯೆ :33.1 ಚಾಲ್ತಿ ಹೊಣೆಗಾರಿಕೆಯಲ್ಲಿ ತೋರಿಸಿರುವಂತೆ)					17534.98	-	-	14956.90		
	ನಿವ್ವಳ ದೀರ್ಘಾವಧಿ ಸಾಲ (ಟಿಪ್ಪಣಿ–25)					**59895.76**			**73212.35**		**14956.90**

25.4 ಕೇಂದ್ರ ಸರಕಾರದ ಪ್ರಮುಖ ಯೋಜನೆಯಾದ ಆರ್.ಎ.ಪಿ.ಡಿ.ಆರ್.ಪಿ. ಯೋಜನೆಯ ಅನುಷ್ಠಾನಕ್ಕಾಗಿ ಮೆ/ ಪಿ.ಎಫ್.ಸಿ. ಯು ₹ 30.62 ಕೋಟಿಗಳನ್ನು ಸಾಲವಾಗಿ ಬಿಡುಗಡೆಗೊಳಿಸಿದ್ದು, ಸದರಿ ಯೋಜನೆಯನ್ನು ವಿಸ್ತೃತಗೊಂಡ ನಿಗದಿತ ಕಾಲಾವಧಿಯೊಳಗಾಗಿ ಪೂರ್ಣಗೊಳಿಸಿರುವುದರಿಂದ ಯೋಜನೆಯ ನಿಯಮಾನುಸಾರ ಕಂಪೆನಿಯು ಸದರಿ ಸಾಲದ ಮೊತ್ತವನ್ನು ಅನುದಾನವನ್ನಾಗಿ ಪರಿವರ್ತಿಸುವ ಪ್ರಯೋಜನವನ್ನು ಪಡೆಯಲು ಅರ್ಹವಾಗಿರುತ್ತದೆ. ಮುಂದುವರೆದು ಮೆ/ ಪಿಎಫ್.ಸಿ. ಯ ಕೋರಿಕೆಯ ಮೇರೆಗೆ ಕಂಪೆನಿಯು ₹ 2.15 ಕೋಟಿಗಳಷ್ಟು ಸಾಲದ ಮೊತ್ತವನ್ನು ಮರುಪಾವತಿಸಿರುತ್ತದೆ. ಲೆಕ್ಕಪುಸ್ತಕಗಳಲ್ಲಿ ಇನ್ನುಳಿದ ಸಾಲದ ಮೊತ್ತ ₹ 28.47 ಕೋಟಿಗಳನ್ನು ಪ್ರಸ್ತುತ ವರ್ಷದಲ್ಲಿ ಅನುದಾನವನ್ನಾಗಿ ಲೆಕ್ಕೀಕರಿಸಲಾಗಿದೆ. ಆದಾಗ್ಯೂ ಯೋಜನೆಯು ಪೂರ್ಣಗೊಳ್ಳುವವರೆಗಿನ ಅವಧಿಯವರೆಗೆ ಸಂಚಿತಗೊಳ್ಳುವ ಸಾಲದ ಮೇಲಿನ ಬಡ್ಡಿಯ ಮೊತ್ತ ₹ 145.57 ಕೋಟಿಗಳನ್ನು ಈ ಉದ್ದೇಶಕ್ಕಾಗಿ ಪರಿಗಣಿಸಿರುವುದಿಲ್ಲ. ಮೆ/ ಪಿಎಫ್.ಸಿ. ಗೆ ಮರುಪಾವತಿಸಲಾದ ಸಾಲದ ಮೊತ್ತ ₹ 2.15 ಕೋಟಿಗಳನ್ನು ಹಿಂತಿರುಗಿಸುವಂತೆ ಕೋರಿ ಪ್ರತ್ಯೇಕವಾಗಿ ಪತ್ರವ್ಯವಹಾರ ನಡೆಸಲಾಗುತ್ತಿದೆ.

ಟಿಪ್ಪಣಿ: 26 ನಾಚಾಲ್ತಿ ವ್ಯಾಪಾರ ಸಂಬಂಧಿ ಕೊಡತಕ್ಕವುಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
26.1	ಮೆ। ಕರ್ನಾಟಕ ವಿದ್ಯುತ್ ನಿಗಮ ನಿಯಮಿತ	41.108	57961.02	60381.36
	ಒಟ್ಟು		**57961.02**	**60381.36**

ಟಿಪ್ಪಣಿ 27: ಇತರೆ ನಾಚಾಲ್ತಿ ಆರ್ಥಿಕ ಹೊಣೆಗಾರಿಕೆಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
27.1	ಮೆ/ ಕೆ.ಪಿ.ಸಿ.ಎಲ್‌ಗೆ ಪಾವತಿಸಬೇಕಾದ ಬಡ್ಡಿ	46.430	43150.81	43150.81
27.2	**ಬಳಕೆದಾರರಿಂದ ಭದ್ರತಾ ಠೇವಣಿ:**			
27.2.1	ಮಾಪಕ ಭದ್ರತಾ ಠೇವಣಿ	47.6	2353.53	2422.13
27.2.2	ಆರಂಭಿಕ/ಹೆಚ್ಚುವರಿ ಭದ್ರತಾ ಠೇವಣಿ	48.1 ರಿಂದ 48.2	60154.90	54960.98
	ಉಪ – ಮೊತ್ತ		**62508.43**	**57383.11**
27.3	**ಸರಬರಾಜುದಾರರು/ಗುತ್ತಿಗೆದಾರರಿಂದ ವಸೂಲಿ ಮಾಡಿದ ಭದ್ರತಾ ಠೇವಣಿ**			
27.3.1	ಸರಬರಾಜುದಾರರು/ಗುತ್ತಿಗೆದಾರರಿಂದ ವಸೂಲಿ ಮಾಡಿದ ನಗದು ರೂಪದ ಭದ್ರತಾ ಠೇವಣಿ	46.101	663.87	936.99
27.3.2	ಟರ್ನ್‌ಕೀ ಕಾಮಗಾರಿಗಳ ಕರಾರು ಪ್ರಕಾರ ಗುತ್ತಿಗೆದಾರರಿಂದ ವಸೂಲಿ ಮಾಡಿದ ಹಿಡಿದಿಟ್ಟ ಮೊತ್ತ	46.104	15951.48	6260.07
	ಉಪ – ಮೊತ್ತ		**16615.35**	**7197.06**
27.4	ನೌಕರರಿಂದ ವಸೂಲಿ ಮಾಡಿದ ಭದ್ರತಾ ಠೇವಣಿ	46.920	0.32	0.35
27.5	ಕರ್ನಾಟಕ ಸರಕಾರಕ್ಕೆ ಪಾವತಿಸಬೇಕಾದ ಬಾಕಿಗಳು	462,54.700	103.10	103.10
27.6	**ಇತರೆ ಹೊಣೆಗಾರಿಕೆಗಳು**			
27.6.1	ಸಾದಿಲ್ವಾರು ಠೇವಣಿಗಳು	46.966	128.77	60.72
	ಉಪ – ಮೊತ್ತ		**128.77**	**60.72**
	ಒಟ್ಟು		**122506.78**	**107895.15**

27.2(ಎ) ಗ್ರಾಹಕರ ಖಾತೆಗಳ ಪ್ರಕಾರ ಇರುವ ಗ್ರಾಹಕರ ಭದ್ರತಾ ಠೇವಣಿ ಶಿಲ್ಕು ಹಾಗೂ ಕಂಪೆನಿಯ ಲೆಕ್ಕಪತ್ರಗಳ ಪ್ರಕಾರ ಇರುವ ಗ್ರಾಹಕರ ಭದ್ರತಾ ಠೇವಣಿ ಶಿಲ್ಕುಗಳು ದೃಢೀಕರಣ ಮತ್ತು ಸಮನ್ವಯಕ್ಕೆ ಒಳಪಟ್ಟಿರುತ್ತದೆ.

ಟಿಪ್ಪಣಿ 28: ನಾಚಾಲ್ತಿ ಅವಕಾಶಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
28.1	**ಸಿಬ್ಬಂದಿ ಸವಲತ್ತುಗಳಿಗೆ ಅವಕಾಶಗಳು**			
28.1.1	ಗಳಿಕೆ ರಜೆ ನಗದೀಕರಣ ಬಾಬ್ತು ಕಾದಿರಿಸಿದ ಮೀಸಲು	44.130	4604.76	3932.23
28.1.2	ಕುಟುಂಬ ಹಿತ ನಿಧಿಗೆ ಕಾದಿರಿಸಿದ ಅವಕಾಶ	44.141, 44.142, 44.143	606.64	1308.63
	ಒಟ್ಟು		**5211.40**	**5240.86**

ಟಿಪ್ಪಣಿ 29 ನಾಚಾಲ್ತಿ ಮುಂದೂಡಿದ ಆದಾಯ

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
29.1	**ಬಂಡವಾಳ ವೆಚ್ಚಗಳಿಗೆ ಸಂಬಂಧಿತ ಬಳಕೆದಾರರ ವಂತಿಗೆ**			
	ಆರಂಭಿಕ ಶಿಲ್ಕು		**10476.76**	**5630.39**
	ಕೂಡಿ : ಪ್ರಸಕ್ತ ವರ್ಷದಲ್ಲಿ ಜಮೆ		7364.04	5291.43
	ಕಳೆ : ಸವಕಳಿ ಹಿಂಪಡೆದಿರುವುದು		754.09	445.05
	ಅಂತಿಮ ಶಿಲ್ಕು		**17086.71**	**10476.76**
29.2	**ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದ ಸರಕಾರದ ಅನುದಾನ**			
	ಆರಂಭಿಕ ಶಿಲ್ಕು		10673.59	**4480.04**
	ಕೂಡಿ : ಪ್ರಸಕ್ತ ವರ್ಷದಲ್ಲಿನ ಜಮೆ		15168.09	6193.56
	ಕಳೆ : ಸವಕಳಿ ಹಿಂಪಡೆದಿರುವುದು		1047.40	-
	ಅಂತಿಮ ಶಿಲ್ಕು		**24794.28**	**10673.60**
	ಒಟ್ಟು		**41880.99**	**21150.36**
29.3	**ಚಾಲ್ತಿ ಹೊಣೆಗಾರಿಕೆ**		**1656.37**	**584.76**
29.4	**ನಾಚಾಲ್ತಿ ಹೊಣೆಗಾರಿಕೆ**		**40224.62**	**20565.60**

ಟಿಪ್ಪಣಿ 30 – ಇತರೆ ನಾಚಾಲ್ತಿ ಹೊಣೆಗಾರಿಕೆಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
30.1	**ಮುಂಗಡಗಳು:**			
30.1.1	ಭಾಗ್ಯಜ್ಯೋತಿ ಕಾಮಗಾರಿಗಾಗಿ ಸರ್ಕಾರದಿಂದ ಬರತಕ್ಕ ಮೊತ್ತ	28.816	48.03	48.49
	ಒಟ್ಟು		**48.03**	**48.49**

ಟಿಪ್ಪಣಿ 31 – ಸಾಲಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
31.1	**(ಸುರಕ್ಷಿತ)**			
31.1.1	**ಬ್ಯಾಂಕ್ ಮೀರೆಳೆತ**			
31.1.1.1	ಸಿಂಡಿಕೇಟ್ ಬ್ಯಾಂಕ್	50.220	9676.45	9996.38
31.1.1.2	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	50.240	10195.96	4981.50
31.1.1.3	ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	50.290	15616.85	16440.84
	ಒಟ್ಟು		**35489.26**	**31418.72**

31.2 ಬ್ಯಾಂಕ್ ಶಿಲ್ಕುಗಳ ಸಮನ್ವಯ

[₹ ಲಕ್ಷಗಳಲ್ಲಿ]

ಕ್ರಮ ಸಂಖ್ಯೆ	ಬ್ಯಾಂಕ್/ಸಾಲ ನೀಡಿದವರ ಹೆಸರು	ಮೀರೆಳೆತ ಮಿತಿ	ಪಡೆದ ಸಾಲ	ಋಣಭಾರ ಗುರುತು ಸಂಖ್ಯೆ	ದಿನಾಂಕ 31.3.19 ರಂದು ಇದ್ದಂತೆ ತೇಲುವ ಬಡ್ಡಿ ದರ	ದಿ. 01.04.18 ರಂದು ಇದ್ದಂತೆ ಸಾಲದ ಶಿಲ್ಕು	2018-19 ರಲ್ಲಿ ಪಡೆದ ಸಾಲ	2018-19 ರಲ್ಲಿ ಮರು ಪಾವತಿ	31.03.19 ರಲ್ಲಿದ್ದಂತೆ ಸಾಲದ ಶಿಲ್ಕು
ಎ	**ಮೀರೆಳೆತ**								
1	**ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ:** ಸಾಮಗ್ರಿ ದಾಸ್ತಾನು, ಉಪಭೋಗ್ಯ ವಸ್ತುಗಳು ಹಾಗೂ ಬರತಕ್ಕ ಬಾಕಿ ಮೊತ್ತಗಳನ್ನೊಳಗೊಂಡಂತೆ ಅಡಮಾನ ಮಾಡಿರುವುದು.	16500.00	16500.00	10151134	8.70	16440.84	-	823.99	15616.85
2	**ಸಿಂಡಿಕೇಟ್ ಬ್ಯಾಂಕ್:** ಸಾಮಗ್ರಿ ದಾಸ್ತಾನು, ಉಪಭೋಗ್ಯ ವಸ್ತುಗಳು ಹಾಗೂ ಬರತಕ್ಕ ಬಾಕಿ ಮೊತ್ತಗಳನ್ನೊಳಗೊಂಡಂತೆ ಅಡಮಾನ ಮಾಡಿರುವುದು	10000.00	10000.00	100070176	8.55	9996.38	-	319.93	9676.45
3	**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ:** ಸಾಮಗ್ರಿ ದಾಸ್ತಾನು, ಉಪಭೋಗ್ಯ ವಸ್ತುಗಳು ಹಾಗೂ ಬರತಕ್ಕ ಬಾಕಿ ಮೊತ್ತಗಳನ್ನೊಳಗೊಂಡಂತೆ ಅಡಮಾನ ಮಾಡಿರುವುದು.	5000.00	13500.00	100101749	8.70	4981.50	8500.00	3285.54	10195.96
	ಉಪ ಮೊತ್ತ	**31500.00**	**40000.00**			**31418.72**	**8500.00**	**4429.46**	**35489.26**

ಟಿಪ್ಪಣಿ 32 – ಚಾಲ್ತಿ ವ್ಯಾಪಾರ ಸಂಬಂಧಿ ಕೊಡತಕ್ಕವುಗಳು

(₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2019 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
32.1.1	ಮೆ/ ಎನ್.ಟಿ.ಪಿ.ಸಿ ಆರ್.ಎಸ್.ಟಿ.ಪಿ.ಎಸ್	41.110	1156.48	3095.09
32.1.2	ಮೆ/ ಮದ್ರಾಸ್ ಅಟೋಮಿಕ್ ಪವರ್ ಸ್ಟೇಷನ್	41.111	23.39	127.55
32.1.3	ಮೆ/ ನೈವೆಲಿ ಲಿಗ್ನೈಟ್ ಕಾರ್ಪೋರೇಷನ್ ಲಿ.	41.112	1129.44	783.59
32.1.4	ಮೆ/ಎನ್.ಪಿ.ಸಿ.ಐ.ಎಲ್.-ಕೈಗಾ ಜನರೇಟಿಂಗ್ ಸ್ಟೇಷನ್	41.114	564.98	1453.38
32.1.5	ಮೆ/ ಸಂಡೂರ್ ಪವರ್ ಕಂಪೆನಿ ಲಿ.	41.115	357.33	193.39
32.1.6	ಮೆ/ ಸಹ್ಯಾದ್ರಿ ಪವರ್ ಕಂಪೆನಿ, ಪ್ರೈ.ಲಿ.	41.116	3.25	3.60
32.1.7	ಮೆ/ ಮಾಸ್ಟರ್ ಪವರ್ ಪ್ರೈ.ಲಿ.	41.118	38.34	32.02
32.1.8	ಮೆ/ ಸುಭಾಶ್ ಕಬಿನಿ ಪವರ್ ಕಾರ್ಪೋರೇಷನ್ ಲಿ.	41.119	104.13	-
32.1.9	ಮೆ/ ಗ್ರಾಫೈಟ್ ಇಂಡಿಯಾ ಲಿ.	41.120	7.45	2.69
32.1.10	ಮೆ/ ಮಾರುತಿ ಪವರ್ ಜೆನ್(ಐ) (ಕಬಿನಿ) ಪ್ರೈ.ಲಿ.	41.121	2.70	0.93
32.1.11	ಮೆ/ ಮೂಡಬಾಗಿಲು ಪವರ್ ಪ್ರೈ.ಲಿ.	41.123	3.78	4.20
32.1.12	ಮೆ/ ಜೆ.ಎಸ್. ಡಬ್ಲೂ ಪಿ.ಟಿ.ಸಿ.ಐ.ಎಲ್	41.125	0.52	0.52
32.1.13	ಮೆ/ ಮೃಜಾರ ಪವರ್ ಪ್ಲಾಂಟ್	41.126	6.85	6.75
32.1.14	ಮೆ/ ಟಾಟಾ ಕಂಪನಿ ಲಿ.	41.131	42.64	42.64
32.1.15	ಮೆ/ ಯು..ಪಿ.ಸಿ.ಎಲ್	41.132	5792.29	6441.89
32.1.16	ಮೆ/ ಯು..ಪಿ.ಸಿ.ಎಲ್ ಗೆ ಪಾವತಿಸಿದ ಮುಂಗಡ	28.957	-1666.00	-1666.00
32.1.17	ಪವನಯಂತ್ರ ಯೋಜನೆಗಳು	41.140	359.78	489.65
32.1.18	ಸೋಲಾರ್ ಪವರ್ ಯೋಜನೆಗಳು	41.150	3716.40	3137.54
32.1.19	ಸೋಲಾರ್ ರೂಫ್ ಟಾಪ್ ಪಿ.ವಿ. ಜನರೇಶನ್ ಪ್ಲಾಂಟ್‌ಗಳು	41.501	50.11	43.96
32.1.20	ಮೆ/ ಎನ್.ಟಿ.ಪಿ.ಸಿ.- ವಿ.ವಿ.ಎನ್.ಎಲ್	41.198	240.48	251.83
32.1.21	ಮೆ/ ಶ್ಯಾಮಿಲಿ ಹೈಡಲ್ ಪವರ್ ಪ್ರೋಜೆಕ್ಟ್ ಪ್ರೈ.ಲಿ.	41.202	76.38	37.34
32.1.22	ಮೆ/ ಸಾಗರ್ ಪವರ್ (ನೀರುಕಟ್ಟೆ) ಪ್ರೈ.ಲಿ.	41.205	-	0.35
32.1.23	ಮೆ/ ಕೋಜನರೇಶನ್ ಯೂನಿಟ್ಸ್	41.208	22.05	22.49
32.1.24	ಇತರೆ ವಿದ್ಯುತ್ ಖರೀದಿ ಬಾಬ್ತು ಕೊಡತಕ್ಕವುಗಳು (ಅಲ್ಪಾವಧಿ & ಮಧ್ಯಮಾವಧಿ)	41.211	2729.21	4939.57
32.1.25	ಮೆ/ ಕುಂದನ್‌ಕುಲಮ್ ನ್ಯೂಕ್ಲಿಯರ್ ಪವರ್ ಪ್ರೋಜೆಕ್ಟ್	41.214	326.54	450.48
32.1.26	ಮೆ/ ವಾಸ್ಗಿ ಪವರ್ ಪ್ರೋಜೆಕ್ಟ್ ಲಿ.	41.216	1.65	1.12
32.1.27	ಮೆ/ ಜಿ.ವಿ.ಪಿ. ಇನ್ಫ್ರಾ ಪವರ್ ಪ್ರೋಜೆಕ್ಟ್ ಲಿ.	41.217	114.32	-
32.1.28	ಮೆ/ ಜುರಾಲಾ ಹೈಡ್ರೋ ಪ್ರೋಜೆಕ್ಟ್ ಲಿ.,	41.218	212.05	141.89
32.1.29	ಮೆ/ ಎನ್.ಎಲ್.ಸಿ ತಮಿಳ್ನಾಡು ಪವರ್ ಲಿ.,	41.219	286.50	317.30
32.1.30	ಮೆ/ ಸೋಹಮ್ ಫಾಲ್ಗುಣಿ ರಿನೀವೇಬಲ್ ಎನರ್ಜಿ ಪ್ರೈ.ಲಿ.	41.220	264.79	-
32.1.31	ಮೆ/ ದಾಮೋದರ್ ವ್ಯಾಲಿ ಕಾರ್ಪೋರೇಶನ್	41.223	2032.73	1752.65
32.1.32	ಮೆ/ ಎನ್.ಟಿ.ಪಿ.ಸಿ ಲಿ. (Bundled)	41.224	1042.47	1021.36
32.1.33	ಮೆ/ ರಾಯಚೂರ್ ಪವರ್ ಕಾರ್ಪೋರೇಶನ್ ಲಿ.	41.225	507.56	2126.26
32.1.34	ಮೆ/ ಸಾಯಿ ದೀಪ್ತಿ ಪವರ್ ಪ್ರೈ.ಲಿ.	41.226	22.14	-
32.1.35	ಪವನಯಂತ್ರ ಯೋಜನೆಗಳಗಾಗಿ ಕೆ.ಪಿ.ಟಿ.ಸಿಎಲ್‌ಗೆ ಪಾವತಿಸಬೇಕಾದ ಮೊತ್ತ	41.141	83.32	79.01
32.1.36	ಮೆ। ಟಿ.ಎನ್.ಇ.ಬಿ. ರವರಿಗೆ ಪಾವತಿಸಬೇಕಾದ ಪ್ರಸರಣ ವೆಚ್ಚಗಳು	41.164	1.28	1.87
32.1.37	ಮೆ/ ಪಿ.ಜಿ.ಸಿ.ಐ.ಎಲ್.	41.173	2829.49	1715.64
	ಒಟ್ಟು		**22486.82**	**27052.54**

ಟಿಪ್ಪಣಿ 33: ಇತರೆ ಚಾಲ್ತಿ ಆರ್ಥಿಕ ಹೊಣೆಗಾರಿಕೆಗಳು (₹ ಲಕ್ಷಗಳಲ್ಲಿ)

ಕ್ರಮ ಸಂ.	ವಿವರಗಳು	ಲೆಕ್ಕ ಸಂಕೇತ	ದಿನಾಂಕ 31.03.2017 ರಲ್ಲಿದ್ದಂತೆ	ದಿನಾಂಕ 31.03.2018 ರಲ್ಲಿದ್ದಂತೆ
33.1	**ಹಾಲಿ ವರ್ಷದಲ್ಲಿ ಪ್ರಾಪ್ತವಾಗುವ ದೀರ್ಘಾವಧಿ ಸಾಲಗಳು**			
33.1.1	**(ಸುರಕ್ಷಿತ – ಋಣಮುಕ್ತತಾ ವೆಚ್ಚದಲ್ಲಿ)**			
33.1.1.1	ಬ್ಯಾಂಕುಗಳಿಂದ ಪಡೆದಿರುವುದು	53.500	14018.72	16677.30
33.1.1.2	ಇತರೆ ಮೂಲಗಳಿಂದ ಪಡೆದಿರುವುದು	53.3	775.71	775.71
33.1.2	**(ಅಸುರಕ್ಷಿತ– ಋಣಮುಕ್ತತಾ ವೆಚ್ಚದಲ್ಲಿ)**			
33.1.2.1	ಸರ್ಕಾರದಿಂದ ಪಡೆದಿರುವುದು		7.66	7.66
33.1.2.2	ಇತರೆ ಮೂಲಗಳಿಂದ ಪಡೆದಿರುವುದು	53.3, 54.7	154.82	74.31
	ಒಟ್ಟು		**14956.91**	**17534.98**
33.2	**ಬೆಸ್ಕಾಂಗೆ ಪಾವತಿಸಬೇಕಾಗಿರುವುದು**			
33.2.1	ಮೆ/ ಬೆಸ್ಕಾಂಗೆ ಪಾವತಿಸಬೇಕಾಗಿರುವುದು	42.215, 42.220, 42.225, 42.230	29812.20	27538.24
33.2.2	ಕಳೆ: ಮೆ/ ಬೆಸ್ಕಾಂನಿಂದ ಬರಬೇಕಾಗಿರುವುದು	28.827, 28.832, 28.837, 28.842	14496.74	4223.52
	ಮೆ/ ಬೆಸ್ಕಾಂಗೆ ನಿವ್ವಳ ಪಾವತಿಸಬೇಕಾಗಿರುವುದು		**15315.46**	**23314.72**
33.3	**ಜೆಸ್ಕಾಂಗೆ ಪಾವತಿಸಬೇಕಾಗಿರುವುದು**			
33.3.1	ಮೆ/ ಜೆಸ್ಕಾಂಗೆ ಪಾವತಿಸಬೇಕಾಗಿರುವುದು	42.233	17480.66	
33.3.2	**ಕಳೆ:** ಮೆ/ ಜೆಸ್ಕಾಂನಿಂದ ಬರಬೇಕಾಗಿರುವುದು	28.840, 28.845	11894.52	
	ಮೆ/ ಜೆಸ್ಕಾಂಗೆ ನಿವ್ವಳ ಪಾವತಿಸಬೇಕಾಗಿರುವುದು		**5586.14**	
